ಬುಧವಾರ, ಫೆಬ್ರುವರಿ 16, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 47 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಭಾರತೀಯ ಪರಿಕಲ್ಪನೆಗಳನ್ನು ಇಟ್ಟುಕೊಂಡು ಡೆವಲಪ್ ಮಾಡಿರುವ ಕೆಲವು ಗೇಮ್‌ಗಳು ಮಕ್ಕಳಿಗೆ ಖುಷಿ ನೀಡುವುದರ ಜೊತೆಗೆ ಭಾರತೀಯ ಸಂಸ್ಕೃತಿಯ ಪರಿಚಯವನ್ನೂ ಮಾಡುತ್ತಿವೆ.

ಸಂಖ್ಯೆ-ಸುದ್ದಿ
ಉತ್ತರ ಪ್ರದೇಶ, ಕೇರಳ, ಪಶ್ಚಿಮ ಬಂಗಾಳ... ಅಭಿವೃದ್ಧಿ ಮಾದರಿಯ ತಾಳೆ
ಸಿಗದ ಮನ್ನಣೆ: ಸಿಧು ಪ್ರಚಾರದಿಂದ ದೂರ 7
'ತುಮಕೂರು ರಸ್ತೆ ಮೇಲ್ಸೇತುವೆ ಸಂಚಾರಕ್ಕೆ ಸುರಕ್ಷಿತವಲ್ಲ' 6

ಸೆನ್ಸೆಕ್ಸ್	ನಿಫ್ಟಿ	₹/$
58,142 ▲	17,352 ▲	75.32 ▲

ಮೈಸೂರಿನಲ್ಲಿ 43 ವಿದ್ಯಾರ್ಥಿನಿಯರು ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆಗೆ ಗೈರು

ಹಿಜಾಬ್ ಪ್ರತಿಧ್ವನಿ, ನಿಲ್ಲದ ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೌಢಶಾಲೆಗಳು ಪುನರಾರಂಭವಾದ ಎರಡನೇ ದಿನವೂ ವಿವಿಧ ಜಿಲ್ಲೆಗಳಲ್ಲಿ ಹಿಜಾಬ್ ವಿವಾದ ಪ್ರತಿಧ್ವನಿಸಿದೆ. ಹಿಜಾಬ್‌ಗೆ ಅವಕಾಶವಿಲ್ಲ ಎಂದು ಮೈಸೂರಿನಲ್ಲಿ 43 ವಿದ್ಯಾರ್ಥಿನಿಯರು ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆಗೆ ಗೈರುಹಾಜರಾಗಿದ್ದಾರೆ. ಹಿಜಾಬ್ ಧರಿಸಿದ್ದ ಮಕ್ಕಳನ್ನು ವಿವಿಧೆಡೆ ವಾಪಸು ಕಳುಹಿಸಲಾಗಿದೆ. ಅಲ್ಲಲ್ಲಿ ಪ್ರತಿಭಟನೆಯಾಗಿ ವಿದ್ಯಾರ್ಥಿನಿಯರೇ ವಾಪಸು ಹೋಗಿದ್ದಾರೆ.

ತುಮಕೂರಿನಲ್ಲಿ ಬುರ್ಖಾ ಧರಿಸಿ ಬಂದಿದ್ದ ಪೋಷಕರಿಗೂ ಶಾಲಾ ಅಂಗಳ ಪ್ರವೇಶಿಸಲು ಅವಕಾಶ ನಿರಾಕರಿಸಲಾಗಿದೆ. ದಾವಣಗೆರೆ ಜಿಲ್ಲೆ ಸಾಸ್ವೆಹಳ್ಳಿ ಹಾಗೂ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆಯಲ್ಲಿ ಮುಸ್ಲಿಂ ವಿದ್ಯಾರ್ಥಿಗಳು ಟೋಪಿ ಧರಿಸಿ ಶಾಲೆಗೆ ಬಂದಿದ್ದರು. ಹೊಳಲ್ಕೆರೆಯಲ್ಲಿ ಮನವೊಲಿಕೆ ಬಳಿಕ ಟೋಪಿ ತೆಗೆದು ತರಗತಿಗೆ ಹಾಜರಾದ ವಿದ್ಯಮಾನಗಳು ಮಂಗಳವಾರ ನಡೆದಿವೆ.

ಹೊಸದುರ್ಗದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಬ್ಬರು ಅತಿಥಿ ಉಪನ್ಯಾಸಕಿಯರು ಹಿಜಾಬ್ ತೆಗೆಯಲು ನಿರಾಕರಿಸಿದ್ದು, ರಜೆ ಪತ್ರ ನೀಡಿ ಶಾಲೆಯಿಂದ ನಿರ್ಗಮಿಸಿದ್ದಾರೆ.

6ನೇ ಪುಟ ನೋಡಿ

ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಸಾಸ್ವೆಹಳ್ಳಿಯ ಕರ್ನಾಟಕ ಪಬ್ಲಿಕ್ ಶಾಲೆಗೆ ಮಂಗಳವಾರ ಹಿಜಾಬ್ ಧರಿಸಿ ಬಂದಿದ್ದ ವಿದ್ಯಾರ್ಥಿನಿಯರಿಗೆ ಹಿಜಾಬ್ ತೆಗೆದು ತರಗತಿಗೆ ಬರುವಂತೆ ಶಿಕ್ಷಕರು ಮನವೊಲಿಸಿದರು –ಪ್ರಜಾವಾಣಿ ಚಿತ್ರ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಶಾಲೆ, ಪದವಿಪೂರ್ವ ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯಗೊಳಿಸಿದ್ದು, ಹಿಜಾಬ್ ಧರಿಸಲು ಅವಕಾಶ ಇಲ್ಲ. ಪದವಿ ಕಾಲೇಜುಗಳಲ್ಲಿ ಯಾವುದೇ ನಿರ್ಬಂಧ ಇಲ್ಲ
ಡಾ.ಸಿ.ಎನ್.ಅಶ್ವತ್ಥನಾರಾಯಣ
ಉನ್ನತ ಶಿಕ್ಷಣ ಸಚಿವ

ತುಮಕೂರು: ಬುರ್ಖಾ ಧರಿಸಿ ಬರದಂತೆ ಪೋಷಕರಿಗೆ ನಿರ್ಬಂಧ, ಆಕ್ರೋಶ

ತುಮಕೂರು: ಮಕ್ಕಳನ್ನು ಬಿಡಲು ಬರುವ ಪೋಷಕರು ಬುರ್ಖಾ ಧರಿಸಿ ಶಾಲೆಗೆ ಬರಬಾರದು ಎಂದು ತುಮಕೂರಿನ ಎಸ್.ವಿ.ಎಸ್. ಶಾಲೆಯ ಅಡಳಿತ ಸೂಚನೆ ನೀಡಿದ್ದು, ಪೋಷಕರಿಂದ ಆಕ್ರೋಶ ವ್ಯಕ್ತವಾಯಿತು.

ಬುರ್ಖಾ ಧರಿಸಿ ಬಂದಿದ್ದ ಪೋಷಕರಿಗೆ ಗೇಟ್ ಬಳಿಯೇ ಮಕ್ಕಳನ್ನು ಬಿಟ್ಟು ಹೋಗುವಂತೆ ಸೂಚನೆ ನೀಡಲಾಯಿತು. ಆಕ್ರೋಶಗೊಂಡ ಪೋಷಕರು, 'ಅಲ್ಲಾಹು ಅಕ್ಬರ್' ಎಂದು ಘೋಷಣೆ ಕೂಗಿದರು. ಇದರಿಂದ ಬಿಗುವಿನ ಸ್ಥಿತಿ ನಿರ್ಮಾಣವಾಗಿತ್ತು. 'ಬುರ್ಖಾ ಧರಿಸದಂತೆ ಪೋಷಕರಿಗೆ ನಿರ್ಬಂಧ ಹೇರಲು ಆಡಳಿತ ಮಂಡಳಿಗೆ ಅಧಿಕಾರ ಇದೆಯೇ, ನ್ಯಾಯಾಲಯವು ಆದೇಶ ನೀಡಿದೆಯೇ' ಎಂದು ಪೋಷಕರು ಪ್ರಶ್ನಿಸಿದರು. ಘಟನೆ ನಂತರ ಪೋಷಕರು ತಮ್ಮ ಮಕ್ಕಳನ್ನು ಮನೆಗೆ ಕರೆದೊಯ್ದರು. ಹಿಜಾಬ್ ತೆಗೆಯಲು ನಿರಾಕರಿಸಿದ ವಿದ್ಯಾರ್ಥಿನಿಯರು ವಾಪಸಾದರು. ವಾಗ್ವಾದದ ಹಿನ್ನೆಲೆಯಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

ಇನ್ನಷ್ಟು ಸುದ್ದಿಗಳು 6

'ಮಕ್ಕಳ ಮನಸ್ಸು ಒಡೆಯುವ ಮತೀಯ ಶಕ್ತಿಗಳ ವಿರುದ್ಧ ಕ್ರಮ'

ಬೆಂಗಳೂರು: 'ರಾಜ್ಯದಲ್ಲಿ ಪದವಿಪೂರ್ವ ತರಗತಿಗಳು ಸೇರಿ ಶಾಲಾ, ಕಾಲೇಜುಗಳು ಬುಧವಾರ ದಿಂದ (ಫೆ. 16) ಪುನರಾರಂಭ ಕಾರಣ ಶಾಂತಿ ಸುವ್ಯವಸ್ಥೆಗೆ ಧಕ್ಕೆ ಆಗದಂತೆ, ಮುನ್ನೆಚ್ಚರಿಕೆ ವಹಿಸಲಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

'ಕೆಲವು ಮತೀಯ ಸಂಘಟನೆಗಳು, ಮುಗ್ಧ ವಿದ್ಯಾರ್ಥಿಗಳನ್ನು ಮುಂದಿಟ್ಟುಕೊಂಡು ಸಮಾಜ ಒಡೆಯಲು ಯತ್ನಿಸಿದವು. ಅಂಥ ಸಂಘಟನೆಗಳಲ್ಲಿ ಇರುವವರನ್ನು ಗುರುತಿಸಿ ಕ್ರಮಕ್ಕೆ ಸೂಚಿಸಲಾಗಿದೆ' ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ವಿದ್ಯಾರ್ಥಿಗಳು ಆತಂಕ ಅಥವಾ ಅಭದ್ರತೆಯ ಭಯವಿಲ್ಲದೆ ಪಠ್ಯ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕು' ಎಂದು ಮನವಿ ಮಾಡಿದರು.

ಅಪಘಾತ: ಪಂಜಾಬಿ ನಟ ದೀಪ್ ಸಿಧು ಸಾವು

ನವದೆಹಲಿ(ಪಿಟಿಐ): ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಕಳೆದ ವರ್ಷ ಗಣರಾಜ್ಯೋತ್ಸವ ದಿನದಂದು ರೈತರು ನಡೆಸಿದ ಟ್ರ್ಯಾಕ್ಟರ್ ರ‍್ಯಾಲಿಯ ವೇಳೆ ನಡೆದ ಹಿಂಸಾಚಾರ ಪ್ರಕರಣದ ಪ್ರಮುಖ ರೂವಾರಿ, ಪಂಜಾಬಿ ನಟ ದೀಪ್ ಸಿಧು ಮಂಗಳವಾರ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಸಿಧು ಅವರು ದೆಹಲಿಯಿಂದ ಭಟಿಂಡಾಗೆ ಹೋಗುತ್ತಿದ್ದಾಗ, ಅವರ ಕಾರು ದೆಹಲಿ ಬೈಪಾಸ್ ಕುಂಡ್ಲಿ- ಮನೇಸರ್- ಪಲ್ವಾಲ್ (ಕೆಎಂಪಿ) ಎಕ್ಸ್‌ಪ್ರೆಸ್ ವೇಯಲ್ಲಿ ರಾತ್ರಿ 9.30ಕ್ಕೆ ಟ್ರಕ್‌ಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಧು ಅವರ ಜತೆ ಪ್ರಯಾಣಿಸುತ್ತಿದ್ದ ಮಹಿಳೆ ಗಾಯಗೊಂಡಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. 2021ರ ಫೆಬ್ರುವರಿ 9ರಂದು ಸಿಧು ಅವರನ್ನು ಪೊಲೀಸರು ಬಂಧಿಸಿದ್ದರು. ಅವರು ಎರಡು ತಿಂಗಳ ಬಳಿಕ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದರು.

ಸಬ್ ರಿಜಿಸ್ಟ್ರಾರ್ ಕಚೇರಿ ಅವಧಿ ವಿಸ್ತರಣೆ

ಬೆಂಗಳೂರು: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಉಪ ನೋಂದಣಾಧಿಕಾರಿ (ಸಬ್ ರಿಜಿಸ್ಟ್ರಾರ್) ಕಚೇರಿಗಳ ಕಾರ್ಯನಿರ್ವಹಣೆಯ ಅವಧಿಯನ್ನು ರಾತ್ರಿ 7ರ ವರೆಗೆ ವಿಸ್ತರಿಸಲಾಗಿದೆ.

ಇದಕ್ಕೆ ಮೊದಲು ನೋಂದಣಿ ಕಚೇರಿಗಳು ಬೆಳಿಗ್ಗೆ 10 ರಿಂದ ಸಂಜೆ 5.30ರವರೆಗೆ ಕಾರ್ಯನಿರ್ವಹಿಸುತ್ತಿದ್ದವು. ಈ ಕಚೇರಿಗಳ ಜನಸಂದಣಿಯನ್ನು ಪರಿಗಣಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಹಿತದೃಷ್ಟಿಯಿಂದ ಎಲ್ಲ ಉಪನೋಂದಣಾಧಿಕಾರಿ ಕಚೇರಿಗಳ ಕೆಲಸದ ವೇಳೆಯನ್ನು ಬೆಳಿಗ್ಗೆ 9ರಿಂದ ರಾತ್ರಿ 7ಗಂಟೆಯವರೆಗೆ ನಿಗದಿ ಪಡಿಸಲಾಗಿದೆ .

ಕೋವಿಡ್ ಮೂರನೇ ಅಲೆ ಕ್ಷೀಣಿಸಿದ ಬಳಿಕ ಆಸ್ತಿ ಸೇರಿದಂತೆ ವಿವಿಧ ನೋಂದಣಿಗಳ ಸಂಖ್ಯೆ ಹೆಚ್ಚಳವಾಗಿದೆ. ಹೀಗಾಗಿ, ನೋಂದಣಿ ಕಚೇರಿಗಳಲ್ಲಿ ಉದ್ದದ ಸರತಿ ಸಾಲು ಸಾಮಾನ್ಯವಾಗಿತ್ತು. ನೋಂದಣಿ ಅವಧಿಯನ್ನು ಪೂರ್ವ ನಿಗದಿಪಡಿಸಿಕೊಂಡಿದ್ದರೂ 5.30ಕ್ಕೆ ಕಚೇರಿ ವೇಳೆ ಮುಗಿಯುತ್ತಿದ್ದರಿಂದಾಗಿ ಕೆಲವರಿಗೆ ನಿಗದಿತ ದಿನಗಳಲ್ಲಿ ನೋಂದಣಿ ಅವಕಾಶ ತಪ್ಪುತ್ತಿತ್ತು. ಇದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಸಮಸ್ಯೆ ತಪ್ಪಿಸಲು ಅವಧಿ ವಿಸ್ತರಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳ ದುರವಸ್ಥೆ: ಪಿಐಎಲ್ ವಿಚಾರಣೆ

ಪ್ರಧಾನ ಎಂಜಿನಿಯರ್‌ಗೆ ವಾರಂಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ರಸ್ತೆಗುಂಡಿಗಳ ಸಮಸ್ಯೆಗೆ ಸಂಬಂಧಿಸಿದ ಅರ್ಜಿ ವಿಚಾರಣೆ ವೇಳೆ ಖುದ್ದು ಹಾಜರಾಗಲು ನ್ಯಾಯಾಲಯ ನೀಡಿದ್ದ ನಿರ್ದೇಶನದ ಹೊರತಾಗಿಯೂ ಗೈರುಹಾಜರಾದ ಬಿಬಿಎಂಪಿ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಎಸ್.ಪ್ರಭಾಕರ್ ಅವರಿಗೆ ಹೈಕೋರ್ಟ್, ಜಾಮೀನು ಸಹಿತ ವಾರಂಟ್ ಜಾರಿಗೊಳಿಸಲು ಆದೇಶಿಸಿದೆ.

'ನಗರದಲ್ಲಿನ ರಸ್ತೆ ಗುಂಡಿಗಳಿಂದ ಸಾರ್ವಜನಿಕರು ಸಾವು ನೋವುಗಳಿಗೆ ಈಡಾಗುತ್ತಿದ್ದಾರೆ' ಎಂದು ಆಕ್ಷೇಪಿಸಿ ಕೋರಮಂಗಲದ ವಿಜಯನ್ ಮೆನನ್ ಸೇರಿದಂತೆ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಈ ಅರ್ಜಿಯನ್ನು ಇದೇ 7ರಂದು ವಿಚಾರಣೆ ನಡೆಸಿದ್ದ ನ್ಯಾಯಪೀಠ, 'ಗುಣಮಟ್ಟದ ರಸ್ತೆಗಳನ್ನು ನಿರ್ಮಿಸುವ ನಿಟ್ಟಿನಲ್ಲಿ ಏನೆಲ್ಲಾ ಕ್ರಮ ಕೈಗೊಳ್ಳಲಾಗಿದೆ. ರಸ್ತೆ ಗುಂಡಿ ಮುಚ್ಚಲು ಯಾವ ತಂತ್ರಜ್ಞಾನ ಅನುಸರಿಸಲಾಗುತ್ತಿದೆ ಎಂಬ ಬಗ್ಗೆ ಮಾಹಿತಿ ನೀಡಬೇಕು. ಮುಂದಿನ ವಿಚಾರಣೆ ಸಮಯದಲ್ಲಿ ಪಾಲಿಕೆಯ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಖುದ್ದು ಹಾಜರಿರಬೇಕು' ಎಂದು ನಿರ್ದೇಶಿಸಿತ್ತು.

ಮಂಗಳವಾರ ಅರ್ಜಿ ವಿಚಾರಣೆಗೆ ಬಂದಾಗ ಬಿಬಿಎಂಪಿ ಪರ ವಕೀಲ ವಿ.ಶ್ರೀನಿಧಿ, 'ಅನಾರೋಗ್ಯದ ಕಾರಣ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಇಂದು ವಿಚಾರಣೆಗೆ ಹಾಜರಾಗಲು ಸಾಧ್ಯವಾಗಿಲ್ಲ. ಆದ್ದರಿಂದ, ಖುದ್ದು ಹಾಜರಾತಿಯಿಂದ ವಿನಾಯಿತಿ ನೀಡಬೇಕು' ಎಂದು ಕೋರಿದರು.

ಈ ಹೇಳಿಕೆಗೆ ಕೆರಳಿ ಕೆಂಡವಾದ ನ್ಯಾಯಪೀಠ, 'ಖುದ್ದು ಹಾಜರಾತಿಯಿಂದ ವಿನಾಯಿತಿ ಕೋರುವ ರೀತಿ ಇದಲ್ಲ. ಈ ಕುರಿತು ಕೋರ್ಟ್ ಕಲಾಪ ಆರಂಭವಾಗುವ ಮುನ್ನವೇ ನೀವು ಮೆಮೊ (ಜ್ಞಾಪನಾ ಪತ್ರ) ಸಲ್ಲಿಸಿ ಮನವಿ ಮಾಡಬೇಕಿತ್ತು. ಈಗ ಮನವಿ ಮಾಡಿದರೆ ಅದನ್ನು ಒಪ್ಪಲಾಗದು' ಎಂದು ಹೇಳಿ, ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ವಿರುದ್ಧ ಜಾಮೀನು ಸಹಿತ ವಾರಂಟ್ ಜಾರಿಗೆ ಆದೇಶಿಸಿತು.

'ನಗರ ಪೊಲೀಸ್ ಆಯುಕ್ತರು ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಅವರನ್ನು ಮುಂದಿನ ವಿಚಾರಣೆಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕು' ಎಂದು ಆದೇಶಿಸಿ, ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿತು.

ತಪ್ಪು ಕಲ್ಪನೆಯಲ್ಲಿರಬೇಡಿ: 'ಕೋರ್ಟ್ ಕೇವಲ ಬಾಯಿ ಮಾತಿನಲ್ಲಿ ಹೇಳುತ್ತದೆ, ಯಾವುದೇ ಆದೇಶ ಹೊರಡಿಸುವುದಿಲ್ಲ ಎಂಬ ತಪ್ಪು ಕಲ್ಪನೆಯಲ್ಲಿರಬೇಡಿ. ಆದೇಶಗಳನ್ನು ಹೊರಡಿಸುವುದರಲ್ಲಿ ನಮಗೆ ಯಾವುದೇ ಸಮಸ್ಯೆ ಇಲ್ಲ. ಇದಕ್ಕಿಂತಲೂ ಕಠಿಣ ಆದೇಶ ಹೊರಡಿಸಲು ಸಾಧ್ಯವಿದೆ. ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ವಿರುದ್ಧ ಜಾಮೀನು ರಹಿತ ವಾರಂಟ್ ಹೊರಡಿಸಬಹುದಿತ್ತು. ಆದರೆ, ಒಂದಷ್ಟು ಕರುಣೆ ತೋರಿ ಜಾಮೀನು ಸಹಿತ ವಾರಂಟ್ ಜಾರಿಗೆ ಆದೇಶಿಸಲಾಗಿದೆ. ನ್ಯಾಯಾಲಯ ಕಠಿಣ ಆದೇಶ ಹೊರಡಿಸುವಂತಹ ಪರಿಸ್ಥಿತಿ ತಂದುಕೊಳ್ಳಬೇಡಿ' ಎಂದು ಮುಖ್ಯ ನ್ಯಾಯಮೂರ್ತಿಗಳು ಮೌಖಿಕವಾಗಿ ಎಚ್ಚರಿಸಿದರು.

ಬೆಂಗಳೂರಿನಲ್ಲಿ ಹೊನಲು ಬೆಳಕಿನ ಟೆಸ್ಟ್

ಬೆಂಗಳೂರು:: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾರ್ಚ್ 12 ರಿಂದ 16ವರೆಗೆ ಪಿಂಕ್ ಬಾಲ್ ಟೆಸ್ಟ್ ಆಯೋಜಿಸಲಾಗಿದೆ. ಈ ಪಂದ್ಯದಲ್ಲಿ ಭಾರತ ಮತ್ತು ಶ್ರೀಲಂಕಾ ತಂಡಗಳು ಮುಖಾಮುಖಿಯಾಗಲಿವೆ.

ಒಟ್ಟು ಎರಡು ಟೆಸ್ಟ್‌ಗಳ ಸರಣಿಯಲ್ಲಿ ಕೊನೆಯ ಪಂದ್ಯವು ಉದ್ಯಾನನಗರಿಯಲ್ಲಿ ನಡೆಯಲಿದೆ. ಮೊಹಾಲಿಯಲ್ಲಿ ಮಾರ್ಚ್ 4ರಿಂದ 8ರವರೆಗೆ ನಡೆಯಲಿರುವ ಮೊದಲ ಟೆಸ್ಟ್, ವಿರಾಟ್ ಕೊಹ್ಲಿ ಪಾಲಿಗೆ 100ನೇ ಪಂದ್ಯವಾಗಲಿದೆ. ಇದಕ್ಕೂ ಮುನ್ನ ಉಭಯ ತಂಡಗಳು ಮೂರು ಟಿ20 ಪಂದ್ಯಗಳ ಸರಣಿ ಆಡಲಿವೆ ಎಂದು ಮಂಗಳವಾರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ತಿಳಿಸಿದೆ.

'ಕ್ರೀಡಾಂಗಣದಲ್ಲಿ ಹೊಸದಾಗಿ ಅಳವಡಿಸಲಾಗಿರುವ ಹೊನಲು ಬೆಳಕಿನ ದೀಪಗಳನ್ನು ಬಳಸಲಾಗುವುದು' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಖಜಾಂಚಿ ವಿನಯ್ ಮೃತ್ಯುಂಜಯ 'ಪ್ರಜಾವಾಣಿ'ಗೆ ತಿಳಿಸಿದರು.

ಚಿನಕುರಳಿ
ಪ್ರಕಾಶ್ ಶೆಟ್ಟಿ

ದೇವಸ್ಥಾನದಲ್ಲಿ ಜೋರು ಶಬ್ದ: ಪೊಲೀಸ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಗದಿಗಿಂತ ಹೆಚ್ಚು ಶಬ್ದ ಉಂಟು ಮಾಡುತ್ತಿದೆ ಎಂಬ ಆರೋಪದಡಿ ನಗರದ ದೊಡ್ಡ ಗಣಪತಿ ದೇವಸ್ಥಾನ ಮತ್ತು ಸಮೂಹ ದೇವಾಲಯಗಳ ಆಡಳಿತ ಮಂಡಳಿಗೆ ಪೊಲೀಸರು ನೋಟಿಸ್ ನೀಡಿದ್ದಾರೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಕಾರ ಹೆಚ್ಚಿನ ಶಬ್ದ ಕೇಳಿ ಬಂದರೆ 'ಶಬ್ದ ಮಾಲಿನ್ಯ ನಿರ್ಬಂಧ ಮತ್ತು ನಿಯಂತ್ರಣ ನಿಯಮ– 2000' ಅಡಿಯಲ್ಲಿ ಪ್ರಕರಣ ದಾಖಲಿಸಲು ಅವಕಾಶವಿದೆ. ಅದರ ಅನ್ವಯ, ನಿಗದಿತ ಡೆಸಿಬಲ್ ಶಬ್ದಕ್ಕಿಂತ ಹೆಚ್ಚಿನ ಶಬ್ದ ಉಂಟು ಮಾಡುತ್ತಿರುವ ಕಾರಣಕ್ಕೆ ಬಸವನಗುಡಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಈ ನೋಟಿಸ್ ನೀಡಿದ್ದಾರೆ.

ಸೂಚನೆಯ ಹೊರತಾಗಿಯೂ ಹೆಚ್ಚಿನ ಶಬ್ದ ಬರುವಂತೆ ಘಂಟೆ ಬಾರಿಸಿದರೆ ಪ್ರಕರಣ ದಾಖಲು ಮಾಡಲಾಗುವುದು ಎಂದು ದೇವಸ್ಥಾನಗಳ ಕಾರ್ಯನಿರ್ವಹಣಾಧಿಕಾರಿಗೆ ನೀಡಿರುವ ನೋಟಿಸ್‌ನಲ್ಲಿ ಎಚ್ಚರಿಕೆ ನೀಡಲಾಗಿದೆ.

ಪೊಲೀಸ್ ಇನ್‌ಸ್ಪೆಕ್ಟರ್ ಅವರ ನೋಟಿಸ್ ಉಲ್ಲೇಖಿಸಿ ದೇವಸ್ಥಾನದ ಪ್ರಧಾನ ಅರ್ಚಕರಿಗೆ ಜ್ಞಾಪನ ಪತ್ರ ನೀಡಿರುವ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ, 'ದೇವಸ್ಥಾನಗಳಲ್ಲಿ ಮಹಾ ಮಂಗಳಾರತಿ, ಅಭಿಷೇಕ ಇತ್ಯಾದಿ ಸಂದರ್ಭಗಳಲ್ಲಿ ಹಾಗೂ ದೇವಾಲಯದ ಆವರಣದಲ್ಲಿ ಉಪಯೋಗಿಸುವ ಢಮರುಗ, ಧ್ವನಿವರ್ಧಕ ಯಂತ್ರಗಳಿಂದ ನಿಗದಿತ ಮಿತಿಗಿಂತ ಹೆಚ್ಚು ಧ್ವನಿ ಹೊರಡಿಸಬಾರದು' ಎಂದೂ ಸೂಚಿಸಿದ್ದಾರೆ.

'ನೋಟಿಸ್ ನೀಡಿಲ್ಲ'

'ದೊಡ್ಡ ಗಣಪತಿ ದೇವಾಲಯದಲ್ಲಿ ಘಂಟೆ ಶಬ್ದ ಕಡಿಮೆ ಮಾಡುವಂತೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಯಾವುದೇ ನೋಟಿಸ್ ನೀಡಿಲ್ಲ' ಎಂದು ಪರಿಸರ ಸಚಿವ ಆನಂದ್ ಸಿಂಗ್ ಸ್ಪಷ್ಟಪಡಿಸಿದ್ದಾರೆ.

'ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ದಕ್ಷಿಣ ಪ್ರಾದೇಶಿಕ ಕಚೇರಿಯಿಂದ ಯಾವುದೇ ಆದೇಶ ಹೊರಡಿಸಿಲ್ಲ. ಅಲ್ಲದೆ, ಪೊಲೀಸ್ ನೋಟಿಸ್‌ನಲ್ಲಿ ಉಲ್ಲೇಖಿಸಿರುವಂತೆ ಬೆಂಗಳೂರು ನಗರ ದಕ್ಷಿಣ ಪ್ರಾದೇಶಿಕ ಕಚೇರಿಯಿಂದ ಈ ರೀತಿಯ ಯಾವುದೇ ಪತ್ರವನ್ನು ನೀಡಿಲ್ಲ. ಈ ಬಗ್ಗೆ ಇಲಾಖೆಯ ಕಾರ್ಯದರ್ಶಿ ಜೊತೆ ಮಾತನಾಡಿದ್ದೇನೆ' ಎಂದೂ ಸಚಿವರು ತಿಳಿಸಿದ್ದಾರೆ.

ಸಿದ್ಧಗಂಗಾ ಶ್ರೀ ಪ್ರತಿಮೆ ಕಾಮಗಾರಿಗೆ ಚಾಲನೆ

ಮಾಗಡಿ: ತಾಲ್ಲೂಕಿನ ವೀರಾಪುರ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಸಿದ್ದಗಂಗಾ ಮಠದ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಅವರ 111 ಅಡಿ ಎತ್ತರದ ಪ್ರತಿಮೆಯ ತಳಪಾಯ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯ ಸಚಿವ ಸಿ.ಸಿ. ಪಾಟೀಲ ಮಂಗಳವಾರ ಚಾಲನೆ ನೀಡಿದರು.

JAWAHAR NAVODAYA VIDYALAYA
DODDABALLAPUR, BANGALORE RURAL

Ref:- Tender/JNVD/2021-22/ Date: 16.02.2022

SHORT TENDER NOTICE

Sealed Tenders are invited from the reputed firms for 1) Construction of Stage 2) Disposal of obsolete/unserviceable Computers and its peripherals "as is where is basis"
The Tender documents may be obtained from the Office of the Principal between **9.00 A.M to 4.00 P.M** on all working days by paying an amount of Rs. 200/- by cash which is non refundable or the tender schedule can be downloaded from the Vidyalaya website https://www.navodaya.gov.in/nvs/nvs-school/BANGALORERURAL/en/home. The last date for sale of tender forms is 28.02.2022 by 1.00 PM and the submission of sealed tender is 28.02.2022 by **4.00 PM** by **BY HAND/POST**. The tenders will be opened on **01.03.2022** at **11.00 am** in the Office of the Principal.
Contact Phone No: 8116438494 (Principal)/ 8639711505 (OS)

Sd/- PRINCIPAL

PUBLIC NOTICE

This is to inform the General Public that my client Sri **H.D.Gangaraj**, son of Late.Devanna had filed a suit in O.S.No: 27/1992 before the Principal Senior Civil Judge Bangalore Rural, Bangalore against D.R.Ramakrishnappa, D.R.Narayanappa and D.R.Appe Gowda, for specific performance of Agreement of Sale in respect the land bearing SY.No 70/1 (Old No.70) situated at Dasanapura Village Dasanapura Hobli, Bangalore North Taluk which is fully described in the schedule hereunder.

The said case came to be decreed in favour of my client on 07-08-2008. The legal representatives of Defendant No:1 and Defendants 2 and 3 failed to comply with the court decree. My client has filed an Execution Petition against the legal representatives of Defendant No:1 and Defendants 2 and 3 in Ex.No.04/2020, which is pending before 1st Aditional Senior Civil Judge, Nelamangala, Bangalore Rural District. It is to further inform the public that inspite of the Decree passed in favour of my client, Sri.H.D.Gangaraju, and the order of Permanent Injunction issued against D.R.Narayanappa and his legal representatives, restraining them from alienating the suit property, the said Narayanappa has not challenged the said Judgment and Decree stated above. It is further to inform the public that my client H.D.Gangaraju has already filed an Execution petition seeking for the execution of the Decree via Ex.No.4/2020, which is pending before the Hon'ble 1st Additional Senior Civil Judge, Nelamangala. My client has already issued Public Notice via paper publication in the Kannada dailies "VIJAYA KARNATAKA" and "KANNADA PRABHA" on 31/01/2021. Inspite of the above stated facts, Sri.D.R.Narayanappa and his family members have executed a Sale Deed in the name of one Gangadhar Raju, in gross violation of the Judgment and Decree passed by the 1st Additional Senior Civil Judge at Bengaluru Rural, Bangalore.

It is further to inform the public that my client, H.D.Gangaraju, has already filed a civil suit against Sri.Gangadhar Raju and Sri.Narayanappa and his family members, seeking for cancellation of the Sale Deed executed in favour of Gangadhar Raju, which is numbered as O.S.No.73/2022, which is pending before the Principal Senior Civil Judge at Nelamangala. The above case is posted to 22/02/2022. Inspite of the above stated true facts, the purchaser Gangadhar Raju is trying to form sites and sell the same to prospective buyers. It has come to the notice of my client that the said Gangadhar Raju has put up a board on the Suit Schedule Property. In case any buyers enter into any transaction with the said Gangadhar Raju, the same will be illegal and in gross violation of the Judgment and Decree passed in O.S.No.27/1992. The public is hereby informed to not enter into any transaction with the above said Gangadhar Raju with respect to any portion of the land bearing Sy.No.70/1(Old Sy.No.70) situated in Dasanapura Village, Dasanapura Hobli, Bangalore NorthTaluk which is described below.

SCHEDULE PROPERTY

All that piece and parcel of the land measuring 3 acres and 21 guntas in SY.No:70/1 (Old SY.No.70) situated at Dasanapura Village, Dasanapura Hobli, Bangalore North Taluk and bounded as follows :

East : Road
West : Gangamma's Land presently belonging to H.V.Sowbhagya
North : Channappa's Land presently belonging to H.V.Sowbhagya
South : Hanumantappa's presently land in SY.No. 70/2

Sd/-
K.Keshavamurthy, Advocate
#94/1, First Floor, Sree Bhyraveshwara Layout, Nelamangala, Bangalore Rural District
Date: 16.02.2022 Place:Bangalore

ಎಂಬಸ್ಸಿ ಸಂಸ್ಥೆಯಿಂದ ಮಾನ್ಯತಾ ಟೆಕ್‌ಪಾರ್ಕ್ ಬಳಿ ನೂತನವಾಗಿ ನಿರ್ಮಿಸಿರುವ 'ಎಂಬಸ್ಸಿ ಮಾನ್ಯತಾ ಮೇಲ್ಸೇತುವೆ'ಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಉದ್ಘಾಟಿಸಿದರು. ಸಿಎಂ ಪ್ರಧಾನ ಕಾರ್ಯದರ್ಶಿ ಎನ್‌.ಮಂಜುನಾಥ್ ಪ್ರಸಾದ್, ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ, ಪಾಲಿಕೆ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಮುಖ್ಯ ಆಯುಕ್ತ ಗೌರವ್ ಗುಪ್ತ ಇದ್ದರು.

ಇದೇ 21ಕ್ಕೆ ನೇಕಾರರ ಧರಣಿ

ಬೆಂಗಳೂರು: 'ಕಚ್ಚಾ ರೇಷ್ಮೆ ದರ ಏರಿಕೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನೇಕಾರರಿಗೆ ಆಗುತ್ತಿರುವ ತೊಂದರೆಗಳನ್ನು ಖಂಡಿಸಿ ಇದೇ 21ರಂದು ಬೆಳಿಗ್ಗೆ 11 ಗಂಟೆಗೆ ಮೈಸೂರು ಬ್ಯಾಂಕ್ ವೃತ್ತದಲ್ಲಿ ನೇಕಾರರ ಧರಣಿ ನಡೆಯಲಿದೆ' ಎಂದು ದಿ ಮೈಸೂರು ಪವರ್ ಲೂಮ್ ಸಿಲ್ಕ್ ಮ್ಯಾನುಫ್ಯಾಕ್ಚರರ್ಸ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಂ.ಲಕ್ಷ್ಮೀನಾರಾಯಣ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಂದು ಕೆ.ಜಿ. ಕಚ್ಚಾ ರೇಷ್ಮೆ ದರ ₹3 ಸಾವಿರದಿಂದ ₹6 ಸಾವಿರಕ್ಕೆ ತಲುಪಿದೆ. ದರ ಏರಿಕೆಯಿಂದ ವಿದ್ಯುತ್ ಮಗ್ಗಗಳು ನಿಂತುಹೋಗಿದ್ದು, ನೇಕಾರರ ಕುಟುಂಬಗಳು ತೀವ್ರ ಸಂಕಷ್ಟಕ್ಕೆ ಸಿಲುಕಿವೆ' ಎಂದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನನ್ನ ಕಕ್ಷಿದಾರರು ಪ್ರಸ್ತುತ ಬಿಬಿಎಂಪಿ ವಾರ್ಡ್ ನಂ. 85ರ ವ್ಯಾಪ್ತಿಗೊಳಪಡುವ ದೊಡ್ಡನೆಕ್ಕುಂದಿ ಗ್ರಾಮ, ಬೆಂಗಳೂರು, ಕರ್ನಾಟಕ ವಿಳಾಸದ ಸರ್ವೆ ನಂ. 36/5 ರಲ್ಲಿ ಸ್ಥಿತಗೊಂಡಿರುವ, ವಾಣಿಜ್ಯ ಉದ್ದೇಶಕ್ಕೆ ಪರಿವರ್ತನೆಗೊಂಡಿರುವ, ಖಾತಾ ನಂ. 2028 ಮತ್ತು 2028/1ರ ಭಾಗವಾಗಿರುವ, 2 ಎಕರೆ 14 ಗುಂಟೆ ವಿಸ್ತೀರ್ಣವುಳ್ಳ ಸ್ವತ್ತಿಗೆ (ಷೆಡ್ಯೂಲ್ ಪ್ರಾಪರ್ಟಿ) ಸಂಬಂಧಿಸಿದಂತೆ ಸೋಲ್ ಸ್ಪೇಸ್ ಪ್ರಾಜೆಕ್ಟ್ಸ್ ಲಿಮಿಟೆಡ್, ಶ್ರೀ. ನಾಗರಾಜ್ ರೆಡ್ಡಿ ಮತ್ತು ಶ್ರೀ. ನಂದೀಶ್ ರೆಡ್ಡಿ (ಎಲ್ಲಾ ಮೂವರು ಮಾಲಿಕರನ್ನು ಇಲ್ಲಿ ಇನ್ನು ಮುಂದೆ "ಪ್ರಸಕ್ತ ಮಾಲಿಕರು" ಎನ್ನಲಾಗುತ್ತದೆ) ವ್ಯವಹರಿಸಲು ಉದ್ದೇಶಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯಾಗಲಿ, ಸಂಸ್ಥೆಯಾಗಲಿ ಅಥವಾ ಪ್ರಾಧಿಕಾರವಾಗಲಿ, ಯಾವುದೇ ರೀತಿಯ (1) ಮಾರಾಟ, ವಿನಿಮಯ, ಭೋಗ್ಯ, ಲೈಸನ್ಸ್, ಅಡಮಾನ, ಅನುವಂಶಿಕ, ಉಡುಗೊರೆ, ಲೀನ್, ಚಾರ್ಜ್, ನಿರ್ವಹಣೆ, ಈಸ್‌ಮೆಂಟ್, ಟ್ರಸ್ಟ್, ಸ್ವಾಧೀನತೆ ಅಥವಾ ಇನ್ನಾವುದೇ ರೀತಿಯ ಕಾನೂನುಬದ್ಧ ಅಧಿಕೃತ ಹಕ್ಕು, ಬಾಧ್ಯತೆ, ಕ್ಲೇಮ್ ಅಥವಾ ಹಿತಾಸಕ್ತಿ ಹೊಂದಿದ್ದಲ್ಲಿ, (2) ಪ್ರಸಕ್ತ ಮಾಲಿಕರ ವಿರುದ್ಧ ಯಾವುದೇ ಕ್ಲೇಮ್‌ಗಳನ್ನು ಹೊಂದಿದ್ದಲ್ಲಿ, ಅಂತಹವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ಲಿಖಿತ ರೂಪದಲ್ಲಿ ದಾಖಲಾತಿ ಪುರಾವೆಗಳ ಸಮೇತ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬೇಕೆಂದು ಸೂಚಿಸಲಾಗಿದೆ. ನಿಗದಿತ ಅವಧಿಯ ನಂತರ ಸಂದಾಯವಾಗುವ ಯಾವುದೇ ಕ್ಲೇಮ್‌ಗಳನ್ನು ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅಂತಹವುಗಳನ್ನು ಮುಟ್ಟುಗೋಲು ಹಾಕಿಕೊಂಡು ಯಾವುದೇ ರೀತಿಯಲ್ಲಿಯೂ ಪುರಸ್ಕರಿಸಲಾಗುವುದಿಲ್ಲ.

ಸಹಿ/–
ಶಾರ್ದೂಲ್ ಅಮರಚಂದ್ ಮಂಗಲದಾಸ್ ಅಂಡ್ ಕೊ.
ಆರತಿ ಲಕ್ಷೀನಾರಾಯಣ (ಪಾಲುದಾರರು) ಪರಮಗುರು ಸಿ ಎಂ (ಸೀನಿಯರ್ ಅಸೋಸಿಯೇಟ್)
ನವಿಯಾ ನೈನನ್ (ಅಸೋಸಿಯೇಟ್) ವಕೀಲರು ಮತ್ತು ಸಾಲಿಸಿಟರ್ಸ್
ನಂ. 87/48, 2ನೇ ಮಹಡಿ, ಎಎಸ್‌ವಿ ಚಮಿಯರ್ಸ್ ಸ್ಕ್ವೇರ್, ಚಮಿಯರ್ಸ್ ರೋಡ್,
ಆರ್ ಎ ಪುರಂ, ಚೆನ್ನೈ – 600 028, ತಮಿಳುನಾಡು.

ಭಾರತ ಸರ್ಕಾರ
ಅಪರ ನಿರ್ದೇಶಕರ ಕಚೇರಿ,
ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ
ಇ–ವಿಂಗ್, 3ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು–34.

ಪ್ರಸ್ತುತ ಬನಶಂಕರಿ, ಹೆಚ್‌ಬಿಆರ್ ಲೇಔಟ್, ಜಯನಗರ ಮತ್ತು ಗಂಗಾನಗರದಲ್ಲಿರುವ ಸಿಜಿಹೆಚ್‌ಎಸ್ ವೆಲ್‌ನೆಸ್ ಸೆಂಟರ್‌ಗಳನ್ನು ಹೊಸ ಸ್ಥಳಗಳಲ್ಲಿ ನೆಲೆಗೊಳಿಸಲು ವಸತಿ ಪ್ರದೇಶ/ ವಾಣಿಜ್ಯ ಪ್ರದೇಶದಲ್ಲಿ ಸ್ಥಳಾವಕಾಶ ಬೇಕಾಗಿದೆ.

ಸಿಜಿಹೆಚ್‌ಎಸ್, ಬೆಂಗಳೂರು ಇವರು ಪ್ರಸ್ತುತ ಬನಶಂಕರಿ, ಹೆಚ್‌ಬಿಆರ್ ಲೇಔಟ್, ಜಯನಗರ ಮತ್ತು ಗಂಗಾನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಜಿಹೆಚ್‌ಎಸ್ ವೆಲ್‌ನೆಸ್ ಸೆಂಟರ್‌ಗಳನ್ನು ಹೊಸ ಸ್ಥಳಗಳಲ್ಲಿ ನೆಲೆಗೊಳಿಸಲು ಕೇಂದ್ರ ಸ್ಥಳದಲ್ಲಿ ಆದ್ಯನೀಯವಾಗಿ ನೆಲಮಹಡಿಯಲ್ಲಿ (ಅಥವಾ) 1ನೇ ಮಹಡಿಯಲ್ಲಿ ಲಿಫ್ಟ್ ಸಹಿತ ಸೂಕ್ತ ಸ್ಥಳಾವಕಾಶಕ್ಕಾಗಿ ಆಸಕ್ತಿಯುಳ್ಳ ವ್ಯಕ್ತಿಗಳಿಂದ ಆಫರುಗಳನ್ನು ಆಹ್ವಾನಿಸಿದ್ದಾರೆ.

ಆಸಕ್ತಿಯುಳ್ಳ ವ್ಯಕ್ತಿಗಳು ತಮ್ಮ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಕಟ್ಟಡದ ನಕ್ಷೆಯೊಡನೆ 'ಅಪರ ನಿರ್ದೇಶಕರು, ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ, ಇ– ವಿಂಗ್, 3ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು–34 ಇವರಿಗೆ ದಿನಾಂಕ **15.03.2022** ರ ಒಳಗೆ ಸಲ್ಲಿಸತಕ್ಕದ್ದು. ಯಾವುದೇ ಕಾರಣ ನೀಡದೆ ಯಾವುದೇ ಸಮಯದಲ್ಲಿ ಸ್ಥಳಾವಕಾಶದ ಬಗ್ಗೆಗಿನ ಈ ಜಾಹೀರಾತನ್ನು ರದ್ದುಪಡಿಸುವ ಹಕ್ಕನ್ನು ಸಿಜಿಹೆಚ್‌ಎಸ್ ಕಾದಿರಿಸಿಕೊಂಡಿದೆ. ಪೂರ್ಣ ವಿವರಗಳಿಗಾಗಿ ಸಿಜಿಹೆಚ್‌ಎಸ್ ವೆಬ್‌ಸೈಟ್ **cghs.nic.in** ನೋಡಿ

ಸಹಿ/- ಅಪರ ನಿರ್ದೇಶಕರು, ಸಿಜಿಹೆಚ್‌ಎಸ್, ಬೆಂಗಳೂರು.

ಮಾರ್ಚ್ 3ರಿಂದ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ

ಪ್ರಜಾವಾಣಿ ವಾರ್ತೆ

ಸುನಿಲ್ ಪುರಾಣಿಕ್

ಬೆಂಗಳೂರು: ಬಹು ನಿರೀಕ್ಷಿತ ಬೆಂಗಳೂರು 13ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಮಾರ್ಚ್ 3ರಿಂದ 10ರವರೆಗೆ ನಡೆಯಲಿದೆ.

'ಮಾರ್ಚ್ 3ರಂದು ಸಂಜೆ ನಗರದ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿರುವ ಜಿಕೆವಿಕೆ ಸಭಾಂಗಣದಲ್ಲಿ ನಡೆಯಲಿರುವ ಚಿತ್ರೋತ್ಸವವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ಕನ್ನಡ, ಹಿಂದಿ ಚಿತ್ರರಂಗದ ಪ್ರಮುಖ ಗಣ್ಯರು ಭಾಗವಹಿಸಲಿದ್ದಾರೆ. ಮಾರ್ಚ್ 10ರಂದು ಐಐಎಸ್‌ಸಿ ಆವರಣದಲ್ಲಿರುವ ಟಾಟಾ ಸಭಾಂಗಣದಲ್ಲಿ ಸಮಾರೋಪ ನಡೆಯಲಿದೆ' ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಈ ಚಲನಚಿತ್ರೋತ್ಸವದಲ್ಲಿ 2020 ಮತ್ತು 2021ರಲ್ಲಿ ನಿರ್ಮಾಣವಾದ 55 ರಾಷ್ಟ್ರಗಳ 200 ಚಿತ್ರಗಳು ಪ್ರದರ್ಶನಗೊಳ್ಳಲಿವೆ. ಮಾರ್ಚ್ 4ರಿಂದ ರಾಜಾಜಿನಗರದ ಒರಾಯನ್ ಮಾಲ್‌ನಲ್ಲಿರುವ 'ಪಿವಿಆರ್ ಸಿನಿಮಾ'ದ 11 ಪರದೆಗಳಲ್ಲಿ, ಚಾಮರಾಜಪೇಟೆಯಲ್ಲಿರುವ ಕಲಾವಿದರ ಸಂಘದ ಡಾ.ರಾಜ್ ಭವನ ಹಾಗೂ ಬನಶಂಕರಿ ಎರಡನೇ ಹಂತದಲ್ಲಿರುವ ಸುಚಿತ್ರಾ ಸಿನಿ ಅಕಾಡೆಮಿಯಲ್ಲಿ ಪ್ರದರ್ಶನಗಳು ನಡೆಯಲಿವೆ' ಎಂದು ಅವರು ಹೇಳಿದರು.

ಚಿತ್ರೋತ್ಸವ ವಿಶೇಷ

'ಈ ಚಲನಚಿತ್ರೋತ್ಸವಕ್ಕೆ ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಫಿಲ್ಮ್ ಪ್ರೊಡ್ಯೂಸರ್ಸ್ ಅಸೋಸಿಯೇಷನ್ (FIAPF) ಮಾನ್ಯತೆ ಸಿಕ್ಕಿದೆ. ಜಗತ್ತಿನಲ್ಲಿ ನಡೆಯುವ 5 ಸಾವಿರ ಚಿತ್ರೋತ್ಸವಗಳ ಪೈಕಿ ಇದುವರೆಗೆ 45 ಚಿತ್ರೋತ್ಸವಗಳಿಗೆ ಮಾತ್ರ ಈ ಮಾನ್ಯತೆ ಇತ್ತು. ಇದು ಆ ಗೌರವಕ್ಕೆ ಪಾತ್ರವಾಗಿರುವ 46ನೇ ಚಿತ್ರೋತ್ಸವ' ಎಂದು ಪುರಾಣಿಕ್ ಸಂತಸ ಹಂಚಿಕೊಂಡರು.

ನೋಂದಣಿ ಸೌಲಭ್ಯ

- ಕರ್ನಾಟಕ ಚಲನಚಿತ್ರ ಅಕಾಡೆಮಿ, ಚಲನಚಿತ್ರ ವಾಣಿಜ್ಯಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸುಚಿತ್ರಾ ಸಿನಿಮಾ ಅಕಾಡೆಮಿ ಬನಶಂಕರಿ
- ಪ್ರತಿನಿಧಿ ಶುಲ್ಕ: ಸಾರ್ವಜನಿಕರಿಗೆ– ₹ 800, ಚಿತ್ರೋದ್ಯಮದ ಸದಸ್ಯರು, ವಿದ್ಯಾರ್ಥಿಗಳು, ಚಿತ್ರ ಸಮಾಜಗಳ ಸದಸ್ಯರಿಗೆ ₹ 400
- ಮಾಹಿತಿಗೆ ವೆಬ್‌ಸೈಟ್: www.biffes.in ನೋಡಬಹುದು.

ಸ್ಪರ್ಧಾ ವಿಭಾಗ: ಏಷ್ಯಾ ಚಲನಚಿತ್ರ ವಿಭಾಗ, ಭಾರತೀಯ ಚಲನಚಿತ್ರಗಳ ವಿಭಾಗ, ಕನ್ನಡ ಚಲನಚಿತ್ರಗಳ ವಿಭಾಗ, ಕನ್ನಡದ ಜನಪ್ರಿಯ ಮನೋರಂಜನಾ ಪ್ರಧಾನ ಚಿತ್ರಗಳ ವಿಭಾಗದಲ್ಲಿ ಚಿತ್ರಗಳು ಪ್ರದರ್ಶನಗೊಳ್ಳಲಿವೆ.

'ಸಮಕಾಲೀನ ವಿಶ್ವ ಸಿನಿಮಾ, ವಿದೇಶವೊಂದರ ವಿಶೇಷ ನೋಟ (ಫ್ರಾನ್ಸ್ ಸಿನಿಮಾ ಕ್ಷೇತ್ರ), ಈಶಾನ್ಯ ರಾಜ್ಯಗಳ ವಿಶೇಷ ನೋಟ ಇರಲಿದೆ. ಆಸ್ಕರ್ ಪ್ರಶಸ್ತಿಗೆ ಅರ್ಹ ಸಿನಿಮಾಗಳ ಆಸ್ಕರ್ ವಿಭಾಗ ಇರಲಿದೆ. ಜೊತೆಗೆ ವಿಮರ್ಶಕರ ಸಪ್ತಾಹವೂ ಇದೆ' ಎಂದು ಪುರಾಣಿಕ್ ಹೇಳಿದರು.

'ಜರ್ಮನಿಯ ವೋಲ್ಕರ್ ಸ್ಕೋಂಡ್ರಫ್, ಪಂಚಭಾಷಾ ತಾರೆ ಭಾರತಿ ವಿಷ್ಣುವರ್ಧನ್ ಅವರ ಸಿನಿಬದುಕಿನ ಪುನರವಲೋಕನ ನಡೆಯಲಿದೆ. ಸ್ವಾತಂತ್ರ್ಯೋತ್ಸವದ ಅಮೃತಮಹೋತ್ಸವದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಹೋರಾಟ ಸಂಬಂಧಿಸಿದ 5 ಚಿತ್ರಗಳ ವಿಶೇಷ ಪ್ರದರ್ಶನ ನಡೆಯಲಿದೆ. ತುಳು ಚಿತ್ರರಂಗದ ಸುವರ್ಣ ಮಹೋತ್ಸವದ ಹಿನ್ನೆಲೆಯಲ್ಲಿ ತುಳು ಚಿತ್ರರಂಗದ ಅವಲೋಕನ, ವಿಚಾರ ಸಂಕಿರಣ ನಡೆಯಲಿದೆ' ಎಂದು ಅವರು ಹೇಳಿದರು.

'ಚಿತ್ರೋತ್ಸವವು ಆಫ್‌ಲೈನ್ ಮತ್ತು ಆನ್‌ಲೈನ್ ಎರಡೂ ಮಾದರಿಗಳಲ್ಲಿ (ಹೈಬ್ರಿಡ್) ನಡೆಯಲಿದೆ' ಎಂದರು.

'ಪುನೀತ್ ರಾಜ್‌ಕುಮಾರ್, ಸಂಚಾರಿ ವಿಜಯ್ ಅವರ ಸ್ಮರಣೆಯೂ ನಡೆಯಲಿದೆ. ಚಿತ್ರರಂಗಕ್ಕೆ ಸಂಬಂಧಿಸಿದ ಕಾರ್ಯಾಗಾರ, ಉಪನ್ಯಾಸ, ಸಂವಾದಗಳು ನಡೆಯಲಿವೆ' ಎಂದು ಅವರು ಹೇಳಿದರು.

ಚಿತ್ರೋತ್ಸವದ ಮುಖ್ಯ ಸಂಯೋಜನಾಧಿಕಾರಿ ಪಿ. ಶೇಷಾದ್ರಿ, ಕಲಾತ್ಮಕ ನಿರ್ದೇಶಕ ಎಚ್‌.ಎನ್. ನರಹರಿರಾವ್, ರಿಜಿಸ್ಟ್ರಾರ್ ಹಿಮಂತ್‌ರಾಜು ಜಿ. ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಶೇ 15.5ರಷ್ಟು ಬೆಳವಣಿಗೆ ಕಾಣಲಿದೆ ಐ.ಟಿ. ಉದ್ಯಮ

ಮುಂಬೈ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಐ.ಟಿ. ವಲಯವು ಶೇಕಡ 15.5ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಐ.ಟಿ. ಉದ್ಯಮ ಸಂಘಟನೆ ನಾಸ್ಕಾಂ ಅಂದಾಜಿಸಿದೆ. ಇದು ಒಂದು ದಶಕಕ್ಕೂ ಹೆಚ್ಚಿನ ಅವಧಿಯ ಅತಿದೊಡ್ಡ ಬೆಳವಣಿಗೆ ಪ್ರಮಾಣ ಆಗಲಿದೆ.

ಐ.ಟಿ. ಉದ್ಯಮದ ಆದಾಯದಲ್ಲಿನ ಬೆಳವಣಿಗೆಯು 2020–21ರಲ್ಲಿ ಕಂಡುಬಂದ ಶೇ 2.3ರ ಪ್ರಮಾಣಕ್ಕಿಂತ ಬಹಳ ಹೆಚ್ಚಿನ ಮಟ್ಟದಲ್ಲಿ ಇರಲಿದೆ. ಅಲ್ಲದೆ, ಇದು ಕೋವಿಡ್ ಪೂರ್ವದ 2019–20ನೆಯ ಹಣಕಾಸು ವರ್ಷದಲ್ಲಿ ಕಂಡುಬಂದ ಬೆಳವಣಿಗೆಯ ಎರಡು ಪಟ್ಟು ಹೆಚ್ಚು ಇರಲಿದೆ ಎಂದು ನಾಸ್ಕಾಂ ಅಧ್ಯಕ್ಷೆ ದೇವಜಾನಿ ಘೋಷ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಐ.ಟಿ. ಉದ್ಯಮದ ಒಟ್ಟು ಆದಾಯವು ಇದೇ ಮೊದಲ ಬಾರಿಗೆ ₹ 15 ಲಕ್ಷ ಕೋಟಿಯ ಗಡಿಯನ್ನು ದಾಟಲಿದೆ. ಉದ್ಯಮದ ಒಟ್ಟು ಆದಾಯವನ್ನು ₹ 26 ಲಕ್ಷ ಕೋಟಿಗೆ ತಲುಪಿಸುವ ಗುರಿಯನ್ನು ನಾಸ್ಕಾಂ ಹೊಂದಿದೆ ಎಂದು ತಿಳಿಸಿದ್ದಾರೆ.

ದೇಶದ ಇತರ ವಲಯಗಳಲ್ಲಿ ನಿರುದ್ಯೋಗ ದೊಡ್ಡ ಪ್ರಮಾಣದಲ್ಲಿ ಇರುವ ಹೊತ್ತಿನಲ್ಲಿ ಐ.ಟಿ. ಉದ್ಯಮ ವಲಯವು ಹೊಸದಾಗಿ 4.5 ಲಕ್ಷ ಜನರಿಗೆ ಉದ್ಯೋಗ ಕಲ್ಪಿಸಿದೆ. ದೇಶದಲ್ಲಿ ಈಗ ಒಟ್ಟು 51 ಲಕ್ಷ ಮಂದಿ ಐ.ಟಿ. ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ. ಹೊಸದಾಗಿ ಉದ್ಯೋಗ ಪಡೆದವರ ಪೈಕಿ ಶೇಕಡ 44ರಷ್ಟು ಮಂದಿ (ಸರಿಸುಮಾರು 2 ಲಕ್ಷ) ಮಹಿಳೆಯರು. ಈಗ ದೇಶದ ಐ.ಟಿ. ಉದ್ಯಮದಲ್ಲಿ ಒಟ್ಟು 18 ಲಕ್ಷ ಮಂದಿ ಮಹಿಳೆಯರು ದುಡಿಯುತ್ತಿದ್ದಾರೆ.

ಬೆಂಗಳೂರು, ಹೈದರಾಬಾದ್ ಮತ್ತು ಪುಣೆಯಂತಹ ನಗರಗಳಲ್ಲಿ ಕೇಂದ್ರೀಕೃತ ಆಗಿದ್ದ ಉದ್ಯಮವು ಈಗ ಇಂದೋರ್, ಜೈಪುರ, ಕೋಲ್ಕತ್ತ, ಕೊಯಮತ್ತೂರು, ಅಹಮದಾಬಾದ್‌ನಂತಹ ನಗರಗಳಲ್ಲಿ ಕಿರು ಐ.ಟಿ. ಕೇಂದ್ರಗಳನ್ನು ಹೊಂದಿದೆ.

ಈ ಉದ್ಯಮದಲ್ಲಿನ ನೌಕರರು ಕೆಲಸ ತೊರೆಯುವ ಪ್ರಮಾಣವು ಈಗ ಗರಿಷ್ಠ ಮಟ್ಟವನ್ನು ತಲುಪಿರಬಹುದು ಎಂದು ನಾಸ್ಕಾಂನ ಉಪಾಧ್ಯಕ್ಷ ಕೃಷ್ಣನ್ ರಾಮಾನುಜಮ್ ಹೇಳಿದ್ದಾರೆ.

ಭಾವಪೂರ್ವ ಶ್ರದ್ಧಾಂಜಲಿ

ಶ್ರೀಮತಿ ಯಶೋದಮ್ಮ

ಬೆಳ್ಳಂದೂರಿನ ದಿವಂಗತ ಬಿ.ಎಮ್. ಚಿನ್ನಪ್ಪನವರ ಧರ್ಮ ಪತ್ನಿ, ದಿವಂಗತ ಮಣಕಪ್ಪನವರ ಸೊಸೆ ದಿ: 15–2–2022 ಮಂಗಳವಾರ ಸಂಜೆ 6:45ರಲ್ಲಿ ದೈವಾಧೀನರಾಗಿರುತ್ತಾರೆ, ಅವರ ಅಂತ್ಯಕ್ರಿಯೆಯನ್ನು ದಿ: 16–2–2022ನೇ ಬುಧವಾರ ಮಧ್ಯಾಹ್ನ 2:00 ಗಂಟೆಗೆ ನಮ್ಮ ತೋಟದಲ್ಲಿ (ದೊಡ್ಡಮ್ಮನ ದೇವಸ್ಥಾನದ ರಸ್ತೆ) ಬೆಳ್ಳಂದೂರು, ನೆರವೇರಿಸಲಾಗುವುದು.

ಇಂತಿ ದುಃಖತಪ್ತರು:
ಕುಟುಂಬ ವರ್ಗದವರು.
ಫೋನ್: 9845400095

'ಟೌನ್‌ಶಿಪ್ ಯೋಜನೆ: ಭೂ ಖರೀದಿ ಪ್ರಕ್ರಿಯೆ ಸ್ಥಗಿತಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟೌನ್‌ಶಿಪ್‌ಗಾಗಿ ಜಮೀನು ಖರೀದಿಸುತ್ತಿರುವುದಕ್ಕೆ ರೈತರಿಂದ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದೆ. ಹೀಗಾಗಿ ಈ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸಿ' ಎಂದು ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಮನವಿ ಮಾಡಿದ್ದಾರೆ.

ಈ ಸಂಬಂಧ ಅವರು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಹಾಗೂ ನೈಸ್ ಸಮಿತಿ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ.

'ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಹೆಮ್ಮಿಗೆಪುರ, ವರಾಹಸಂದ್ರ, ಕೆಂಗೇರಿ ಗೊಲ್ಲಹಳ್ಳಿ, ಬಡಾಮುನವಾರ್ತೆ ಕಾವಲ್, ದೇವಗೆರೆ, ಗುಡಿಮಾವು, ಕಂಬೀಪುರ, ಗಂಗಸಂದ್ರ, ಗೋಣಿಪುರ, ತಿಪ್ಪೂರು, ಸೀಗೇಹಳ್ಳಿ, ಕೊಡಿಯಾಲ ಕರೇನಹಳ್ಳಿ ಹಾಗೂ ದೊಡ್ಡಕುಂಟನಹಳ್ಳಿ ಗ್ರಾಮದ ರೈತರಿಂದ ನೈಸ್ ಕಂಪನಿ ಹಾಗೂ ಕೆಐಎಡಿಬಿ ಅಧಿಕಾರಿಗಳು ಅನಧಿಕೃತವಾಗಿ ಜಮೀನು ಖರೀದಿಸುತ್ತಿದ್ದಾರೆ. ಹಲವು ರೈತರಿಗೆ ಪರಿಹಾರಧನವನ್ನೇ ವಿತರಿಸಿಲ್ಲ. ಈ ಕುರಿತು ರೈತರು ಅಳಲು ತೋಡಿಕೊಂಡಿದ್ದಾರೆ' ಎಂದು ತಿಳಿಸಿದ್ದಾರೆ.

'ಮೂಲ ಒಪ್ಪಂದದಂತೆ ಯೋಜನೆ ಕೈಗೊಳ್ಳದೆ ರೈತರಿಂದ ಅಗತ್ಯಕ್ಕಿಂತಲೂ ಹೆಚ್ಚಿನ ಜಮೀನು ವಶಪಡಿಸಿಕೊಳ್ಳಲಾಗಿದೆ. ಅವುಗಳ ಸುತ್ತ ಕಾಂಪೌಂಡ್‌ಗಳನ್ನೂ ನಿರ್ಮಿಸಲಾಗಿದೆ. ಹೀಗಾಗಿ ಅವರು ಟೌನ್‌ಶಿಪ್‌ಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ರೈತರ ಹಿತದೃಷ್ಟಿಯಿಂದ ಖರೀದಿ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ನೈಸ್ ಕಂಪನಿಯು ಟೌನ್‌ಶಿಪ್ ನಿರ್ಮಾಣ ವ್ಯಾಪ್ತಿಯಲ್ಲಿ ಬರುವ ಕೆರೆ–ಕಟ್ಟೆಗಳನ್ನು ಸ್ವಾಧೀನಪಡಿಸಿಕೊಳ್ಳಲು ಹವಣಿಸುತ್ತಿದೆ. ಸರ್ಕಾರ ಕೇಳಿರುವ ಮಾಹಿತಿಯನ್ನು ಕಂಪನಿಯು ಈವರೆಗೂ ನೀಡಿಲ್ಲ. ಜಂಟಿ ಸದನ ಸಮಿತಿಗೂ ಮಾಹಿತಿ ಹಾಗೂ ದಾಖಲೆ ಒದಗಿಸದೆ ಅವಮಾನ ಮಾಡಿದೆ. 26 ವರ್ಷಗಳಾದರೂ ಯೋಜನೆ ಪೂರ್ಣಗೊಳಿಸದೆ ಪೆರಿಫೆರಲ್ ರಸ್ತೆಯಿಂದ ದಿನಕ್ಕೆ ₹4 ಕೋಟಿ ವರಮಾನ ಗಳಿಸುತ್ತಿದೆ. ಆ ಮೂಲಕ ರೈತರ ಬದುಕನ್ನು ಮೂರಾಬಟ್ಟೆ ಮಾಡಿದೆ. ಯೋಜನೆ ಮುಗಿಯುವವರೆಗೂ ಟೋಲ್ ಸಂಗ್ರಹ ಮಾಡಬಾರದೆಂಬ ನಿಯಮವಿದ್ದರೂ ಅದನ್ನು ಗಾಳಿಗೆ ತೂರಲಾಗಿದೆ' ಎಂದು ದೂರಿದ್ದಾರೆ.

ಕ್ಯಾನ್ಸರ್: 4.24 ಲಕ್ಷ ಮಂದಿ ತಪಾಸಣೆ

ಬೆಂಗಳೂರು: ರಾಜ್ಯ ಸರ್ಕಾರ ಹಮ್ಮಿಕೊಂಡಿದ್ದ ಕ್ಯಾನ್ಸರ್ ತಪಾಸಣಾ ಅಭಿಯಾನದಡಿ ವಾರದಲ್ಲಿ 4.24 ಲಕ್ಷ ಮಂದಿಗೆ ಕ್ಯಾನ್ಸರ್ ತಪಾಸಣೆ ಮಾಡಲಾಗಿದೆ.

ತಪಾಸಣೆಗೆ ಒಳಪಟ್ಟವರಲ್ಲಿ 4,810 ಕ್ಯಾನ್ಸರ್ ಶಂಕಿತರನ್ನು ಗುರುತಿಸಲಾಗಿದೆ. 2,539 ಮಂದಿಯನ್ನು ಹೆಚ್ಚಿನ ಚಿಕಿತ್ಸೆಗೆ ಆಸ್ಪತ್ರೆಗಳಿಗೆ ಶಿಫಾರಸು ಮಾಡಲಾಗಿದೆ. 405 ಮಂದಿಯಲ್ಲಿ ರೋಗ ದೃಢಪಟ್ಟಿದೆ.

ನಗರದಲ್ಲಿ ಇಂದು

'ಸಮಗ್ರ ಪೋಷಕಾಂಶಗಳ ನಿರ್ವಹಣೆ' ಕಾರ್ಯಕ್ರಮದ ಉದ್ಘಾಟನೆ: ಎಸ್‌.ವಿ.ಸುರೇಶ್, ಅಧ್ಯಕ್ಷತೆ–ಎನ್‌.ದೇವಕುಮಾರ್, ಆಯೋಜನೆ–ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ–ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ), ಬೆಳಿಗ್ಗೆ 11

'ಕನ್ನಡ ಬಾವುಟ ಹಾರಿಸಿದವರು' ನೆನಪಿನ ಮಾಲೆ: ಉದ್ಘಾಟನೆ–ಮನು ಬಳಿಗಾರ್, ಅಧ್ಯಕ್ಷತೆ–ಆರ್‌.ಶೇಷಶಾಸ್ತ್ರಿ, ನುಡಿನಮನ–ಬಿ.ವಿ. ರಾಜಾರಾಂ, ರಾ.ನಂ.ಚಂದ್ರಶೇಖರ, ವ.ಚ.ಚನ್ನೇಗೌಡ, ಬಾ.ಹ.ಉಪೇಂದ್ರ, ಆಯೋಜನೆ–ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ–ಬಿಎಂಶ್ರೀ ಪ್ರತಿಮೆ ಎದುರು, ಬಸವನಗುಡಿ, ಬೆಳಿಗ್ಗೆ 11

'ಪದ್ಮಶ್ರೀ' ಪುರಸ್ಕೃತರಿಗೆ ಅಭಿನಂದನೆ: ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಅತಿಥಿಗಳು–ಸಚಿವ ವಿ.ಸುನಿಲ್ ಕುಮಾರ್, ಸಂಸದ ತೇಜಸ್ವಿ ಸೂರ್ಯ, ಅಧ್ಯಕ್ಷತೆ–ಶಾಸಕ ಉದಯ್ ಬಿ.ಗರುಡಾಚಾರ್, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 5.30

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055.

ಬಹಿರಂಗ ಹರಾಜು ಇಸಿಹಾರ್
ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ., ನಂ–32, ಕೆ.ಹೆಚ್. ರಸ್ತೆ, ಬೆಂಗಳೂರು – 560027. ಇವರ ಹುಕ್ಕುಂ ಈ ಕೆಳಗೆ ನಮೂದಿಸಿರುವ ಸಿ.ಇ.ಪಿ **ಸಂಖ್ಯೆಗಳಂತೆ** ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಸೂಚಿಸಿರುವ ಸುಸ್ತಿದಾರರು **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,** 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–55 ಇವರಲ್ಲಿ ತಮ್ಮ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಬ್ಯಾಂಕಿಗೆ ಆಧಾರ ಮಾಡಿದ ಈ ಕೆಳಗೆ ನಮೂದಿಸಿರುವ ಸ್ವತ್ತುಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 38 ರನ್ವಯ ಬಹಿರಂಗ ಹರಾಜು ಮಾಡಲಾಗುವುದು. ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತುಗಳನ್ನು ಹರಾಜಿನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಪ್ರಧಾನ ವ್ಯವಸ್ಥಾಪಕರು, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನಂ.156, 2ನೇ ಅಂತಸ್ತು, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 55** ಇವರಲ್ಲಿ ಪಡೆಯಬಹುದು. **ದೂರವಾಣಿ ಸಂಖ್ಯೆ: 23442648, 23449450, ಮೊಬೈಲ್ 9449842016.**

ಸುಸಿದಾರರ ಹೆಸರು	ಸಿ.ಇ.ಪಿ. ಸಂಖ್ಯೆ	ಹರಾಜು ಮಾಡುವ ಆಸ್ತಿಗಳ ವಿವರ	ಹರಾಜು ನಡೆಯಲಿರುವ ಸ್ಥಳ, ದಿನಾಂಕ ಸಮಯ ಮತ್ತು ವಸೂಲಾಗಬೇಕಾಗಿರುವ ಮೊತ್ತ
ಇ.ಎಸ್.ವಿಶ್ವನಾಥ್	ಎ.ಆರ್.ಇ/ಯು.ಬಿ.ಎಫ್/252/2010–11	ನಂ. 295, ಖಾತಾ ನಂ.746/ಎ, ಬಿ.ಬಿ.ಎಮ್.ಪಿ. ನಂ. 235/989–295, ರ ಪಶ್ಚಿಮ ಭಾಗ, ಬಾಪೂಜಿ ಕಾಲೋನಿ, ಕೆಂಗೇರಿ, ಬೆಂಗಳೂರು–60 ಇಲ್ಲಿರುವ ಪೂರ್ವ ಪಶ್ಚಿಮ 18 ಅಡಿಗಳು ಮತ್ತು ಉತ್ತರ ದಕ್ಷಿಣ 22.6 ಅಡಿಗಳಲ್ಲಿನ ಮನೆಗೆ ಚೆಕ್ಕುಬಂದಿ ಪೂರ್ವಕ್ಕೆ–ನಿವೇಶನ ಸಂಖ್ಯೆ.11 & 12, ಪಶ್ಚಿಮಕ್ಕೆ–ರಸ್ತೆ ಉತ್ತರಕ್ಕೆ–ರಸ್ತೆ, ದಕ್ಷಿಣಕ್ಕೆ – ಇದೇ ಸ್ವತ್ತಿನ ದಕ್ಷಿಣ ಭಾಗ	ನಂ. 295, ಖಾತಾ ನಂ.746/ಎ, ಬಿ.ಬಿ.ಎಮ್.ಪಿ. ನಂ. 235/989–295, ರ ಪಶ್ಚಿಮ ಭಾಗ, ಬಾಪೂಜಿ ಕಾಲೋನಿ, ಕೆಂಗೇರಿ, ಬೆಂಗಳೂರು–60 ದಿನಾಂಕ:21.02.2022ರ ಸೋಮವಾರ ಬೆಳಿಗ್ಗೆ 11–30 ಘಂಟೆ ರೂ.12,90,000/– (ದಿನಾಂಕ.30.11.2021 ರವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ)
ಶ್ರೀಮತಿ. ರಕ್ಷಾ ಎಮ್ ಶ್ರೀ. ಮಂಜುನಾಥ್ ಎಸ್ ಆರ್	ಎ.ಆರ್.ಇ/ಯು.ಬಿ.ಎಫ್/71, 72, 73/2021–22	ಅಪಾರ್ಟ್‌ಮೆಂಟ್ ನಂ.ಎ–3, ಎರಡನೇ ಮಹಡಿ, ಮುನಿಸಿಪಾಲ್ ನಂ.170/5, 2ನೇ ಮುಖ್ಯರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03. ಬಿ.ಬಿ.ಎಮ್.ಪಿ ವಾರ್ಡ್ ನಂ.07 (ಮಲ್ಲೇಶ್ವರಂ) (ಪಿ.ಐ.ಡಿ ನಂ.7–1–170/5), ಬೆಂಗಳೂರು. ಇಲ್ಲಿರುವ 227 ಚ.ಅಡಿ ಅವಿಭಜಿತ ಭಾಗ ಮತ್ತು 1365 ಚ.ಅಡಿಗಳ ಕಟ್ಟಡಲ್ಲಿನ ಸ್ವತ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ :–ಸ್ಥಿರಾಸ್ತಿ ಸಂಖ್ಯೆ.171 ಮತ್ತು ಸಂಪಿಗೆರಸ್ತೆ ಪಶ್ಚಿಮಕ್ಕೆ :–ಸ್ಥಿರಾಸ್ತಿ ಸಂಖ್ಯೆ.170/1 ಮತ್ತು ಕರ್ನ್ಸ್‌ವೆನ್ನಿ ಉತ್ತರಕ್ಕೆ:– ಬೇರೆಯವರ ಸ್ವತ್ತು ದಕ್ಷಿಣಕ್ಕೆ : ಸಂಪಿಗೆ ರಸ್ತೆಗೆ ಪ್ಯಾಸೇಜು ಮತ್ತು ಬೇರೆ ಸ್ವತ್ತು.	ಅಪಾರ್ಟ್‌ಮೆಂಟ್ ನಂ.ಎ–3, ಎರಡನೇ ಮಹಡಿ, ಮುನಿಸಿಪಾಲ್ ನಂ.170/5, 2ನೇ ಮುಖ್ಯರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03 ದಿನಾಂಕ:28.02.2022ರ ಸೋಮವಾರ ಬೆಳಿಗ್ಗೆ 11–30 ಘಂಟೆ ರೂ.65,50,000/– (ದಿನಾಂಕ.30.11.2021 ರವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ)
ಶ್ರೀ.ನರಸಿಂಹಮೂರ್ತಿ.ಎಮ್ & ಶ್ರೀಮತಿ.ಅನಿತಾ ಮೂರ್ತಿ	ಎ.ಆರ್.ಇ/ಯು.ಬಿ.ಎಫ್/138/2019–20	ನಂ.9, ಹಳೆ ನಂ.17/18, 6ನೇ ಮೈನ್, 3ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು–96 ವಾರ್ಡ್ ನಂ11, ಪಿ.ಐ.ಡಿ ನಂ.11–120–9 ಇಲ್ಲಿರುವ ಪೂರ್ವ ಪಶ್ಚಿಮ 30 ಅಡಿಗಳು ಮತ್ತು ಉತ್ತರ ದಕ್ಷಿಣ 40 ಅಡಿಗಳಲ್ಲಿನ ಮನೆಗೆ ಚೆಕ್ಕುಬಂದಿ ಪೂರ್ವಕ್ಕೆ–ನಿವೇಶನ ಸಂಖ್ಯೆ.11 & 12, ಪಶ್ಚಿಮಕ್ಕೆ–ರಸ್ತೆ ಉತ್ತರಕ್ಕೆ–ರಸ್ತೆ, ದಕ್ಷಿಣಕ್ಕೆ – ಇದೇ ಸ್ವತ್ತಿನ ದಕ್ಷಿಣ ಭಾಗ	ನಂ.9, ಹಳೆ ನಂ.17/18, 6ನೇ ಮೈನ್, 3ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು–96 ದಿನಾಂಕ:24.02.2022 ರ ಗುರುವಾರ ಬೆಳಿಗ್ಗೆ 11–30 ಘಂಟೆ ರೂ.24,50,000/– (ದಿನಾಂಕ.3.11.2021 ವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ)

ಹರಾಜಿನ ಷರತ್ತುಗಳು ಮತ್ತು ನಿಯಮಗಳು

1. ಹರಾಜಿನ ಮುನ್ನ ಸಾಲ ಮರುಪಾವತಿಯಾದ್ದಲ್ಲಿ ಸದರೀಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.
2. ಕಟ್ಟಡ ಯಾವರೀತಿಯಲ್ಲಿದೆಯೋ ಅದೇ ರೀತಿಯಲ್ಲಿ ಹರಾಜು ಮಾಡಲಾಗುವುದು.
3. **ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ರೂ.50,00,000/– ಗಳ ಕೆಳಗೆ ಬಾಕಿ ಇರುವ ಪ್ರಕರಣಗಳಲ್ಲಿ ರೂ.50,000/– ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
4. **ರೂ.50,00,001/– ಮೇಲೆ ಬಾಕಿಯಿರುವ ಪ್ರಕರಣಗಳಲ್ಲಿ ರೂ.1,00,000/– ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
5. **ಹರಾಜಿನಲ್ಲಿ ಬಿಡ್ ನಿಂತ ತಕ್ಷಣವೇ ಹರಾಜು ಮೊಬಲಗಿನ ಶೇ.15 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಿ ರಸೀತಿಯನ್ನು ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ 45 ದಿನಗೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದ್ದಲ್ಲಿ ಬಿಡ್‌ದಾರರು ಪಾವತಿ ಮಾಡಿರುವ ಹಣವನ್ನು ಕಾನೂನು ರೀತ್ಯ ಮುಟ್ಟುಗೋಲು ಹಾಕಿಕೊಂಡು ಬದಲಿ ಹರಾಜು ಮಾಡಲಾಗುವುದು.**
6. ಬಿಡ್ ಮೊಬಲಗು ಆಸ್ತಿಯ ಬೆಲೆಗಿಂತ ಕಡಿಮೆಯಾದ್ದಲ್ಲಿ ಆಸ್ತಿಯನ್ನು ಅಂತಹ ಬಿಡ್‌ದಾರರಿಗೆ ಬಿಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆ.ಸಿ.ಎಸ್.ನಿಯಮಗಳ ಪ್ರಕಾರ ಮಾರಾಟಾಧಿಕಾರಿಯವರು ಹೊಂದಿರುತ್ತಾರೆ.
7. ಹರಾಜಿನಲ್ಲಿ ಯೋಗ್ಯ ಬೆಲೆ ಬಾರದಿದ್ದಲ್ಲಿ ಹರಾಜಿಗಿಟ್ಟಿರುವ ಸ್ಥಿರಾಸ್ತಿಯನ್ನು ಖರೀದಿಸುವ ಮತ್ತು ಆಸ್ತಿ ವರ್ಗಾವಣೆ ಮಾಡಿಕೊಳ್ಳುವ ಹಕ್ಕನ್ನು ಬ್ಯಾಂಕು ಹೊಂದಿರುತ್ತದೆ.
8. ಹರಾಜಿಗಿಟ್ಟಿರುವ ಸ್ಥಿರಾಸ್ತಿಯ ವಿವರಣೆ ಮತ್ತು ಅಂದಾಜು ವಿಸ್ತೀರ್ಣದ ವಿಷಯದಲ್ಲಿ ಯಾವುದಾದರೂ ತಪ್ಪುಗಳಿದ್ದರೆ ಸರ್ಕಾರದವರುಜವಾಬ್ದಾರರಾಗುವುದಿಲ್ಲ.
9. ಸ್ಥಿರಾಸ್ತಿ ಹರಾಜಿನ ಮಾರಾಟ ಸ್ಥಿರೀಕರಣವು ಹರಾಜಿನ ಷರತ್ತಿಗಳಿಗೊಳಪಟ್ಟಿರುತ್ತದೆ. ಬಿಡ್‌ದಾರರು ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಾರಾಟ ಸ್ಥಿರೀಕರಣಕ್ಕೆ ಸರ್ಕಾರದವರು ಜವಾಬ್ದಾರರಾಗುವುದಿಲ್ಲ.
10. ಮೂಲ ಸಾಲಗಾರರಾಗಲೀ, ಜಾಮೀನುದಾರರಾಗಲೀ ಅಥವಾ ಅವರ ಹಿತೈಷಿಗಳಾಗಲೀ ಬಹಿರಂಗ ಹರಾಜಿನಲ್ಲಿ ಆಸ್ತಿ ಮಾರಾಟ ಮಾಡಿದ 30 ದಿನಗಳೊಳಗಾಗಿ ಸಾಲದ ಪೂರ್ಣ ಬಾಕಿ ಮತ್ತು ಹರಾಜಿನಲ್ಲಿ ಆಸ್ತಿ ಖರೀದಿಸಿದ ಬಿಡ್‌ದಾರರು ಬ್ಯಾಂಕಿಗೆ ಠೇವಣಿ ಮಾಡಿದ ಹಣದ ಮೇಲೆ ಶೇ.5 ರಷ್ಟು ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದ್ದಲ್ಲಿ ಹರಾಜಿನಲ್ಲಿ ಆಸ್ತಿ ಖರೀದಿಸಿದವರು ಅವರು ಪಾವತಿಸಿದ ಠೇವಣಿಯ ಮೇಲೆ ಶೇ.5 ರಷ್ಟು ಹಣ ಪಡೆಯಲು ಮಾತ್ರ ಹಕ್ಕುಳ್ಳವರಾಗಿರುತ್ತಾರೆ ಹಾಗೂ ಹರಾಜಿನಲ್ಲಿ ಕೂಗಿದ ಆಸ್ತಿಗೆ ಹಕ್ಕು ಇರುವುದಿಲ್ಲ.

ದಿನಾಂಕ: 27.12.2021
ಬೆಂಗಳೂರು.

ಮಾರಾಟಾಧಿಕಾರಿ
ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಮಲ್ಲೇಶ್ವರಂ, ಬೆಂಗಳೂರು – 55.

COFFEE DAY ENTERPRISES LTD.

Brewing new possibilities.

Registered and Corporate Office: 23/2, Coffee Day Square, Vittal Mallya Road, Bengaluru - 560 001, Karnataka, India
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

Statement of Unaudited Financial Results For the Quarter and Nine-months ended 31st December, 2021

(₹ in Crores except per share data)

Particulars	Quarter ended 31st December, 2021 (Unaudited)	Nine-months ended 31st December, 2021 (Unaudited)	Quarter ended 31st December, 2020 (Unaudited)
Total income from operations (net)	188.67	431.09	290.34
Profit/(Loss) from ordinary activities after tax	18.80	(189.40)	(110.41)
Profit/(Loss) for the period after tax (after Extraordinary items)	18.80	(189.40)	(110.41)
Equity Share Capital	211.25	211.25	211.25
Reserves (excluding Revaluation Reserve as shown in the Balance Sheet of previous year)			
Earnings Per Share (before extraordinary items) (of ₹ 10/- each)			
Basic :	0.97	(8.19)	(4.35)
Diluted :	0.97	(8.19)	(4.35)
Earnings Per Share (after extraordinary items) (of ₹ 10/- each)			
Basic :	0.97	(8.19)	(4.35)
Diluted :	0.97	(8.19)	(4.35)

Notes:

1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 14th February, 2022 and have been subjected to the Limited review by the Statutory Auditors of the Company.
3. **Un-audited financial results of Coffee Day Enterprises Limited (Standalone Information)** *(₹ in Crores)*

Particulars	Quarter ended 31st December, 2021 (Unaudited)	Nine-months ended 31st December, 2021 (Unaudited)	Quarter ended 31st December, 2020 (Unaudited)
Total income from operations (net)	4.75	9.67	4.15
Profit/(Loss) before tax and exceptional items	36.15	(2.33)	(65.69)
Profit/(Loss) after tax and exceptional items	36.15	(2.33)	(65.69)

For and behalf of Board of Directors
S.V Ranganath
Interim Chairman and Independent Director
Coffee Day Enterprises Limited

Place : Bengaluru
Date : February 14, 2022

ಕೆಆರ್‌ಐಡಿಎಲ್ ಮೇಲೇಕೆ ಪ್ರೀತಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಮೂಲಕ ಅಭಿವೃದ್ಧಿಪಡಿಸುವುದು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಹಲವು ವಿಭಾಗಗಳಲ್ಲಿ ಎಂಜಿನಿಯರ್‌ಗಳ ಹಿಂಡನ್ನೇ ಹೊಂದಿರುವ ಪಾಲಿಕೆ ತನ್ನ ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ವಹಿಸಿ ಶೇ 12ರಷ್ಟು ಸೇವಾ ಶುಲ್ಕ ಪಾವತಿಸುವುದು ಏಕೆ ಎಂಬ ಪ್ರಶ್ನೆಗಳು ಸಾರ್ವಜನಿಕ ವಲಯದಲ್ಲಿ ಉದ್ಭವವಾಗಿವೆ. ₹2 ಕೋಟಿ ತನಕದ ಕಾಮಗಾರಿಗಳನ್ನು ಟೆಂಡರ್ ಕರೆಯದೇ ನಿರ್ವಹಿಸುವ ಅಧಿಕಾರವನ್ನು ಕೆಆರ್‌ಐಡಿಎಲ್‌ಗೆ ನೀಡಲಾಗಿದೆ. ಇದೇ ಕಾರಣಕ್ಕೆ ಕೆಆರ್‌ಐಡಿಎಲ್ ಮೇಲೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಪ್ರೀತಿ ಎಂಬ ಅಭಿಪ್ರಾಯಗಳು ಗುತ್ತಿಗೆದಾರ ವಲಯದಲ್ಲಿವೆ.

ಹೆಸರೇ ಸೂಚಿಸುವಂತೆ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಮೂಲಸೌಕರ್ಯ ಕಾಮಗಾರಿ ನಿರ್ವಹಿಸಬೇಕಾದ ನಿಗಮವು ನಗರ ಪ್ರದೇಶದ ಅದರಲ್ಲೂ ಬೆಂಗಳೂರು ಮಹಾನಗರದ ಕಾಮಗಾರಿಗಳನ್ನು ನಿರ್ವಹಿಸುತ್ತಿದೆ. ಅದಕ್ಕೆ ಬೇಕಿರುವ ತಿದ್ದುಪಡಿಯನ್ನೂ ಸರ್ಕಾರ ಮಾಡಿಕೊಂಡಿದೆ. ಕೆಆರ್‌ಐಡಿಎಲ್ ಮೇಲೆ ಸರ್ಕಾರಕ್ಕೆ ಪ್ರೀತಿ ಏಕೆ ಎಂಬುದರ ಕುರಿತು 'ಪ್ರಜಾವಾಣಿ' ಜತೆ ಹೋರಾಟಗಾರರು ಅಭಿಪ್ರಾಯ ಹಂಚಿಕೊಂಡಿದ್ದಾರೆ.

'ಜನಪ್ರತಿನಿಧಿಗಳ ಸ್ವಹಿತಾಸಕ್ತಿಯೇ ಕಾರಣ'



ಕೆಆರ್‌ಐಡಿಎಲ್ ಸ್ಥಾಪನೆಯ ಮೂಲ ಉದ್ದೇಶವೇ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಾಗಿತ್ತು. ನಗರ ಪ್ರದೇಶಕ್ಕೂ ಅನ್ವಯವಾಗುವಂತೆ ಈಗ ತಿದ್ದುಪಡಿ ಮಾಡಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆಗೆ (ಕೆಟಿಪಿಪಿ) ತಿದ್ದುಪಡಿ ಮಾಡುವ ಮೂಲಕ ಕಾಯ್ದೆಗೆ ಅರ್ಥವಿಲ್ಲದಂತೆ ಮಾಡಲಾಗಿದೆ. ಕೆಆರ್‌ಐಡಿಎಲ್‌ಗೆ ಕಾಮಗಾರಿ ವಹಿಸುವುದರಿಂದ ಸರ್ಕಾರಕ್ಕೆ ಆಗಲಿರುವ ನಷ್ಟದ ಬಗ್ಗೆ 2018ರಲ್ಲಿ ನಗರಾಭಿವೃದ್ಧಿ ಇಲಾಖೆಯೇ ಗುರುತಿಸಿ ಸುತ್ತೋಲೆಯೊಂದನ್ನು ಹೊರಡಿಸಿದೆ. ಟೆಂಡರ್ ಪ್ರಕ್ರಿಯೆ ನಡೆಸಿದರೆ ಬಿಡ್ದುದಾರರ ನಡುವೆ ಸ್ಪರ್ಧೆ ಏರ್ಪಟ್ಟು ಸರಾಸರಿ ಶೇ 15ರ ತನಕ ಕಾಮಗಾರಿಯ ಮೊತ್ತ ಕಡಿಮೆಯಾಗಲಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿದೆ. ಆದರೂ ಕಾಯ್ದೆಗೆ ತಿದ್ದುಪಡಿ ತಂದು ಕೆಆರ್‌ಐಡಿಎಲ್‌ಗೆ ಹೆಚ್ಚು ಕೆಲಸಗಳನ್ನು ವಹಿಸುತ್ತಿದೆ. ಸರ್ಕಾರ ಮತ್ತು ಜನಪ್ರತಿನಿಧಿಗಳ ಸ್ವಹಿತಾಸಕ್ತಿ ಒಂದೇ ಇದಕ್ಕೆ ಕಾರಣ.

ಎನ್.ಮಹದೇವಸ್ವಾಮಿ, ಎಸ್‌ಸಿಎಸ್‌ಟಿ ಗುತ್ತಿಗೆದಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ

ರಾಜಧಾನಿ ಒಡಲದನಿ

'ಭ್ರಷ್ಟಾಚಾರಕ್ಕೆ ಮತ್ತೊಂದು ಹೆಸರೇ ಕೆಆರ್‌ಐಡಿಎಲ್'



ಬಿಬಿಎಂಪಿ ಮತ್ತು ರಾಜ್ಯ ಸರ್ಕಾರಕ್ಕೆ ಕೆಆರ್‌ಐಡಿಎಲ್ ಜತೆ ವಿಶೇಷ ಸಂಬಂಧವಿದೆ. ಅದು ಭ್ರಷ್ಟಾಚಾರದ ಸಂಬಂಧ. ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡಲು ಮತ್ತು ಕಾನೂನು ಚೌಕಟ್ಟಿನಿಂದ ನುಸುಳಿ ಟೆಂಡರ್ ಕರೆಯದೆ ತಮಗೆ ಬೇಕಾದವರಿಗೆ ಕಾಮಗಾರಿ ನೀಡಲು ಸೃಷ್ಟಿಸಿಕೊಂಡಿರುವ ವ್ಯವಸ್ಥೆ ಇದಾಗಿದೆ. ಭ್ರಷ್ಟಾಚಾರಕ್ಕೆ ಮತ್ತೊಂದು ಹೆಸರೇ ಕೆಆರ್‌ಐಡಿಎಲ್. ಇದೇ ಕಾರಣಕ್ಕೆ ರಾಜ್ಯ ಸರ್ಕಾರ ವಿಶೇಷ ಮುತುವರ್ಜಿ ವಹಿಸಿ ಕೆಟಿಪಿಪಿ ಕಾಯ್ದೆಯಿಂದ ಈ ಸಂಸ್ಥೆಗೆ ವಿನಾಯಿತಿ ನೀಡಿದೆ. ಬೆಂಗಳೂರಿನ ಶಾಸಕರ ಒತ್ತಡಕ್ಕೆ ಮಣಿಯುವ ಸರ್ಕಾರ, ವಿಶೇಷ ಅನುದಾನ ಎಂದು ಸಾವಿರಾರು ಕೋಟಿ ಬಿಡುಗಡೆ ಮಾಡಿ ಇಂತಹ ವ್ಯವಸ್ಥೆಯನ್ನು ಪೋಷಿಸುತ್ತಿದೆ. ಬಿಬಿಎಂಪಿಯನ್ನು ಸಬಲಗೊಳಿಸುವ ಬದಲು ತನ್ನ ಅಡಿಯಾಳಾಗಿ ಮಾಡಿಕೊಂಡು ಇಂತಹ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ನಿರ್ಮಿಸಿಕೊಂಡಿದೆ.

ಸಿ.ಎನ್. ದೀಪಕ್, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಪ್ರಧಾನ ಕಾರ್ಯದರ್ಶಿ

'ನಿಗಮ ಮುಚ್ಚದಿದ್ದರೆ ಕಾನೂನು ಹೋರಾಟ'

ಕಳೆದ ಮೂರು ವರ್ಷಗಳ ಬಿಜೆಪಿ ಆಡಳಿತದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. ಬಿ.ಎಸ್.ಯಡಿಯೂರಪ್ಪ ಅವರ ಕಾಲದಿಂದ ಆರಂಭವಾಗಿ ಬಸವರಾಜ ಬೊಮ್ಮಾಯಿ ಅವರ ಆಡಳಿತದಲ್ಲಿ ಭ್ರಷ್ಟಾಚಾರ ಇನ್ನಷ್ಟು ಹೆಚ್ಚಾಗಿದೆ. ಲೋಕಾಯುಕ್ತರ ವರದಿಗಳಿಗೂ ಬೆಲೆ ಇಲ್ಲವಾಗಿದೆ. ಟೆಂಡರ್ ಇಲ್ಲದೆ ಕಾಮಗಾರಿಗಳನ್ನು ನಿರ್ವಹಿಸುವ ವ್ಯವಸ್ಥೆ ಎಂದರೆ ಅದರಲ್ಲಿ ಭ್ರಷ್ಟಾಚಾರ ಅಡಗಿದೆ ಎಂಬುದು ಅರ್ಥವಾಗುತ್ತದೆ. ಶೇ 40ರಷ್ಟು ಲಂಚದ ಆಡಳಿತ ಎಂಬುದರಲ್ಲಿ ಅನುಮಾನ ಇಲ್ಲ. ಬಿಬಿಎಂಪಿಯಲ್ಲಿ ಈಗ ಜನಪ್ರತಿನಿಧಿಗಳು ಇಲ್ಲವಾಗಿದ್ದು, ಪ್ರಶ್ನೆ ಮಾಡುವವರೇ ಇಲ್ಲವಾಗಿದೆ. ಕೆಆರ್‌ಐಡಿಎಲ್ ಮುಚ್ಚುವ ನಿರ್ಧಾರವನ್ನು ಮುಖ್ಯಮಂತ್ರಿ ಮಾಡಬೇಕು. ಕೆಆರ್‌ಐಡಿಎಲ್ ಮೂಲಕ ಆಗಿರುವ ಅಕ್ರಮದ ಬಗ್ಗೆ ತನಿಖೆ ನಡೆಸಬೇಕು. ಅಧಿಕಾರಿಗಳು ಮತ್ತು ಸಂಬಂಧಪಟ್ಟ ಜನಪ್ರತಿನಿಧಿಗಳ ಆಸ್ತಿ ಜಪ್ತಿ ಮಾಡಬೇಕು. ಕೆಆರ್‌ಐಡಿಎಲ್ ಮುಚ್ಚದಿದ್ದರೆ ಕಾನೂನು ಹೋರಾಟ ನಡೆಸಲು ನಾವು ಸಜ್ಜಾಗುತ್ತಿದ್ದೇವೆ.

ಶಾಂತಲಾ ದಾಮ್ಲೆ, ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷೆ

ಪಾಲಿಕೆ ಅಧಿಕಾರಿಗಳೇ ಜೈಲಿಗೆ ಹೋಗಲು ಸಿದ್ಧರಾಗಿ: ಹೈಕೋರ್ಟ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಧಿಕಾರಿಗಳನ್ನು ಹೈಕೋರ್ಟ್‌ನ ಅಂಗಳದಿಂದಲೇ ನೇರವಾಗಿ ಜೈಲಿಗೆ ಕಳುಹಿಸಲಾಗುವುದು. ಜೈಲಿಗೆ ಹೋಗಲು ಗಂಟು ಮೂಟೆ ಕಟ್ಟಿಕೊಂಡು ಸಿದ್ಧರಾಗಿ ಬರುವಂತೆ ನಿಮ್ಮ ಅಧಿಕಾರಿಗಳಿಗೆ ಮಾಹಿತಿ ನೀಡಿ' ಎಂದು ಬಿಬಿಎಂಪಿ ಪರ ವಕೀಲರಿಗೆ ಹೈಕೋರ್ಟ್ ಖಡಕ್ ಎಚ್ಚರಿಕೆ ನೀಡಿದೆ.

'ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡುವಲ್ಲಿ ಬಿಬಿಎಂಪಿ ವಿಫಲವಾಗಿದೆ' ಎಂದು ಆಕ್ಷೇಪಿಸಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

'ಜೈಲಿಗೆ ಹೋಗಲು ಏನೇನು ಬೇಕೋ ಅಂತಹ ಬ್ಯಾಗು ಹಾಗೂ ಅಗತ್ಯ ವಸ್ತುಗಳೊಂದಿಗೆ ಸಿದ್ಧರಾಗಿ ಬರುವಂತೆ ನಿಮ್ಮ ಅಧಿಕಾರಿಗಳಿಗೆ ತಿಳಿಸಿ. ಈ ಬಾರಿ ನಿಮ್ಮ ಅಧಿಕಾರಿಗಳನ್ನು ಖಂಡಿತವಾಗಿಯೂ ಹೈಕೋರ್ಟ್ ಅಂಗಳದಿಂದಲೇ ಸೀದಾ ಜೈಲಿಗೆ ಅಟ್ಟಲಾಗುವುದು. ಹೈಕೋರ್ಟ್ ಎಂದರೆ ಏನು ಎಂಬುದನ್ನು ಈ ಅಧಿಕಾರಿಗಳಿಗೆ ಮನಗಾಣಿಸಬೇಕಿದೆ. ಕೋರ್ಟ್ ಆದೇಶ ಉಲ್ಲಂಘಿಸಿದರೆ ಏನಾಗುತ್ತದೆ ಎಂಬುದನ್ನೂ ಅವರಿಗೆಲ್ಲಾ ತಿಳಿಸಬೇಕಿದೆ' ಎಂದು ಕಟುವಾಗಿ ನುಡಿಯಿತು.

'ನ್ಯಾಯಾಲಯ ನಮ್ಮನ್ನು ಜೈಲಿಗೆ ಕಳುಹಿಸಲಿ ಎಂದು ಕೆಲ ಬಿಬಿಎಂಪಿಯ ಅಧಿಕಾರಿಗಳು ಬಯಸುತ್ತಿದ್ದಾರೇನೊ' ಎಂದು ಅಚ್ಚರಿ ವ್ಯಕ್ತಪಡಿಸಿದ ನ್ಯಾಯಪೀಠ, 'ಬಿಬಿಎಂಪಿ ಆಯುಕ್ತರೂ ಜೈಲಿಗೆ ಹೋಗಲಿ' ಎಂದು ಮೌಖಿಕವಾಗಿ ನುಡಿಯಿತು.

'ಕೋರ್ಟ್ ನಿರ್ಬಂಧವಿದ್ದರೂ ಆದೇಶ ಉಲ್ಲಂಘಿಸಿ ಮಿಟ್ಟಗಾನಹಳ್ಳಿ ಕ್ವಾರಿ ಪ್ರದೇಶದಲ್ಲಿ ಘನತ್ಯಾಜ್ಯ ಸುರಿಯಲು ಅಧಿಕಾರಿಗಳು ಅವಕಾಶ ನೀಡಿದ್ದಾರೆ' ಎಂಬ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಹೇಳಿಕೆಗೆ ವ್ಯಗ್ರವಾದ ನ್ಯಾಯಪೀಠ, 'ಈ ಪ್ರಕರಣದಲ್ಲಿ ತ್ಯಾಜ್ಯ ವಿಲೇವಾರಿಗೆ ಅವಕಾಶ ನೀಡಿರುವ ಪಾಲಿಕೆ ಅಧಿಕಾರಿಗಳನ್ನು ಜೈಲಿಗೆ ಕಳುಹಿಸಲಾಗುವುದು. ಈ ಸಂಬಂಧ ಬಿಬಿಎಂಪಿ ಮುಖ್ಯ ಆಯುಕ್ತರು ಮುಂದಿನ ವಿಚಾರಣೆಗೆ ಖುದ್ದು ಹಾಜರಾಗಬೇಕು' ಎಂದು ತಾಕೀತು ಮಾಡಿದ್ದು, ವಿಚಾರಣೆಯನ್ನು ಮಾರ್ಚ್ 5ಕ್ಕೆ ಮುಂದೂಡಿದೆ.

'ಕೈ' ಹಿರಿಯ ನಾಯಕರ ಸಭೆ

ಬೆಂಗಳೂರು: ಹಿಜಾಬ್ ವಿಷಯದಲ್ಲಿ ಹೈಕೋರ್ಟ್ ನೀಡುವ ಆದೇಶದಂತೆ ಮುಂದುವರಿಯಲು ಕಾಂಗ್ರೆಸ್ ನಾಯಕರು ನಿರ್ಧರಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಪಕ್ಷದ ಕಚೇರಿಯಲ್ಲಿ ಮಂಗಳವಾರ ರಾತ್ರಿ ನಡೆದ ಹಿರಿಯ ನಾಯಕರ ಸಭೆಯಲ್ಲಿ ಹಲವು ಮಹತ್ವ ವಿಷಯಗಳ ಕುರಿತು ಚರ್ಚೆ ನಡೆಯಿತು.

ಸಂವಿಧಾನ, ನ್ಯಾಯಾಲಯ ಆದೇಶವನ್ನು ಗೌರವಿಸಬೇಕಿದೆ. ಹೀಗಾಗಿ, ಹಿಜಾಬ್ ವಿಷಯದಲ್ಲಿ ಕೋರ್ಟ್ ನೀಡಿರುವ ಮಧ್ಯಂತರ ಆದೇಶ, ಸಲಹೆ, ಸೂಚನೆಗಳಿಗೆ ಪೂರಕವಾಗಿ ನಿಲುವು ವ್ಯಕ್ತಪಡಿಸಲು ಪಕ್ಷದ ನಾಯಕರು ನಿರ್ಧರಿಸಿದ್ದಾರೆ. ಮೇಕೆದಾಟು ಯೋಜನೆಯ ತ್ವರಿತ ಅನುಷ್ಠಾನಕ್ಕೆ ಆಗ್ರಹಿಸಿ ಪಾದಯಾತ್ರೆ ಮುಂದುವರಿಸುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆದಿದೆ.

ಹಿಜಾಬ್: ಶಾಲೆಗಳಲ್ಲಿ ಕೋರ್ಟ್ ಆದೇಶ ಉಲ್ಲಂಘನೆ

ಬೆಂಗಳೂರು: 'ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದ್ದರೂ ಕೆಲವು ಶಿಕ್ಷಣ ಸಂಸ್ಥೆಗಳು ಮತ್ತು ಜಿಲ್ಲಾಡಳಿತಗಳು ಅದಕ್ಕೆ ನಿರ್ಬಂಧ ಹೇರುವ ಮೂಲಕ ಕೋರ್ಟ್ ಆದೇಶ ಉಲ್ಲಂಘಿಸುತ್ತಿವೆ' ಎಂದು ಶಿಕ್ಷಣ ತಜ್ಞರಾದ ವಿ.ಪಿ.ನಿರಂಜನಾರಾಧ್ಯ ಮತ್ತು ಕೆ.ಗುರುಮೂರ್ತಿ ದೂರಿದ್ದಾರೆ.

ಈ ಕುರಿತು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಅವರು ಪತ್ರ ಬರೆದಿದ್ದಾರೆ.

ಉಕ್ರೇನ್ ಗಡಿಯಿಂದ ಕೆಲ ತುಕಡಿಗಳು ವಾಪಸ್: ರಷ್ಯಾ

ತಗ್ಗಿದ ಉದ್ವಿಗ್ನತೆ: ರಾಜತಾಂತ್ರಿಕ ಪ್ರಯತ್ನ ಮುಂದುವರಿಕೆ

ಮಾಸ್ಕೊ(ಎಪಿ): ಉಕ್ರೇನ್‌ಗೆ ಹೊಂದಿಕೊಂಡಿರುವ ಗಡಿಗಳಲ್ಲಿ ನಡೆದ ತಾಲೀಮಿನಲ್ಲಿ ಪಾಲ್ಗೊಂಡಿರುವ ಪೈಕಿ ಸೇನೆಯ ಕೆಲ ತುಕಡಿಗಳು ತಮ್ಮ ನೆಲೆಗಳಿಗೆ ವಾಪಸಾಗಲಿವೆ ಎಂದು ರಷ್ಯಾ ಮಂಗಳವಾರ ಹೇಳಿದೆ. ಆದರೆ, ಸೇನೆಯನ್ನು ವಾಪಸ್ ಕರೆಸಿಕೊಳ್ಳುತ್ತಿರುವ ಕುರಿತು ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಿಲ್ಲ.

'ಉಕ್ರೇನ್‌ನೊಂದಿಗೆ ಸಂಘರ್ಷಕ್ಕೆ ಕಾರಣವಾಗಿರುವ ಭದ್ರತೆಗೆ ಸಂಬಂಧಿಸಿದ ತನ್ನ ದೂರುಗಳ ಕುರಿತ ಮಾತುಕತೆಗೆ ಈಗಲೂ ರಷ್ಯಾ ಸಿದ್ಧ' ಎಂಬುದಾಗಿ ವಿದೇಶಾಂಗ ಸಚಿವ ಸರ್ಗೆ ಲವರೋವ್ ಹೇಳಿದ ಬೆನ್ನಲ್ಲೇ, ಈ ಘೋಷಣೆ ಹೊರಬಿದ್ದಿದೆ.

ಆದರೂ, ಉಕ್ರೇನ್ ಮೇಲೆ ಯಾವುದೇ ಕ್ಷಣದಲ್ಲಿ ರಷ್ಯಾ ದಾಳಿ ನಡೆಸುವ ಸಾಧ್ಯತೆ ಇದೆ ಎಂದು ಕೆಲ ಪಾಶ್ಚಿಮಾತ್ಯ ರಾಷ್ಟ್ರಗಳು ಎಚ್ಚರಿಕೆ ನೀಡಿವೆ. ಸೇನೆಯ ಕೆಲ ತುಕಡಿಗಳು ಹಾಗೂ ಮಿಲಿಟರಿಗೆ ಸಂಬಂಧಿಸಿದ ಹಾರ್ಡ್‌ವೇರ್‌ಗಳನ್ನು ಗಡಿಯತ್ತ ಸಾಗಿಸುವ ಕಾರ್ಯ ಮುಂದುವರಿದಿರುವುದು ಈ ಮಾತಿಗೆ ಪುಷ್ಟಿ ನೀಡುತ್ತದೆ ಎಂದೂ ಹೇಳಿವೆ.

'ಯಾವ ಪ್ರದೇಶದಲ್ಲಿನ ಸೇನಾ ತುಕಡಿಗಳನ್ನು ವಾಪಸ್ ಕರೆಸಿಕೊಳ್ಳುವುದಾಗಿ ರಷ್ಯಾ ಹೇಳುತ್ತಿದೆ ಎಂಬುದು ಸ್ಪಷ್ಟವಾಗಿಲ್ಲ' ಎಂದು ಉಕ್ರೇನ್ ಪ್ರತಿಕ್ರಿಯಿಸಿದೆ.

'ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳುವ ಬಗ್ಗೆ ರಷ್ಯಾ ಹೇಳಿಕೆಗಳನ್ನು ನೀಡುತ್ತಲೇ ಇದೆ. ಅವರು ಹೇಳುವ ಮಾತುಗಳನ್ನು ನಾವು ನಂಬುವುದಿಲ್ಲ; ಅವರ ಮಾತು ಕೃತಿಯಲ್ಲಿ ಕಂಡಾಗ ನಂಬುತ್ತೇವೆ. ಇದು ನಮ್ಮ ನಿಯಮ' ಎಂದು ಉಕ್ರೇನ್‌ನ ವಿದೇಶಾಂಗ ಸಚಿವ ಡಿಮಿಟ್ರೊ ಕುಲೆಬ ಹೇಳಿದ್ದಾರೆ.

ಉಕ್ರೇನ್‌ಗೆ ಹೊಂದಿಕೊಂಡ ಉತ್ತರ, ದಕ್ಷಿಣ ಹಾಗೂ ಪೂರ್ವ ಗಡಿಗಳಲ್ಲಿ ರಷ್ಯಾ 1,30,000 ಯೋಧರನ್ನು ಜಮಾವಣೆ ಮಾಡಿದ್ದು, ಯುದ್ಧ ತಾಲೀಮು ನಡೆಸುತ್ತಿದೆ. ಇದು ದಾಳಿಯ ಆತಂಕವನ್ನು ಹೆಚ್ಚಿಸಿದೆ.

ಶಮನ ಯತ್ನ: ಈ ನಡುವೆ, ಉಭಯ ದೇಶಗಳೊಂದಿಗೆ ಮಾತುಕತೆ ನಡೆಸಿ, ಸಂಘರ್ಷವನ್ನು ಶಮನ ಮಾಡುವ ರಾಜತಾಂತ್ರಿಕ ಯತ್ನಗಳು ಮುಂದುವರಿದಿವೆ. ಜರ್ಮನಿಯ ಛಾನ್ಸಲರ್ ಒಲಾಫ್ ಶೂಲ್ಟ್ಸ್ ಅವರು ಕೀವ್‌ಗೆ ಭೇಟಿ ಉಕ್ರೇನ್ ಮುಖಂಡರೊಂದಿಗೆ ಮಾತುಕತೆ ನಡೆಸಲು ಮುಂದಾಗಿದ್ದಾರೆ. ನಂತರ, ಮಾಸ್ಕೊದಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ.

ಕಚ್ಚಾ ತೈಲ ಬೆಲೆ ಇಳಿಕೆ: ಬಿಕ್ಕಟ್ಟು ಕಡಿಮೆ ಆಗಬಹುದು ಎಂಬ ವರದಿಗಳ ನಂತರ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 93.23 ಡಾಲರ್‌ಗೆ ಇಳಿಕೆ ಆಗಿದೆ.

ಉಕ್ರೇನ್ ತೊರೆಯಲು ಭಾರತೀಯರಿಗೆ ಸೂಚನೆ

ಕೈವ್/ನವದೆಹಲಿ (ಪಿಟಿಐ): ರಷ್ಯಾ ಮತ್ತು ಉಕ್ರೇನ್ ನಡುವಣ ಬಿಕ್ಕಟ್ಟು ಉಲ್ಬಣಿಸಿದ ಹಿನ್ನೆಲೆಯಲ್ಲಿ ಉಕ್ರೇನ್‌ನಲ್ಲಿರುವ ಭಾರತೀಯರು, ವಿಶೇಷವಾಗಿ ವಿದ್ಯಾರ್ಥಿಗಳು ದೇಶ ತೊರೆಯಬೇಕು ಎಂದು ಅಲ್ಲಿನ ಭಾರತೀಯ ರಾಯಭಾರ ಕಚೇರಿ ಸೂಚನೆ ನೀಡಿದೆ. 'ಉಕ್ರೇನ್‌ನಲ್ಲಿರುವ ಭಾರತೀಯ ಪ್ರಜೆಗಳು, ವಿಶೇಷವಾಗಿ ವಾಸ್ತವ್ಯದ ಅಗತ್ಯವಿಲ್ಲದ ವಿದ್ಯಾರ್ಥಿಗಳು ತಾತ್ಕಾಲಿಕವಾಗಿ ದೇಶ ತೊರೆಯಬೇಕು. ಅನಿವಾರ್ಯವಿಲ್ಲದಿದ್ದರೆ ಭಾರತೀಯರು ಉಕ್ರೇನ್ ಪ್ರಯಾಣವನ್ನು ರದ್ದುಗೊಳಿಸಬಹುದು' ಎಂದೂ ಪ್ರಕಟಣೆಯಲ್ಲಿ ಹೇಳಲಾಗಿದೆ.

ಕೋವಿಡ್: ದೃಢ ಪ್ರಮಾಣ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕು ದೃಢ ಪ್ರಮಾಣ ಶೇ 1.91ಕ್ಕೆ ಇಳಿಕೆಯಾಗಿದೆ. 1,405 ಮಂದಿ ಕೋವಿಡ್ ಪೀಡಿತರಾಗಿರುವುದು ಮಂಗಳವಾರ ದೃಢಪಟ್ಟಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆಯೂ ಇಳಿಕೆ ಕಂಡಿದೆ. ಒಂದು ದಿನದ ಅವಧಿಯಲ್ಲಿ 73 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 24 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡು ಅಂಕಿ ಹಾಗೂ 5 ಜಿಲ್ಲೆಗಳಲ್ಲಿ ಒಂದು ಅಂಕಿಗೆ ಇಳಿಕೆಯಾಗಿದೆ.





ಶಿವಮೊಗ್ಗದಲ್ಲಿ ಹಾರಿದ ಕೇಸರಿ ಬಾವುಟ–ಪರಿಷತ್ತಿನಲ್ಲಿ ಕಾವೇರಿದ ಚರ್ಚೆ

ರಾಷ್ಟ್ರಧ್ವಜ ಹಾರಿಸುವುದು ತಪ್ಪೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ಧರಿಸುವುದಕ್ಕೆ ಅವಕಾಶ ನೀಡಬಾರದು ಎಂದು ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳು ಶಿವಮೊಗ್ಗದ ಬಾಪೂಜಿನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಧ್ವಜಸ್ತಂಭದಲ್ಲಿ ಕೇಸರಿ ಬಾವುಟ ಹಾರಿಸಿದ ಪ್ರಕರಣ ವಿಧಾನ ಪರಿಷತ್ತಿನಲ್ಲಿ ಮಂಗಳವಾರ ಕಾವೇರಿದ ಚರ್ಚೆಗೆ ಕಾರಣವಾಯಿತು.

ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಪ್ರಸ್ತಾವದ ಮೇಲಿನ ಚರ್ಚೆಯ ವೇಳೆ ಬಿಜೆಪಿ ಸದಸ್ಯ ಡಿ.ಎಸ್. ಅರುಣ್, 'ದೇಶದಲ್ಲಿ ತುರ್ತು ಪರಿಸ್ಥಿತಿ ಇದೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ. ಅವರು ಡಿ.ಜೆ.ಹಳ್ಳಿ–ಕೆ.ಜೆ.ಹಳ್ಳಿಯ ಗಲಭೆ ಸಂದರ್ಭದಲ್ಲಿ ತಲವಾರು ಹಿಡಿದುಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದನ್ನು ಅಥವಾ ಕರಾವಳಿಯಲ್ಲಿ ನಡೆದ ಗಲಭೆಯನ್ನು ಉದ್ದೇಶಿಸಿ ಹಾಗೆ ಹೇಳುತ್ತಿದ್ದಾರೋ ತಿಳಿಯುತ್ತಿಲ್ಲ' ಎಂದು ವ್ಯಂಗ್ಯವಾಗಿ ಹೇಳಿದರು.

'ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜೈಲಿಗೆ ಹೋದ ಅನೇಕರು ಈ ಸದನದಲ್ಲಿದ್ದಾರೆ. ನಮ್ಮ ಕುಟುಂಬದ 15 ಮಂದಿ ಜೈಲಿಗೆ ಹೋಗಿದ್ದರು. ವಂದೇ ಮಾತರಂ, ಭಾರತ್ ಮಾತಾ ಕೀ ಜೈ ಎಂದು ಘೋಷಣೆ ಕೂಗಿದವರನ್ನೆಲ್ಲಾ ಆಗ ಜೈಲಿಗೆ ಅಟ್ಟಲಾಗಿತ್ತು. ಈಗ ಅಂತಹ ಸ್ಥಿತಿ ಇಲ್ಲ' ಎಂದು ದೂರಿದರು.

'ಸಿಆರ್‌ಪಿಸಿ ಸೆಕ್ಷನ್ 144ರ ನಿಷೇಧಾಜ್ಞೆ ಜಾರಿ ಇದ್ದಾಗಲೂ ಶಿವಮೊಗ್ಗದ ಬಾಪೂಜಿನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಧ್ವಜಸ್ತಂಭದಲ್ಲಿ ರಾಷ್ಟ್ರಧ್ವಜ ಹಾರಿಸಲಾಯಿತು' ಎಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಸಲೀಂ ಅಹಮದ್, 'ರಾಷ್ಟ್ರಧ್ವಜ ಹಾರಿಸಿದರೆ ಅದು ಹೇಗೆ ತಪ್ಪಾಗುತ್ತದೆ. ಕೆಂಪುಕೋಟೆಯಲ್ಲಿ ಕೇಸರಿ ಧ್ವಜ ಹಾರಿಸುತ್ತೇವೆ ಎಂದು ಸಚಿವರೊಬ್ಬರು ಹೇಳಿದ್ದಾರೆ. ಅದು ಸರಿಯೇ' ಎಂದು ಪ್ರಶ್ನಿಸಿದರು.

'ರಾಷ್ಟ್ರಧ್ವಜ ಹಾರಿಸಿದ್ದು ತಪ್ಪಲ್ಲ. ಆದರೆ ಆ. 15ರಂದು ಹಾಗೂ ಜ.26 ರಂದು ಮಾತ್ರ ಅದನ್ನು ಹಾರಿಸಲಾಗುತ್ತದೆ' ಎಂದು ಬಿಜೆಪಿ ಸದಸ್ಯರು ಸಮರ್ಥಿಸಿಕೊಂಡರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ಸಿಆರ್‌ಪಿಸಿ ಸೆಕ್ಷನ್ 144 ಜಾರಿಯಲ್ಲಿರುವಾಗ ರಾಷ್ಟ್ರಧ್ವಜ ಹಾರಿಸುವುದು ತಪ್ಪು ಎನ್ನುವುದಕ್ಕಿಂತ ದೊಡ್ಡ ದೇಶದ್ರೋಹ ಬೇರೆ ಇಲ್ಲ. ಯಾವ ದಿನ ಬೇಕಾದರೂ ರಾಷ್ಟ್ರಧ್ವಜ ಹಾರಿಸಬಹುದು ಎಂದು ನವೀನ್ ಜಿಂದಾಲ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಸದನಕ್ಕೆ ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸಬೇಡಿ' ಎಂದರು. ಬಳಿಕ ಸಭಾಪತಿ ಬಸವರಾಜ ಹೊರಟ್ಟಿಯವರು ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಸತ್ತವರಿಗೆ, ವಲಸೆ ಹೋದವರಿಗೂ ಲಸಿಕೆ

ಬೆಂಗಳೂರು: 'ಯಾದಗಿರಿ ಜಿಲ್ಲೆಯಲ್ಲಿ ಸತ್ತವರ ಹೆಸರಿನಲ್ಲೂ ಕೋವಿಡ್ ಲಸಿಕೆ ನೀಡಲಾಗಿದೆ. ಕೆಲಸಕ್ಕಾಗಿ ವಲಸೆ ಹೋದವರ ಮೊಬೈಲ್‌ಗೂ ಲಸಿಕೆ ನೀಡಿದ ಬಗ್ಗೆ ಸಂದೇಶ ರವಾನೆಯಾಗಿದೆ. ನಿಗದಿತ ಗುರಿ ಸಾಧಿಸುವ ಏಕೈಕ ಉದ್ದೇಶದಿಂದ ಅಧಿಕಾರಿಗಳು ಒತ್ತಡ ಹೇರಿದ್ದರಿಂದ ಇಂತಹ ಅವಾಂತರ ಸೃಷ್ಟಿಯಾಗಿದೆ' ಎಂದು ಕಾಂಗ್ರೆಸ್ ಸದಸ್ಯ ಅರವಿಂದ ಕುಮಾರ್ ಅರಳಿ ಆರೋಪಿಸಿದರು.

ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಪ್ರಸ್ತಾವದ ಮೇಲೆ ವಿಧಾನ ಪರಿಷತ್ತಿನಲ್ಲಿ ಮಂಗಳವಾರ ಮಾತನಾಡಿದ ಅವರು, 'ಕೋವಿಡ್ ಪರಿಹಾರದ ಚೆಕ್‌ಗಳು ಬೌನ್ಸ್ ಆಗಿರುವ ಬಗ್ಗೆ ಫಲಾನುಭವಿಗಳೇ ದೂರಿದ್ದಾರೆ. ಕೋವಿಡ್ ನಿರ್ವಹಣೆಯಲ್ಲಿ ವಿಫಲವಾಗಿರುವ ಸರ್ಕಾರ ಸುಖಾಸುಮ್ಮನೆ ಅಂಕಿ ಅಂಶಗಳನ್ನು ತೋರಿಸಿ ರಾಜ್ಯಪಾಲದಿಂದ ಶಹಬ್ಬಾಸ್ ಗಿಟ್ಟಿಸಿಕೊಂಡಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ' ಎಂದು ಅವರು ಹೇಳಿದರು.

ಗ್ರಾಮೀಣ ಪ್ರದೇಶದಲ್ಲಿ ಭೂಮಾಪನ ಶುಲ್ಕ ಇಳಿಕೆ

ಬೆಂಗಳೂರು: ಗ್ರಾಮೀಣ ಪ್ರದೇಶದಲ್ಲಿ ಭೂಮಾಪನ ಅರ್ಜಿ ಶುಲ್ಕದ ದರವನ್ನು ₹ 500ಕ್ಕೆ ಇಳಿಕೆ ಮಾಡಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ವಿಧಾನ ಪರಿಷತ್ತಿನಲ್ಲಿ ಪ್ರಕಟಿಸಿದರು.

ನಿಮಿಷಾಂಬಾ ದೇವಾಲಯ ಪ್ರವೇಶಕ್ಕೆ ನಿಷೇಧ

ಶ್ರೀರಂಗಪಟ್ಟಣ: ಕೋವಿಡ್ ಹರಡುವುದನ್ನು ತಡೆಯುವ ಉದ್ದೇಶದಿಂದ ಪಟ್ಟಣ ಸಮೀಪದ ಗಂಜಾಂನ ಪ್ರಸಿದ್ಧ ನಿಮಿಷಾಂಬಾ ದೇವಾಲಯಕ್ಕೆ ಮಾಘ ಹುಣ್ಣಿಮೆಯ ದಿನವಾದ ಬುಧವಾರ ಭಕ್ತರ ಪ್ರವೇಶವನ್ನು ನಿಷೇಧಿಸಲಾಗಿದೆ.

ಮಂಗಳವಾರ ರಾತ್ರಿಯಿಂದಲೇ ದೇವಾಲಯ ಪ್ರವೇಶಕ್ಕೆ ನಿಷೇಧ ಹೇರಿ ಜಿಲ್ಲಾಡಳಿತ ಆದೇಶಿಸಿದೆ.

ಸಹಾಯಕ ಪ್ರಾಧ್ಯಾಪಕರ ಹುದ್ದೆ ಮಾರ್ಚ್ 12ರಿಂದ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗೆ ಮಾರ್ಚ್ 12ರಿಂದ 16ರವರೆಗೆ ಆಯ್ಕೆ ಪರೀಕ್ಷೆ ನಡೆಯಲಿದೆ.

ಅರ್ಹ ಅಭ್ಯರ್ಥಿಗಳು ಫೆ. 28 ರಿಂದ ಪ್ರವೇಶ ಪತ್ರ ಜಾಲತಾಣದಿಂದ (http://kea.kar.nic.on) ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕಿ ರಮ್ಯಾ ತಿಳಿಸಿದ್ದಾರೆ.

ಪರೀಕ್ಷಾ ವೇಳಾಪಟ್ಟಿ: ಮಾರ್ಚ್ 12ರಂದು ಮಧ್ಯಾಹ್ನ 2.30ರಿಂದ 4.30ರವರೆಗೆ ಸಾಮಾನ್ಯ ಜ್ಞಾನ ಕಡ್ಡಾಯ ಪತ್ರಿಕೆ (50 ಅಂಕ), 13ರಂದು ಬೆಳಿಗ್ಗೆ 10.30ರಿಂದ 12.30ರವರೆಗೆ ಕಡ್ಡಾಯ ಕನ್ನಡ (100 ಅಂಕ), ಮಧ್ಯಾಹ್ನ 2.30ರಿಂದ 4.30ರವರೆಗೆ ಕಡ್ಡಾಯ ಇಂಗ್ಲಿಷ್ (100 ಅಂಕ) ಪರೀಕ್ಷೆ ನಡೆಯಲಿದೆ. ಉಳಿದಂತೆ, ಐಚ್ಛಿಕ ವಿಷಯಗಳಲ್ಲಿ ತಲಾ 250 ಅಂಕಗಳ ಪರೀಕ್ಷೆ ನಡೆಯಲಿವೆ. ಅದರಂತೆ, ಮಾರ್ಚ್ 14ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಕನ್ನಡ, ಉರ್ದು, ಸಸ್ಯವಿಜ್ಞಾನ, ಭೂಗೋಳವಿಜ್ಞಾನ ಮತ್ತು ಫ್ಯಾಷನ್ ಟೆಕ್ನಾಲಜಿ, ಮಧ್ಯಾಹ್ನ 2ರಿಂದ 5ರವರೆಗೆ ರಾಜ್ಯಶಾಸ್ತ್ರ, ಮೈಕ್ರೋಬಯಾಲಜಿ ಮತ್ತು ಭೂಗರ್ಭ ವಿಜ್ಞಾನ, 15ರಂದು ಬೆಳಿಗ್ಗೆ ಇತಿಹಾಸ, ವಾಣಿಜ್ಯ, ಗಣಿತ ಮತ್ತು ಪ್ರಾಣಿಶಾಸ್ತ್ರ, ಮಧ್ಯಾಹ್ನ ಅರ್ಥಶಾಸ್ತ್ರ, ಭೌತವಿಜ್ಞಾನ, ರಸಾಯನ ವಿಜ್ಞಾನ, ಇಂಗ್ಲಿಷ್ ಮತ್ತು ಸಮಾಜಕಾರ್ಯ, 16ರಂದು ಬೆಳಿಗ್ಗೆ ಶಿಕ್ಷಣರ, ಹಿಂದಿ, ಕಂಪ್ಯೂಟರ್ ಸೈನ್ಸ್, ಕಾನೂನು ಮತ್ತು ಸಾಂಖ್ಯಿಕ, ಮಧ್ಯಾಹ್ನ ನಿರ್ವಹಣೆ, ಬಯೋಕೆಮಿಸ್ಟ್ರಿ, ಎಲೆಕ್ಟ್ರಾನಿಕ್ಸ್ ಮತ್ತು ಸಮಾಜಶಾಸ್ತ್ರ ಪರೀಕ್ಷೆಗಳು ನಡೆಯಲಿವೆ.

ಕಿದ್ವಾಯಿ: ಅಸ್ಥಿಮಜ್ಜೆ ಕಸಿಗೆ ಚಾಲನೆ

ಬೆಂಗಳೂರು: ಖಾಸಗಿ ಆಸ್ಪತ್ರೆಗಳಲ್ಲಿ ₹30 ಲಕ್ಷದಿಂದ ₹50ಲಕ್ಷ ವೆಚ್ಚವಾಗುವ ಅಸ್ಥಿಮಜ್ಜೆ (ಬೋನ್ ಮ್ಯಾರೊ) ಕಸಿ ಶಸ್ತ್ರಚಿಕಿತ್ಸೆಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಮಂಗಳವಾರ ಚಾಲನೆ ದೊರೆತಿದೆ.

ಅಂತರರಾಷ್ಟ್ರೀಯ ಮಕ್ಕಳ ಕ್ಯಾನ್ಸರ್ ದಿನದ ಅಂಗವಾಗಿ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಈ ಕಸಿಗೆ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಚಾಲನೆ ನೀಡಿದರು. ದಾನಿ ರಾಜಶೇಖರ್ ಅವರು ₹4 ಕೋಟಿ ವೆಚ್ಚದಲ್ಲಿ ನಿರ್ಮಿಸಿಕೊಡುತ್ತಿರುವ ವೈದ್ಯಕೀಯ ಐಸಿಯು ಘಟಕದ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

'ಅಸ್ಥಿಮಜ್ಜೆ ಚಿಕಿತ್ಸಾ ಘಟಕವು 17 ಹಾಸಿಗೆಗಳನ್ನು ಒಳಗೊಂಡಿದ್ದು, ವೈದ್ಯರು ಹಾಗೂ ಸಿಬ್ಬಂದಿಗೆ ಅಗತ್ಯ ತರಬೇತಿ ನೀಡಲಾಗಿದೆ. ಕ್ಯಾನ್ಸರ್ ರೋಗಿಗಳಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ಅಗತ್ಯ. ಕ್ಯಾನ್ಸರ್ ಕಾಯಿಲೆಗೆ ಒಳಗಾದ ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬದವರಿಗೆ ಈ ಘಟಕದ ಮೂಲಕ ಅಸ್ಥಿಮಜ್ಜೆ ಕಸಿ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ಒದಗಿಸಲಾಗುತ್ತದೆ' ಎಂದು ಡಾ.ಕೆ. ಸುಧಾಕರ್ ಹೇಳಿದರು.

'ಬಿಪಿಎಲ್ ಕಾರ್ಡ್ ಇಲ್ಲದವರಿಗೆ ಈ ಕಸಿಯನ್ನು ರಿಯಾಯಿತಿ ದರದಲ್ಲಿ ನಡೆಸಲಾಗುವುದು. ರಾಜ್ಯದ ವಿವಿಧ ಜಿಲ್ಲೆಗಳಿಂದ ರೋಗಿಗಳು ಕಿದ್ವಾಯಿ ಸಂಸ್ಥೆಗೆ ಬರುತ್ತಿದ್ದಾರೆ. ಹೀಗಾಗಿ, ಈ ಸಂಸ್ಥೆಯ ಮೇಲೆ ಒತ್ತಡ ಹೆಚ್ಚಿದೆ. ಇದನ್ನು ಕಡಿಮೆ ಮಾಡಲು ಸರ್ಕಾರವು ಕಿದ್ವಾಯಿ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪನೆ ಮಾಡುತ್ತಿದೆ. ಈಗಾಗಲೇ ತುಮಕೂರು, ಕಲಬುರಗಿ, ಶಿವಮೊಗ್ಗ ಮತ್ತು ಮೈಸೂರಿನಲ್ಲಿ ಸಂಸ್ಥೆಯ ಪ್ರಾದೇಶಿಕ ಕೇಂದ್ರಗಳಿವೆ. ಈ ವರ್ಷ ಬೆಳಗಾವಿಯಲ್ಲೂ ಆರಂಭವಾಗಲಿದೆ' ಎಂದರು.

ಅಸ್ಥಿಮಜ್ಜೆ ಕಸಿಗೆ ಒಳಪಡುತ್ತಿರುವ ಬಾಲಕನ ಆರೋಗ್ಯವನ್ನು ಡಾ.ಕೆ. ಸುಧಾಕರ್ ವಿಚಾರಿಸಿದರು. ಡಾ.ಸಿ. ರಾಮಚಂದ್ರ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ಇದ್ದಾರೆ – ಪ್ರಜಾವಾಣಿ ಚಿತ್ರ

7 ವರ್ಷದ ಬಾಲಕನಿಗೆ ಚಿಕಿತ್ಸೆ ಪ್ರಾರಂಭ

'ಲಿಂಫೋಮಾ ಕ್ಯಾನ್ಸರ್‌ನಿಂದ ಬಳಲುತ್ತಿದ್ದ 7 ವರ್ಷದ ಬಾಲಕನಿಗೆ ಸಂಸ್ಥೆಯ ಅಸ್ಥಿಮಜ್ಜೆ ಚಿಕಿತ್ಸಾ ಕೇಂದ್ರದಲ್ಲಿ ಚಿಕಿತ್ಸೆಯನ್ನು ಮಂಗಳವಾರ ಪ್ರಾರಂಭಿಸಲಾಗಿದೆ. ಘಟಕದಲ್ಲಿ ದಾಖಲಾದ ಮೊದಲ ಪ್ರಕರಣ ಇದಾಗಿದೆ. ಬಾಲಕನ ದೇಹದಿಂದ ಆರೋಗ್ಯಕರ ರಕ್ತದ ಕಾಂಡ ಕೋಶಗಳನ್ನು ಸಂಗ್ರಹಿಸಲಾಗಿದ್ದು, ಮೂರು ವಾರಗಳ ನಂತರ ಕಸಿ ಶಸ್ತ್ರಚಿಕಿತ್ಸೆ ನಡೆಸಲಾಗುವುದು' ಎಂದು ಡಾ.ಸಿ. ರಾಮಚಂದ್ರ ಮಾಹಿತಿ ನೀಡಿದರು.

ಕೇಂದ್ರೀಯ ವಿದ್ಯಾಲಯ
ಡೀಸೆಲ್ ಲೋಕೋ ಶೆಡ್, ಕೃಷ್ಣರಾಜಪುರಂ, ಬೆಂಗಳೂರು–560036

ಕೇಂದ್ರೀಯ ವಿದ್ಯಾಲಯ, ಡೀಸೆಲ್ ಲೋಕೋ ಶೆಡ್, ಕೃಷ್ಣರಾಜಪುರಂ, ಬೆಂಗಳೂರು–560036 ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ 26/02/2022 ರಂದು (ಶನಿವಾರ) ಸಂದರ್ಶನವನ್ನು ನಡೆಸಲಾಗುವುದು. ಟಿ ಜಿ ಟಿ – ಹಿಂದಿ / ಸಂಸ್ಕೃತ / ಗಣಿತ / ವಿಜ್ಞಾನ / ಸಮಾಜ ವಿಜ್ಞಾನ / ಇಂಗ್ಲಿಷ್. ಸಮಯ ಬೆಳಿಗ್ಗೆ 9.00 ರಿಂದ 10.00. ಪ್ರಾಥಮಿಕ ಶಿಕ್ಷಕರು / ಪ್ರಾಥಮಿಕ ಶಿಕ್ಷಕರು (ಸಂಗೀತ) ಸಮಯ ಬೆಳಿಗ್ಗೆ 10.00 ರಿಂದ 11.00 ಮತ್ತು ಕಂಪ್ಯೂಟರ್ ಬೋಧಕರು / ಕನ್ನಡ ಶಿಕ್ಷಕರು / ಕ್ರೀಡಾ ಬೋಧಕರು / ಯೋಗ ಬೋಧಕರು / ಶಿಕ್ಷಣ ಸಲಹೆಗಾರರು / ನರ್ಸ್ / ಕಲೆ ಮತ್ತು ಕರಕುಶಲ / ಡೇಟಾ ಎಂಟ್ರಿ ಆಪರೇಟರ್ ಬೆಳಿಗ್ಗೆ 11 ರಿಂದ 1 ರವರೆಗೆ. ಅಭ್ಯರ್ಥಿಗಳು ಪರಿಶೀಲನೆಗಾಗಿ ತಮ್ಮ ಮೂಲ ಪ್ರಮಾಣಪತ್ರಗಳೊಂದಿಗೆ ಒಂದು ಸೆಟ್ ಫೋಟೋಕಾಪಿ ಮತ್ತು ಪಾಸ್‌ಪೋರ್ಟ್ ಅಳತೆಯ ಫೋಟೋವನ್ನು ತರಬೇಕು. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಶಾಲೆಯ ವೆಬ್‌ಸೈಟ್ https://krishnarajapuram.kvs.ac.in ಅನ್ನು ನೋಡಿ.

ಪ್ರಾಂಶುಪಾಲರು

ಬಸ್ ಪ್ರಯಾಣಿಕರ ವೇದಿಕೆ ಆಯೋಜಿಸಿದ್ದ ಸಭೆಯಲ್ಲಿ ಮಹಿಳೆಯರ ಒತ್ತಾಯ

'ಬಿಎಂಟಿಸಿಯಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಜಾಬ್, ತಮಿಳುನಾಡು, ದೆಹಲಿ ಮಾದರಿಯಲ್ಲಿ ಬೆಂಗಳೂರಿನ ಬಿಎಂಟಿಸಿ ಬಸ್‌ಗಳಲ್ಲೂ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ನೀಡಬೇಕು ಎಂದು ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಹಿಳೆಯರು ಒತ್ತಾಯಿಸಿದರು.

'ನಗರದ ಬಸ್ ಸೇವೆಯು ಸಾರ್ವಜನಿಕರ ಕೈಗೆಟುಕುವ ದರದಲ್ಲಿ ಇದೆಯೇ' ಎಂಬುದರ ಕುರಿತು ಬೆಂಗಳೂರು ಬಸ್ ಪ್ರಯಾಣಿಕರ ವೇದಿಕೆ ಆಯೋಜಿಸಿದ್ದ ಸಾರ್ವಜನಿಕ ಅಹವಾಲು ಸಭೆಯಲ್ಲಿ ಭಾಗವಹಿಸಿದ್ದ ಪೌರ ಕಾರ್ಮಿಕ ಮಹಿಳೆಯರು, ಮನೆಗೆಲಸ ಮಾಡುವವರು, ವಿದ್ಯಾರ್ಥಿಗಳು, ಬೀದಿ ಬದಿ ವ್ಯಾಪಾರಿಗಳು, ರೈತ ಮಹಿಳೆಯರು ಉಚಿತ ಪ್ರಯಾಣಕ್ಕೆ ಆಗ್ರಹಿಸಿದರು.

ವಿವಿಧ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರ ಅಹವಾಲು ಆಲಿಸಿದ ಶಾಸಕಿ ಸೌಮ್ಯ ರೆಡ್ಡಿ –ಪ್ರಜಾವಾಣಿ ಚಿತ್ರ

'ಬೆಂಗಳೂರಿನಲ್ಲಿ ಬಸ್ ಪ್ರಯಾಣ ದರ ಜಾಸ್ತಿ ಇದೆ. ಮಾಸಿಕ ಪಾಸ್ ದರ ₹1,050 ಇದೆ. ಕೋವಿಡ್ ನಂತರ ಲಕ್ಷಾಂತರ ಜನರು ಕೆಲಸ ಕಳೆದುಕೊಂಡಿದ್ದರೆ, ಕೆಲಸ ಇದ್ದರೂ ಹಲವರಿಗೆ ವೇತನ ಕಡಿತವಾಗಿದೆ. ಈ ಸಂದರ್ಭದಲ್ಲಿ ಬಸ್ ಪ್ರಯಾಣ ದರವೇ ದುಬಾರಿಯಾಗುತ್ತಿದೆ' ಎಂದು ತಮ್ಮ ಅಹವಾಲು ಹೇಳಿಕೊಂಡರು.

'ಪೌರ ಕಾರ್ಮಿಕರಿಗೆ ₹14 ಸಾವಿರ ವೇತನ ಇದೆ. ಒಂದು ದಿನ ರಜೆ ಪಡೆದರೂ ವೇತನ ಕಡಿತವಾಗುತ್ತದೆ. ಬಸ್ ಪ್ರಯಾಣಕ್ಕೆ ಸಾಕಷ್ಟು ಹಣ ಖರ್ಚಾಗುತ್ತಿದ್ದು, ಜೀವನ ನಡೆಸುವುದೇ ಕಷ್ಟವಾಗಿದೆ. ಪ್ರಯಾಣಕ್ಕೆ ಖರ್ಚು ಮಾಡುವ ಹಣ ಉಳಿದರೆ ಮಕ್ಕಳಿಗೆ ಮೊಟ್ಟೆ, ಸೊಪ್ಪು, ತರಕಾರಿ ತಿನ್ನಿಸಲು ಸಾಧ್ಯವಾಗುತ್ತದೆ. ಬೇರೆ ರಾಜ್ಯಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಇರುವಾಗ ಬೆಂಗಳೂರಿನಲ್ಲಿ ಅದಕ್ಕೆ ಅವಕಾಶ ಇಲ್ಲದಿರುವುದು ಸರಿಯಲ್ಲ. ಉಚಿತ ಪ್ರಯಾಣಕ್ಕೆ ಸರ್ಕಾರ ಕೂಡಲೇ ಆದೇಶ ಹೊರಡಿಸಬೇಕು' ಎಂದು ಪೌರ ಕಾರ್ಮಿಕರಾದ ಲಕ್ಷ್ಮಿ ಮನವಿ ಮಾಡಿದರು.

'ಬೆಂಗಳೂರಿನ ಹೊರವಲಯದಿಂದ ತರಕಾರಿ ಬೆಳೆದು ಬೆಂಗಳೂರಿಗೆ ತರುತ್ತೇವೆ. ಆದರೆ, ಬಸ್‌ನಲ್ಲಿ ಲಗೇಜ್ ದರಕ್ಕೆ ಬಹುಪಾಲು ಪಾವತಿಸಬೇಕಾಗಿದೆ' ಎಂದು ಹೊಸಕೋಟೆಯ ರೈತ ಮಹಿಳೆ ಹೇಳಿದರು.

ಸಾರಿಗೆ ತಜ್ಞ ಮನು ಮಥಾಯಿ ಮಾತನಾಡಿ, 'ಬಸ್‌ನಲ್ಲಿ ಪ್ರಯಾಣಿಸುವವರು ನಗರದ ಪರಿಸರಕ್ಕೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಅವರಿಗೆ ಸೇವೆ ಒದಗಿಸಬೇಕಿರುವುದು ಸರ್ಕಾರದ ಕರ್ತವ್ಯ' ಎಂದರು.

ಶಾಸಕಿ ಸೌಮ್ಯಾ ರೆಡ್ಡಿ ಮಾತನಾಡಿ, 'ಬಸ್ ದರ ಕಡಿಮೆ ಮಾಡಿದರೆ ಸಾಲದು. ಮಹಿಳೆಯರ ಉಚಿತ ಪ್ರಯಾಣಕ್ಕೆ ಅವಕಾಶ ನೀಡಬೇಕು. ಈ ಬಗ್ಗೆ ಸದನದಲ್ಲೂ ಧ್ವನಿ ಎತ್ತಲಾಗುವುದು' ಎಂದು ಹೇಳಿದರು. ಸಾರಿಗೆ ತಜ್ಞರಾದ ಆಶಿಶ್ ವರ್ಮ, ಸಿಂತಿಯ ಸ್ಟೀಫನ್, ತಾರಾ ಕೃಷ್ಣಸ್ವಾಮಿ, ವಿನಯ್ ಶ್ರೀನಿವಾಸ್ ಭಾಗವಹಿಸಿದ್ದರು.

ಕಣ್ಣು ಕೆಂಪಾಗುವುದು | **ಕಣ್ಣು ಊದುವಿಕೆ** | **ಕಣ್ಣಿನಿಂದ ನೀರು ಸೋರುವುದು**

ಸಾಮಾನ್ಯವಾಗಿ ಈ ಸಮಸ್ಯೆಯು ವೈರಸ್ ಅಥವಾ ವೈರಲ್ ಸೋಂಕಿನಿಂದ ಆಗುತ್ತದೆ. ಆದರೆ ಈ ಸಮಸ್ಯೆಯು ರಾಸಾಯನಿಕ, ಪ್ರದೂಷಣೆಯುಕ್ತ ತತ್ವಗಳಿಂದಲು ಉತ್ಪತಿಯಾಗುತ್ತದೆ.

ಕಣ್ಣಿಗೆ ಸೋಂಕು ತಾಗುವುದರಿಂದ, ಯಾವುದಾದರು ಪೆಟ್ಟು ಅಥವಾ ಮಾನಸಿಕ ಆಘಾತ ತರಹದ ಸ್ಥಿತಿಯಲ್ಲಿ ಕಣ್ಣು ಊದುತ್ತದೆ. ಕಣ್ಣಿನ ಊದುವಿಕೆಗೆ ಸಾಮಾನ್ಯ ಕಾರಣ ಅಲರ್ಜಿಯಿಂದ ಆಗುತ್ತದೆ.

ಮಣ್ಣು ಅಥವಾ ಧೂಳಿನ ಕಣಗಳಂತಹ ಹೊರಗಡೆಯಿದ ಬರುವ ತತ್ವಗಳು ಕಣ್ಣಿಗೆ ಬರುವುದರಿಂದ ಕಣ್ಣೀರು ಸುರಿಯುತ್ತದೆ. ಇದು ನೀರು, ಉಪ್ಪು ಮತ್ತು ಎಣ್ಣೆ ಅಂಶದಿಂದ ಕೂಡಿರುತ್ತದೆ. ಈ ಘಟಕ ಸಾರಗಳ ಸಂತುಲನೆ ಏರು–ಪೇರಾದಾಗ ಕಣ್ಣಿನಿಂದ ನೀರು ಸೋರುತ್ತದೆ.

ಈ ಸಮಯದಲ್ಲಿ ನಿಮಗೆ ಸಹಾಯ ಮಾಡುತ್ತದೆ '**ಜೀವದಯ ನೇತ್ರಪ್ರಭ**'. ಕಣ್ಣಿನ ಸುರಕ್ಷೆ ಮಾಡುವಲ್ಲಿ 85 ವರ್ಷಗಳಿಂದ ಭರವಸೆಯುಕ್ತ ಆಯುರ್ವೇದ ಔಷಧಿಗಳಲ್ಲಿ ಒಂದು. ಕಣ್ಣುಗಳಿನ ಸಮಸ್ಯೆಗಳನ್ನು ಉಂಟು ಮಾಡುವ ಕಾರಕಗಳಿಂದ ಉಳಿಸುವುದಲ್ಲದೇ, ಕಣ್ಣುಗಳನ್ನು ಸ್ವಚ್ಛ ಮತ್ತು ಸ್ವಾಸ್ಥ್ಯವಾಗಿಡುತ್ತದೆ.

ಶ್ರೀ ಹರಿ ಜೀವದಯ ನೇತ್ರಪ್ರಭ ಪ್ಲಸ್

ಪ್ರತಿದಿನ 2–3 ಬಾರಿ ನಿಸ್ಸಂಕೋಚವಾಗಿ ಬಳಸಬಹುದು.
ಕಣ್ಣಿನ ಯಾವುದೇ ತರಹದ ಶಸ್ತ್ರಚಿಕಿತ್ಸೆಯ 2–3 ತಿಂಗಳ ನಂತರ ಬಳಸಬಹುದು.

ದೂ: 6362489925
ಇಂದೇ ಖರೀದಿಸಿ

ಜೀವದಯ ನೇತ್ರಪ್ರಭ ಪ್ಲಸ್ ಎಲ್ಲಾ ಪ್ರಮುಖ ಔಷಧಾಲಯಗಳಲ್ಲಿ ಮತ್ತು ಪ್ರಾವಿಷನ್ ಸ್ಟೋರ್‌ಗಳಲ್ಲಿ ಲಭ್ಯ.
* ಷರತ್ತುಗಳು ಅನ್ವಯ : ವಿಜ್ಞಾಪನೆಯಲ್ಲಿ ಇರುವ ವಸ್ತುಗಳು ಕಂಪನಿಯ ನಿಯಮಗಳನ್ನು ಅನ್ವಯಿಸುತ್ತದೆ.
www.herbsatwork.com | www.netraprabha.com ಡಿಸ್ಟ್ರಿಬ್ಯೂಟರ್ – ಶ್ರೀರಾಮಾ ಸ್ಟೋರ್ಸ್, ಯಲ್ಲಾಪುರ

ಜಮೀನಿನ ಹದ್ದುಬಸ್ತು,ಇ–ಸ್ವತ್ತು ಸೇವೆಗೆ ಅರ್ಜಿ ಸಲ್ಲಿಸಲು ಪರದಾಡುವ ರೈತರು

ಮೋಜಣಿ ತಂತ್ರಾಂಶಕ್ಕೂ ಸರ್ವರ್ ಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಇಲಾಖೆಯ ಮೋಜಣಿ ತಂತ್ರಾಂಶದಲ್ಲಿನ ಲೋಪ, ಸರ್ವರ್ ಸಮಸ್ಯೆಯಿಂದ ಜಮೀನಿನ ಹದ್ದುಬಸ್ತಿಗೆ ಅರ್ಜಿ ಸಲ್ಲಿಸಲು ರೈತರು ಮೂರ್ನಾಲ್ಕು ದಿನ ಕಾಯಬೇಕಾದ ಸ್ಥಿತಿ ಇದೆ.

ಕಂದಾಯ ಇಲಾಖೆಯಲ್ಲಿ ಸೇವೆ ಪಡೆಯಲು ಆಗುವ ವಿಳಂಬ ತಪ್ಪಿಸಲು ಹಲವು ತಂತ್ರಾಂಶಗಳನ್ನು ಅಳವಡಿಸಿಕೊಂಡಿದೆ. ಅದೇ ರೀತಿ ಜಮೀನಿನ ಹದ್ದುಬಸ್ತು, ಇ–ಪೋಡಿ, ಇ–ಸ್ವತ್ತು ಸೇವೆ ಪಡೆಯಲು ಮೋಜಣಿ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಬೇಕು. ಈ ತಂತ್ರಾಂಶ ಪದೇ ಪದೇ ಕೈಕೊಡುವುದರಿಂದ ರೈತರು ತಾಲ್ಲೂಕು ಕಚೇರಿ, ನಾಡ ಕಚೇರಿಗಳಿಗೆ ಎಡತಾಕು-ವಂತಾಗಿದೆ.

> **ಮೋಜಣಿ ತಂತ್ರಾಂಶದಲ್ಲಿ ಸಮಸ್ಯೆ ಕಾಣಿಸಿಕೊಂಡಿರುವ ಬಗ್ಗೆ ಮಾಹಿತಿ ಇಲ್ಲ. ಸಮಸ್ಯೆ ಆಗುತ್ತಿದ್ದರೆ ಪರಿಶೀಲಿಸಿ ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದು.**
> **ಮನಿಷ್ ಮೌದ್ಗಿಲ್**
> ಭೂಮಾಪನ ಇಲಾಖೆ ಆಯುಕ್ತ

‘ನೆಲಮಂಗಲ ತಾಲ್ಲೂಕು ಕಚೇರಿಯಲ್ಲಿ ಫೆಬ್ರುವರಿ 9ರಿಂದ ಹದ್ದುಬಸ್ತಿಗೆ ಅರ್ಜಿ ಸಲ್ಲಿಸಲು ಪ್ರಯ-ತ್ನಿಸಲಾಗಿದೆ. ಪ್ರತಿದಿನವೂ ಮೋಜಣಿ ತಂತ್ರಾಂಶದಲ್ಲಿ ಸರ್ವರ್ ಲಾಗಿನ್ ಎರರ್ ಎಂಬ ಸಂದೇಶ ತೋರಿಸುತ್ತಿದೆ. ಈ ಬಗ್ಗೆ ಪ್ರಶ್ನಿಸಿದರೆ ಮೇಲಧಿಕಾರಿಗಳಿಗೆ ತಿಳಿಸಿ ಎಂಬ ಉತ್ತರವನ್ನು ಸಿಬ್ಬಂದಿ ನೀಡುತ್ತಿದ್ದಾರೆ. ಸಮಸ್ಯೆಯನ್ನು ಯಾರ ಬಳಿ ಹೇಳಿಕೊಳ್ಳಬೇಕು’ ಎಂದು ಹದ್ದುಬಸ್ತಿಗೆ ಅರ್ಜಿ ಸಲ್ಲಿಸಲು ಪರದಾಡಿರುವ ಬಿ. ಹನುಮಂತರಾಯಪ್ಪ ಬೇಸರ ವ್ಯಕ್ತಪಡಿಸಿದರು.

‘ಕಳೆದ ಬುಧವಾರದಿಂದ ಅರ್ಜಿ ಸಲ್ಲಿಸಲು ಪ್ರಯತ್ನಿಸಿದ್ದೇನೆ. ಈ ಮಂಗಳವಾರ ಸಮಸ್ಯೆ ಸರಿಯಾಗಿದ್ದು, ಅರ್ಜಿ ಸಲ್ಲಿಕೆಯಾಗಿದೆ. ಒಬ್ಬ ರೈತ ಅರ್ಜಿ ಸಲ್ಲಿಸಲು ವಾರಗಟ್ಟಲೆ ಕಾಯಬೇಕಾದ ಸ್ಥಿತಿ ಇದೆ’ ಎಂದರು.

‘ಕಾವೇರಿ, ಭೂಮಿ, ಇ–ಆಸ್ತಿ, ಮೋಜಣಿ ಸೇರಿ ಯಾವುದೇ ತಂತ್ರಾಂಶದಲ್ಲಿ ಲೋಪ ಕಾಣಿಸಿಕೊಂಡರೂ ಅದರ ಪರಿಣಾಮ ಆಸ್ತಿ ನೋಂದಣಿ ಮೇಲೆ ಬೀರುತ್ತದೆ. ವ್ಯಕ್ತಿಯೊಬ್ಬರು ತನ್ನ ಆಸ್ತಿಯಲ್ಲಿ ಭಾಗಶಃ ಮಾರಾಟ ಮಾಡಬೇಕಿದ್ದರೆ, ಅದಕ್ಕೆ ಬೇಕಿರುವ ನಕ್ಷೆಯನ್ನು ‘ಮೋಜಣಿ’ ತಂತ್ರಾಂಶದಿಂದ ಪಡೆಯಬೇಕಾಗುತ್ತದೆ. ನೋಂದಣಿ ಪ್ರಕ್ರಿಯೆ ನಡೆಸುವಾಗ ಯಾವುದೋ ಒಂದು ತಂತ್ರಾಂಶದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡರೆ ಇಡೀ ನೋಂದಣಿ ಪ್ರಕ್ರಿಯೆ ಅಲ್ಲೇ ನಿಲ್ಲುತ್ತದೆ. ಆದ್ದರಿಂದಲೇ ಸರ್ವರ್ ಡೌನ್ ಎಂಬ ಫಲಕಗಳು ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಆಗಾಗ ಕಾಣಿ-ಸಿಕೊಳ್ಳುತ್ತವೆ’ ಎನ್ನುತ್ತಾರೆ ದಸ್ತಾವೇಜು ಬರಹಗಾರರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಸಮರ್ಥನೆ

‘ಕಾಲಕ್ಕೆ ತಕ್ಕಂತೆ ಬೈ–ಲಾ ತಿದ್ದುಪಡಿ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಲಕ್ಕೆ ತಕ್ಕಂತೆ ಬೈ–ಲಾ ತಿದ್ದುಪಡಿ ಆಗಬೇಕು. 1915 ರಲ್ಲಿ ರಚನೆಯಾದ ಬೈ–ಲಾದಲ್ಲಿಯೇ 18 ವರ್ಷಗಳು ಮೇಲ್ಪಟ್ಟ, ಓದು-ಬರಹ ಬಲ್ಲ ವ್ಯಕ್ತಿಗಳು ಸದಸ್ಯತ್ವ ಪಡೆಯಬೇಕೆಂದು ತಿಳಿಸಲಾಗಿದೆ. ಹೀಗಾಗಿ, ಸದಸ್ಯ-ತ್ವಕ್ಕೆ ಏಳನೇ ತರಗತಿ ಉತ್ತೀರ್ಣರಾಗ-ದವರಿಗೆ ಸರಳ ಕನ್ನಡ ಪರೀಕ್ಷೆ ನಡೆಸಲು ಕ್ರಮವಹಿಸಲಾಗುತ್ತಿದೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ಮಹೇಶ ಜೋಶಿ

ಮಂಗಳವಾರ ಇಲ್ಲಿ ಸುದ್ದಿಗೋ-ಷ್ಠಿಯಲ್ಲಿ ಮಾತನಾಡಿದ ಅವರು, ‘ಬೈ–ಲಾ ತಿದ್ದುಪಡಿಗೆ ಸಂಬಂಧಿಸಿದಂತೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್ ನೇತೃತ್ವದಲ್ಲಿ ರಚಿಸಲಾದ ಸಮಿತಿಯು ಹಲವು ಸಲಹೆಗಳನ್ನು ನೀಡಿದೆ. ಸಮಿತಿಯು ಈ ಮೊದಲು 10ನೇ ತರಗತಿ ಉತ್ತೀರ್ಣ-ರಾದವರಿಗೆ ಸದಸ್ಯತ್ವ ನೀಡಬೇಕೆಂದು ಶಿಫಾರಸು ಮಾಡಿತ್ತು. ಈಗ ಅದನ್ನು ಬದಲಾಯಿಸಿ, ಏಳನೇ ತರಗತಿಗೆ ಇಳಿಸಲಾಗಿದೆ. ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದದ ರಕ್ಷಣೆ, ಪ್ರಸಾರ ಮತ್ತು ಅಭಿವೃದ್ಧಿ ಪರಿಷತ್ತಿನ ಉದ್ದೇಶ. ಆದ್ದರಿಂದಲೇ ಬೈ–ಲಾದಲ್ಲಿ ಓದು, ಬರಹ ಬರಬೇಕೆಂದು ತಿಳಿಸಲಾಗಿದೆ. ಸರಳ ಕನ್ನಡ ಪರೀಕ್ಷೆಗೆ ಕೇಂದ್ರ ಪರಿಷತ್ತಿನ ಪಠ್ಯಪುಸ್ತಕ ರಚನಾ ಸಮಿತಿಯು ಸೂಕ್ತ ಪಠ್ಯಕ್ರಮ ಹಾಗೂ ನಿಯಮಗಳನ್ನು ರಚಿಸಲಿದೆ’ ಎಂದು ಹೇಳಿದರು.

ಸಮಾಲೋಚನಾ ಸಭೆ ನಾಳೆ: ‘ಪ್ರಸ್ತಾವಿತ ತಿದ್ದುಪಡಿಯ ಬಗ್ಗೆ ಇದೇ ಗುರುವಾರ ಸಮಾಲೋಚನಾ ಸಭೆ ನಡೆಸಲಾಗುತ್ತದೆ. ಸಾಹಿತಿಗಳು, ಚಿಂತಕರು, ಕನ್ನಡ ಪರ ಹೋರಾಟಗಾರರು ಕಲಾವಿದರು ಸೇರಿದಂತೆ ಸಾಂಸ್ಕೃತಿಕ ಕ್ಷೇತ್ರದ 31 ಮಂದಿ ಪ್ರಮುಖರು ಭಾಗವಹಿಸಲಿದ್ದಾರೆ. ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಅವರು ಇರಲಿದ್ದಾರೆ. ಸಾಹಿತಿ ಬರಗೂರು ರಾಮಚಂದ್ರಪ್ಪ ಅವರಿಗೂ ಆಹ್ವಾನ ನೀಡಲಾಗಿತ್ತು. ಆದರೆ, ಅವರು ಬರುವುದಿಲ್ಲ ಎಂದು ಹೇಳಿರುವ ಕಾರಣಕ್ಕೆ ಪ್ರಮುಖರ ಪಟ್ಟಿಯಿಂದ ಕೈಬಿಡಲಾಗಿದೆ’ ಎಂದು ಮಹೇಶ ಜೋಶಿ ತಿಳಿಸಿದರು.

₹15 ಕೋಟಿ ಅನುದಾನ ನೀಡಲು ಸರ್ಕಾರಕ್ಕೆ ಮನವಿ

‘ಕನ್ನಡ ಸಾಹಿತ್ಯ ಪರಿಷತ್ತಿಗೆ ಸರ್ಕಾರ ಪ್ರತಿ ವರ್ಷ ₹ 5 ಕೋಟಿ ಅನುದಾನ ನೀಡುತ್ತಿತ್ತು. ಈ ಬಾರಿ ₹ 15 ಕೋಟಿ ನೀಡಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಹಾವೇರಿಯಲ್ಲಿ ಸಾಹಿತ್ಯ ಸಮ್ಮೇಳನ ನಡೆಯುವುದರಿಂದ ಹೆಚ್ಚಿನ ಅನುದಾನದ ಅಗತ್ಯವಿದೆ. ಕಟ್ಟಡದ ನವೀಕರಣ ಕಾರ್ಯವೂ ನಡೆಯಲಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ. ವಿಶ್ವೇಶ್ವರಯ್ಯ ಹಾಗೂ ಮಿರ್ಜಾ ಇಸ್ಮಾಯಿಲ್ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪನೆ ಹಾಗೂ ಜಯಂತಿ ಆಚರಣೆ ಮಾಡಲಾಗುತ್ತದೆ. ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ ಕನ್ನಡಿಗರಿಗೆ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ’ ಎಂದು ಮಹೇಶ ಜೋಶಿ ಹೇಳಿದರು.

‘ಕಸಾಪಗೆ ಶ್ರೇಷ್ಠತೆಯ ರೋಗ ವಕ್ಕರಿಸಿದೆ’

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿಗೆ (ಕಸಾಪ) ಶ್ರೇಷ್ಠತೆಯ ರೋಗ ವಕ್ಕರಿಸಿದೆ. ಇದು ಕನ್ನಡ, ಕನ್ನಡಿಗರು ಹಾಗೂ ಕರ್ನಾಟಕಕ್ಕೆ ಬಹುದೊಡ್ಡ ಅಪಾಯ ತಂದೊಡ್ಡಲಿದೆ. ಕನ್ನಡಿಗರು ಎಚ್ಚೆತ್ತುಕೊಳ್ಳದಿದ್ದರೆ ಕಸಾಪ, ಶ್ರೇಷ್ಠತೆಯ ವ್ಯಸನದ ಮತಾಂಧ ಸಂಘಟನೆಯ ಕಬ್ಜಾ ಆಗುವ ಅಪಾಯ ಎದುರಾಗಲಿದೆ’ ಎಂದು ಸಾಹಿತಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಎಸ್.ಜಿ.ಸಿದ್ಧರಾಮಯ್ಯ, ಬಂಜಗೆರೆ ಜಯಪ್ರಕಾಶ್, ಚಂದ್ರಶೇಖರ್ ತಾಳ್ಯ, ಹಿ.ಶಿ.ರಾಮಚಂದ್ರೇಗೌಡ, ಕಾಳೇಗೌಡ ನಾಗವಾರ, ಪುರುಷೋತ್ತಮ ಬಿಳಿಮಲೆ, ರೂಪ ಹಾಸನ, ರುದ್ರಪ್ಪ ಹನಗವಾಡಿ, ಬಿ.ಟಿ.ಲಲಿತಾನಾಯಕ್, ವಸುಂಧರಾ ಭೂಪತಿ, ನಲ್ಲೂರು ಪ್ರಸಾದ್, ಕೆ.ಪುಟ್ಟಸ್ವಾಮಿ ಹಾಗೂ ಕೆ.ಷರೀಫಾ ಅವರು ಈ ಕುರಿತು ಪತ್ರದ ಮೂಲಕ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘1 ಕೋಟಿ ಸದಸ್ಯತ್ವ ಮಾಡಹೊರಟಿರುವುದರ ಹಿಂದಿನ ಮತೀಯ ರಾಜಕಾರಣದ ಸಂಚು ಎಲ್ಲರಿಗೂ ತಿಳಿದಿದೆ. ಸದಸ್ಯರ ಮೇಲೆ ಕ್ರಮ ತೆಗೆದುಕೊಳ್ಳುವ ಅಧಿಕಾರ ಕೇಂದ್ರದ ಅಧ್ಯಕ್ಷರ ಪರಮಾಧಿಕಾರದಂತೆ ನಡೆಯ ಹೊರಟಿರುವುದು ಪ್ರಜಾಪ್ರಭುತ್ವದ ಕಗ್ಗೊಲೆಯ ಕ್ರಮ’ ಎಂದು ಟೀಕಿಸಿದ್ದಾರೆ.

ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಒತ್ತಾಯ

‘2ಎ’ಗೆ ಪಂಚಮಸಾಲಿ ಸಮುದಾಯ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೀರಶೈವ ಲಿಂಗಾಯತ ಉಪಜಾತಿಗಳಲ್ಲಿ ಬಲಿಷ್ಠವಾಗಿರುವ ‘ಪಂಚಮಸಾಲಿ’ ಸಮುದಾಯವನ್ನು ‘ಪ್ರವರ್ಗ–2ಎ’ಗೆ ಸೇರ್ಪಡೆ ಮಾಡಬಾರದು’ ಎಂದು ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಒತ್ತಾಯಿಸಿದೆ.

ಈ ಸಂಬಂಧ ವೇದಿಕೆ ಅಧ್ಯಕ್ಷ ಎಂ.ಸಿ.ವೇಣುಗೋಪಾಲ್ ನೇತೃತ್ವದ ನಿಯೋಗವು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರನ್ನು ಮಂಗಳವಾರ ಭೇಟಿ ಮಾಡಿ ಮನವಿ ಸಲ್ಲಿಸಿತು.

ವೇಣುಗೋಪಾಲ್ ಅವರು ಜಯಪ್ರಕಾಶ್ ಹೆಗ್ಡೆ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಪ್ರಧಾನ ಕಾರ್ಯದರ್ಶಿ ಎಂ.ನಾಗರಾಜು, ಖಜಾಂಚಿ ಎಲ್‌.ಎ.ಮಂಜುನಾಥ್, ಹುಚ್ಚಪ್ಪ ಹಾಗೂ ವೇದಿಕೆಯ ಪದಾಧಿಕಾರಿಗಳು ಇದ್ದರು –ಪ್ರಜಾವಾಣಿ ಚಿತ್ರ

‘ಪಂಚಮಸಾಲಿ ಸಮುದಾಯವನ್ನು ‘ಪ್ರವರ್ಗ–3ಬಿ’ಯಲ್ಲಿಯೇ ಮುಂದುವರಿಸುವಂತೆ ಎಚ್.ಕಾಂತರಾಜ ಆಯೋಗವು 2018ರಲ್ಲಿ ಸರ್ಕಾರಕ್ಕೆ ಸಲಹೆ ನೀಡಿದೆ. ಹೀಗಿರುವಾಗ ಆ ಸಲಹೆಯನ್ನು ಅದೇ ಆಯೋಗದ ಪುನರ್‌ಪರಿಶೀಲನೆಗೆ ಒಳಪಡಿಸುವ ಅಗತ್ಯವಿಲ್ಲ. ಏಕರೂಪ ಜಾತಿಗಳನ್ನು ವಿಭಜಿಸುವ ಕ್ರಮ ಸಂವಿಧಾನದ ವಿಧಿ 14ರ ಉಲ್ಲಂಘನೆ ಎಂದು ಸುಪ್ರೀಂಕೋರ್ಟ್‌ನ ಸಂವಿಧಾನ ಪೀಠವು 2004ರ (ಇ.ವಿ.ಚಿನ್ನಯ್ಯ–ಆಂಧ್ರಪ್ರದೇಶ ಪ್ರಕರಣ) ತೀರ್ಪಿನಲ್ಲಿ ಉಲ್ಲೇಖಿಸಿದೆ’ ಎಂದು ಜಾಗೃತ ವೇದಿಕೆ ಮನವರಿಕೆ ಮಾಡಿಕೊಟ್ಟಿತು.

‘ಕೇಂದ್ರ ಸರ್ಕಾರದ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಗೆ ಕರ್ನಾಟಕದ 70 ಜಾತಿ ಹಾಗೂ ಉಪಜಾತಿಗಳನ್ನು ಸೇರ್ಪಡೆ ಮಾಡಬೇಕು. ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಅತಿ ಹಿಂದುಳಿದ ವರ್ಗಗಳಿಗೂ ಮೀಸಲಾತಿ ಕಲ್ಪಿಸಬೇಕು. ಎಚ್.ಕಾಂತರಾಜ ವರದಿಯನ್ನು ಯಥಾಪ್ರಕಾರ ಜಾರಿಗೊಳಿಸಬೇಕು. ಪಂಚಮಸಾಲಿ ಸಮುದಾಯವನ್ನು ಮುಖ್ಯ ಜಾತಿಯಿಂದ ಬೇರ್ಪಡಿಸಿ ಮತ್ತೊಂದು ಪ್ರವರ್ಗಕ್ಕೆ ಸೇರಿಸುವುದು ಇಂದ್ರಾ ಸಹಾನಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿಗೆ ವಿರುದ್ಧವಾದ ನಡೆ. ಹಾಗೇನಾದರೂ ಸೇರ್ಪಡೆ ಮಾಡಿದರೆ ರಾಜ್ಯದಾದ್ಯಂತ ಹೋರಾಟ ನಡೆಸಲಾ-ಗುತ್ತದೆ’ ಎಂದು ವೇದಿಕೆ ಅಧ್ಯಕ್ಷ ಎಂ.ಸಿ.ವೇಣುಗೋಪಾಲ್ ಎಚ್ಚರಿಸಿದರು.

‘1992ರ ಮಂಡಲ್ ಆಯೋಗದ ವರದಿಯಂತೆ ರಾಜ್ಯದ 323 ಜಾತಿ–ಉಪಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲಾಗಿತ್ತು. ಈ ಪೈಕಿ 283 ಜಾತಿ–ಉಪಜಾತಿಗಳನ್ನು ಮೀಸಲಾತಿ ಪಟ್ಟಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸು ಮಾಡಲಾಗಿತ್ತು. ಸುಮಾರು 70 ಜಾತಿ–ಉಪಜಾತಿಗಳು ರಾಜ್ಯದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿದ್ದರೂ ಕೇಂದ್ರದ ಪಟ್ಟಿಗೆ ಸೇರಿಸಲಾಗಿಲ್ಲ. ಕೇಂದ್ರ ಸರ್ಕಾರ ಈಗಲಾದರೂ ಎಚ್ಚೆತ್ತುಕೊಳ್ಳ-ಬೇಕು’ ಎಂದು ಆಗ್ರಹಿಸಿದರು.

‘ಪಂಚಮಸಾಲಿ ಸಮುದಾಯವನ್ನು ‘ಪ್ರವರ್ಗ–2ಎ’ಗೆ ಸೇರಿಸುವ ವರದಿಯನ್ನು ತಿರಸ್ಕರಿಸಲಾಗಿದೆ. ಹೀಗಿದ್ದರೂ ಸೇರ್ಪಡೆ ಮಾಡಬೇಕೋ ಬೇಡವೋ ಎಂಬುದರ ಕುರಿತು ಪರ–ವಿರೋಧ ಚರ್ಚೆಗಳು ನಡೆಯುತ್ತಿವೆ. ಆಯೋಗವು ಸಮಗ್ರ ಅಧ್ಯಯನ ನಡೆಸಿ ಸರ್ಕಾರಕ್ಕೆ ನಿಷ್ಪಕ್ಷಪಾತ ವರದಿ ಸಲ್ಲಿಸಲಿದೆ’ ಎಂದು ಜಯಪ್ರಕಾಶ್ ಹೆಗ್ಡೆ ಅವರು ಭರವಸೆ ನೀಡಿದರು.

ಪ್ರಜ್ವಲ್ ರೇವಣ್ಣ ಆಯ್ಕೆ: ಹೈಕೋರ್ಟ್ ವಿಚಾರಣೆಗೆ ‘ಸುಪ್ರೀಂ’ ಸೂಚನೆ

ನವದೆಹಲಿ: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರು 2019ರ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಆಸ್ತಿ ವಿವರ ಕುರಿತು ತಪ್ಪು ಮಾಹಿತಿ ನೀಡಿದ್ದಾರೆ ಎಂಬ ಆರೋಪದ ಕುರಿತು ವಿಚಾರಣೆ ನಡೆಸುವಂತೆ ಸುಪ್ರೀಂಕೋರ್ಟ್ ಮಂಗಳವಾರ ಹೈಕೋರ್ಟ್‌ಗೆ ಸೂಚಿಸಿದೆ.

ವಕೀಲ ದೇವರಾಜೇಗೌಡ ಅವರು ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ನೇತೃತ್ವದ ಪೀಠ, ಈ ಅರ್ಜಿಯು ವಿಚಾರಣೆಗೆ ಅರ್ಹವಾಗಿಲ್ಲ ಎಂದು ರಾಜ್ಯ ಹೈಕೋರ್ಟ್ ಈ ಹಿಂದೆ ನೀಡಿದ್ದ ಆದೇಶಕ್ಕೆ ತಡೆ ನೀಡಿದೆ.

ಪ್ರಜ್ವಲ್ ರೇವಣ್ಣ ಅವರು 15ನೇ ವಯಸ್ಸಿನಲ್ಲೇ ₹23 ಕೋಟಿ ಮೌಲ್ಯದ ಸ್ವಯಾರ್ಜಿತ ಆಸ್ತಿ ಹೊಂದಿದ್ದಾಗಿ ಚುನಾವಣೆ ವೇಳೆ ನಾಮಪತ್ರದೊಂದಿಗೆ ಸಲ್ಲಿಸಿದ್ದ ಅಫಿಡವಿಟ್‌ನಲ್ಲಿ ನಮೂದಿಸಿದ್ದರು. ಆದರೆ, ಅಷ್ಟು ಚಿಕ್ಕ ವಯಸ್ಸಿನಲ್ಲಿ ಅಷ್ಟು ಪ್ರಮಾಣದ ಆಸ್ತಿಯನ್ನು ಗಳಿಸಿದ್ದು ಹೇಗೆ ಎಂಬ ವಿವರ ನೀಡಿರಲಿಲ್ಲ. ಅಲ್ಲದೆ, ಬೇನಾಮಿ ಆಸ್ತಿ ಹೊಂದಿರುವ ಇವರು ಸರ್ಕಾರಿ ಗೋಮಾಳವನ್ನೂ ಕಬಳಿಸಿದ್ದಾರೆ ಎಂದು ಅರ್ಜಿಯಲ್ಲಿ ದೂರಲಾಗಿತ್ತು.

ಪ್ರಜ್ವಲ್ ಅವರು ತಮ್ಮ ಬ್ಯಾಂಕ್ ಖಾತೆಯಲ್ಲಿರುವ ಹಣ ಎಷ್ಟು ಎಂಬ ಮಾಹಿತಿಯನ್ನೂ ನೀಡಿಲ್ಲ. ಅಫಿಡವಿಟ್‌ನಲ್ಲಿ ಆಸ್ತಿ ಕುರಿತ ವಿವರವನ್ನು ಮರೆಮಾಚಲಾಗಿದೆ ಎಂಬುದೂ ಸೇರಿ ಒಟ್ಟು 13 ವಿಷಯಗಳ ಕುರಿತು ಅರ್ಜಿದಾರರು ದೂರಿನಲ್ಲಿ ಪ್ರಸ್ತಾಪಿಸಿದ್ದರು.

ಆದರೆ, ಈ ಅರ್ಜಿಯು ತಾಂತ್ರಿಕವಾಗಿ ಪ್ರಜಾ ಪ್ರತಿನಿಧಿ ಕಾಯ್ದೆಗೆ ವಿರುದ್ಧವಾಗಿದೆ ಎಂದು ತಿಳಿಸಿದ್ದ ಹೈಕೋರ್ಟ್ ಅರ್ಜಿಯನ್ನು ತಿರಸ್ಕರಿಸಿತ್ತು.

ಪ್ರಜ್ವಲ್ ರೇವಣ್ಣ ವಿರುದ್ಧ ಹಾಸನ ಲೋಕಸಭೆ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದ ಮಾಜಿ ಸಚಿವ ಎ.ಮಂಜು ಅವರೂ, ಪ್ರಜ್ವಲ್ ಅವರು ತಪ್ಪು ಮಾಹಿತಿ ನೀಡಿರುವುದಾಗಿ ಆರೋಪಿಸಿ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ.
ಸಂಖ್ಯೆ :ಕಾಪಾಅ/ಶಿವಿಶಿ/ಜೆಇ–1/ಐಎಫ್‌ಟಿ–44/2021–22
ದಿನಾಂಕ: 11.02.2022
ಟೆಂಡರ್ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೋಂದಾಯಿತ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc. karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
8443 ಠೇವಣಿವಂತಿಕೆ
ಎಲ್ಲಾ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳು
1. ಸೊರಬ ತಾಲ್ಲೂಕು: 3 ಕಾಮಗಾರಿ.
ಎಲ್ಲಾ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:17–02–2022 ರಿಂದ 25–02–2022 ರವರೆಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿ) : ಎಲ್ಲಾ ಕಾಮಗಾರಿಗಳಿಗೆ 3 ತಿಂಗಳು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಮಾಹಿತಿ ಪಡೆಯಬಹುದು.
ಸಹಿ/– ಕಾ.ಇಂ, ಲೋ.ಇ ಶಿವಮೊಗ್ಗ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–109/02/ಎಂಸಿಎ/21–22/1243

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)
ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಶಾಲೆಗಳು / ಕಾಲೇಜುಗಳು / ಹಾಸ್ಟೆಲ್‌ಗಳ ಆವರಣಗಳು ಮತ್ತು ಇತರ ಅಪಾಯಕಾರಿ ಸ್ಥಳದ ಮೂಲಕ ಹಾದುಹೋಗುವ ಅಸ್ತಿತ್ವದಲ್ಲಿರುವ ಹೆಚ್‌ಟಿ / ಎಲ್‌ಟಿ ಓವರ್‌ಹೆಡ್ ಲೈನ್‌ಗಳನ್ನು ಎಲ್‌ಟಿ ಎಬಿ ಕೇಬಲ್‌ಗಳಾಗಿ ಬದಲಾಯಿಸಲು / ಸ್ಥಳಾಂತರ ಮಾಡಲು ಉಪ–ವಿಭಾಗವಾರು ಟೆಂಡರ್ ಆಹ್ವಾನಿಸಿದ್ದು, ವಿಚಾರಣೆ ಸಂಖ್ಯೆಗಳಾದ ಬಿಸಿಪಿ–1375/2021–22 – ಹಾರೋಹಳ್ಳಿ ಉಪ–ವಿಭಾಗ **(ಪ.ಜಾ.ಗೆ ಮೀಸಲಿರಿಸಿದೆ)**, ಬಿಸಿಪಿ–1376/2021–22 – ಮಾಗಡಿ ಉಪ–ವಿಭಾಗ **(ಪ.ಜಾ.ಗೆ ಮೀಸಲಿರಿಸಿದೆ)**, ಬಿಸಿಪಿ–1377/2021–22 – ಚನ್ನಪಟ್ಟಣ ಉಪ–ವಿಭಾಗ **(ಪ.ಜಾ.ಗೆ ಮೀಸಲಿರಿಸಿದೆ)**, ಬಿಸಿಪಿ–1378/2021–22 – ಆನೇಕಲ್ ಉಪ–ವಿಭಾಗ **(ಪ.ಪಂ.ಗೆ ಮೀಸಲಿರಿಸಿದೆ)**, ಬಿಸಿಪಿ–1379/2021–22 – ಹೊಸಕೋಟೆ ಉಪ–ವಿಭಾಗ **(ಪ.ಜಾ.ಗೆ ಮೀಸಲಿರಿಸಿದೆ)**, ಬಿಸಿಪಿ–1380/2021–22 – ನೆಲಮಂಗಲ ಉಪ–ವಿಭಾಗ **(ಪ.ಜಾ.ಗೆ ಮೀಸಲಿರಿಸಿದೆ)**ಗಳಲ್ಲಿ ಒಂದು ವರ್ಷದ ಅವಧಿಗೆ ಟೋಟಲ್ ಟರ್ನ್‌ಕೀ ಪರ್ಸೆಂಟೇಜ್ ಕೋಟಿಂಗ್ ಆಧಾರದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಬಿಡ್ ದಸ್ತಾವೇಜುಗಳ ಲಭ್ಯತೆ: 16.02.2022ರ ನಂತರದಿಂದ 03.03.2022ರ 16:00 ಗಂಟೆವರೆಗೆ. **ಬಿಡ್ ಸಲ್ಲಿಸಲು ಕೊನೆಯ ದಿನಾಂಕ:** 04.03.2022, 16:00 ಗಂಟೆ. **ಬಿಡ್ ದಸ್ತಾವೇಜು ತೆರೆಯುವುದು:** 04.03.2022, 16:15 ಗಂಟೆಗೆ.
ಎಲ್ಲಾ ರೀತಿಯ ಪಾವತಿ ಅಂದರೆ ಟೆಂಡರ್ ದರ ಮತ್ತು ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಮೂಲಕ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ 080–25501216 ಮತ್ತು 080–25501227ಗಳಿಗೆ ಸಂಪರ್ಕಿಸಲು ಕೋರಲಾಗಿದೆ.
ಸಹಿ/–
ಪ್ರಧಾನ ವ್ಯವಸ್ಥಾಪಕರು (ವಿ.) ಖರೀದಿ, ಬೆವಿಕಂ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
“ಬೆಸ್ಕಾಂ ಮಿತ್ರ” Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ತುಮಕೂರು
ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ–11/ 2021–22 ದಿನಾಂಕ: 10.02.2022
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕಾ.ನೀ.ನಿ.ನಿ, ಹೇಮಾವತಿ ನಾಲಾ ವಿಭಾಗ, ತುಮಕೂರು ವ್ಯಾಪ್ತಿಯ ಈ ಕೆಳಗೆ ನಮೂದಿಸಿದ ಇಂಡೆಂಟ್ ನಂಬರ್‌ನ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ KW–4 ನಿಬಂಧನೆಗಳೊಂದಿಗೆ, ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.
(1) 36974 ಟೆಂಡರ್ ಮೊತ್ತ– 205.13 ಲಕ್ಷಗಳು (2) 36975 ಟೆಂಡರ್ ಮೊತ್ತ– 137.27 ಲಕ್ಷಗಳು (3) 36976 ಟೆಂಡರ್ ಮೊತ್ತ– 134.99 ಲಕ್ಷಗಳು (4) 37154 ಟೆಂಡರ್ ಮೊತ್ತ– 325.33 ಲಕ್ಷಗಳು (5) 37172 ಟೆಂಡರ್ ಮೊತ್ತ– 171.17 ಲಕ್ಷಗಳು (6) 37198 ಟೆಂಡರ್ ಮೊತ್ತ– 366.29 ಲಕ್ಷಗಳು (7) 37197 ಟೆಂಡರ್ ಮೊತ್ತ– 409.57 ಲಕ್ಷಗಳು (8) 37155 ಟೆಂಡರ್ ಮೊತ್ತ– 216.26 ಲಕ್ಷಗಳು (9) 37171 ಟೆಂಡರ್ ಮೊತ್ತ– 141.50 ಲಕ್ಷಗಳು (10) 37166 ಟೆಂಡರ್ ಮೊತ್ತ– 214.10 ಲಕ್ಷಗಳು (11)37175 ಟೆಂಡರ್ ಮೊತ್ತ– 228.70 ಲಕ್ಷಗಳು (12) 37177 ಟೆಂಡರ್ ಮೊತ್ತ– 220.32 ಲಕ್ಷಗಳು (13) 37180 ಟೆಂಡರ್ ಮೊತ್ತ– 198.89 ಲಕ್ಷಗಳು (14) 37186 ಟೆಂಡರ್ ಮೊತ್ತ– 224.30 ಲಕ್ಷಗಳು (15) 37184 ಟೆಂಡರ್ ಮೊತ್ತ– 153.06 ಲಕ್ಷಗಳು (16) 37185 ಟೆಂಡರ್ ಮೊತ್ತ– 174.69 ಲಕ್ಷಗಳು (17) 37174 ಟೆಂಡರ್ ಮೊತ್ತ– 135.41 ಲಕ್ಷಗಳು (18) 37165 ಟೆಂಡರ್ ಮೊತ್ತ– 174.92 ಲಕ್ಷಗಳು ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ:– **17.02.2022** ರಿಂದ **28.02.2022** ಸಂಜೆ 4.00 ಗಂಟೆ ರವರೆಗೆ. ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: **19.02.2022** ಬೆ: 11.00 ಗಂಟೆವರೆಗೆ. ಪ್ರಿ–ಬಿಡ್ ಸಭೆ: ದಿನಾಂಕ: **19.02.2022** ಬೆ: 11.00 ಗಂಟೆಗೆ ಸ್ಥಳ: ಕಾರ್ಯಪಾಲಕ ಅಭಿಯಂತರವರ ಕಚೇರಿ, ಹೇಮಾವತಿ ನಾಲಾ ವಿಭಾಗ, ತುಮಕೂರು. ತಾಂತ್ರಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:– **02.03.2022** ಸಂಜೆ 5.00 ಗಂಟೆಗೆ. ಆರ್ಥಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:– **11.03.2022** ಬೆ: 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ) ಇ.ಎಂ.ಡಿ ವಿವರ, ಕಾಲಾವಧಿ, ಕಾಮಗಾರಿಯ ವಿವರ, ಅರ್ಹತಾ ಷರತ್ತುಗಳು, ಹಾಗೂ ಇನ್ನಿತರ ವಿವರಗಳನ್ನು ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಸಿಸ್ಟಮ್ https://eproc.karnataka.gov.in ಮೂಲಕ ಪಡೆಯಬಹುದು
ಸಹಿ/– ಕಾರ್ಯಪಾಲಕ ಅಭಿಯಂತರರು, ಹೇಮಾವತಿ ನಾಲಾ ವಿಭಾಗ, ತುಮಕೂರು
DIPR/TUM/649/MCA/2021-22

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
Ref: No:1) No: EE/KNNL/UTP/DN/RNR/TND/PB-2/2021-22 /3117 Date:14-02-2022
ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ
(ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ. ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರಲೆಕ್ಕ ಶೀರ್ಷಿಕೆ 4701ರ ಅಡಿಯಲ್ಲಿ CONSTRUCTION OF TUNGARATHI TO TUNGABHADRA RIVER NEAR HARIHAR CITY IN DAVANGERE DISTRICT FROM CH:0.00-40.00 M & FROM CH: 40.00 to 80.00 M ಸದರಿ 2 ಕಾಮಗಾರಿಗಳಿಗೆ ಉಲ್ಲೇಖ (1)ರನ್ವಯ ದ್ವಿ ಲಕೋಟೆ ಪದ್ಧತಿಯಡಿ ಶೇಕಡಾವಾರು ಟೆಂಡರ್‌ಗಳನ್ನು ಅರ್ಹ kNNL Category-III ಗುತ್ತಿಗೆದಾರರಿಂದ www.eproc.karnataka.gov.in ನಲ್ಲಿ ಇ–ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಮೊತ್ತ ರೂ.499.74 ಲಕ್ಷಗಳು (GSTಸೇರಿ) & ರೂ.499.77 ಲಕ್ಷಗಳು (GSTಸೇರಿ) ಹಾಗೂ ಇವುಗಳ ಇ.ಎಮ್.ಡಿ. ಮೊತ್ತ ಕ್ರಮವಾಗಿ ರೂ 5.00 ಲಕ್ಷ & 5.00 ಲಕ್ಷಗಳಿರುತ್ತದೆ.
ಟೆಂಡರ್ ಪ್ರಕ್ರಿಯೆ ಶುಲ್ಕವನ್ನು(ಹಿಂದಿರುಗಿಸಲಾಗದ್ದು) ಶುಲ್ಕವನ್ನು www.eproc.karnataka.gov.inನಲ್ಲಿ ನೋಡಿಕೊಂಡುತುಂಬತಕ್ಕದ್ದು. 1) ಟೆಂಡರ್‌ಅಸೆಸ್ ಮಾಡುವ ದಿನಾಂಕ: 14–02–2022 ರಿಂದ 22–02–2022 ರ ಮದ್ಯಾಹ್ನ 05.30 ವರೆಗೆ ಇರುವುದು. 2) ಟೆಂಡ್‌ರ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 19–02–2022ರ ಸಂಜೆ 5.30 ವರೆಗೆಇರುತ್ತದೆ. 3) ಪ್ರೀ–ಬಿಡ್ ಸಭೆಯನ್ನು ದಿನಾಂಕ 17–02–2022 ರಂದು ಬೆಳಿಗ್ಗೆ 11.00 ಘಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇಲ್ಲಿ ನೆಡೆಸಲಾಗುವುದು. 4) ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 22–02–2022ರ ಮಧ್ಯಾಹ್ನ 05:30 ವರೆಗೆ ಸಲ್ಲಿಸತಕ್ಕದ್ದು. 5) ಕಾಮಗಾರಿಗಳ ತಾಂತ್ರಿಕ ಬಿಡ್ಡನ್ನು ದಿ: 24–02–2022ರ ಮಧ್ಯಾಹ್ನ 05.35 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು.
ಸದರಿ ಟೆಂಡರ್‌ಗಳಲ್ಲಿ ಏನಾದರೂತಿದ್ದುಪಡಿ ಮಾಡಿದರೆ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್/ ದಿನಪತ್ರಿಕೆಗಳಲ್ಲಿ ಪ್ರಚುರಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿದೂರವಾಣಿ ಸಂ. (08373) 267071 ಕ್ಕೆ ಸಂಪರ್ಕಿಸುವುದು. ಷರತ್ತು ಬದ್ದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು
1232/83

ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಕೇಂದ್ರವಲಯ, ಕೆ.ಹೆಚ್.ರಸ್ತೆ ಬೆಂಗಳೂರು–560027.
ದೂರವಾಣಿ : 22240920 ಇಮೇಲ್ : cclczone@gmail.com
ಸಂ. ನಕೇಗ್ರಂ/ಕೇವ/ಎ2/ಸಾಗಾಣಿಕೆ.ವೆಚ್ಚ/2021–22 ದಿನಾಂಕ : 15–02–2022
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ನಗರ ಕೇಂದ್ರ ಗ್ರಂಥಾಲಯ, ಕೇಂದ್ರ ವಲಯ, ಬೆಂಗಳೂರು ಇಲ್ಲಿನ ಶಾಖಾ / ಸೇವಾ / ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಹಾಗೂ ಜಿಲ್ಲೆ / ನಗರ ಗ್ರಂಥಾಲಯಗಳಿಗೆ ಪುಸ್ತಕ, ಪೀಠೋಪಕರಣ ಹಾಗೂ ಇತರೆ ಸಾಮಗ್ರಿಗಳನ್ನು ಸಾಗಾಣಿಕೆ ಮಾಡಲು ಟೆಂಡರ್ ಕರೆಯಲಾಗಿದೆ. 2 ವರ್ಷಗಳ ಅನುಭವವುಳ್ಳ ನೊಂದಾಯಿತ ಸಂಸ್ಥೆಯವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದು. ಟೆಂಡರ್‌ಗೆ ನಿಗದಿಪಡಿಸಿರುವ ಇ.ಎಂ.ಡಿ ಮೊತ್ತ **ರೂ. 50,000/–** (ಐವತ್ತು ಸಾವಿರ ರೂ ಮಾತ್ರ) ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **https://eproc.karnataka.gov.in** ವೆಬ್‌ಸೈಟ್‌ನಿಂದ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ **23.02.2022 ಸಮಯ ಸಾಯಂಕಾಲ 4.00 ಗಂಟೆ**. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **24.02.2022 ಸಮಯ ಸಾಯಂಕಾಲ 4.30 ಗಂಟೆಗೆ** ತೆರೆಯಲಾಗುವುದು.
ಟೆಂಡರ್‌ದಾರರು ಹೆಚ್ಚಿನ ವಿವರಗಳನ್ನು ಕಛೇರಿ ಕೆಲಸದ ವೇಳೆಯಲ್ಲಿ ಪಡೆಯುವುದು. ಕಛೇರಿ ದೂರವಾಣಿ ಸಂಖ್ಯೆ 080–22240920
ಸಹಿ/– ಉಪನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ, ಕೇಂದ್ರವಲಯ, ಬೆಂಗಳೂರು
ವಾ.ಸಂ.ಇ/ಬೆಂ.ನಗರ/ಶ್ರೇಷ್ಠ/3382/2021–22
ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಷ್ಟ್ರೀಯ ಆರೋಗ್ಯ ಅಭಿಯಾನ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು – 560 023.
e-mail : ddehospital-hfws@karnataka.gov.in
ನಂ.: e-H/IT Cell/20/2021-22 ದಿನಾಂಕ: 14.02.2022
ಟೆಂಡರ್ ಪ್ರಕಟಣೆ
ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಇ–ಆರೋಗ್ಯ ವಿಭಾಗದ ಐ.ಟಿ ಕೋಶಕ್ಕೆ ಅವಶ್ಯಕ ಹುದ್ದೆಗಳನ್ನು (ಮಾನವ ಸಂಪನ್ಮೂಲ) ಹೊರಗುತ್ತಿಗೆ ಸಂಸ್ಥೆಯಿಂದ ಪಡೆಯಲು ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಟೆಂಡರ್ ಕರೆಯಲಾಗಿದೆ.
ಇ.ಎಂ.ಡಿ ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://eproc.karnataka.gov.in** ನಲ್ಲಿ ಈ ಕೆಳಕಂಡಂತೆ ಟೆಂಡರ್‌ಗಳ ದಸ್ತಾವೇಜನ್ನು ಡೌನ್‌ಲೋಡ್ ಹಾಗೂ ಅಪ್‌ಲೋಡ್ ಮಾಡಬಹುದು.
(1) ಟೆಂಡರ್ ಅಧಿಸೂಚನೆ ಸಂಖ್ಯೆ: **e-H/IT Cell/20/2021-22**. ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡುವ **ದಿನಾಂಕ: 14.02.2022**. ಟೆಂಡರ್‌ಗಳ ದಸ್ತಾವೇಜನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 07.03.2022ರ ಸಂಜೆ 5:30 ಗಂಟೆಯವರೆಗೆ.**
ಇತರೆ ಮಾಹಿತಿಯನ್ನು ಟೆಂಡರ್ ದಸ್ತಾವೇಜುವಿನಲ್ಲಿ ಪಡೆಯಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ಉಪ ನಿರ್ದೇಶಕರು (ಇ–ಆರೋಗ್ಯ)
DIPR/DDU/BCPL/3388/2021-22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಡಿ.ಬಿ/ಟೆಂಡರ್/2021–22/3423–3428 ದಿನಾಂಕ:14.02.2022
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **(1) Indent No. 21741 for Rs. 55.50 Lakhs (2) Indent No. 19926 for Rs. 28.02 Lakhs (CALL-3) (3) Indent No. 21780 for Rs. 14.38 Lakhs (4) Indent No. 21676 for Rs. 13.21 Lakhs (5) Indent No. 21301 for Rs. 11.14 Lakhs (Call-2) (6) Indent No. 20683 for Rs. 8.10 Lakhs (Call-4)** ಶೇಕಡಾವಾರು ದ್ವಿಲಕೋಟೆಗಳಲ್ಲಿ ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–Cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡಾಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.
1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ **ದಿನಾಂಕ: 15.02.2022 ರಿಂದ 24.02.2022 ಸಾಯಂಕಾಲ 5.00 ಘಂಟೆಯವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:28.02.2022 ಮುಂಜಾನೆ ಘಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 03.03.2022** ಮುಂಜಾನೆ 11.00 ಘಂಟೆಗೆ.
ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/530/ಎಂಸಿಎ/2021–22

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ,ಇ ವಿಶೇಷ ವಿಭಾಗ, ಶಿವಮೊಗ್ಗ
ಫೋನ್ ನಂ : 08182–222942, ಇ–ಮೇಲ್: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ದತಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಐ.ಎಫ್.ಟಿ ಸಂಖ್ಯೆ: 74/2021–22 ದಿನಾಂಕ : 14.02.2022
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ/ಡಬ್ಲ್ಯೂ–3&4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಶಿವಮೊಗ್ಗ ತಾಲ್ಲೂಕಿನಲ್ಲಿ **“5054–04–337–0–01–423 ಜಿ.ಮು.ರ (ಟಿ.ಎಸ್.ಪಿ) ಲೇಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ 02 ಕಾಮಗಾರಿಗಳಿಗೆ, 5054–04–337–0–01–422 ಜಿ.ಮು.ರ (ಎಸ್.ಸಿ.ಪಿ)” ಲೇಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ 01 ಕಾಮಗಾರಿಗೆ ಮತ್ತು 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳು ಸುಧಾರಣೆ** ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ 01 ಕಾಮಗಾ–ರಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗೆ ಟೆಂಡರ್‌ಗಿಟ್ಟ **ಗರಿಷ್ಟ ಮೊತ್ತ ರೂ. 178.43 ಲಕ್ಷ & ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ. 89.27 ಲಕ್ಷ ಹಾಗೂ ಇ.ಎಂ.ಡಿ. ಗರಿಷ್ಟ ಮೊತ್ತ ರೂ. 2.68 ಲಕ್ಷ & ಇ.ಎಂ.ಡಿ. ಕನಿಷ್ಟ ಮೊತ್ತ ರೂ. 1.79 ಲಕ್ಷ. ಸದರಿ ಕಾಮಗಾರಿಯ ಟೆಂಡರ್ ಅವಧಿ 05 ತಿಂಗಳು ಮಳೆಗಾಲ ಸೇರಿ.**
ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **http://eproc. karnataka.gov.in** ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್ –2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: **15–02–2022 ರಿಂದ 23–02–2022 ರ 17.00 ಗಂಟೆ**ವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: **23–02–2022 ರ ಸಂಜೆ 5:00 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ **ದಿನಾಂಕ: 24–02–2022 ರಂದು ಸಂಜೆ 17.30ಕ್ಕೆ** ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು **ದಿನಾಂಕ: 25–02–2022** ರಂದು **ಬೆಳಿಗ್ಗೆ 11.00** ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾಸಾಸಂಇ/ಶಿ/ನಂ 99–02 ಝೇಂಕಾರ್/2021–22

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂರವಾಣಿ: 080-2955 7021, ಇ–ಮೇಲ್: pdksaps@gmail.com
ಸಂಖ್ಯೆ : ಕೆಎಸ್‌ಎಪಿಎಸ್/ಎಡಿಎಮ್/20/2021–22 ದಿನಾಂಕ :11.02.2022
ಇ–ಸಂಗ್ರಹಣ ವೇದಿಕೆ ಮೂಲಕ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
ಕಛೇರಿ ಉಪಯೋಗಕ್ಕಾಗಿ ವಾಹನಗಳನ್ನು (ಕಾರು) ಬಾಡಿಗೆ ಆಧಾರದ ಮೇಲೆ ಪಡೆಯುವ ಸಂಬಂಧ ಇ–ಸಂಗ್ರಹಣ ವೇದಿಕೆ ಮೂಲಕ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಂಬಂಧಿಸಿದ ನಿಯಮಾವಳಿಗಳನ್ನು ಇ–ಸಂಗ್ರಹಣ ವೇದಿಕೆ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಅರ್ಹ ಸಂಸ್ಥೆಯವರಿಂದ ಇ–ಸಂಗ್ರಹಣ ವೇದಿಕೆ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **28.02.2022 ಸಂಜೆ 5.30 ಗಂಟೆಯವರೆಗೆ.**
ಸಹಿ/– ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ವಾಸಾಸಂಇ/ಬೆಂ.ನ./ಜಿಎ/3376/2021–22
ಕೋವಿಡ್‌–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು
ಲೋಕೋಪಯೋಗಿ, ಇಲಾಖೆ ಕಲಬುರಗಿ ವಿಭಾಗ ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ತಾಶಾ–2/.ಟೆಂಡರ್.ಅಧಿಸೂಚನೆ/2021–22/7668 ದಿನಾಂಕ: 14–02–2022
:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::
1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಕೆ.ಕೆ.ಆರ್.ಡಿ.ಬಿ, ಯೋಜನೆಯಡಿ (10) ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ ಇಂಡೆಂಟ್ ಸಂಖ್ಯೆ: 142143, 148594, 148587, 143206, 143513, 143583, 142959, 146569, 143134, 143203 2) ಕಾಮಗಾರಿ ಅಂದಾಜು ಮೊತ್ತ : ರೂ. ಕನಿಷ್ಟ 69.30 ಲಕ್ಷಗಳು ಗರಿಷ್ಠ 333.13 ಲಕ್ಷಗಳು, 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಮೂರನೆ ಎರಡನೆ ಮತ್ತು ಒಂದನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು, 4) ಇ, ಎಂ, ಡಿ ಮೊತ್ತ : ರೂ. ಕನಿಷ್ಟ 1.23 ಲಕ್ಷ ಗರಿಷ್ಠ 4.42 ಲಕ್ಷ, 5) ಪ್ರಿ ಬಿಡ್ ಮೀಟಿಂಗ : 22.02.2022 (11.00 Hrs), 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : 23.02.2022 (17.30 Hrs), 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 24.02.2022(16.00 Hrs), 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 25.02.2022 (16.30 Hrs), 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : 28.02.2022 (11.30 Hrs), 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 12) ಅಂತರ್ಜಾಲ ತಾಣದ ವಿಳಾಸ:www.e-proc.Karnataka.gov.in
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1111/ಎಂ.ಸಿ&ಎ/2021–22

ಹೊರಗೆ ಹೋಗುವಾಗ ಮುಖಗವಸು ಧರಿಸಿ
ಪರಸ್ಪರ ಅಂತರ ಕಾಯ್ದುಕೊಳ್ಳಿ

ರೇಣುಕಾ ಯಲ್ಲಮ್ಮ ಮುತ್ತಿನ ಪಲ್ಲಕ್ಕಿ ಉತ್ಸವ ಇಂದು

ಮದ್ದೂರು (ಮಂಡ್ಯ ಜಿಲ್ಲೆ): ಪಟ್ಟಣದ ಹೊಳೆಬೀದಿಯಲ್ಲಿರುವ ರೇಣುಕಾ ಯಲ್ಲಮ್ಮ ದೇವಿಯ 50ನೇ ವರ್ಷದ ಜಾತ್ರೆ, 23ನೇ ವರ್ಷದ ಮಹಾಚಂಡಿಕಾ ಹೋಮದ ಅಂಗವಾಗಿ ಫೆ.16ರಂದು ಮುತ್ತಿನ ಪಲ್ಲಕ್ಕಿ ಉತ್ಸವ ವೈಭವಯುತವಾಗಿ ನಡೆಯಲಿದೆ.

ಚಿಕ್ಕಸವದತ್ತಿ ಎಂದೇ ಪ್ರಖ್ಯಾತಿ ಪಡೆದಿರುವ ಕ್ಷೇತ್ರದಲ್ಲಿ ಮಂಗಳವಾರ-ದಿಂದಲೇ ಧಾರ್ಮಿಕ ಚಟುವಟಿಕೆಗಳು ಆರಂಭವಾಗಿವೆ. ಬುಧವಾರ ಭರತ ಹುಣ್ಣಿಮೆಯ ದಿನ ಬೆಳಿಗ್ಗೆ 7.30ರಿಂದ ಮಹಾಚಂಡಿಕಾ ಹೋಮ, ಬೆಳಿಗ್ಗೆ 11.30ಕ್ಕೆ ಪೂರ್ಣಾಹುತಿ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ನಡೆಯಲಿದೆ. ಮಧ್ಯಾಹ್ನ 1ರಿಂದ 4 ಗಂಟೆ ವರೆಗೆ ಅನ್ನಸಂತರ್ಪಣೆ ಇರಲಿದೆ.

ಮಧ್ಯಾಹ್ನ 3.30ರಿಂದ ಸಂಜೆ 5 ಗಂಟೆವರೆಗೆ ರೇಣುಕಾ ಯಲ್ಲಮ್ಮ ದೇವಿಗೆ ನಿಂಬೆಹಣ್ಣಿನ ದೀಪದ ಆರತಿ, ಉಯ್ಯಾಲೆ ಉತ್ಸವ ಜರುಗಲಿದೆ. ರಾತ್ರಿ 8 ಗಂಟೆಗೆ ಉತ್ಸವ ಮೂರ್ತಿಯನ್ನು ಮುತ್ತಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಮೆರವಣಿಗೆ ನಡೆಸಲಾಗುವುದು. ಪಟ್ಟಣದ ಹೊಳೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭವಾಗುವ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಾಗಲಿದೆ.

ಇಡೀ ರಾತ್ರಿ ನಡೆಯುವ ಮೆರವಣಿಗೆಯಲ್ಲಿ ತಿರುಪತಿ ತಿರುಮಲ ದೇವಸ್ಥಾನದ ಬಾಲಾಜಿ ವೃಂದದಿಂದ ಮೃದಂಗ ವಾದ್ಯಗೋಷ್ಠಿ, ಕೇರಳದ ಕಲಾವಿದರಿಂದ ಚಂಡೆ ಮದ್ದಳೆ, ತಮಿಳುನಾಡು ಬ್ಯಾಂಡ್ ಸೆಟ್, ಪ್ರಸಿದ್ಧ ಕಲಾವಿದರಿಂದ ತಮಟೆ ವಾದನ ಇರಲಿದೆ. ಫೆ.17 ರಂದು ಬೆಳಿಗ್ಗೆ 6ಕ್ಕೆ ರೇಣುಕಾ ಯಲ್ಲಮ್ಮ ದೇವಿಯನ್ನು ದೇಗುಲದ ಮೂಲ ಸ್ಥಾನಕ್ಕೆ ಆಹ್ವಾನಿಸಲಿದ್ದು, ಜಾತ್ರೆ ಸಂಪನ್ನವಾಗಲಿದೆ ಎಂದು ಮೂಲಗಳು ಹೇಳಿವೆ.

ಚಾಮರಾಜನಗರದಲ್ಲಿ ಎಬಿವಿಪಿಯ 41ನೇ ರಾಜ್ಯ ಸಮ್ಮೇಳನವನ್ನು ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ, ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್, ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ವಿಜ್ಞಾನಿ ಡಾ.ಎಸ್.ಅಯ್ಯಪ್ಪನ್ ಉದ್ಘಾಟಿಸಿದರು. ಎಬಿವಿಪಿ ರಾಜ್ಯ ಕಾರ್ಯದರ್ಶಿ ಪ್ರತೀಕ ಮಾಳಿ, ರಾಷ್ಟ್ರೀಯ ಅಧ್ಯಕ್ಷ ಡಾ.ಛಗನ್ ಬಾಯ್ ಪಟೇಲ್, ರಾಜ್ಯ ಅಧ್ಯಕ್ಷ ಡಾ.ವೀರೇಶ ಬಾಳಿಕಾಯಿ, ಮೈಸೂರಿನ ಪ್ರಲಕ್ಷ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಸಂಸ್ಥಾಪಕ ನಿರ್ದೇಶಕ ಡಾ.ಮೋಹನ್ ಇದ್ದರು

‘ದಾಖಲೆ ತಿರುಚುವ ಪ್ರಶ್ನೆಯೇ ಇಲ್ಲ’

ಹೊಸಪೇಟೆ (ವಿಜಯನಗರ): ‘ಕಾಮಗಾರಿ ಮತ್ತು ಖರೀದಿಯಲ್ಲಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿದ್ದಾರೆ ಎಂದು ತನಿಖಾ ಸಮಿತಿಯು ವಿಶ್ವವಿದ್ಯಾಲಯಕ್ಕೆ ಭೇಟಿ ಕೊಟ್ಟು ದಾಖಲೆಗಳನ್ನು ಪರಿಶೀಲಿಸಿದ್ದು ಮಲ್ಲಿಕಾ ಎಸ್.ಘಂಟಿ ಅವರು ಹಂಪಿ ವಿ.ವಿ ಕುಲಪತಿಯಾಗಿದ್ದಾಗ. ಆಗ ಕಾನೂನು ಘಟಕ ಅಸ್ತಿತ್ವದಲ್ಲಿ ಇರಲಿಲ್ಲ. ನಾನು ವಿಶ್ವವಿದ್ಯಾಲಯದಲ್ಲಿಯೂ ಇರಲಿಲ್ಲ. ದಾಖಲೆ ತಿರುಚುವ ಪ್ರಶ್ನೆಯೇ ಇಲ್ಲ’ ಎಂದು ಕನ್ನಡ ವಿಶ್ವವಿದ್ಯಾಲಯದ ಕಾನೂನು ಘಟಕದ ಸೂಪರಿಂಟೆಂಡೆಂಟ್ ಸೋಮನಾಥ ಎಚ್.ಎಂ. ತಿಳಿಸಿದ್ದಾರೆ.

‘ಮಲ್ಲಿಕಾ ಎಸ್.ಘಂಟಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ ಸೋಮನಾಥ ಮಂಗಳವಾರ ಪ್ರಕಟಣೆ ಹೊರಡಿಸಿದ್ದಾರೆ. ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ಅವರು ₹50.86 ಕೋಟಿ ಮೊತ್ತದ ಕಾಮಗಾರಿಗಳನ್ನು ನಿರ್ವಹಿಸಿದ್ದಾರೆ ಎಂದು ಲೋಕಾಯುಕ್ತ ಅಂತಿಮ ವರದಿ ತಿಳಿಸಿದೆ. ತಪ್ಪಿತಸ್ಥ ಅಧಿಕಾರಿಗಳ ಹೇಳಿಕೆಗಳಿಗೆ ಕಾನೂನಿನಲ್ಲಿ ಮಾನ್ಯತೆ ಇರುವುದಿಲ್ಲ. ತಪ್ಪಿತಸ್ಥರಿಗೆ ಶಿಕ್ಷೆಯೊಂದೇ ಬಾಕಿ ಇರುತ್ತದೆ. ಮಲ್ಲಿಕಾ ಘಂಟಿಯವರಿಗೆ ಅಪರಾಧಿ ಪ್ರಜ್ಞೆ ಕಾಡುತ್ತಿದ್ದು, ಹತಾಶರಾಗಿ ಹೇಳಿಕೆ ನೀಡಿದ್ದಾರೆ’ ಎಂದು ಪ್ರತಿಕ್ರಿಯಿಸಿದ್ದಾರೆ.

‘ಕಾಂಗ್ರೆಸ್ ಪ್ರೇರಿತ ಟೂಲ್‌ಕಿಟ್ ಭಾಗವೇ’

ನಳಿನ್‌ಕುಮಾರ್ ಕಟೀಲ್

ಮಂಗಳೂರು: ‘ಪಂಚರಾಜ್ಯಗಳ ಚುನಾವಣೆ ಹಿನ್ನೆಲೆಯಲ್ಲಿ ಹಿಜಾಬ್ ವಿವಾದದ ವಿಚಾರಣೆಯನ್ನು ಫೆ.28ರ ವರೆಗೆ ಮುಂದೂಡಲು ವಿದ್ಯಾರ್ಥಿಗಳ ಪರ ವಕೀಲರು ಈಗ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದಾರೆ. ಇದರ ಹಿಂದಿರುವ ಶಕ್ತಿಗಳು ಯಾರು? ಹಿಜಾಬ್‌ಗೂ ಪಂಚರಾಜ್ಯಗಳ ಚುನಾವಣೆಗೂ ಏನು ಸಂಬಂಧ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಪ್ರಶ್ನಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, ‘ಮಧ್ಯಂತರ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಲ್ಲಿ ನಾಲ್ವರು ಅಪ್ರಾಪ್ತರು. ಇವರು ಪಂಚರಾಜ್ಯಗಳ ಚುನಾವಣೆಗೆ ಥಳುಕು ಹಾಕುತ್ತಿದ್ದಾರೆ ಎಂದರೆ ಅರ್ಥವೇನು? ಇವರು ಬೇರೆಯವರ ತಾಳಕ್ಕೆ ಕುಣಿಯುವ ಗೊಂಬೆಗಳು ಎಂದು ಅರ್ಥವಲ್ಲವೇ’ ಎಂದು ಪ್ರಶ್ನಿಸಿದ್ದಾರೆ.

‘ವಿವಾದ ಸಂಬಂಧ ವಿದ್ಯಾರ್ಥಿನಿಯರ ಪರ ವಾದ ಮಾಡುತ್ತಿರುವ ವಕೀಲರಲ್ಲಿ ಒಬ್ಬರು ಪಂಚರಾಜ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್ ವಕೀಲರ ಸಮಿತಿ ಅಧ್ಯಕ್ಷರು. ವಿವಾದ ಈಗ ಪಂಚರಾಜ್ಯಗಳ ಚುನಾವಣೆಯ ಫಲಿತಾಂಶದ ಬಗ್ಗೆ ಮಾತನಾಡುತ್ತಿದೆ ಎಂದರೆ ಇದು ಕಾಂಗ್ರೆಸ್ ಪ್ರೇರಿತ ‘ಟೂಲ್ ಕಿಟ್’ ಭಾಗವಲ್ಲವೇ’ ಎಂದು ಕಟೀಲ್ ಅವರು ಪ್ರಶ್ನೆ ಮಾಡಿದ್ದಾರೆ.

ಸಂಸದ್ ಟಿ.ವಿ.ಯ ಯೂಟ್ಯೂಬ್ ಖಾತೆ ಹ್ಯಾಕ್

ನವದೆಹಲಿ: ಲೋಕಸಭೆ ಮತ್ತು ರಾಜ್ಯಸಭೆಯ ಕಲಾಪಗಳು ಹಾಗೂ ಇತರ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಸಂಸದ್ ಟಿ.ವಿ.ಯ ಯೂಟ್ಯೂಬ್ ಚಾನೆಲ್‌ನ ಅಧಿಕೃತ ಖಾತೆಯನ್ನು ಮಂಗಳವಾರ ಹ್ಯಾಕ್ ಮಾಡಲಾಗಿದೆ.

ಪತ್ರಿಕಾ ಪ್ರಕಟಣೆ ಮೂಲಕ ಈ ವಿಷಯ ಬಹಿರಂಗಪಡಿಸಿರುವ ಸಂಸದ್ ಟಿ.ವಿ, ಸೋಮವಾರ ಮಧ್ಯರಾತ್ರಿ ನಂತರ ಸುಮಾರು 1 ಗಂಟೆಗೆ ಚಾನಲ್‌ನ ಲೈವ್ ಸ್ಟ್ರೀಮಿಂಗ್ ಅನ್ನು ಸ್ಕ್ಯಾಮ್‌ಸ್ಟರ್‌ಗಳು ಹ್ಯಾಕ್ ಮಾಡಿ, ‘ಎಥೆರಿಯಂ’ ಎಂಬ ಹೆಸರಲ್ಲಿ ಬದಲಾಯಿಸಿದ್ದಾರೆ ಎಂದು ಹೇಳಿದೆ.

‘ನೋಡಲ್ ಏಜೆನ್ಸಿ ಇಂಡಿಯನ್ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ ಎಚ್ಚರಿಸಿದೆ. ನಮ್ಮ ಸಾಮಾಜಿಕ ಮಾಧ್ಯಮ ತಂಡವು ಬೆಳಿಗ್ಗೆ 3.45ರ ವೇಳೆಗೆ ಚಾನಲ್ ಮೇಲಿನ ನಿಯಂತ್ರಣ ಮರಳಿ ಪಡೆದುಕೊಂಡಿದೆ’ ಎಂದಿದೆ.

ಉದ್ಯೋಗ ವಾಣಿ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಚೇರಿ, ಕಂದಾಯ ಭವನ, 8ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560009
ಪೋರ್ಟಲ್ : https://igr.karnataka.gov.in

ಸಂಖ್ಯೆ: ಸಿಬ್ಬಂದಿ–2/ಸಿ.ಆರ್:176/2015–16 ದಿನಾಂಕ: 07.02.2022

ಪ್ರಕಟಣೆ

ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ **ಖಾಲಿ ಇರುವ ಒಂದು ಗ್ರೂಪ್–ಡಿ (ಜವಾನರ) ಬ್ಯಾಕ್‌ಲಾಗ್ ಹುದ್ದೆಯ ನೇರ ನೇಮಕಾತಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.**

ಈ ಹುದ್ದೆಗೆ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿಯ ನಮೂನೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ **(https://igr.karnataka.gov.in)** ಅರ್ಜಿಯ ನಮೂನೆಯ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿತ ವಿಳಾಸಕ್ಕೆ ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ: **31.03.2022ರ** ಒಳಗಾಗಿ ಅಂಚೆಯ ಮೂಲಕವೇ ಸಲ್ಲಿಸಬೇಕಾಗುತ್ತದೆ.

ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರಬೇಕು

ವಯೋಮಿತಿ: ಅಭ್ಯರ್ಥಿಯು ಹುಟ್ಟಿದ ದಿನಾಂಕದಿಂದ 18 ವರ್ಷಗಳನ್ನು ಪೂರೈಸಿರಬೇಕು ಹಾಗೂ 40 ವರ್ಷಗಳನ್ನು ಮೀರಿರಬಾರದು.

ಅರ್ಜಿ ಸಲ್ಲಿಸಬೇಕಾದ ಅಂಚೆ ವಿಳಾಸ: ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ, 8ನೇ ಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು–560009

ಸಹಿ/– ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು

DIPR/DDU/YC/3397/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

BLDE (Deemed to be University)

Declared as Deemed to be University u/s 3 of UGC Act 1956
Accredited with 'A' Grade by NAAC (Cycle-2)
The Constituent College
Shri B. M. Patil Medical College, Hospital and Research Center
Smt. Bangaramma Sajjan Campus, B.M.Patil Road,
VIJAYAPURA-586103, (KARNATAKA)
Ranked Top 50th Medical College in India by NIRF-2021

APPLICATIONS ARE INVITED FOR THE FOLLOWING POSTS

1) Registrar 2) Finance Officer 3) Medical Director 4) Research Director 5) Director Academic Affairs 6) Deputy Medical Superintendent 7) Professor in Cardiology, Radiology, Geriatric Medicine, Respiratory Medicine, Emergency Medicine & Pharmacology 8) Casualty Medical Officers (CMO) 9) Casualty & Trauma Admin 10)OT Admin 11) Clinical Psychologist 12) Research Scientist 13) Assistant Registrar 14) HR Manager 15) Assistant HR Manager 16) Legal Officer 17) Assistant Legal Officer 18) Manager Stores 19) Purchase Officer 20) Store Keeper 21) Medical Record Officer 22) Medical Record Technicians 23) Public Relation Officers 24) Electrical Engineer 25) Civil Engineer 26) Fire & Safety Officer 27) Vigilance Officer 28) Security Officer 29) Staff Nurses

Desirous candidates may visit: www.bldedu.ac.in/careers for qualification, eligibility, experience, etc. The last date for receiving the application is 04.03.2022. The short listed candidates will be called for interview.

Sd/-
REGISTRAR

ಪಂಜಾಬ್ ನ್ಯಾಷನಲ್ ಬ್ಯಾಂಕ್ (ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ) pnb punjab national bank (Govt. of India Undertaking)

Oriental United — Together for the better

ವೃತ್ತ ಕಛೇರಿ: ಬೆಂಗಳೂರು ಪಶ್ಚಿಮ, ನಂ. 100, ಮಸೀದಿ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು–560005. ಫೋನ್: 080–25808901–16

CIRCLE OFFICE- BANGALORE WEST, No.100, Mosque Road, Frazer Town, Bangalore- 560005. Phone 080–2580 8901-16

E-mail: cobangwesthrd@pnb.co.in, cobangwestgad@pnb.co.in

ಜವಾನ ಹುದ್ದೆಯ ನೇಮಕಾತಿಗೆ ಜಾಹೀರಾತು

ಸಾರ್ವಜನಿಕ ವಲಯದ ಪ್ರಮುಖ ಬ್ಯಾಂಕ್‌ಗಳಲ್ಲಿ ಒಂದಾದ ಪಂಜಾಬ್ ನ್ಯಾಷನಲ್ ಬ್ಯಾಂಕ್, ತನ್ನ ಬೆಂಗಳೂರು ಪಶ್ಚಿಮ ವೃತ್ತದ ಅಧೀನದಲ್ಲಿರುವ ಶಾಖೆಗಳಿಗೆ ಕೆಳದರ್ಜೆ ಕೆಡರ್ ಜವಾನ ಹುದ್ದೆಗಳ ನೇಮಕಾತಿಗೆ ಕರ್ನಾಟಕದಲ್ಲಿರುವ ಅರ್ಹ ಭಾರತೀಯ ಪ್ರಜೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವೇತನ ಶ್ರೇಣಿಯು 11ನೇ ದ್ವಿಪಕ್ಷೀಯ ಒಡಂಬಡಿಕೆ ಮತ್ತು ಕಾಲಕಾಲಕ್ಕೆ ಬ್ಯಾಂಕ್ ಅನುಷ್ಠಾನಗೊಳಿಸುವ ಒಡಂಬಡಿಕೆಗಳಿಂದ ನಿಯಂತ್ರಿಸಲ್ಪಡುತ್ತದೆ.

ಜಿಲ್ಲಾವಾರು ಖಾಲಿ ಹುದ್ದೆಗಳ ವಿವರಗಳು ಈ ರೀತಿ ಇದೆ: (1) ಬೆಂಗಳೂರು ನಗರ: 09, (2) ಬೆಂಗಳೂರು ಗ್ರಾಮೀಣ: 03, (3) ಮಂಗಳೂರು: 04, (4) ಮೈಸೂರು: 02, (5) ತುಮಕೂರು: 01, (6) ಉಡುಪಿ: 01,

ನೇಮಕಾತಿ ಪ್ರಕ್ರಿಯೆಗಾಗಿ ವರ್ಗಾವಾರು ಖಾಲಿ ಹುದ್ದೆಗಳು ಕೆಳಗಿನಂತಿವೆ:

ರಾಜ್ಯ:	ಎಸ್.ಸಿ	ಎಸ್.ಟಿ	ಓ.ಬಿ.ಸಿ	ಇ.ಡಬ್ಲ್ಯೂ.ಎಸ್	ಸಾಮಾನ್ಯ/ಯು.ಆರ್	ಒಟ್ಟು :	ಹೆಚ್‌ಐ*	ಇಎಕ್ಸ್‌ಎಸ್*
ಕರ್ನಾಟಕ	3	1	6	2	8	20	1	4

* ಸಮಮಟ್ಟದ ಮೀಸಲಾತಿ

1) ವಿದ್ಯಾರ್ಹತೆ ಮತ್ತು ವಯೋಮಿತಿ 01.01.2022 ರಂತೆ.

ಹುದ್ದೆ	ವಯೋಮಿತಿ 01.01.2022 ರಂತೆ :	ವಿದ್ಯಾರ್ಹತೆ:
ಜವಾನ	ಕನಿಷ್ಠ 18 ವರ್ಷ, ಗರಿಷ್ಠ 24 ವರ್ಷ ಜೊತೆಗೆ ವಯೋಮಿತಿಯಲ್ಲಿ ಅನ್ವಯಿಸುವ ಸಡಿಲಿಕೆ ಇದೆ.	ಕನಿಷ್ಠ ಮತ್ತು ಗರಿಷ್ಠ 12ನೇ ತರಗತಿ ಅಥವಾ ತತ್ಸಮಾನ ದಲ್ಲಿ ತೇರ್ಗಡೆ ಹೊಂದಿರಬೇಕು. ಕನ್ನಡ ಮತ್ತು ಇಂಗ್ಲಿಷ್ ನಲ್ಲಿ ಓದುವ/ಮಾತನಾಡುವ ಮೂಲ ಜ್ಞಾನ ಇರಬೇಕು (ಅಭ್ಯರ್ಥಿಗಳು ಹೆಚ್ಚಿನ ವಿದ್ಯಾರ್ಹತೆ, ಅಂದರೆ ಪದವಿ ಅಥವಾ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿದ್ದರೆ ಅರ್ಜಿ ಸಲ್ಲಿಸಲು ಅರ್ಹರಲ್ಲ).

2) ಗರಿಷ್ಠ ವಯೋಮಿತಿ ಸಡಿಲಿಕೆ: ಎಸ್ ಸಿ/ಎಸ್ ಟಿ ಅಭ್ಯರ್ಥಿಗಳಿಗೆ 5 ವರ್ಷ ವಯೋಮಿತಿ ಸಡಿಲಿಕೆ ಇದೆ. ಎಸ್ ಸಿ/ಎಸ್ ಟಿ, ದೈಹಿಕ/ಆರ್ಥೋಪೆಡಿಕಲ್ ಅಂಗವಿಕಲ ಅಭ್ಯರ್ಥಿಗಳಿಗೆ 15 ವರ್ಷ. ಒಬಿಸಿ ಅಭ್ಯರ್ಥಿಗಳಿಗೆ 03 ವರ್ಷ, ಒಬಿಸಿ ದೈಹಿಕ/ಆರ್ಥೋಪೆಡಿಕಲ್ ಅಂಗವಿಕಲ ಅಭ್ಯರ್ಥಿಗಳಿಗೆ 13 ವರ್ಷ. ದೈಹಿಕ/ಆರ್ಥೋಪೆಡಿಕಲ್ ಅಂಗವಿಕಲ ಅಭ್ಯರ್ಥಿಗಳು 10 ವರ್ಷ, ಮಾಜಿ ಸೈನಿಕ ಅಭ್ಯರ್ಥಿಗಳಿಗೆ 3 ವರ್ಷ ಮತ್ತು ಹೆಚ್ಚುವರಿಯಾಗಿ ಸೇನಾ ಸೇವೆ ಹಾಗೂ 1984ರ ಗಲಭೆಯಲ್ಲಿ ಮೃತಪಟ್ಟ ಮಕ್ಕಳ/ ಕುಟುಂಬದ ಸದಸ್ಯರಿಗೆ 03 ವರ್ಷ. ಎಲ್ಲಾ ಸಡಿಲಿಕೆಗಳ ಒಟ್ಟು ಗರಿಷ್ಠ ವಯೋಮಿತಿಯು 45 ವರ್ಷ ಮೀರಿರಬಾರದು, ಅದು ಸರ್ಕಾರದ ಆದೇಶಗಳಲ್ಲಿ ಒದಗಿಸಲಾಗದ ಹೊರತು.

3) ವೇತನ ಶ್ರೇಣಿ : 14,500 – 28145 ಜೊತೆಗೆ ಬ್ಯಾಂಕ್ ನೀತಿಯ ಪ್ರಕಾರ ಭತ್ಯೆಗಳು.

4) ಜಿಲ್ಲೆಗಳ ವಾಸಸ್ಥಳ : ಅರ್ಹ ಅಭ್ಯರ್ಥಿಗಳು ಹುದ್ದೆಗಳಿಗೆ ಪ್ರಕಟಿಸಿದ ಆಯಾ ಜಿಲ್ಲೆಗಳ ನಿವಾಸಿಯಾಗಿರಬೇಕು.

5) ಅಗತ್ಯ ದಾಖಲೆಗಳು: ಈ ಕೆಳಗಿನ ದಾಖಲೆಗಳ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಅರ್ಜಿ ನಮೂನೆಯೊಂದಿಗೆ ಲಗತ್ತಿಸಬೇಕು. (i) ಸಂಪೂರ್ಣ ಅಂಕಪಟ್ಟಿಗಳ ನಕಲು (10 ಮತ್ತು 12ನೇ ತರಗತಿ). (ii) ಶಾಶ್ವತ ವಾಸಸ್ಥಳ ವೆಂದು ನೋಂದಣಿ ಮಾಡಿರುವ ಪುರಾವೆ. (iii) ವಿಳಾಸದ ಪುರಾವೆ ಮತ್ತು ಐಡಿ ಪ್ರೂಫ್ ನ ಪ್ರತಿ. (v) ಅಗತ್ಯವಿದ್ದರೆ ಜಾತಿ ಪ್ರಮಾಣಪತ್ರದ ನಕಲು. (vi) ನೋಂದಣಿ ಯಾಗಿದ್ದರೆ ಉದ್ಯೋಗ ವಿನಿಮಯ ನೋಂದಣಿ ಕಾರ್ಡ್. (vii) ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಇಡಬ್ಲ್ಯುಎಸ್ (ಆರ್ಥಿಕವಾಗಿ ದುರ್ಬಲ ವಿಭಾಗ).

6) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : ಅರ್ಜಿಗಳನ್ನು ಕೆಳಕಂಡ ವಿಳಾಸಕ್ಕೆ "ಕೆಳದರ್ಜೆ ಕೆಡರ್–2022–23 ರಲ್ಲಿ ಜವಾನ ಹುದ್ದೆಯ ನೇಮಕಾತಿಗಾಗಿ" ಎಂದು ನಮೂದಿಸಿ ಸ್ಪೀಡ್ ಪೋಸ್ಟ್/ ರಿಜಿಸ್ಟರ್ಡ್ ಪೋಸ್ಟ್ ಮೂಲಕವೇ ಕಳುಹಿಸತಕ್ಕದ್ದು. ಮುಖ್ಯ ವ್ಯವಸ್ಥಾಪಕರು (ಹೆಚ್‌ಆರ್‌ಡಿ), ಪಂಜಾಬ್ ನ್ಯಾಷನಲ್ ಬ್ಯಾಂಕ್, ವೃತ್ತ ಕಛೇರಿ, ಬೆಂಗಳೂರು ಪಶ್ಚಿಮ, ನಂ. 100, ಮಸೀದಿ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು–560005. ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ 03.03.2022. ಅರ್ಜಿ ನಮೂನೆಯನ್ನು ಹತ್ತಿರದ ಶಾಖೆ/ವೃತ್ತ ಕಛೇರಿಯಿಂದ ಪಡೆಯಬಹುದು.

7) 03.03.2022 ರ ನಂತರ ಸ್ವೀಕರಿಸಿದ ಅರ್ಜಿಗಳು/ ಅಪೂರ್ಣ ಅರ್ಜಿಗಳು/ಎಲ್ಲಾ ವಿಷಯಗಳಲ್ಲಿ ಪಡೆದ ಅಂಕಗಳನ್ನು ಸೂಚಿಸುವ 10ನೇ ಮತ್ತು 12ನೇ ಅಂಕಪಟ್ಟಿಗಳಿಲ್ಲದ ಅರ್ಜಿಗಳು/ಅಗತ್ಯ ದಾಖಲೆಗಳನ್ನು ಸಲ್ಲಿಸದಿರುವುದು/ ಸ್ವಯಂ ದೃಢೀಕರಿಸದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. 10 (ವೈಟೇಜ್ 40%) ಮತ್ತು 12ನೇ (ವೈಟೇಜ್ 60%) ತರಗತಿಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಶೇಕಡಾವಾರು ಆಧಾರದ ಮೇಲೆ ಜವಾನರ ಆಯ್ಕೆ ಮಾಡಲಾಗುತ್ತದೆ. ಅರ್ಜಿಗಳನ್ನು ಪರಿಗಣಿಸದ ಅಭ್ಯರ್ಥಿಗಳಿಗೆ ಯಾವುದೇ ಮಾಹಿತಿಯನ್ನು ಕಳುಹಿಸಲಾಗುವುದಿಲ್ಲ. ಆಯ್ಕೆಗೆ ಸಂಬಂಧಿಸಿದಂತೆ ಬ್ಯಾಂಕ್ ನ ನಿರ್ಧಾರವೇ ಅಂತಿಮವಾಗಿರುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ: 15.02.2022
ಸಹಿ/– ಮುಖ್ಯ ವ್ಯವಸ್ಥಾಪಕರು (ಹೆಚ್‌ಆರ್‌ಡಿ), ಪಂಜಾಬ್ ನ್ಯಾಷನಲ್ ಬ್ಯಾಂಕ್

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ

KEA

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23 460 460 (5 ಲೈನ್‌ಗಳು)
ಫ್ಯಾಕ್ಸ್: 080–23461576 ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ : ಇಡಿ/ಕೆಇಎ/ಆಡಳಿತ/ಸಿ.ಆರ್.19/2020–21 ದಿನಾಂಕ: 15–02–2022

ಅಧಿಸೂಚನೆ

ಕರ್ನಾಟಕದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿ

“ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಸಹಾಯಕ ಪ್ರಾಧ್ಯಾಪಕರ ನೇಮಕಾತಿ) (ವಿಶೇಷ) ನಿಯಮಗಳು 2020” ಅನ್ವಯ, ಕರ್ನಾಟಕದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ **1242** ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಹುದ್ದೆಗೆ ಈಗಾಗಲೆ ಆನ್‌ಲೈನ್ ಮೂಲಕ ಯಶಸ್ವಿಯಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ನೇಮಕಾತಿಯ ಮುಂದಿನ ಪ್ರಕ್ರಿಯೆಗಳಿಗೆ ಅರ್ಹತೆಯನ್ನು ಪಡೆಯಲು ಕಡ್ಡಾಯವಾಗಿ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಯ ವಿಷಯಗಳನ್ನು ವಿಂಗಡಿಸಿ ಪ್ರಾಧಿಕಾರವು ದಿನಾಂಕ 01–02–2022 ರಂದು ಪ್ರಕಟಿಸಲಾದ ವೇಳಾಪಟ್ಟಿಗೆ ಅಭ್ಯರ್ಥಿಗಳು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಗಣಿಸಿ, ಅಂತಿಮ ವೇಳಾಪಟ್ಟಿಯನ್ನು ಸಿದ್ಧಪಡಿಸಿದ್ದು, ಈ ಕೆಳಗೆ ನೀಡಿರುವ ವೇಳಾಪಟ್ಟಿಯಂತೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುವುದು. ಅರ್ಹ ಅಭ್ಯರ್ಥಿಗಳು **ದಿನಾಂಕ 28–02–2022ರ** ನಂತರ ಪ್ರಾಧಿಕಾರದ ವೆಬ್‌ಸೈಟ್ **http://kea.kar.nic.in** ನಿಂದ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಬಹುದು.

ಸ್ಪರ್ಧಾತ್ಮಕ ಪರೀಕ್ಷೆಯ ವೇಳಾಪಟ್ಟಿ

ದಿನಾಂಕ / ದಿನ	ಸಮಯ / ಅವಧಿ	ವಿಷಯ/ಗಳು
12–03–2022 ಶನಿವಾರ	ಮ. 2.30ರಿಂದ ಸಂ. 4.30 (2 ಗಂಟೆಗಳು)	ಕಡ್ಡಾಯ ಪತ್ರಿಕೆ – 3 (ಸಾಮಾನ್ಯ ಜ್ಞಾನ) 50 ಅಂಕಗಳು
13–03–2022 ಭಾನುವಾರ	ಬೆ. 10.30 ರಿಂದ ಮ. 12.30 (2 ಗಂಟೆಗಳು)	ಕಡ್ಡಾಯ ಪತ್ರಿಕೆ – 1 (ಕನ್ನಡ) 100 ಅಂಕಗಳು
	ಮ. 2.30ರಿಂದ ಸಂ. 4.30 (2 ಗಂಟೆಗಳು)	ಕಡ್ಡಾಯ ಪತ್ರಿಕೆ – 2 (ಇಂಗ್ಲೀಷ್) 100 ಅಂಕಗಳು

ಐಚ್ಛಿಕ ವಿಷಯಗಳು : ಪ್ರತಿ ಪತ್ರಿಕೆಗೆ – 250 ಅಂಕಗಳು

ದಿನಾಂಕ / ದಿನ	ಸಮಯ / ಅವಧಿ	ವಿಷಯ/ಗಳು		
14–03–2022 ಸೋಮವಾರ	ಬೆ. 10.00 ರಿಂದ ಮ. 1.00 (3 ಗಂಟೆಗಳು)	1. ಕನ್ನಡ	4. ಉರ್ದು	22. ಸಸ್ಯ ಶಾಸ್ತ್ರ
		12. ಭೂಗೋಳ ಶಾಸ್ತ್ರ	26. ಫ್ಯಾಷನ್ ಟೆಕ್ನಾಲಜಿ	
	ಮ. 2.00 ರಿಂದ ಸಂ. 5.00 (3 ಗಂಟೆಗಳು)	7. ರಾಜ್ಯಶಾಸ್ತ್ರ	20. ಸೂಕ್ಷ್ಮ ಜೀವಶಾಸ್ತ್ರ	13. ಭೂಗರ್ಭ ಶಾಸ್ತ್ರ
15–03–2022 ಮಂಗಳವಾರ	ಬೆ. 10.00 ರಿಂದ ಮ. 1.00 (3 ಗಂಟೆಗಳು)	5. ಇತಿಹಾಸ	14. ವಾಣಿಜ್ಯ ಶಾಸ್ತ್ರ	19. ಗಣಿತ ಶಾಸ್ತ್ರ
		21. ಪ್ರಾಣಿಶಾಸ್ತ್ರ		
	ಮ. 2.00 ರಿಂದ ಸಂ. 5.00 (3 ಗಂಟೆಗಳು)	6. ಅರ್ಥಶಾಸ್ತ್ರ	16. ಭೌತಶಾಸ್ತ್ರ	17. ರಸಾಯನ ಶಾಸ್ತ್ರ
		2. English	11. ಸಮಾಜ ಕಾರ್ಯ	
16–03–2022 ಬುಧವಾರ	ಬೆ. 10.00 ರಿಂದ ಮ. 1.00 (3 ಗಂಟೆಗಳು)	9. ಶಿಕ್ಷಣ ಶಾಸ್ತ್ರ	3. ಹಿಂದಿ	24. ಗಣಕ ವಿಜ್ಞಾನ
		10. ಕಾನೂನು	25. ಸಂಖ್ಯಾ ಶಾಸ್ತ್ರ	
	ಮ. 2.00 ರಿಂದ ಸಂ. 5.00 (3 ಗಂಟೆಗಳು)	15. ನಿರ್ವಹಣಾ ಶಾಸ್ತ್ರ	18. ಜೈವಿಕ ರಸಾಯನ ಶಾಸ್ತ್ರ	23. ಎಲೆಕ್ಟ್ರಾನಿಕ್ಸ್
		8. ಸಮಾಜ ಶಾಸ್ತ್ರ		

ಸೂಚನೆ: ಕೇವಲ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವುದರಿಂದ ನೇಮಕಾತಿಗಾಗಿ ಅಭ್ಯರ್ಥಿಗಳು ಯಾವುದೇ ಹಕ್ಕನ್ನು ಪಡೆಯುವುದಿಲ್ಲ; ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುವ ನೇಮಕಾತಿ ನಿಯಮಗಳಲ್ಲಿನ ಷರತ್ತುಗಳನ್ನು ಪೂರೈಸುವುದು ಮತ್ತು ಗೌರವಾನ್ವಿತ ನ್ಯಾಯಾಲಯಗಳ / ಸರ್ಕಾರದ ನಿರ್ಧಾರಕ್ಕೆ ಒಳಪಟ್ಟಿರುತ್ತದೆ.

ಸಹಿ/–
(ಎಸ್. ರಮ್ಯ ಭಾ.ಆ.ಸೇ),
ಕಾರ್ಯನಿರ್ವಾಹಕ ನಿರ್ದೇಶಕರು.

ವಾಸಾಸಂಇ/ಬೆಂ.ನ/ಜಿಎ/3392/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತನಿಖೆಯಲ್ಲಿ ಅಕ್ರಮ ಬಯಲು– ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್

‘ಗುರು ರಾಘವೇಂದ್ರ ಬ್ಯಾಂಕ್‌: ₹1,792 ಕೋಟಿ ಅಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್‌ನಲ್ಲಿ ₹ 1,792 ಕೋಟಿ ಮೊತ್ತದ ಅಕ್ರಮ ನಡೆದಿರುವುದು ಈವರೆಗಿನ ತನಿಖೆಯಲ್ಲಿ ಪತ್ತೆಯಾಗಿದೆ ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಪ್ರಶ್ನೆಗೆ ಉತ್ತರಿಸಿದ ಅವರು, ‘ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನ ಸದಸ್ಯರು ಮತ್ತು ಇತರ ಠೇವಣಿದಾರರು ಸೇರಿದಂತೆ 41,778 ಮಂದಿಗೆ ವಂಚನೆಯಾಗಿದೆ. ವಿಮಾ ಸಂಸ್ಥೆಯ ಮೂಲಕ ಈವರೆಗೆ ₹ 709.99 ಕೋಟಿ ಬಿಡುಗಡೆ ಮಾಡಲಾಗಿದೆ’ ಎಂದರು.

ಬ್ಯಾಂಕ್‌ನ ಸಂಪೂರ್ಣ ಉಸ್ತುವಾರಿಯನ್ನು ಹೈಕೋರ್ಟ್ ನಿರ್ದೇಶನದ ಅನುಸಾರ ಭಾರತೀಯ ರಿಸರ್ವ್ ಬ್ಯಾಂಕ್ ನೋಡಿಕೊಳ್ಳುತ್ತಿದೆ. ಅವರಿಂದಲೇ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿದೆ. ಬ್ಯಾಂಕ್‌ನ 26 ನಿರ್ದೇಶಕರ ಆಸ್ತಿಗಳನ್ನು ಜಾರಿ ನಿರ್ದೇಶನಾಲಯ ಮುಟ್ಟುಗೋಲು ಹಾಕಿಕೊಂಡಿದೆ. ಸಹಕಾರ ಇಲಾಖೆಯಿಂದಲೂ ಸಹಕಾರ ಕಾಯ್ದೆಯ ಸೆಕ್ಷನ್ 64ರ ಅಡಿಯಲ್ಲಿ ವಿಚಾರಣೆ ನಡೆಸಲಾಗುತ್ತಿದೆ ಎಂದು ವಿವರಿಸಿದರು.

ಈ ಬ್ಯಾಂಕ್‌ನ ಪುನಶ್ಚೇತನ ಮತ್ತು ನಷ್ಟ ವಸೂಲಿ ಸಂಬಂಧ ಪ್ರತಿ 15 ದಿನಗಳಿಗೊಮ್ಮೆ ಉನ್ನತಮಟ್ಟದ ಸಭೆ ನಡೆಸಲಾಗುತ್ತಿದೆ. 2014–15ರಿಂದ 2018–19ರ ಅವಧಿಯವರೆಗೆ ಮರು ಲೆಕ್ಕ ಪರಿಶೋಧನೆ ನಡೆಸಲಾಗಿದೆ. ಉಳಿದ ಅವಧಿಯ ಮರು ಲೆಕ್ಕ ಪರಿಶೋಧನೆ ನಡೆಯುತ್ತಿದೆ. ಫೆಬ್ರುವರಿ ಅಂತ್ಯದಲ್ಲಿ ವರ್ಚುವಲ್ ವಿಧಾನದಲ್ಲಿ ಷೇರುದಾರರು ಮತ್ತು ಹೂಡಿಕೆದಾರರ ಸಭೆ ನಡೆಸಿ, ಸದ್ಯದ ಸ್ಥಿತಿಗತಿ ಕುರಿತು ಮಾಹಿತಿ ಹಂಚಿಕೊಳ್ಳುವಂತೆ ಆಡಳಿತಾಧಿಕಾರಿಗೆ ಸೂಚಿಸಲಾಗಿದೆ ಎಂದರು.

ವಿಲೀನಕ್ಕೆ ಆಗ್ರಹ: ‘ಮತ್ತಷ್ಟು ನಷ್ಟ ಉಂಟಾಗುವುದನ್ನು ತಪ್ಪಿಸಲು ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ಅನ್ನು ಇತರ ಸಹಕಾರ ಬ್ಯಾಂಕ್ ಜತೆಗೆ ವಿಲೀನ ಮಾಡಬೇಕು’ ಎಂದು ವೆಂಕಟೇಶ್ ಆಗ್ರಹಿಸಿದರು.

‘ವಿಷಯ ಹೈಕೋರ್ಟ್ ಮತ್ತು ಆರ್‌ಬಿಐ ಸುಪರ್ದಿಯಲ್ಲಿ ಇರುವುದರಿಂದ ರಾಜ್ಯ ಸರ್ಕಾರ ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ’ ಎಂದು ಸೋಮಶೇಖರ್ ತಿಳಿಸಿದರು.

‘ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ₹ 295 ಕೋಟಿ ಅಕ್ರಮ ಪತ್ತೆಯಾಗಿದೆ. ಸಾಲ ವಸೂಲಿ ಮಾಡಿ ಠೇವಣಿದಾರರಿಗೆ ಹಣ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದರು.

ಬ್ಯಾಂಕ್ ಅಧ್ಯಕ್ಷ ಕೆ. ರಾಮಕೃಷ್ಣ ಬಂಧನ

ಬೆಂಗಳೂರು: ₹ 1,554 ಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಅಕ್ರಮ ಹಣ ವರ್ಗಾವಣೆ ಆರೋಪದಡಿ ನಗರದ ಶ್ರೀ ಗುರು ರಾಘವೇಂದ್ರ ಬ್ಯಾಂಕ್ ಅಧ್ಯಕ್ಷ ಕೆ.ರಾಮಕೃಷ್ಣ ಅವರನ್ನು ಬಂಧಿಸಲಾಗಿದ್ದು, ಬೆಂಗಳೂರು ನಗರ ಜಿಲ್ಲೆಯ ಪ್ರಧಾನ ಸೆಷನ್ಸ್ ನ್ಯಾಯಾಧೀಶರ ಕೋರ್ಟ್ ಮುಂದೆ ಮಂಗಳವಾರ ಹಾಜರುಪಡಿಸಲಾಯಿತು.

72 ವರ್ಷದ ಕೆ.ರಾಮಕೃಷ್ಣ ಅವರನ್ನು ಸೋಮವಾರವಷ್ಟೇ ಸಂಜೆ 6.50ಕ್ಕೆ ನಗರದಲ್ಲಿ ಬಂಧಿಸಿದ್ದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ಮಂಗಳವಾರ ಪ್ರಧಾನ ನ್ಯಾಯಾಧೀಶ ಅನಿಲ್ ಬಿ. ಕಟ್ಟಿ ಅವರ ಕೋರ್ಟ್‌ಗೆ ಹಾಜರುಪಡಿಸಿದರು. ನ್ಯಾಯಾಧೀಶರು ಆರೋಪಿಯನ್ನು ಇದೇ 18ರವರೆಗೆ ಇ.ಡಿ ವಶಕ್ಕೆ ಒಪ್ಪಿಸಿ ಆದೇಶಿಸಿದರು.

‘ರಾಮಕೃಷ್ಣ ಅವರು ಬ್ಯಾಂಕ್‌ನ ಅಧ್ಯಕ್ಷರಾಗಿದ್ದ ಕಾಲದಲ್ಲಿ 2,876 ಸಾಲಗಳನ್ನು ನೀಡಿದ್ದರು. ಈ ಸಾಲದ ಮೊತ್ತ ₹1,544.43 ಕೋಟಿ. ಇದರಲ್ಲಿ ₹ 892.85 ಕೋಟಿ ಬೋಗಸ್ ದಾಖಲೆಗಳಿಗೆ ಸಾಲ ಕೊಡಲಾಗಿದೆ’ ಎಂದು ಇವರ ವಿರುದ್ಧ ಬಸವನಗುಡಿ ಠಾಣೆಯಲ್ಲಿ ಮೊದಲ ಪ್ರಕರಣ ದಾಖಲಾಗಿತ್ತು. ಈ ಕುರಿತಂತೆ ಸಿಐಡಿ ತನಿಖೆ ನಡೆಸುತ್ತಿದೆ.

₹ 892 ಕೋಟಿ ಏನಾಯ್ತು ಎಂಬ ಬಗ್ಗೆ ವಿಚಾರಣೆಗೆ ಕರೆಸಿದ್ದ ಇ.ಡಿ ಅಧಿಕಾರಿಗಳು ರಾಮಕೃಷ್ಣ ಅವರನ್ನು ಬಂಧಿಸಿದ್ದರು. ಇ.ಡಿ ಪರ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್ ಹಾಜರಾಗಿದ್ದರು.

ಬೈಕ್ ಟ್ಯಾಕ್ಸಿ ಹಾಗೂ ಅವುಗಳನ್ನು ಆನ್‌ಲೈನ್ ಮೂಲಕ ಬಾಡಿಗೆ ನೀಡುತ್ತಿರುವ ವೆಬ್‌ಸೈಟ್‌ಗಳನ್ನು ಕೂಡಲೇ ರದ್ದುಪಡಿಸುವಂತೆ ಆಗ್ರಹಿಸಿ ಭಾರತ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ ಗ್ರೂಪ್ ಸದಸ್ಯರು ಸ್ಯಾಂಕಿ ರಸ್ತೆಯಲ್ಲಿರುವ ಸಾರಿಗೆ ಸಚಿವ ಶ್ರೀರಾಮುಲು ನಿವಾಸದ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ರೌಡಿ ಕುಳ್ಳ ಶಿವ ಬಂಧನ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಪದೇ ಪದೇ ಭಾಗಿಯಾಗಿ ಸಾರ್ವಜನಿಕರನ್ನು ಬೆದರಿಸುತ್ತಿದ್ದ ಎನ್ನಲಾದ ರೌಡಿ ಶಿವರಾಜ್ ಅಲಿಯಾಸ್ ಕುಳ್ಳ ಶಿವನನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಲಾಗಿದೆ.

‘ಬೆಂಗಳೂರು ನಗರ ಹಾಗೂ ರಾಮನಗರ ಜಿಲ್ಲೆಯ ಹಲವೆಡೆ ಕುಳ್ಳ ಶಿವ ಅಪರಾಧ ಕೃತ್ಯ ಎಸಗಿದ್ದ. ಬ್ಯಾಡರಹಳ್ಳಿ ಠಾಣೆಯ ರೌಡಿಪಟ್ಟಿಯಲ್ಲಿ ಆತನ ಹೆಸರಿತ್ತು’ ಎಂದು ಸಿಸಿಬಿ ಪೊಲೀಸರು ಹೇಳಿದರು.

ನ್ಯಾಯಾಲಯ ಆವರಣದಲ್ಲಿ ಗಲಾಟೆ: ಆರೋಪ

‘ಪೊಲೀಸ್ ಪಿತೂರಿ, ಕಮಿಷನರ್ ಕುತಂತ್ರ’

ಪ್ರಜಾವಾಣಿ ವಾರ್ತೆ

ರಂಗನಾಥ್

ಬೆಂಗಳೂರು: ‘ಸಿಟಿ ಸಿವಿಲ್ ನ್ಯಾಯಾಲಯ ಆವರಣದಲ್ಲಿ ನಡೆದಿರುವ ಗಲಾಟೆ ಹಿಂದೆ ಪೊಲೀಸ್ ಪಿತೂರಿ ಹಾಗೂ ಪೊಲೀಸ್ ಕಮಿಷನರ್ ಕುತಂತ್ರವಿದೆ’ ಎಂದು ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷರೂ ಆದ ವಕೀಲ ಎ.ಪಿ. ರಂಗನಾಥ್ ಆರೋಪಿಸಿದ್ದಾರೆ.

ಫೆ.10 ಹಾಗೂ 11ರಂದು ನಡೆದಿರುವ ಘಟನೆ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಗಲಾಟೆ ಆಗುವ ಮಾಹಿತಿ ಪೊಲೀಸರಿಗೆ ಹಾಗೂ ವಕೀಲರ ಸಂಘಕ್ಕೆ ಮೊದಲೇ ಗೊತ್ತಿತ್ತು. ಅಷ್ಟಾದರೂ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಎಡವಿದರು’ ಎಂದಿದ್ದಾರೆ.

‘ವಕೀಲ ಜಗದೀಶ್ ಕೆ.ಎನ್. ಮಹಾದೇವ್, ವಕೀಲರು ಹಾಗೂ ವೃತ್ತಿ ಬಗ್ಗೆ ಕೆಟ್ಟದಾಗಿ ಮಾತನಾಡುವುದನ್ನು ನಾನು ಸಹಿಸುವುದಿಲ್ಲ. ಆ ರೀತಿ ಮಾತನಾಡದಂತೆ ಆತನಿಗೆ ಬುದ್ಧಿವಾದ ಹೇಳಿದ್ದೇನೆ. ವ್ಯಾಜ್ಯಕ್ಕೆ ಸಂಬಂಧಪಟ್ಟಂತೆ ವಕೀಲ ಜಗದೀಶ್ ಕೆ.ಎನ್.ಮಹಾದೇವ್ ನ್ಯಾಯಾಲಯಕ್ಕೆ ಬಂದಿದ್ದಾಗ ಗಲಾಟೆ ನಡೆದಿದೆ. ಅದರ ವಿಡಿಯೊ ನೋಡಿದ್ದೇನೆ. ಉದ್ವೇಗಕ್ಕೆ ಒಳಗಾಗಿ ಜಗದೀಶ್ ಕೂಗಾಡಿರಬಹುದು. ಆದರೆ, ಕೊಲೆ ಯತ್ನ ಎಲ್ಲಿ ಆಗಿದೆ? ಈ ಬಗ್ಗೆ ಜನ ಪ್ರಶ್ನಿಸುತ್ತಿದ್ದಾರೆ’ ಎಂದೂ ತಿಳಿಸಿದ್ದಾರೆ.

‘ಜೀವ ಬೆದರಿಕೆ (ಐಪಿಸಿ 506) ಆರೋಪದಡಿ ಜಗದೀಶ್ ವಿರುದ್ಧ ದೂರು ಬರೆದುಕೊಂಡು ವಕೀಲರ ಸಂಘದ ಪದಾಧಿಕಾರಿಗಳು, ಕಮಿಷನರ್ ಬಳಿ ಹೋಗಿದ್ದರು. ಕೊಲೆ ಯತ್ನ (ಐಪಿಸಿ 307) ಆರೋಪದಡಿ ದೂರು ನೀಡಿದರೆ, ಜೈಲಿಗೆ ಕಳುಹಿಸುವುದಾಗಿ ಕಮಿಷನರ್ ಹೇಳಿರುವುದು ನನಗೆ ಗೊತ್ತಿದೆ.’

‘ಜಗದೀಶ್ ವಿರುದ್ಧ ಹೊರಗಡೆ ಕ್ರಮ ಕೈಗೊಳ್ಳಲಾಗದ ಪೊಲೀಸರು, ವಕೀಲರ ಮೂಲಕ ತಮ್ಮ ಕೆಲಸ ಸಾಧಿಸುತ್ತಿದ್ದಾರೆ. ಸಮಯ ಸಿಕ್ಕಾಗೆಲ್ಲ ವಕೀಲರನ್ನು ಒಡೆದು ಆಳುತ್ತಿದ್ದಾರೆ. ವಕೀಲರನ್ನೇ ಜೈಲಿಗೆ ಕಳುಹಿಸುವುದು ಸಂಘದ ಉದ್ದೇಶವಲ್ಲವೆಂಬುದನ್ನು ಅಧ್ಯಕ್ಷರು ಅರ್ಥ ಮಾಡಿಕೊಳ್ಳಬೇಕು’ ಎಂದೂ ರಂಗನಾಥ್ ಹೇಳಿದ್ದಾರೆ.

‘ಗಲಾಟೆ ವೇಳೆ 40 ರೌಡಿಗಳು ಬಂದಿದ್ದರೆಂದು ಪೊಲೀಸರು ಹೇಳುತ್ತಿದ್ದಾರೆ. ಅವರೆಲ್ಲ ಯಾರು? ಅವರನ್ನೇಕೆ ಬಂಧಿಸಿಲ್ಲ? ಹೋರಾಟಗಾರರು, ವ್ಯಕ್ತಿಯ ಅಭಿಮಾನಿಗಳಿಗೆ ರೌಡಿಗಳ ಪಟ್ಟ ಕಟ್ಟುವುದನ್ನು ಪೊಲೀಸರು ಮೊದಲು ಬಿಡಬೇಕು’ ಎಂದೂ ತಿಳಿಸಿದ್ದಾರೆ.

ಜಾಮೀನು ಅರ್ಜಿ ವಿಚಾರಣೆ 18ಕ್ಕೆ

ಕೊಲೆ ಯತ್ನ ಪ್ರಕರಣದಲ್ಲಿ ಬಂಧಿತರಾಗಿರುವ ವಕೀಲ ಜಗದೀಶ್ ಕೆ.ಎನ್. ಮಹಾದೇವ್ ಅವರಿಗೆ ಜಾಮೀನು ಕೋರಿ ನಗರದ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿದೆ. ಜಗದೀಶ್ ಪರ ವಕೀಲರ ಅರ್ಜಿ ಸಲ್ಲಿಸಿದ್ದಾರೆ. ಅದರ ವಿಚಾರಣೆ ನಡೆಸಿರುವ ನ್ಯಾಯಾಲಯ, ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಪೊಲೀಸರಿಗೆ ಕಾಲಾವಕಾಶ ನೀಡಿದೆ. ಮುಂದಿನ ವಿಚಾರಣೆಯನ್ನು ಫೆ.18ಕ್ಕೆ ಮುಂದೂಡಿದೆ.

ಆಂಧ್ರದ ಮೂವರ ಬಂಧನ: 104 ಕೆ.ಜಿ ಮಾದಕ ವಸ್ತು ಜಪ್ತಿ

ಚಾಕೊಲೇಟ್ ಚೀಲಗಳಲ್ಲಿ ಗಾಂಜಾ ಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಿಟ್‌ಕ್ಯಾಟ್’ ಚಾಕೊಲೇಟ್ ಚೀಲಗಳಲ್ಲಿ ಗಾಂಜಾ ಬಚ್ಚಿಟ್ಟು ಸಾಗಿಸುತ್ತಿದ್ದ ಜಾಲವನ್ನು ಸಂಜಯನಗರ ಪೊಲೀಸರು ಭೇದಿಸಿದ್ದು, 104 ಕೆ.ಜಿ 900 ಗ್ರಾಂ ಗಾಂಜಾ ಜಪ್ತಿ ಮಾಡಿದ್ದಾರೆ.

‘ನಗರಕ್ಕೆ ಗಾಂಜಾ ಸಾಗಿಸುತ್ತಿದ್ದ ಆಂಧ್ರಪ್ರದೇಶದ ಮೂವರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸಂಜಯನಗರದ ಉದ್ಯಾನವೊಂದರಲ್ಲಿ ಗಾಂಜಾ ಸೇದುತ್ತಿದ್ದ ವ್ಯಕ್ತಿಯೊಬ್ಬನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತು. ಆತನಿಗೆ ಗಾಂಜಾ ಮಾರುತ್ತಿದ್ದ ವ್ಯಕ್ತಿಗಳ ಬಗ್ಗೆ ಮಾಹಿತಿ ಕಲೆಹಾಕಿ ತನಿಖೆ ಮುಂದುವರಿಸಲಾಗಿತ್ತು’ ಎಂದೂ ತಿಳಿಸಿದರು.

ಸಿಬಿಐ ಕಚೇರಿ ಬಳಿ ಜೀಪು: ‘ಆರೋಪಿಗಳು ಆಂಧ್ರದಿಂದ ನಗರಕ್ಕೆ ಜೀಪಿನಲ್ಲಿ ಗಾಂಜಾ ತಂದಿದ್ದ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಬಳ್ಳಾರಿ ರಸ್ತೆಯ ಸಿಬಿಐ ಕಚೇರಿ ವೃತ್ತದಲ್ಲಿ ನಿಂತಿದ್ದ ಜೀಪು ತಪಾಸಣೆ ನಡೆಸಿದಾಗ, ಆರೋಪಿಗಳು ಸಿಕ್ಕಿಬಿದ್ದರು’ ಎಂದು ಹೇಳಿದರು.

ಚಾಕೊಲೇಟ್ ಚೀಲದಲ್ಲಿ ತುಂಬಿದ್ದ ಗಾಂಜಾ

‘ಚಾಕೊಲೇಟ್ ಪೊಟ್ಟಣ ಸಾಗಿಸುವ ಚೀಲಗಳಲ್ಲಿ ಗಾಂಜಾ ತುಂಬಲಾಗಿತ್ತು. ಜೀಪಿನ ಮೇಲೆ ‘ಮುಖ್ಯಮಂತ್ರಿ ಬಾಲ ಸುರಕ್ಷಾ ಶಾಖೆ’ ಎಂಬುದಾಗಿ ತೆಲುಗಿನಲ್ಲಿ ಬರೆಯಲಾಗಿತ್ತು’ ಎಂದೂ ತಿಳಿಸಿದರು.

‘ಪ್ರಕರಣದ ಪ್ರಮುಖ ಆರೋಪಿ ತಲೆಮರೆಸಿಕೊಂಡಿದ್ದಾನೆ.’ ಎಂದರು.

ಬಹುಮಾನ: ‘ಗಾಂಜಾ ಸಾಗಣೆ ಪ್ರಕರಣ ಭೇದಿಸಿದ ಪೊಲೀಸರ ತಂಡಕ್ಕೆ ಕಮಿಷನರ್ ಕಮಲ್ ಪಂತ್ ಅವರು ₹ 60 ಸಾವಿರ ಬಹುಮಾನ ಘೋಷಿಸಿದ್ದಾರೆ’ ಎಂದು ಉತ್ತರ ವಿಭಾಗದ ಡಿಸಿಪಿ ವಿನಾಯಕ ಪಾಟೀಲ ತಿಳಿಸಿದರು.

₹ 2.57 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಮಾದಕ ವಸ್ತು ಸಾಗಣೆ ಹಾಗೂ ಮಾರಾಟದ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ಗೋವಿಂದಪುರ ಠಾಣೆ ಪೊಲೀಸರು, ಪ್ರತ್ಯೇಕ ಪ್ರಕರಣಗಳಲ್ಲಿ ₹ 2.57 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

‘ಬ್ರೆಜಿಲ್‌ನಿಂದ ಡ್ರಗ್ಸ್ ತರಿಸಿ ಮಾರುತ್ತಿದ್ದ ಆರೋಪದಡಿ ನೈಜೀರಿಯಾದ ಇಬ್ಬರು ಪ್ರಜೆಗಳನ್ನು ಬಂಧಿಸಲಾಗಿದೆ. ಅವರಿಂದ ₹ 1.36 ಕೋಟಿ ಮೌಲ್ಯದ ಕೊಕೇನ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

₹ 1.21 ಕೋಟಿ ಮೌಲ್ಯದ ಬ್ರೌನ್ ಶುಗರ್ ಜಪ್ತಿ: ಇನ್ನೊಂದು ಪ್ರಕರಣದಲ್ಲಿ ₹1.21 ಕೋಟಿ ಮೌಲ್ಯದ ಬ್ರೌನ್ ಶುಗರ್ ಜಪ್ತಿ ಮಾಡಲಾಗಿದೆ. ‘ಪ್ರಕರಣವೊಂದರಲ್ಲಿ ಸಿಕ್ಕಿಬಿದ್ದಿದ್ದ ಆರೋಪಿ, ಮಧ್ಯಪ್ರದೇಶದಲ್ಲಿನ ಡ್ರಗ್ಸ್ ಜಾಲದ ಬಗ್ಗೆ ಮಾಹಿತಿ ನೀಡಿದ್ದ. ಅಲ್ಲಿಂದಲೇ ಬೆಂಗಳೂರಿಗೆ ಡ್ರಗ್ಸ್ ತಂದು ಮಾರುತ್ತಿದ್ದ ಸಂಗತಿ ತಿಳಿಸಿದೆ. ಅದರನ್ವಯ ಮಧ್ಯಪ್ರದೇಶದಲ್ಲೇ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಮಗು ಸಾವು: ತಾಯಿ ಆತ್ಮಹತ್ಯೆ

ಬೆಂಗಳೂರು: ‘ಹೃದಯ ಸಂಬಂಧಿ ಕಾಯಿಲೆಗೆ ತುತ್ತಾಗಿ 6 ತಿಂಗಳ ಮಗು ತೀರಿಕೊಂಡಿದ್ದರಿಂದ ನೊಂದಿದ್ದರು’ ಎನ್ನಲಾದ ಪಲ್ಲವಿ ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದು, ಸುದ್ದಗುಂಟೆಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಪತಿ ಸಂತೋಷ್ ಜೊತೆ ಪಲ್ಲವಿ ವಾಸವಿದ್ದರು. ಮನೆಯಲ್ಲಿ ನೇಣು ಹಾಕಿಕೊಂಡು ಮಂಗಳವಾರ ಆತ್ಮಹತ್ಯೆಗೆ ಶರಣಾಗಿದ್ದಾರೆ.’ ಎಂದು ಹೇಳಿದರು.

‘ಮಂಡ್ಯದ ಸಂತೋಷ್, ಲ್ಯಾಬೊಂದರಲ್ಲಿ ತಂತ್ರಜ್ಞರಾಗಿ ಕೆಲಸ ಮಾಡುತ್ತಿದ್ದಾರೆ. ಪಲ್ಲವಿ ಅವರನ್ನು 3 ವರ್ಷಗಳ ಹಿಂದೆ ಮದುವೆಯಾಗಿದ್ದರು. ಆರು ತಿಂಗಳ ಹಿಂದಷ್ಟೇ ಪಲ್ಲವಿ ಅವರಿಗೆ ಮಗುವಾಗಿತ್ತು. ಆದರೆ, ಮಗು ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿತ್ತು.’

‘ಮಗುವನ್ನು ಹಲವು ವೈದ್ಯರ ಬಳಿ ತೋರಿಸಿದರೂ ಹುಷಾರಾಗಿರಲಿಲ್ಲ. ಇತ್ತೀಚೆಗಷ್ಟೇ ನಾರಾಯಣ ಹೃದಯಾಲಯಕ್ಕೆ ಮಗುವನ್ನು ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಭಾನುವಾರ ರಾತ್ರಿ ಮಗು ಸಾವನ್ನಪ್ಪಿತ್ತು. ಅದರಿಂದ ಪಲ್ಲವಿ ನೊಂದುಕೊಂಡಿದ್ದರು’ ಎಂದೂ ತಿಳಿಸಿದರು.

ಮರಣ ಪತ್ರ ಪತ್ತೆ: ‘ಪತಿ ಸಂತೋಷ್ ಕೆಲಸ ನಿಮಿತ್ತ ಸೋಮವಾರ ಬೆಳಿಗ್ಗೆ ಹೊರಗಡೆ ಹೋಗಿದ್ದರು. ಇದೇ ಸಂದರ್ಭ ಪಲ್ಲವಿ ಆತ್ಮಹತ್ಯೆ ಮಾಡಿಕೊಂಡಿದ್ದು, ಕೊಠಡಿಯಲ್ಲಿ ಮರಣ ಪತ್ರ ಸಿಕ್ಕಿದೆ’ ಎಂದು ಪೊಲೀಸರು ಹೇಳಿದರು.

‘ಮಗು ತೀರಿಕೊಂಡಿದ್ದರಿಂದ ನೋವಾಗುತ್ತಿದೆ. ಬದುಕಿರಲು ನನಗೆ ಆಗುತ್ತಿಲ್ಲ. ಮುಂದಿನ ಜನ್ಮದಲ್ಲಿ ನಿನ್ನ ಮಗುವಾಗಿ ಹುಟ್ಟುತ್ತೇನೆ’ ಎಂಬುದಾಗಿ ಪತಿ ಹೆಸರು ಪ್ರಸ್ತಾಪಿಸಿ ಪತ್ರ ಬರೆಯಲಾಗಿದೆ. ಇದನ್ನು ಪರಿಶೀಲನೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದೂ ತಿಳಿಸಿದರು.

ಲಂಚ: ಎಸಿಬಿ ಬಲೆಗೆ ಎಫ್‌ಡಿಎ

ಬೆಂಗಳೂರು: ಹಾಲು ಉತ್ಪಾದಕರ ಸಹಕಾರ ಸಂಘವನ್ನು ನೋಂದಣಿ ಮಾಡಲು ₹40 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟು ಕೊನೆಯ ಕಂತಿನ ₹5 ಸಾವಿರ ಪಡೆಯುತ್ತಿದ್ದ ಮಲ್ಲೇಶ್ವರದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ಎಫ್‌ಡಿಎ ಸುನೀಲ್ ಭ್ರಷ್ಟಾಚಾರ ನಿಗ್ರಹ ದಳದ(ಎಸಿಬಿ) ಬಲೆಗೆ ಬಿದ್ದಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕಿನ ಮೈಹಿಮಣ್ಣನಪಾಳ್ಯದಲ್ಲಿ ತೆರೆದಿರುವ ಹಾಲು ಉತ್ಪಾದಕರ ಸಂಘವನ್ನು ನೋಂದಣಿ ಮಾಡಿಕೊಡಲು ಸುನೀಲ್ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಲಂಚ ಪಡೆಯುತ್ತಿದ್ದಾಗ ದಾಳಿ ನಡೆಸಿ ಬಂಧಿಸಲಾಗಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಪೊಲೀಸರ ಮೇಲೆ ಸೇಡಿನಿಂದ ಕೃತ್ಯ: ಆರೋಪಿಗಳ ಹೇಳಿಕೆ

ಸಂಚಾರ ಸಿಗ್ನಲ್‌ನ ಬ್ಯಾಟರಿ ಕದ್ದ ದಂಪತಿ

ಬೆಂಗಳೂರು: ನಗರದ ಸಂಚಾರ ಸಿಗ್ನಲ್‌ಗಳಲ್ಲಿ ಅಳವಡಿಸುತ್ತಿದ್ದ ಬ್ಯಾಟರಿ ಕಳವು ಮಾಡುತ್ತಿದ್ದ ಆರೋಪದಡಿ ದಂಪತಿಯನ್ನು ಅಶೋಕನಗರ ಪೊಲೀಸರು ಬಂಧಿಸಿದ್ದಾರೆ.

‘ಸಿಕಂದರ್ ಮತ್ತು ಪತ್ನಿ ನಜ್ಮಾ ಬಂಧಿತರು. ಅವರಿಂದ ₹ 20 ಲಕ್ಷ ಮೌಲ್ಯದ 230 ಬ್ಯಾಟರಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಚಹಾ ಅಂಗಡಿ ಇಟ್ಟುಕೊಂಡಿದ್ದ ದಂಪತಿ, ಕೋವಿಡ್ ಲಾಕ್‌ಡೌನ್‌ನಲ್ಲಿ ತೆರೆಮರೆಯಲ್ಲಿ ಅಂಗಡಿ ವ್ಯವಹಾರ ಮುಂದುವರಿಸಿದ್ದರು. ಅಂಗಡಿ ಮುಚ್ಚಿಸಿದ್ದ ಪೊಲೀಸರು, ಅಂಗಡಿಯವಸ್ತುಗಳನ್ನು ಹೊರಗೆ ಎಸೆದು ನಾಶಪಡಿಸಿದ್ದರು.’

‘ಪೊಲೀಸರ ಮೇಲೆ ಸೇಡು ತೀರಿಸಿಕೊಳ್ಳಲು, ಸಿಗ್ನಲ್‌ಗಳ ಬ್ಯಾಟರಿಗಳನ್ನು ಕದಿಯುತ್ತಿದ್ದರು. ಆ ಬ್ಯಾಟರಿಗಳನ್ನು ₹ 1 ಸಾವಿರಕ್ಕೆ ಗುಜರಿ ವ್ಯಾಪಾರಿಗಳಿಗೆ ಮಾರುತ್ತಿದ್ದರು’ ಎಂದೂ ಮೂಲಗಳು ತಿಳಿಸಿವೆ.

‘ಅಶೋಕನಗರ ಠಾಣೆ ವ್ಯಾಪ್ತಿಯ ಸಿಗ್ನಲ್‌ಗಳ ಬ್ಯಾಟರಿ ಕಳವಾದ ಬಗ್ಗೆ ದೂರು ದಾಖಲಾಗಿತ್ತು. ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಿ, ಆರೋಪಿಗಳನ್ನು ಬಂಧಿಸಲಾಗಿದೆ. ಮನೆಯಲ್ಲಿ ಸಂಗ್ರಹಿಸಿಟ್ಟಿದ್ದ ಬ್ಯಾಟರಿಗಳನ್ನು ಜಪ್ತಿ ಮಾಡಲಾಗಿದೆ.’ ಎಂದೂ ಮೂಲಗಳು ವಿವರಿಸಿವೆ.

ಮೊಬೈಲ್ ಕೊಡದಿದ್ದಕ್ಕೆ ಸ್ನೇಹಿತನ ಕೊಲೆ

ಬೆಂಗಳೂರು: ಕೋಣನಕುಂಟೆ ಠಾಣೆಯ ವ್ಯಾಪ್ತಿಯಲ್ಲಿ ಮಂಜುನಾಥ್ (36) ಎಂಬುವವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಸ್ನೇಹಿತ ಶರತ್‌ಕುಮಾರ್ (27) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಮೃತ ಮಂಜುನಾಥ್, ಜಂಬೂಸವಾರಿ ದಿಣ್ಣೆ ನಿವಾಸಿ. ಮೊಬೈಲ್ ಕೊಡಲಿಲ್ಲವೆಂಬ ಕಾರಣಕ್ಕೆ ಶರತ್‌ಕುಮಾರ್ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಸಾವಿನಲ್ಲಿ ಅನುಮಾನ: ತನಿಖೆಗೆ ಒತ್ತಾಯ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆಯ ವ್ಯಾಪ್ತಿಯಲ್ಲಿ ಸಂಭವಿಸಿದ್ದ ಅಪಘಾತದಲ್ಲಿ ಮೃತಪಟ್ಟಿರುವ ಗಿರೀಶ್ (50) ಸಾವಿನ ಬಗ್ಗೆ ಅನುಮಾನ ವ್ಯಕ್ತವಾಗಿದ್ದು, ಸೂಕ್ತ ತನಿಖೆ ನಡೆಸುವಂತೆ ಒತ್ತಾಯಿಸಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ಮನವಿ ಸಲ್ಲಿಸಲಾಗಿದೆ.

ಪತ್ರಕರ್ತರಾದ ಎಸ್.ಕೆ. ಶೇಷಚಂದ್ರಿಕ, ಈಶ್ವರ ದೈತೋಟ ಸೇರಿದಂತೆ ಮಾಧ್ಯಮ, ಮುದ್ರಣ ಹಾಗೂ ಸಾಹಿತ್ಯ ಕ್ಷೇತ್ರದ ಹಲವರು ಜಂಟಿಯಾಗಿ ಗೃಹ ಸಚಿವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

‘ಮಾಲೂರಿನ ಗಿರೀಶ್ ಅವರು ‘ಶುಭೋದಯ’ ಪ್ರಿಂಟಿಂಗ್ ಪ್ರೆಸ್ ನಡೆಸುತ್ತಿದ್ದರು. ಫೆ. 7ರಂದು ಮಧ್ಯಾಹ್ನ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ, ನೀರಿನ ಟ್ಯಾಂಕರ್ ಡಿಕ್ಕಿ ಹೊಡೆದಿತ್ತು. ಇದರಿಂದ ಗಿರೀಶ್ ತೀವ್ರವಾಗಿ ಗಾಯಗೊಂಡಿದ್ದರು. ಅಪಘಾತದ ನಂತರ ಸ್ವಲ್ಪ ದೂರ ತೆರಳಿ ಟ್ಯಾಂಕರ್ ನಿಲ್ಲಿಸಿದ್ದ ಚಾಲಕ, ಘಟನಾ ಸ್ಥಳಕ್ಕೆ ನಡೆದುಕೊಂಡು ಬಂದು ನಿಂತು ಗಮನಿಸಿ ಹೊರಟುಹೋಗಿದ್ದಾನೆ’ ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ.

‘ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಗಮನಿಸಿದರೆ, ಸಾವಿನ ಹಿಂದೆ ದುರುದ್ದೇಶವಿರುವ ಅನುಮಾನ ಬರುತ್ತಿದೆ. ಗಿರೀಶ್ ಅವರು ಮುದ್ರಣ ಉದ್ಯಮ ಸ್ಥಾಪಿಸಿ, ಯಶಸ್ವಿಯಾಗಿದ್ದರು. ಹಲವು ಉದ್ಯಮಿಗಳಿಗೆ ಪ್ರತಿಸ್ಪರ್ಧಿಯಾಗಿದ್ದರು. ಆದ್ದರಿಂದ, ಪ್ರಕರಣವನ್ನು ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸಲು ಸಂಬಂಧಪಟ್ಟ ಪೊಲೀಸರಿಗೆ ನಿರ್ದೇಶನ ನೀಡಬೇಕು’ ಎಂದೂ ಪತ್ರದಲ್ಲಿ ಆಗ್ರಹಿಸಲಾಗಿದೆ.

ಕಲ್ಕೆರೆ: ನೀರಿನ ಸಮಸ್ಯೆ ಪರಿಹರಿಸಲು ಮನವಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಾಮಮೂರ್ತಿನಗರ ವಾರ್ಡ್‌ನ ಕಲ್ಕೆರೆ ಗ್ರಾಮದ ಮಡಿವಾಳ ರಾಮಯ್ಯ ಬಡಾವಣೆ, ಮುದ್ದುವೀರಪ್ಪ ಬಡಾವಣೆ, ಚೆನ್ನರಾಯಪ್ಪ ಬಡಾವಣೆಯ ನಿವಾಸಿಗಳು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಸಂಸದ ಡಿ.ವಿ.ಸದಾನಂದ ಗೌಡ ಅವರಿಗೆ ಇಮೇಲ್ ಮೂಲಕ ಮನವಿ ಸಲ್ಲಿಸಿದ್ದಾರೆ.

ಈ ಬಡಾವಣೆಗಳಲ್ಲಿ 60ಕ್ಕೂ ಹೆಚ್ಚು ಕುಟುಂಬಗಳು ವಾಸವಾಗಿದ್ದು, ಕುಡಿಯಲು ಮತ್ತು ದಿನ ಬಳಕೆ ನೀರಿಗಾಗಿ ಪರದಾಡುತ್ತಿದ್ದರು.

‘ಬಡಾವಣೆ ಪಕ್ಕದ ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೆ ನೀರು ಪೂರೈಕೆಯಾಗುತ್ತಿದೆ. ನೀರು ಸರಬರಾಜು ಮಾಡುವ ನೀರುಗಂಟಿ ಹಣ ಕೊಟ್ಟವರಿಗೆ ನೀರು ಹರಿಸಿ, ಇನ್ನುಳಿದ ಮನೆಗಳಿಗೆ ತಾರತಮ್ಯ ಮಾಡುತ್ತಿದ್ದಾರೆ. ನೀರನ್ನು ಹಣ ಕೊಟ್ಟು ಖರೀದಿಸುತ್ತಿದ್ದು, ಟ್ಯಾಂಕರ್‌ವೊಂದಕ್ಕೆ ₹600ರವರೆಗೆ ಪಾವತಿಸಬೇಕಾಗಿದೆ’ ಎಂದು ಸ್ಥಳೀಯ ನಿವಾಸಿ ಮುನಿಯಮ್ಮ ದೂರಿದರು.

ನೀರಿನ ಸಮಸ್ಯೆ ಎದುರಿಸುತ್ತಿರುವ ಬಡಾವಣೆಗಳ ಮಹಿಳೆಯರು ಖಾಲಿ ಕೊಡ ಪ್ರದರ್ಶಿಸಿದರು

‘ನೀರು ಸರಬರಾಜು ಮಾಡದಿರುವ ಕುರಿತು ಪಾಲಿಕೆ ಅಧಿಕಾರಿಗಳು ಹಾಗೂ ನೀರುಗಂಟಿ ವಿರುದ್ಧ ಹಲವಾರು ಬಾರಿ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಹಾಗಾಗಿ, ಪ್ರಧಾನಿ ಮೋದಿ ಹಾಗೂ ಸಂಸದ ಸದಾನಂದ ಗೌಡ ಅವರಿಗೆ ಇಮೇಲ್ ಹಾಗೂ ಟ್ವಿಟರ್ ಮೂಲಕ ಮನವಿ ಮಾಡಿಕೊಂಡಿದ್ದೇವೆ’ ಎಂದು ಸ್ಥಳೀಯ ನಿವಾಸಿ ನಾರಾಯಣಸ್ವಾಮಿ ಹೇಳಿದರು.

‘ಮಡಿವಾಳ ರಾಮಯ್ಯ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶ ಎತ್ತರದಲ್ಲಿದ್ದು, ನೀರು ಪೂರೈಕೆಗೆ ಸಮಸ್ಯೆಯಾಗಿದೆ. ಅಲ್ಲಿ ಕೊಳವೆ ಬಾವಿ ಕೊರೆಸಲು ಸಮಸ್ಯೆ ಇದೆ. ಕೆಂಪಯ್ಯ ಬಡಾವಣೆಯಿಂದ ನೀರು ಸರಬರಾಜು ಮಾಡಲು ಪೈಪ್‌ಲೈನ್ ಅಳವಡಿಸುವ ಕಾಮಗಾರಿ ನಡೆಯುತ್ತಿದೆ. ಆದರೆ, ಜಮೀನು ಮಾಲೀಕರು ಕಾಮಗಾರಿಗೆ ಅಡ್ಡಿಪಡಿಸುತ್ತಿರುವುದರಿಂದ ಕಾಮಗಾರಿ ಅರ್ಧಕ್ಕೆ ನಿಂತಿದೆ. ಜಮೀನು ಮಾಲೀಕರ ಮನವೊಲಿಸಿ, ನೀರಿನ ವ್ಯವಸ್ಥೆ ಕಲ್ಪಿಸಲಾಗುವುದು’ ಎಂದು ಬಿಬಿಎಂಪಿ ಹೊರಮಾವು ಎಇಇ ಚಂದ್ರಶೇಖರ್ ಹೇಳಿದರು.

ಸಂಸದ ಸದಾನಂದ ಗೌಡ ಅವರು ಶಿಬಿರಕ್ಕೆ ಚಾಲನೆ ನೀಡಿದರು. ಪಾಲಿಕೆ ಮಾಜಿ ಸದಸ್ಯ ಕೆ.ಎ.ಮುನೀಂದ್ರಕುಮಾರ್, ಕಾರ್ಮಿಕ ಇಲಾಖೆಯ ಅಧಿಕಾರಿ ಮುಕುಂದ್, ಸಮಾಜಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಜಿ.ಪಿ.ದೇವರಾಜ್, ಬ್ಲಾಸಮ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಚಂದನ್ ದಾಸ್, ಜಕ್ಕೂರು ವಾರ್ಡ್ ಬಿಜೆಪಿ ಅಧ್ಯಕ್ಷ ಸಿ.ಎನ್.ಮೂರ್ತಿ, ಮಹಿಳಾ ಮೋರ್ಚಾ ಅಧ್ಯಕ್ಷೆ ಅನಿತಾ, ಸಣ್ಣಮ್ಮ ಮೋಹನಕುಮಾರಿ ಇದ್ದರು.

ಕಟ್ಟಡ ಕಾರ್ಮಿಕರಿಗೆ ತಪಾಸಣಾ ಶಿಬಿರ

ಯಲಹಂಕ: ‘ದೇಶದ ಅಭಿವೃದ್ಧಿಯಲ್ಲಿ ಕಟ್ಟಡ ಕಾರ್ಮಿಕರ ಪಾಲು ಬಲುದೊಡ್ಡದಿದ್ದು, ತಯಾರಿಕೆಯಿಲ್ಲದೆ ಯಾವುದೇ ರಾಜ್ಯ ಅಥವಾ ದೇಶದ ಆರ್ಥಿಕ ಪ್ರಗತಿ ಯಶಸ್ವಿಯಾಗಲು ಸಾಧ್ಯವಿಲ್ಲ. ಈ ದಿಸೆಯಲ್ಲಿ ತಯಾರಿಕೆ ಮಾಡುವವರ ಆರೋಗ್ಯದ ಕಡೆಗೆ ಗಮನ ಹರಿಸಬೇಕಾದುದು ಅತಿಮುಖ್ಯ’ ಎಂದು ಸಂಸದ ಡಿ.ವಿ.ಸದಾನಂದ ಗೌಡ ಹೇಳಿದರು.

ರಾಜ್ಯ ಸಂಜೀವಿನಿ ಕಟ್ಟಡ ಕಾರ್ಮಿಕರ ಸಂಘದ ಬೆಂಗಳೂರು ಉತ್ತರ ಘಟಕ ಹಾಗೂ ಬ್ಲಾಸಮ್ ಆಸ್ಪತ್ರೆಯ ಸಹಯೋಗದಲ್ಲಿ ಬೆಂಗಳೂರು ಜಿಲ್ಲೆಯ ನೋಂದಾಯಿತ ಕಟ್ಟಡ ಕಾರ್ಮಿಕರಿಗಾಗಿ ಬಾಗಲೂರು ಮುಖ್ಯರಸ್ತೆಯ ಕಟ್ಟಿಗೇನಹಳ್ಳಿಯ ಅಂಬೇಡ್ಕರ್ ಭವನದ ಮುಂಭಾಗದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಪಾಲಿಕೆ ಮಾಜಿ ಸದಸ್ಯ ಕೆ.ಎ.ಮುನೀಂದ್ರಕುಮಾರ್ ಮಾತನಾಡಿ, ‘ಜಕ್ಕೂರು ವಾರ್ಡ್ ವ್ಯಾಪ್ತಿಯಲ್ಲಿ 1,800 ಮಂದಿ ಲೇಬರ್ ಕಾರ್ಡ್ ಹೊಂದಿರುವ ಕಟ್ಟಡ ಕಾರ್ಮಿಕರಿದ್ದು, ಎಲ್ಲರಿಗೂ ಉಚಿತವಾಗಿ ವೈದ್ಯಕೀಯ ಪರೀಕ್ಷೆ ನಡೆಸಲಾಗುವುದು. ಕಾಯಿಲೆ ಇರುವುದು ದೃಢಪಟ್ಟು, ಚಿಕಿತ್ಸೆ ಅಗತ್ಯವಿದ್ದವರಿಗೆ ಕೇಂದ್ರ ಸರ್ಕಾರ ₹5 ಲಕ್ಷ ಹಾಗೂ ರಾಜ್ಯ ಸರ್ಕಾರ ₹2 ಲಕ್ಷ ಸೇರಿದಂತೆ ಒಟ್ಟು ₹7 ಲಕ್ಷ ದವರೆಗೆ ಚಿಕಿತ್ಸಾ ವೆಚ್ಚ ಭರಿಸಲಿವೆ’ ಎಂದರು.

‘ಐಬಿಎಂ’ ಹೆಸರಿನಲ್ಲಿ ಜಾಹೀರಾತು: ನಕಲಿ ನೇಮಕಾತಿ ಪತ್ರ

ಬೆಂಗಳೂರು: ‘ಐಬಿಎಂ ಹಾಗೂ ಕಾಗ್ನಿಜೆಂಟ್ ಕಂಪನಿಯಲ್ಲಿ ಕೆಲಸ ಖಾಲಿ ಇದೆ’ ಎಂಬುದಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು ನೀಡಿ ಅಭ್ಯರ್ಥಿಗಳಿಂದ ಹಣ ಪಡೆದು ವಂಚಿಸುತ್ತಿದ್ದ ನಾಲ್ವರನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಒಡಿಶಾದ ಕಾಳಿ ಪ್ರಸಾದ್ ರಾತ್ (38), ಮಹಾರಾಷ್ಟ್ರದ ಅಭಿಜಿತ್ ಅರುಣ್ ನೆಟಕೆ (34), ಅಭಿಷೇಕ್ ಮೊಹಂತಿ (21) ಹಾಗೂ ಸಂಜೀವ್ ಗಂಗಾರಾಮ್ ಗೂರ್ಖಾ ಬಂಧಿತರು. ಲಿವೋಸೊ ಟೆಕ್ನಾಲಜೀಸ್ ಹಾಗೂ ಇತರೆ ಹೆಸರಿನಲ್ಲಿ ನಕಲಿ ಕಂಪನಿಗಳನ್ನು ಸೃಷ್ಟಿಸಿಕೊಂಡು ಆರೋಪಿಗಳು ಕೃತ್ಯ ಎಸಗುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಪುಣೆ, ಭುವನೇಶ್ವರದಲ್ಲಿ ಸೆರೆ: ‘ತಲೆಮರೆಸಿಕೊಂಡಿದ್ದ ಆರೋಪಿಗಳ ವಿಳಾಸ ಪತ್ತೆ ಮಾಡಿ ಪುಣೆ ಹಾಗೂ ಭುವನೇಶ್ವರದಲ್ಲಿ ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸಾಮಾಜಿಕ ಮಾಧ್ಯಮಗಳಲ್ಲಿ ಆರೋಪಿಗಳು ನಕಲಿ ಖಾತೆಗಳನ್ನು ತೆರೆದಿದ್ದರು. ಎಚ್‌ಎಸ್‌ಆರ್ ಲೇಔಟ್, ಮಾರತ್ತಹಳ್ಳಿ, ಪೂರ್ವ ಮತ್ತು ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲೂ ಆರೋಪಿಗಳ ವಿರುದ್ಧ ಪ್ರಕರಣಗಳು ದಾಖಲಾಗಿವೆ.

ನಿಧನ ವಾರ್ತೆ

ಆರ್‌.ಕೆ.ಬಾಲಸುಂದರ್ ಮುಸಳೆ

ಚಿತ್ರದುರ್ಗ: ರೈಲ್ವೆ ನ್ಯಾಯಮಂಡಳಿಯ ನಿವೃತ್ತ ನ್ಯಾಯಮೂರ್ತಿ ಆರ್.ಕೆ. ಬಾಲಸುಂದರ್ ಮುಸಳೆ (86) ಅವರು ಮಂಗಳವಾರ ನಿಧನರಾದರು.

ಇವರಿಗೆ ಪತ್ನಿ, ಪುತ್ರಿ ಹಾಗೂ ಇಬ್ಬರು ಪುತ್ರರಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ನಗರದ ಮುಕ್ತಿಧಾಮದಲ್ಲಿ ನೆರವೇರಿಸಲಾಗಿದೆ ಎಂದು ಕುಟುಂಬದ ಮೂಲಗಳು ಮಾಹಿತಿ ನೀಡಿವೆ. 1972ರಲ್ಲಿ ನ್ಯಾಯಾಧೀಶರಾಗಿ ಆಯ್ಕೆಯಾದ ಇವರು ಬೆಂಗಳೂರು, ಮಂಡ್ಯ, ಹಾಸನ, ಮಂಗಳೂರು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದ್ದಾರೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

(CIN): L85110KA1993PLC013869 ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106.
ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ-ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

31ನೇ ಡಿಸೆಂಬರ್ 2021ರ ಮೂರನೇ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಅವಧಿಗೆ ಕೊನೆಗೊಂಡ ಅಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್ಸ್‌ಗಳಲ್ಲಿ)

ಕ್ರ. ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ 31 ಡಿಸೆಂಬರ್ 2021 (ಅಪರಿಶೋಧಿತ)	ಒಂಬತ್ತು ತಿಂಗಳ ಅವಧಿಗೆ ಕೊನೆಗೊಂಡ 31 ಡಿಸೆಂಬರ್ 2021 (ಅಪರಿಶೋಧಿತ)	ತ್ರೈಮಾಸಿಕಕ್ಕೆ ಕೊನೆಗೊಂಡ 31 ಡಿಸೆಂಬರ್ 2020 (ಅಪರಿಶೋಧಿತ)	ವರ್ಷಕ್ಕೆ ಕೊನೆಗೊಂಡ 31 ಮಾರ್ಚ್ 2021 (ಪರಿಶೋಧಿತ)
1.	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	2,026.07	5,523.48	2,178.07	8,232.21
2.	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	41.49	(52.49)	98.88	194.29
3.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	41.49	(499.00)	98.88	194.29
4.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳ ನಂತರ)	35.16	(470.96)	78.52	120.39
5.	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	41.81	(454.33)	77.35	113.77
6.	ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ)				128.85
7.	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ				2,101.99
8.	ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ) ಕಾರ್ಯಾಚರಣೆಗಳನ್ನು ಮುಂದುವರಿಸುವದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ				
	ಎ) ಮೂಲಭೂತ:	2.72	(24.40)	5.94	13.31
	ಬಿ) ಡೈಲ್ಯೂಟೆಡ್:	2.72	(24.40)	5.93	13.30

ಸೂಚನೆ :

1. 31ನೇ ಡಿಸೆಂಬರ್ 2021ರ ಮೂರನೇ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಅವಧಿಗೆ ಕೊನೆಗೊಂಡ ಪ್ರತ್ಯೇಕವಾದ ಅಪರಿಶೋಧಿತ ಹಣಕಾಸಿನ ಫಲತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ 31 ಡಿಸೆಂಬರ್ 2021 (ಅಪರಿಶೋಧಿತ)	ಒಂಬತ್ತು ತಿಂಗಳ ಅವಧಿಗೆ ಕೊನೆಗೊಂಡ 31 ಡಿಸೆಂಬರ್ 2021 (ಅಪರಿಶೋಧಿತ)	ತ್ರೈಮಾಸಿಕಕ್ಕೆ ಕೊನೆಗೊಂಡ 31 ಡಿಸೆಂಬರ್ 2020 (ಅಪರಿಶೋಧಿತ)	ವರ್ಷಕ್ಕೆ ಕೊನೆಗೊಂಡ 31 ಮಾರ್ಚ್ 2021 (ಪರಿಶೋಧಿತ)
ನಿರ್ವಹಣೆಯಿಂದ ಬಂದ ನಿವ್ವಳ ಮಾರಾಟ / ವರಮಾನ	860.81	2,311.79	1,060.37	4,283.87
ಲಾಭ ತೆರಿಗೆಯ ಮುಂಚೆ	45.15	(35.61)	99.03	331.25
ಲಾಭ ತೆರಿಗೆಯ ನಂತರ	32.04	(26.29)	73.26	239.79

2. ಈ ಮೇಲಿನ ಅಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಹಣಕಾಸಿನ ಫಲತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 13ನೇ ಫೆಬ್ರುವರಿ, 2022 ರಂದು ನಡೆದ ಸಭೆಯಲ್ಲಿ ಪರಿಶೀಲಿಸಿದ್ದು ಹಾಗೂ ನಿರ್ದೇಶಕ ಮಂಡಳಿಯು 14ನೇ ಫೆಬ್ರುವರಿ, 2022 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಈ ಮೇಲಿನವು ತ್ರೈಮಾಸಿಕಕ್ಕೆ ಕೊನೆಗೊಂಡ ಅಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಸಮಗ್ರ ಹಣಕಾಸಿನ ಫಲತಾಂಶಗಳ ಸಂಕ್ಷಿಪ್ತ ರೂಪವಾಗಿದ್ದು, 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾಗಿದೆ. ತ್ರೈಮಾಸಿಕಕ್ಕೆ ಕೊನೆಗೊಂಡ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಸಮಗ್ರ ಹಣಕಾಸಿನ ಫಲತಾಂಶಗಳು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ಅಪ್ಪಾರಾವ್ ವಿ ಮಲ್ಲವರಪು
ಅಧ್ಯಕ್ಷರು ಮತ್ತು ನಿರ್ವಾಹಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ: ಫೆಬ್ರುವರಿ 14, 2022

ಚುನಾವಣೆ ಮೇಲೆ ಕಣ್ಣಿಟ್ಟೇ ಪಾದಯಾತ್ರೆ: ಬಿಜೆಪಿ ಶಾಸಕ ಪಿ. ರಾಜೀವ್ ವಾಗ್ದಾಳಿ

‘ಮೇಕೆದಾಟು: ಕಾಂಗ್ರೆಸ್ ಸಾಧನೆ ಶೂನ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೇಕೆದಾಟು ಅಣೆಕಟ್ಟೆ ಯೋಜನೆ ವಿಚಾರದಲ್ಲಿ ಕಾಂಗ್ರೆಸ್ ಸಾಧನೆ ಶೂನ್ಯ. ಚುನಾವಣೆಯ ಮೇಲೆ ಕಣ್ಣಿಟ್ಟೇ ಪಾದಯಾತ್ರೆ ನಡೆಸಿದರು’ ಎಂದು ಬಿಜೆಪಿಯ ಪಿ.ರಾಜೀವ್ ಆರೋಪ ಮಾಡಿದರು. ಇದಕ್ಕೆ ಕಾಂಗ್ರೆಸ್ ಸದಸ್ಯರು ವಾಗ್ದಾಳಿಯ ಮೂಲಕ ತಿರುಗೇಟು ನೀಡಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಿದ ರಾಜೀವ್ ಅವರು, ‘ಇದೀಗ ಪಾದಯಾತ್ರೆ ಮಾಡಿರುವ ಕಾಂಗ್ರೆಸ್‌ಗೆ ಐದು ವರ್ಷಗಳ ಅಧಿಕಾರ ಇದ್ದಾಗ ಏನು ಮಾಡಿತ್ತು? ಅದರ ಫಲಶ್ರುತಿ ಏನು? ಆಗ ಮೇಕೆದಾಟು ಯೋಜನೆ ಆರಂಭಿಸುವ ಬಗ್ಗೆ ಇಚ್ಛಾಶಕ್ತಿ ಏಕೆ ಪ್ರದರ್ಶಿಸಲಿಲ್ಲ’ ಎಂದು ಪ್ರಶ್ನಿಸಿದರು.

ಇಂತಹದ್ದೊಂದು ಯೋಜನೆ ಆರಂಭಿಸುವಾಗ ನಾಲ್ಕು ಹಂತಗಳು

ಪಿ. ರಾಜೀವ್

ಇರುತ್ತವೆ. ಮೊದಲಿಗೆ ಡಿಪಿಆರ್, ಪರ್ಯಾಯ ಅರಣ್ಯ ಬೆಳೆಸಲು ಜಮೀನು ಗುರುತಿಸುವುದು, ಪರಿಸರ ಇಲಾಖೆ ಮತ್ತು ಕೇಂದ್ರ ಜಲಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕು. ನಾಲ್ಕು ಹಂತಗಳಲ್ಲಿ ಡಿಪಿಆರ್ ಮಾಡಿ ಕಳಿಸಿತ್ತು. ಕೇಂದ್ರ ಸರ್ಕಾರ ಕೆಲವು ಸ್ಪಷ್ಟನೆಗಳನ್ನು ಕೇಳಿತ್ತು. ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸರ್ಕಾರ ಬಂದ ಮೇಲೆ ಪೂರ್ಣ ಪ್ರಮಾಣದಲ್ಲಿ ವಿಸ್ತೃತ ಯೋಜನಾ ವರದಿ ಸಲ್ಲಿಕೆ ಆಯಿತು. ಹಾಗಿದ್ದರೆ ಕಾಂಗ್ರೆಸ್ ಸಾಧನೆ ಶೂನ್ಯವಲ್ಲವೆ ಎಂದು ಕಾಲೆಳೆದರು.

ರಾಜೀವ್ ಅವರ ಮಾತಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದ ಉಪನಾಯಕ ಯು.ಟಿ. ಖಾದರ್, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ ಡಿಪಿಆರ್ ಆಗಿತ್ತು. ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಅದರ ಪರಿಷ್ಕರಣೆ ಆಯಿತು. ಈಗ ಕೇಂದ್ರ ಸರ್ಕಾರ ಯೋಜನೆಗೆ ಅನುಮತಿ ನೀಡಬೇಕು ಎಂದರು. ಕುಣಿಗಲ್ ಕ್ಷೇತ್ರದ ಡಾ.ರಂಗನಾಥ್ ಇದಕ್ಕೆ ಧ್ವನಿಗೂಡಿಸಿ, ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇರುವಾಗ ಪರಿಸರ ಇಲಾಖೆಯ ಅನುಮತಿ ಪಡೆಯಲು ಏಕೆ ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನಿಸಿದರು.

‘ಶ್ರೀಕಿ ಪರಾರಿಯಾಗಲು ಅವಕಾಶ’: ಬಿಟ್ ಕಾಯಿನ್ ವಿಷಯ ಪ್ರಸ್ತಾಪಿಸಿದ ರಾಜೀವ್, 2017ರಲ್ಲಿದ್ದ ಸರ್ಕಾರ ಶ್ರೀಕಿ ಪರಾರಿಯಾಗಲು ಅವಕಾಶ ನೀಡಿತ್ತು ಎಂದು ದೂರಿದರು.

ಇದಕ್ಕೆ ಧ್ವನಿಗೂಡಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ‘ಬಿಟ್ ಕಾಯಿನ್ ವಿಚಾರಕ್ಕೇ ಹೊಡೆದಾಟ ಆಗಿತ್ತು ಎಂದು ನಾನೇ ಹೇಳಿದ್ದೆ. ಅಂದಿನ ಸರ್ಕಾರ ಗಂಭೀರವಾಗಿ ಪರಿಗಣಿಸಲಿಲ್ಲ’ ಎಂದರು.

ಶ್ರೀಕಿಯನ್ನು ಅಡಗಿಸಲು ಕಾರಣ ವೇನು ಎಂಬುದು ಬಯಲಿಗೆ ಬರಬೇಕು. ಕಾಂಗ್ರೆಸ್ ನಾಯಕರು ಮುಖ್ಯಮಂತ್ರಿ ಮತ್ತು ಪೊಲೀಸರ ಮುಖಕ್ಕೆ ಮಸಿ ಬಳಿಯುವ ಪ್ರಯತ್ನ ನಡೆಸಿದರು ಎಂದು ರಾಜೀವ್ ಹೇಳಿದಾಗ, ಕಾಂಗ್ರೆಸ್ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ‘ನಮ್ಮ ಸರ್ಕಾರ ಬಂದ ಮೇಲೆ ಹೈಡ್ರೋಗಾಂಜಾ ಪ್ರಕರಣದಲ್ಲಿ ಶ್ರೀಕಿಯನ್ನು ಬಂಧಿಸಲಾಯಿತು’ ಎಂದು ರಾಜೀವ್ ಹೇಳಿದರು.

ಬೆನ್ನು ತಟ್ಟದ ಬಿಎಸ್‌ವೈ: ಖಾದರ್ ಮಾತಿನ ಪ್ರಹಾರ

ರಾಜೀವ್ ಅವರ ಮಾತಿನ ವೈಖರಿಗೆ ತಲೆದೂಗಿದ ಶಾಸಕ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಬಳಿ ಕರೆದು ಬೆನ್ನು ತಟ್ಟಿ ಶ್ಲಾಘಿಸಿದರು. ರಾಜೀವ್ ಅವರು ಯಡಿಯೂರಪ್ಪ ಕಾಲು ಮುಟ್ಟಿ ನಮಸ್ಕರಿಸಿದರು.

ಮತ್ತೊಂದೆಡೆ ವಿರೋಧ ಪಕ್ಷದ ಸಾಲಿನಲ್ಲಿ ಕಾಂಗ್ರೆಸ್‌ನ ಘಟಾನುಘಟಿ ನಾಯಕರ ಅನುಪಸ್ಥಿತಿಯಲ್ಲಿ ನೂತನ ಉಪನಾಯಕ ಯು.ಟಿ.ಖಾದರ್ ಅವರು ಸರ್ಕಾರ ಮತ್ತು ಆಡಳಿತ ಪಕ್ಷದ ಸದಸ್ಯರನ್ನೂ ತಮ್ಮ ಮೊನಚು ಮಾತುಗಳಿಂದ ತಿವಿದು ತರಾಟೆ ತೆಗೆದುಕೊಂಡರು. ಇವರಿಗೆ ಕಾಂಗ್ರೆಸ್‌ನ ಯುವ ಶಾಸಕರು ಸಾಥ್ ನೀಡಿದ್ದು ವಿಶೇಷ. ವಂದನಾ ನಿರ್ಣಯದ ಮೇಲಿನ ಮೊದಲ ದಿನದ ಆರಂಭಿಕ ಚರ್ಚೆಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಯುವ ಶಾಸಕರ ವಾಕ್ಸಮರವೇ ಜೋರಾಗಿತ್ತು.

ದೀಪ, ಜಾಗಟೆ ಮೌಢ್ಯವಲ್ಲವೇ?

‘ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಪ್ರಧಾನಿ ಮೋದಿ ಜನರಿಂದ ದೀಪ ಹಚ್ಚಿಸಿದರು, ಜಾಗಟೆ ಹೊಡೆಸಿ, ಚಪ್ಪಾಳೆ ತಟ್ಟಿಸಿದರು. ಇದರಿಂದ ಕೊರೊನಾ ಹೋಯ್ತೇ’ ಎಂದು ಪ್ರಶ್ನಿಸಿದ ಕಾಂಗ್ರೆಸ್‌ನ ಪ್ರಿಯಾಂಕ ಖರ್ಗೆ, ‘ದೀಪ, ಜಾಗಟೆ ಹೊಡೆಸಿ ಮೂಢನಂಬಿಕೆ ಬಿತ್ತಿದ್ದು ಬಿಟ್ಟರೆ ಇನ್ನೇನೂ ಮಾಡಿಲ್ಲ’ ಎಂದು ವ್ಯಂಗ್ಯವಾಡಿದರು.

ಇದಕ್ಕೆ ತಿರುಗೇಟು ನೀಡಿದ ಕೊಳ್ಳೆಗಾಲ ಕ್ಷೇತ್ರದ ಸದಸ್ಯ ಎನ್.ಮಹೇಶ್, ‘ದೀಪ ಹಚ್ಚುವುದು, ಜಾಗಟೆ ಮತ್ತು ಚಪ್ಪಾಳೆ ತಟ್ಟುವುದರಿಂದ ಕೋವಿಡ್ ಹೋಗುವುದಿಲ್ಲ ಎಂಬುದು ಮೋದಿ ಅವರಿಗೂ ಗೊತ್ತು. ಆದರೆ, ಕೊರೊನಾ ವಿರುದ್ಧದ ಹೋರಾಟಕ್ಕೆ ಜನರನ್ನು ಒಗ್ಗೂಡಿಸುವುದೇ ಅವರ ಉದ್ದೇಶವಾಗಿತ್ತು. ಗುಣಕ್ಕೆ, ಒಳ್ಳೆಯ ಕೆಲಸಗಳಿಗೆ ಮತ್ಸರ ಪಡಬೇಕಾಗಿಲ್ಲ’ ಎಂದರು.

ಸುದ್ದಿ 2 ನಿಮಿಷ

ಸಿ.ಎಂ. ಜೊತೆ ಸಮಾಲೋಚಿಸಿ ಕ್ರಮ: ಸಚಿವ ನಾಗೇಶ್ ಭರವಸೆ

ಬೆಂಗಳೂರು: ಬೇರೆ ಬೇರೆ ಇಲಾಖೆಗಳಲ್ಲಿ ವಿಲೀನಗೊಂಡಿರುವ ವೃತ್ತಿ ಶಿಕ್ಷಣ ಇಲಾಖೆಯ ನೌಕರರ ಕಾಯಂ ಪೂರ್ವ ಸೇವೆಯನ್ನು ಪರಿಗಣಿಸುವ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಹಣಕಾಸು ಇಲಾಖೆ ಜೊತೆ ಸಮಾಲೋಚಿಸಿ ಕ್ರಮ ಕೈಗೊಳ್ಳುವುದಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ವಿಧಾನ ಪರಿಷತ್ತಿನಲ್ಲಿ ಮಂಗಳವಾರ ಭರವಸೆ ನೀಡಿದರು.

‘ವೃತ್ತಿ ಶಿಕ್ಷಣ ಇಲಾಖೆಯಲ್ಲಿ 10ಕ್ಕೂ ಹೆಚ್ಚು ವರ್ಷಗಳು ಸೇವೆ ಸಲ್ಲಿಸಿರುವ ಶಿಕ್ಷಕರನ್ನು ನ್ಯಾಯಾಲಯದ ಆದೇಶದ ಮೇರೆಗೆ ಕಾಯಂಗೊಳಿಸಲಾಗಿತ್ತು. ವೃತ್ತಿ ಆಧಾರಿತ ಕೋರ್ಸ್‌ಗಳಲ್ಲಿ 5 ವರ್ಷಗಳು ಸೇವೆ ಸಲ್ಲಿಸಿದ್ದ ಅರೆಕಾಲಿಕ ನೌಕರರನ್ನು 2011ರಲ್ಲಿ ವಿಶೇಷ ಕಾಯ್ದೆ ಜಾರಿಗೊಳಿಸುವ ಮೂಲಕ ಕಾಯಂಗೊಳಿಸಲಾಯಿತು. ಅವರ ಒಟ್ಟು ಸೇವಾವಧಿ, ಜ್ಯೇಷ್ಠತೆ, ರಜೆ, ಪಿಂಚಣಿಗೆ ಸಂಬಂಧಿಸಿದ ಅಂಶಗಳನ್ನು ಈ ಕಾಯ್ದೆಯಲ್ಲಿ ಪರಿಗಣಿಸಿರಲಿಲ್ಲ. ಹಾಗಾಗಿ ಅವರು ಈಗ ಪಿಂಚಣಿಯಿಂದ ವಂಚಿತರಾಗಿದ್ದಾರೆ’ ಎಂದು ಸದಸ್ಯ ಕೆ.ಟಿ. ಶ್ರೀಕಂಠೇಗೌಡ ತಿಳಿಸಿದರು.

‘ವೃತ್ತಿ ಆಧಾರಿತ ಕೋರ್ಸುಗಳ ಅರೆಕಾಲಿಕ ನೌಕರರ ಸೇವೆಯ ವಿಲೀನವು ಒಂದು ಸಲದ ಕ್ರಮದ ರೂಪದಲ್ಲಿ ಜಾರಿಯಾಗಿತ್ತು. ಈ ಸಲುವಾಗಿ ಜಾರಿಗೊಳಿಸಿದ ವಿಶೇಷ ಕಾಯ್ದೆಯನ್ನು ತಿದ್ದುಪಡಿ ಮಾಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಹಾಗಾಗಿ ಈ ನೌಕರರಿಗೆ ಪಿಂಚಣಿ ನೀಡುವ ಉದ್ದೇಶದಿಂದ ಹಿಂದಿನ ಅರ್ಹತೆಯನ್ನು ಪರಿಗಣಿಸಲು ಅವಕಾಶವಿಲ್ಲ’ ಎಂದು ಸಚಿವ ನಾಗೇಶ್ ತಿಳಿಸಿದರು.

‘ತುಮಕೂರು ರಸ್ತೆ ಮೇಲ್ಸೇತುವೆ ಸಂಚಾರಕ್ಕೆ ಸುರಕ್ಷಿತವಲ್ಲ’

ಲಘು ವಾಹನಗಳ ಸಂಚಾರಕ್ಕೆ ಒಂದು ವಾರದಲ್ಲಿ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ನೆಲಮಂಗಲ ಮೇಲ್ಸೇತುವೆ ಭಾರಿ ವಾಹನಗಳ ಸಂಚಾರಕ್ಕೆ ಸುರಕ್ಷಿತವಲ್ಲ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವರದಿ ತಿಳಿಸಿದೆ. ಆದರೆ, ಲಘು ವಾಹನಗಳ ಓಡಾಟಕ್ಕೆ ಅವಕಾಶ ನೀಡುವ ಸಂಬಂಧ ಒಂದು ವಾರದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ವಿಧಾನಸಭೆಯಲ್ಲಿ ಮಂಗಳವಾರ ಶೂನ್ಯವೇಳೆಯಲ್ಲಿ ಜೆಡಿಎಸ್ ಶಾಸಕ ಮಂಜುನಾಥ್ ಈ ವಿಷಯ ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸಿದ ಬೊಮ್ಮಾಯಿ, ‘ಈ ಮೇಲ್ಸೇತುವೆ ಕಳಪೆ ಕಾಮಗಾರಿಯಿಂದ ಕೂಡಿದ್ದು, ದೋಷದಿಂದ ಕೂಡಿರುವ ಸ್ತಂಭಗಳ ಮರು ನಿರ್ಮಾಣಕ್ಕೆ ಸಲಹೆ ನೀಡಿದೆ. ಈ ವಿಚಾರವಾಗಿ ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದಿದ್ದೇನೆ’ ಎಂದು ಹೇಳಿದರು.

ಮಂಜುನಾಥ್ ಅವರು ಮಾತನಾಡಿ, ಪೀಣ್ಯ ಎಲಿವೇಟೆಡ್ ಮೇಲ್ಸೇತುವೆಯ 102 ಮತ್ತು 103ನೇ ಸ್ತಂಭಗಳು ತಾಂತ್ರಿಕ ದೋಷದಿಂದ ಕೂಡಿವೆ ಎಂದು 56 ದಿನಗಳಿಂದ ಸಂಚಾರವನ್ನು ನಿಲ್ಲಿಸಲಾಗಿದೆ. ಇದರಿಂದ ಬೆಂಗಳೂರಿನಿಂದ ಹೊರ ಜಿಲ್ಲೆಗಳಿಗೆ ಹೋಗುವ ಮತ್ತು ಬರುವ ವಾಹನಗಳಿಗೆ ತೊಂದರೆ ಆಗಿದೆ. ದಾಸರಹಳ್ಳಿ ಮೂಲಕ ವಾಹನಗಳು ಹೋಗುತ್ತಿವೆ ಎಂದರು.

‘ಪ್ರತಿನಿತ್ಯ ಎರಡು ಕಿ.ಮೀ.ಗಳಷ್ಟು ಉದ್ದ ವಾಹನಗಳ ಸಾಲು ಇರುತ್ತದೆ. ಆಂಬುಲೆನ್ಸ್‌ಗಳು ಓಡಾಡಲು ಸಾಧ್ಯವಾಗುತ್ತಿಲ್ಲ. ಆದರೆ, ವಾಹನಗಳಿಂದ ಟೋಲ್ ಕೂಡ ಸಂಗ್ರಹಿಸಲಾಗುತ್ತಿದೆ. ಸಣ್ಣ ವಾಹನಗಳು ಮತ್ತು ಅಂಬುಲೆನ್ಸ್‌ಗಳ ಸಂಚಾರಕ್ಕೆ ಅವಕಾಶ ನೀಡಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ಧ್ವನಿಗೂಡಿಸಿದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಇದೊಂದು ಪ್ರಮುಖ ವಿಷಯವಾಗಿದ್ದು, ಸರ್ಕಾರ ಗಂಭೀರವಾಗಿ ಪರಿಗಣಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಬೆಂಗಳೂರಿನಿಂದ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಮಧ್ಯ-ಕರ್ನಾಟಕದ ಪ್ರಮುಖ ಜಿಲ್ಲೆಗಳನ್ನು ಸಂಪರ್ಕಿಸುವ ರಸ್ತೆಯ ಮೇಲ್ಸೇತುವೆ ಇದಾಗಿದೆ.

‘ಕಳಪೆ ಕಾಮಗಾರಿಯಿಂದ ಸಮಸ್ಯೆ’

ಮೇಲ್ಸೇತುವೆ ನಿರ್ಮಾಣದಲ್ಲಿ ಗುಣಮಟ್ಟವನ್ನು ಪಾಲಿಸಿಲ್ಲ. ಕಳಪೆ ಕಾಮಗಾರಿಯಿಂದ ಈ ಸಮಸ್ಯೆ ಉದ್ಭವಿಸಿದೆ. ಭಾರತೀಯ ವಿಜ್ಞಾನ ಸಂಸ್ಥೆಯಿಂದ ಮೇಲ್ಸೇತುವೆ ಮೇಲೆ ಭಾರ ಪರೀಕ್ಷೆ (ಲೋಡ್ ಟೆಸ್ಟ್) ನಡೆಸಿದಾಗ, ಈ ಸ್ತಂಭಗಳಲ್ಲಿ ಒಳಗಿನ ಕೇಬಲ್ ಬಾಗುತ್ತವೆ. ಭಾರಿ ವಾಹನಗಳ ಸಂಚಾರಕ್ಕೆ ಸುರಕ್ಷಿತವಲ್ಲ ಎಂಬ ವರದಿ ನೀಡಿದೆ. ಈ ಮಧ್ಯೆ ಸಣ್ಣ ವಾಹನಗಳ ಸಂಚಾರಕ್ಕೆ ಅವಕಾಶ ನೀಡಬೇಕು ಎಂಬ ಮನವಿಯೂ ಬಂದಿದೆ. ಈ ಬಗ್ಗೆ ಲೋಡ್ ಟೆಸ್ಟ್ ಮಾಡಿಸಿ ಒಪ್ಪಿಗೆ ಸಿಕ್ಕರೆ, ಒಂದು ವಾರದಲ್ಲಿ ತೀರ್ಮಾನ ಪ್ರಕಟಿಸುತ್ತೇವೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ ನೀಡಿದರು.

‘ಹಿಂದೆ ಆದ ಕಳಪೆ ಕಾಮಗಾರಿಗೆ ಜವಾಬ್ದಾರಿ ಯಾರು? ಈಗ ಒತ್ತಡಕ್ಕೆ ಮಣಿದು ವಾಹನ ಸಂಚಾರಕ್ಕೆ ಅವಕಾಶ ನೀಡಿದರೆ, ಆ ಬಳಿಕ ಹೆಚ್ಚು ಕಮ್ಮಿ ಆದರೆ, ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ’ ಎಂದು ಬೊಮ್ಮಾಯಿ ಹೇಳಿದರು.

ಎಪಿಎಂಸಿ ತಿದ್ದುಪಡಿ ಕಾಯ್ದೆ ವಾಪಸ್ ಪ್ರಸ್ತಾವವಿಲ್ಲ: ಸಚಿವ ಸೋಮಶೇಖರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಉತ್ಪನ್ನ ಮಾರುಕಟ್ಟೆ (ವ್ಯವಹಾರ ನಿಯಂತ್ರಣ ಮತ್ತು ಅಭಿವೃದ್ಧಿ) (ಎಪಿಎಂಸಿ) ಕಾಯ್ದೆಗೆ ತಂದಿರುವ ತಿದ್ದುಪಡಿಗಳನ್ನು ವಾಪಸ್ ಪಡೆಯುವ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.



ಸೋಮಶೇಖರ್

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಕೆ. ಹರೀಶ್ ಕುಮಾರ್ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಅವರು, ‘ಕಾಯ್ದೆ ತಿದ್ದುಪಡಿ ವಾಪಸ್ ಪಡೆಯುವ ಪ್ರಸ್ತಾವ ಸದ್ಯಕ್ಕೆ ಇಲ್ಲ. ತಿದ್ದುಪಡಿಯ ಕುರಿತು ರಾಜ್ಯದ ರೈತರ ಹಿತಾಸಕ್ತಿಗೆ ಅನುಗುಣವಾಗಿ ಪರಿಶೀಲಿಸಲಾಗುವುದು. ಅನುಕೂಲ ಮತ್ತು ಅನಾನುಕೂಲಗಳನ್ನು ಪರಿಶೀಲಿಸಿದ ಬಳಿಕ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

‘ಕಾಯ್ದೆ ತಿದ್ದುಪಡಿಯಾದ ಬಳಿಕ ಎಪಿಎಂಸಿಗಳು ನಷ್ಟದಲ್ಲಿವೆ’ ಎಂಬ ಹರೀಶ್ ಕುಮಾರ್ ಹೇಳಿಕೆಯನ್ನು ಅಲ್ಲಗಳೆದ ಸಚಿವರು, ‘ಮೊದಲು ಎಪಿಎಂಸಿ ಸೆಸ್ ದರ ಶೇಕಡ 1.5 ಇತ್ತು. ಅದನ್ನು ಶೇ 0.60ಕ್ಕೆ ಇಳಿಕೆ ಮಾಡಲಾಗಿದೆ. ಸಹಜವಾಗಿಯೇ ಆದಾಯದ ಮೊತ್ತ ₹650 ಕೋಟಿಯಿಂದ ₹ 135 ಕೋಟಿಗೆ ಇಳಿಕೆಯಾಗಿದೆ. ಆದರೆ, ಯಾವುದೇ ಎಪಿಎಂಸಿಗಳು ನಷ್ಟದಲ್ಲಿರುವ ಕುರಿತು ಮಾಹಿತಿ ಬಂದಿಲ್ಲ’ ಎಂದು ಹೇಳಿದರು.

ಈ ವಿಚಾರದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಕೆಲಕಾಲ ವಾಗ್ವಾದ ನಡೆಯಿತು. ‘ಕೃಷಿ ಸಂಬಂಧಿ ಮೂರು ಕಾಯ್ದೆಗಳನ್ನು ಕೇಂದ್ರ ವಾಪಸ್ ಪಡೆದಿದೆ. ದೇಶದ ಜನರ ಕ್ಷಮೆಯನ್ನೂ ಯಾಚಿಸಿದೆ. ರಾಜ್ಯ ಸರ್ಕಾರವೂ ತಿದ್ದುಪಡಿ ಹಿಂಪಡೆಯಬೇಕು ಅಥವಾ ಕೇಂದ್ರದ ನಿರ್ಧಾರ ತಪ್ಪು ಎಂದು ಹೇಳಲಿ’ ಎಂದು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಸವಾಲು ಹಾಕಿದರು.

60 ಲೆಕ್ಕಪರಿಶೋಧಕರಿಗೆ ನಿಷೇಧ

‘ಸಹಕಾರ ಸಂಸ್ಥೆಗಳ ಲೆಕ್ಕ ಪರಿಶೋಧನೆಯಲ್ಲಿ ಅಕ್ರಮ ಎಸಗಿ, ತಪ್ಪು ವರದಿ ನೀಡಿರುವ 60 ಲೆಕ್ಕ ಪರಿಶೋಧಕರಿಗೆ ನಿಷೇಧ ವಿಧಿಸಲಾಗಿದೆ’ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಬಿಜೆಪಿಯ ಭಾರತಿ ಶೆಟ್ಟಿ ಪ್ರಶ್ನೆಗೆ ಉತ್ತರಿಸಿದ ಅವರು, ‘ಸಹಾಕರ ಇಲಾಖೆಯಲ್ಲಿ ಲೆಕ್ಕ ಪರಿಶೋಧಕರ ಕೊರತೆ ಇದೆ. ಈ ಕಾರಣದಿಂದ ಖಾಸಗಿ ಲೆಕ್ಕ ಪರಿಶೋಧಕರ ಸೇವೆ ಪಡೆಯಲು ಅವಕಾಶ ನೀಡಲಾಗಿದೆ. 1,700 ಲೆಕ್ಕ ಪರಿಶೋಧಕರು ನೋಂದಣಿ ಮಾಡಿಸಿಕೊಂಡಿದ್ದು, ಅವರಲ್ಲಿ 60 ಮಂದಿ ಅಕ್ರಮದಲ್ಲಿ ಶಾಮೀಲಾಗಿರುವುದು ಪತ್ತೆಯಾಗಿದೆ’ ಎಂದರು.

ಲೆಕ್ಕ 402 ಲೆಕ್ಕ ಪರಿಶೋಧಕರ ನೇಮಕಾತಿಗೆ ಪ್ರಸ್ತಾವ ಸಲ್ಲಿಸಲಾಗಿದೆ. ಕೋವಿಡ್ ಕಾರಣದಿಂದ ಹಣಕಾಸು ಇಲಾಖೆ ಅನುಮತಿ ನೀಡಿರಲಿಲ್ಲ. ಶೀಘ್ರದಲ್ಲಿ ಒಪ್ಪಿಗೆ ದೊರೆಯುವ ಸಾಧ್ಯತೆ ಇದೆ ಎಂದು ಹೇಳಿದರು.

ಎತ್ತಿನಹೊಳೆ ಯೋಜನೆ: ಹಣ ಬಿಡುಗಡೆಗೆ ಆಗ್ರಹ

ಬೆಂಗಳೂರು: ಎತ್ತಿನಹೊಳೆ ಕುಡಿಯುವ ನೀರಿನ ಕಾಮಗಾರಿಯ ಗುತ್ತಿಗೆದಾರರಿಗೆ ಬಿಲ್ ಪಾವತಿಸಿ, ಕಾಮಗಾರಿ ಮುಂದುವರಿಸಲು ಅಗತ್ಯವಿರುವ ಅನುದಾನವನ್ನು ತಕ್ಷಣ ಬಿಡುಗಡೆ ಮಾಡುವಂತೆ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಮತ್ತು ಕೆ. ಹರೀಶ್ ಕುಮಾರ್ ಮಂಗಳವಾರ ವಿಧಾನ ಪರಿಷತ್‌ನಲ್ಲಿ ಆಗ್ರಹಿಸಿದರು.

ಒಂಬತ್ತು ತಿಂಗಳಿನಿಂದ ಅನುದಾನ ಬಿಡುಗಡೆಯಾಗದೇ ಕಾಮಗಾರಿಗಳು ಸ್ಥಗಿತಗೊಂಡಿರುವ ಕುರಿತು ‘ಪ್ರಜಾವಾಣಿ’ಯ ಸೋಮವಾರದ ಸಂಚಿಕೆಯಲ್ಲಿ ವರದಿ ಪ್ರಕಟವಾಗಿತ್ತು. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಈ ಕುರಿತು ಪ್ರಸ್ತಾಪಿಸಿದ ಇಬ್ಬರೂ, ‘ಕಿಂಚಿತ್ತೂ ತಡಮಾಡದೆ ಅನುದಾನ ಬಿಡುಗಡೆ ಮಾಡುವ ಮೂಲಕ ಎತ್ತಿನಹೊಳೆ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು’ ಎಂದರು.

‘ಕೋಲಾರ, ಚಿಕ್ಕಬಳ್ಳಾಪುರ ಮತ್ತಿತರ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರವಿದೆ. ಈಗ ಯೋಜನೆಗೆ ಅನುದಾನವನ್ನೇ ಒದಗಿಸದೆ ಕಾಮಗಾರಿ ನಿಂತಿದೆ. ಸರ್ಕಾರದ ಈ ಧೋರಣೆ ಸರಿಯಲ್ಲ’ ಎಂದು ವೆಂಕಟೇಶ್ ಹೇಳಿದರು.

‘ದೊಡ್ಡ ಸಾಧನೆ ಆಗಿದೆ ಎಂದು ಸರ್ಕಾರ ರಾಜ್ಯಪಾಲರ ಬಾಯಲ್ಲಿ ಹೇಳಿಸಿದೆ. ಆದರೆ, ಎತ್ತಿನಹೊಳೆ ಯೋಜನೆಗೆ ಒಂಬತ್ತು ತಿಂಗಳಿನಿಂದ ಅನುದಾನವನ್ನೇ ಕೊಟ್ಟಿಲ್ಲ. ಕೋಲಾರ, ಚಿಕ್ಕಬಳ್ಳಾಪುರದ ಜನರು ಫ್ಲೋರೈಡ್‌ಯುಕ್ತ ನೀರನ್ನೇ ಕುಡಿಯಬೇಕಾದ ಸ್ಥಿತಿ ಇದೆ. ತಕ್ಷಣವೇ ಹಣ ಒದಗಿಸುವುದರ ಜತೆಗೆ ಕಾಮಗಾರಿ ಮುಂದುವರಿಸಲು ಕ್ರಮ ಕೈಗೊಳ್ಳಬೇಕು’ ಎಂದು ಹರೀಶ್ ಕುಮಾರ್ ಒತ್ತಾಯಿಸಿದರು.

ಮಂಗಳವಾರ ವಿಧಾನ ಪರಿಷತ್ ಕಲಾಪದ ವೇಳೆ ಸದಸ್ಯರಾದ ರವಿಕುಮಾರ್, ಲಕ್ಷ್ಮಣ ಸವದಿ, ಸಚಿವರಾದ ಶಂಕರ ಪಾಟೀಲ ಮುನೇನಕೊಪ್ಪ, ಆರ್.ಅಶೋಕ, ಮುನಿರತ್ನ ಚರ್ಚೆಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ

‘ದೇವಾಲಯದಿಂದ ಶಾಲೆವರೆಗೂ ರಾಜಕೀಯ’

ಬೆಂಗಳೂರು: ರಾಜ್ಯ ಸರ್ಕಾರದ ಆಡಳಿತ ವೈಫಲ್ಯವನ್ನು ಮುಚ್ಚಿಕೊಳ್ಳಲು ದೇವಾಲಯಗಳಿಂದ ವಿದ್ಯಾಲಯದವರೆಗೂ ರಾಜಕೀಯ ನಡೆಸಲಾಗುತ್ತಿದೆ ಎಂದು ಕಾಂಗ್ರೆಸ್ ಸದಸ್ಯ ಕೆ. ಹರೀಶ್ ಕುಮಾರ್ ವಿಧಾನ ಪರಿಷತ್‌ನಲ್ಲಿ ಮಂಗಳವಾರ ವಾಗ್ದಾಳಿ ನಡೆಸಿದರು.

ಬಿಜೆಪಿಯ ಅರುಣ್ ಶಹಾಪುರ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯವನ್ನು ಮಂಡಿಸಿದರು. ಬಿಜೆಪಿಯ ಭಾರತಿ ಶೆಟ್ಟಿ ಅನುಮೋದಿಸಿದರು. ಬಳಿಕ ಚರ್ಚೆಯಲ್ಲಿ ಮಾತನಾಡಿದ ಕಾಂಗ್ರೆಸ್ ಸದಸ್ಯರು, ಸರ್ಕಾರದ ವಿರುದ್ಧ ಟೀಕಾಪ್ರಹಾರ ನಡೆಸಿದರು.

ಶಾಲೆ, ಕಾಲೇಜುಗಳಲ್ಲಿ ಹಿಂದೂ–ಮುಸ್ಲಿಂ, ಹಿಜಾಬ್– ಕೇಸರಿ ಶಾಲು ಎಂಬ ಬೆಂಕಿ ಬಿದ್ದಿದೆ. ಶಾಲೆಗಳಲ್ಲಿ ರಾಜಕೀಯ ಆರಂಭವಾಗಿದೆ. ಶಿಕ್ಷಣ ಸಂಸ್ಥೆಗಳ ಅಂಗಳದಲ್ಲಿ ಲಾಠಿಪ್ರಹಾರ ನಡೆಯುತ್ತಿದೆ. ರಾಷ್ಟ್ರಧ್ವಜ ಹಾರಬೇಕಾದ ಸ್ಥಳದಲ್ಲಿ ಕೇಸರಿ ಬಾವುಟ ಹಾರಿಸಿದ್ದಾರೆ. ಕೇಸರಿ, ಹಸಿರು ಎರಡೇ ವಿಜೃಂಭಿಸುತ್ತಿದೆ. ತ್ರಿವರ್ಣ ಧ್ವಜದಲ್ಲಿರುವ ಬಿಳಿ ಯಾರಿಗೂ ಬೇಡವಾಗಿದೆ. ಸರ್ಕಾರದ ವೈಫಲ್ಯ ಮುಚ್ಚಿಕೊಳ್ಳಲು ಇದೆಲ್ಲವೂ ನಡೆಯುತ್ತಿದೆ ಎಂದು ಹರೀಶ್ ಕುಮಾರ್ ವಾಗ್ದಾಳಿ ನಡೆಸಿದರು.

ಸುಳ್ಳಿನ ಸರಮಾಲೆ: ‘ಸರ್ಕಾರ ರಾಜ್ಯಪಾಲರ ಬಾಯಲ್ಲಿ ಸುಳ್ಳಿನ ಸರಮಾಲೆ ಹೇಳಿಸಿದೆ. ಕೋವಿಡ್ ನಿಯಂತ್ರಣದಲ್ಲಿ ಸಾಧನೆ ಆಗಿದೆ ಎಂದು ಬೆನ್ನು ತಟ್ಟಿಕೊಳ್ಳುವ ಕೆಲಸ ಆಗಿದೆ. ಹಾಗಿದ್ದರೆ, ಆಮ್ಲಜನಕದ ಕೊರತೆಯಿಂದ ಚಾಮರಾಜನಗರದಲ್ಲಿ ಅಷ್ಟೊಂದು ಜನರು ಮೃತಪಟ್ಟ ಘಟನೆಯನ್ನು ಮರೆತು ಬಿಟ್ಟಿರಾ’ ಎಂದು ಯು.ಬಿ. ವೆಂಕಟೇಶ್ ಪ್ರಶ್ನಿಸಿದರು.

ಮುಖ್ಯಮಂತ್ರಿ ಸ್ಥಾನದಲ್ಲಿ ಬಿ.ಎಸ್.ಯಡಿಯೂರಪ್ಪ ಬದಲಾಗಿ ಬಸವರಾಜ ಬೊಮ್ಮಾಯಿ ಬಂದಿದ್ದಾರೆ. ಉಳಿದದಂತೆ ಬದಲಾವಣೆಯೂ ಆಗಿಲ್ಲ. ಜನರ ಸಂಕಷ್ಟ ಹಾಗೇ ಇದೆ. ಎಲ್ಲದಕ್ಕೂ ಕೋವಿಡ್, ಹಣಕಾಸು ಇಲಾಖೆಯತ್ತ ಕೈ ತೋರಿಸುವುದು ಮುಂದುವರಿದಿದೆ ಎಂದರು.

3 ಲಕ್ಷ ಟನ್ ರಾಗಿ ಹೆಚ್ಚುವರಿ ಖರೀದಿಗೆ ಕೇಂದ್ರಕ್ಕೆ ಪತ್ರ: ಸಚಿವ ಉಮೇಶ ಕತ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ 3 ಲಕ್ಷ ಟನ್ ರಾಗಿ ಹೆಚ್ಚುವರಿ ಖರೀದಿಗೆ ಅವಕಾಶ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ’ ಎಂದು ಆಹಾರ ಸಚಿವ ಉಮೇಶ ಕತ್ತಿ ತಿಳಿಸಿದರು.

ವಿಧಾನಸಭೆಯಲ್ಲಿ ಗಮನಸೆಳೆಯುವ ಸೂಚನೆಯಡಿ ರಾಗಿ ಖರೀದಿ ಕುರಿತು ನಡೆದ ಚರ್ಚೆಗೆ ಉತ್ತರಿಸಿದ ಅವರು, ‘2.10 ಲಕ್ಷ ಟನ್ ರಾಗಿ ಖರೀದಿಗೆ ಕೇಂದ್ರ ಅನುಮತಿ ನೀಡಿತ್ತು. ಸಣ್ಣ ರೈತರಿಂದ ಪ್ರತಿ ಎಕರೆಗೆ 10 ಕ್ವಿಂಟಲ್‌ನಿಂದ ಗರಿಷ್ಠ 20 ಕ್ವಿಂಟಲ್ ರಾಗಿ ಖರೀದಿಸಬಹುದು. ಈಗಾಗಲೇ 13,329 ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಇದೇ ಮಾರ್ಚ್ 31ವರೆಗೆ ಖರೀದಿ ಪ್ರಕ್ರಿಯೆ ನಡೆಯಲಿದೆ’ ಎಂದರು.

ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಕೆ.ಎಂ. ಶಿವಲಿಂಗೇಗೌಡ, ‘ರಾಗಿ ಖರೀದಿ ಸ್ಥಗಿತಗೊಳಿಸಿರುವುದರಿಂದ ರೈತರಿಗೆ ತೊಂದರೆಯಾಗಿದೆ. ಈ ಬಾರಿ ಶೇ 80ರಷ್ಟು ರೈತರು ರಾಗಿ ಬೆಳೆದಿದ್ದಾರೆ. ಆದರೆ, ಸಣ್ಣ ರೈತರು, ದೊಡ್ಡ ರೈತರು ಎಂದು ವಿಭಜಿಸಿದ್ದೀರಿ. ಹೀಗಾದರೆ ದೊಡ್ಡ ರೈತರು ಎಲ್ಲಿ ಹೋಗಬೇಕು’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ಸಿನ ಕೃಷ್ಣ ಬೈರೇಗೌಡ, ‘ಬೆಲೆ ಕುಸಿದಾಗ ಸರ್ಕಾರ ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಸಬಹುದೆಂಬ ವಿಶ್ವಾಸದಿಂದ ಹೆಚ್ಚಿನ ರೈತರು ರಾಗಿ ಬೆಳೆಯುತ್ತಿದ್ದಾರೆ. ಕನಿಷ್ಠ ಬೆಂಬಲ ಬೆಲೆಗೆ ಸಂಬಂಧಿಸಿದ ಮಾರ್ಗಸೂಚಿಯಲ್ಲಿ ಸಣ್ಣ, ಅತಿ ಸಣ್ಣ ರೈತರು ಎಂಬ ನಿರ್ಬಂಧ ಇಲ್ಲ’ ಎಂದರು.

‘ಸರ್ಕಾರದ ಆದೇಶದ ಪ್ರಕಾರ ಐದು ಎಕರೆಗಿಂತ ಹೆಚ್ಚು ಭೂಮಿ ಇರುವ ರೈತರಿಂದ ರಾಗಿ ಖರೀದಿಸುವಂತಿಲ್ಲ. ಹೀಗಾದರೆ, ಅವರು ಎಲ್ಲಿಗೆ ಹೋಗಬೇಕು? ಪ್ರತಿ ಕ್ವಿಂಟಲ್ ರಾಗಿಯನ್ನು ಸರ್ಕಾರ ₹ 3,377 ಬೆಂಬಲ ಬೆಲೆಯಲ್ಲಿ ಖರೀದಿಸುತ್ತಿದೆ. ಆದರೆ, ರೈತರು ಅರಸೀಕೆರೆ ಮಾರುಕಟ್ಟೆಯಲ್ಲಿ ₹ 2,000ಕ್ಕೆ, ತುಮಕೂರು ಮಾರುಕಟ್ಟೆಯಲ್ಲಿ ₹ 1,600ಕ್ಕೆ ಮಾರಾಟ ಮಾಡುತ್ತಿದ್ದಾರೆ’ ಎಂದರು.

‘ಕೇಂದ್ರದ ಮಾರ್ಗಸೂಚಿ ಪ್ರಕಾರ ಒಟ್ಟು ಉತ್ಪಾದನೆಯಲ್ಲಿ ಶೇ 25ರಷ್ಟನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲು ಕೇಂದ್ರದ ಅನುಮೋದನೆ ಅಗತ್ಯವಿಲ್ಲ. ಈ ಬಾರಿ ರಾಜ್ಯದಲ್ಲಿ 14 ಲಕ್ಷ ಟನ್‌ನಲ್ಲಿ ಶೇ 25ರಷ್ಟು, ಅಂದರೆ 4 ಲಕ್ಷ ಟನ್ ಖರೀದಿಸಬಹುದು. ಅದಕ್ಕಿಂತ ಹೆಚ್ಚು ಖರೀದಿಗೆ ಕೇಂದ್ರದ ಅನುಮತಿ ಪಡೆಯಬೇಕಾಗುತ್ತದೆ. ಸರ್ಕಾರ ಎಲ್ಲ ನಿರ್ಬಂಧಗಳನ್ನು ತೆಗೆದು ಹಾಕಿ, ಎಲ್ಲ ರೈತರಿಂದ ಕನಿಷ್ಠ ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಸಬೇಕು’ ಎಂದು ಶಿವಲಿಂಗೇಗೌಡ ಆಗ್ರಹಿಸಿದರು.

ಹಿಜಾಬ್ ಪ್ರತಿಧ್ವನಿ, ನಿಲ್ಲದ ವಾಗ್ವಾದ

ಒಂದನೇ ಪುಟದಿಂದ

ಈ ಇಬ್ಬರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಕೋರಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗೆ ಪತ್ರ ಬರೆಯಲು ಶಿಕ್ಷಕರಿಗೆ ಸೂಚಿಸಲಾಗಿದೆ.

ಹಿಜಾಬ್ ವಿವಾದವು ಪೋಷಕರು–ಶಿಕ್ಷಕರ ನಡುವೆ ವಾಗ್ವಾದಕ್ಕೆ ಆಸ್ಪದವಾಗಿರುವಂತೆಯೇ ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಅವರು, ‘ಶಾಲೆ, ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶವಿಲ್ಲ’ ಎಂದು ಪುನರುಚ್ಚರಿಸಿದ್ದಾರೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಅವರು ‘ಹಿಜಾಬ್ ಕುರಿತಂತೆ ಎಲ್ಲ ರಾಜಕೀಯ ಪಕ್ಷಗಳು ಅಧಿವೇಶನದಲ್ಲಿಯೇ ನಿಲುವು ಸ್ಪಷ್ಟಪಡಿಸಲಿ’ ಎಂದು ಒತ್ತಾಯಿಸಿದ್ದಾರೆ.

ಪರೀಕ್ಷೆಗೆ ಗೈರು: ಹಿಜಾಬ್ ಧರಿಸಲು ಅವಕಾಶ ನೀಡುವುದಿಲ್ಲ ಎಂಬ ಕಾರಣಕ್ಕೆ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಕವಲಂದೆಯಲ್ಲಿ 39, ಕೆ.ಆರ್.ನಗರ ತಾಲ್ಲೂಕಿನ ಭೇರ್ಯದಲ್ಲಿ 3, ಮೈಸೂರು ತಾಲ್ಲೂಕಿನ ಕೆ.ಆರ್. ಮಿಲ್ ಸರ್ಕಾರಿ ಪ್ರೌಢಶಾಲೆಯಲ್ಲಿ ಒಬ್ಬ ವಿದ್ಯಾರ್ಥಿನಿ ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆಗೆ ಗೈರಾಗಿದ್ದರು. ಕವಲಂದೆಯಲ್ಲಿ ಸೋಮವಾರ ಹಿಜಾಬ್ ಧರಿಸಿ ಬಂದಿದ್ದ 40 ವಿದ್ಯಾರ್ಥಿನಿಯರ ಮನವೊಲಿಸಲಾಗಿತ್ತು. ಆದರೆ, ಮಂಗಳವಾರ ಒಬ್ಬ ವಿದ್ಯಾರ್ಥಿನಿಯಷ್ಟೇ ಶಾಲೆಗೆ ಹಾಜರಾಗಿದ್ದರು.

ದಾವಣಗೆರೆ ಜಿಲ್ಲೆಯ ಹರಿಹರದ ಡಿಆರ್‌ಎಂ ಪ್ರೌಢಶಾಲೆಯಲ್ಲಿ ಹಿಜಾಬ್ ತೆಗೆಯಲು ನಿರಾಕರಿಸಿ 23 ಮಕ್ಕಳು ಮನೆಗೆ ವಾಪಸಾಗಿದ್ದಾರೆ. ಅದರಲ್ಲಿ 16 ಮಕ್ಕಳು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು. ಶಿವಮೊಗ್ಗದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲೂ ಇಬ್ಬರು ವಿದ್ಯಾರ್ಥಿನಿಯರು ಹಿಜಾಬ್ ತೆಗೆಯಲು ನಿರಾಕರಿಸಿ ಪೂರ್ವಸಿದ್ಧತಾ ಪರೀಕ್ಷೆ ಬರೆಯದೇ ಹಿಂತಿರುಗಿದರು.

ಕಲಬುರಗಿ ನಗರದ ಬಹುತೇಕ ಉರ್ದು ಶಾಲೆಗಳಲ್ಲಿ ವಿದ್ಯಾರ್ಥಿನಿಯರು ಗೈರುಹಾಜರಾಗಿದ್ದರು. ಇದೇ ಜಿಲ್ಲೆಯ ಯಡ್ರಾಮಿ ತಾಲ್ಲೂಕಿನ ಇಜೇರಿ ಗ್ರಾಮದ ಮೌಲಾನಾ ಆಜಾದ್ ಶಾಲೆ, ಯಾದಗಿರಿ ಜಿಲ್ಲೆ ಗುರುಮಠಕಲ್, ಶಹಾಪುರ ತಾಲ್ಲೂಕಿನಲ್ಲಿ ಪೋಷಕರು–ಶಿಕ್ಷಕರ ನಡುವೆ ವಾಗ್ವಾದ ನಡೆದಿದೆ. ಶಹಾಪುರದಲ್ಲಿ ಬಿಇಒ ರುದ್ರಗೌಡ ಪಾಟೀಲಗೆ ಪೋಷಕರು ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಕೊಠಡಿಗೆ ಕರೆದೊಯ್ದು ಹಿಜಾಬ್ ತೆಗೆಸಿದರು: ಬೆಳಗಾವಿಯ ಸರ್ದಾರ್ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿನಿಯರನ್ನು ಪ್ರತ್ಯೇಕ ಕೊಠಡಿಗೆ ಕರೆದೊಯ್ದು, ಹಿಜಾಬ್ ತೆಗೆಸಿ ಉರ್ದು ಮಾಧ್ಯಮ ಶಾಲೆಯ ತರಗತಿ ಕೊಠಡಿಗೆ ಕಳುಹಿಸಲಾಯಿತು. ಹಿಜಾಬ್ ತೆಗೆಸುತ್ತಿದ್ದ ಕ್ರಮ ಖಂಡಿಸಿ ಸಾಮಾಜಿಕ ಹೋರಾಟಗಾರ್ತಿ ಸೀಮಾ ಇನಾಮದಾರ್, ಶಿಕ್ಷಕರ ಜೊತೆ ವಾಗ್ವಾದ ನಡೆಸಿದರು.

ಉಡುಪಿ, ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ಇದಕ್ಕೆ ಹಿಜಾಬ್ ಧರಿಸಲು ಅವಕಾಶ ನೀಡದ್ದಕ್ಕೆ ವಿದ್ಯಾರ್ಥಿನಿಯರು, ಪೋಷಕರು ಆಕ್ರೋಶ ವ್ಯಕ್ತಪಡಿಸಿದರು. ಆದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವುದೇ ಸಮಸ್ಯೆ ಎದುರಾಗಿಲ್ಲ.

ಕೊಡಗು ಜಿಲ್ಲೆಯ ನೆಲ್ಯಹುದಿಕೇರಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಹಿಜಾಬ್ ಧರಿಸಿ ಬಂದಿದ್ದ 23 ವಿದ್ಯಾರ್ಥಿನಿಯರಿಗೆ ಮಂಗಳವಾರವೂ ಶಾಲೆಗೆ ಪ್ರವೇಶ ನಿರಾಕರಿಸಲಾಯಿತು.

ಮುಂದುವರಿದ ಹಿರಿಯ ವಕೀಲರ ವಾದಸರಣಿ

ಹಿಜಾಬ್: ಸಿ.ಡಿ.ಸಿ ಕಾನೂನುಬಾಹಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಲೆ- ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ಕುರಿತಂತೆ ಸರ್ಕಾರ ಈವರೆವಿಗೂ ಯಾವುದೇ ರೀತಿಯ ಸೂಚನೆ ನೀಡಿಲ್ಲ ಅಥವಾ ಹಿಜಾಬ್ ನಿಷೇಧಿಸಿಲ್ಲ. ಸಮವಸ್ತ್ರಕ್ಕೆ ಸಂಬಂಧಿಸಿದಂತೆ ಕಾಲೇಜು ಅಭಿವೃದ್ಧಿ ಸಮಿತಿಗೆ (ಸಿಡಿಸಿ) ಯಾವುದೇ ಅಧಿಕಾರವನ್ನೂ ನೀಡಲಾಗಿಲ್ಲ. ಹಾಗಾಗಿ, ಕರ್ನಾಟಕ ಶಿಕ್ಷಣ ಕಾಯ್ದೆ -1983ರ ಅನುಸಾರ, ಸಿಡಿಸಿಯೇ ಕಾನೂನು ಬಾಹಿರ’ ಎಂದು ಹಿಜಾಬ್ ಪ್ರಕರಣದ ಅರ್ಜಿದಾರರ ಪರ ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್ ಪ್ರತಿಪಾದಿಸಿದರು.

ಹಿಜಾಬ್ ಧರಿಸಿ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದ ಕೆಲ ಶಾಲೆ-ಕಾಲೇಜುಗಳ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾಖಲಾಗಿರುವ ಎಲ್ಲ ರಿಟ್ ಅರ್ಜಿಗಳ ವಿಚಾರಣೆಯನ್ನು, ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಮತ್ತು ಖಾಜಿ ಜೈಬುನ್ನೀಸಾ ಮೊಹಿಯುದ್ದೀನ್ ಅವರಿದ್ದ ಮೂವರು ಸದಸ್ಯರ ಸಾಂವಿಧಾನಿಕ ನ್ಯಾಯಪೀಠ ಮಂಗಳವಾರ ಮುಂದುವರಿಸಿತು.

ಅರ್ಜಿದಾರ ವಿದ್ಯಾರ್ಥಿಗಳ ಪರ ಹಿರಿಯ ವಕೀಲ ದೇವದತ್ತ ಕಾಮತ್ ತಮ್ಮ ಸುದೀರ್ಘ ವಾದಸರಣಿಯನ್ನು ಪೂರ್ಣಗೊಳಿಸುತ್ತಿದ್ದಂತೆಯೇ, ಮತ್ತೊಂದು ಅರ್ಜಿಯಲ್ಲಿ ವಾದ ಮಂಡಿಸಿದ ರವಿವರ್ಮ ಕುಮಾರ್, ‘ಸಮವಸ್ತ್ರ ಕುರಿತಂತೆ ಸರ್ಕಾರ ಇನ್ನಷ್ಟೇ ನಿರ್ಧಾರ ಮಾಡಬೇಕಿದೆ. ಇದಕ್ಕಾಗಿ

ಉನ್ನತ ಮಟ್ಟದ ಸಮಿತಿಯನ್ನು ರಚಿಸಿದ್ದು, ಅದು ಪ್ರಕರಣವನ್ನು ಪರಿಶೀಲಿಸಲಿದೆ’ ಎಂದರು. ಕಲಾಪದ ಅವಧಿ ಪೂರ್ಣಗೊಂಡ ಕಾರಣ ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಲಾಯಿತು.

ಮುಂದುವರಿಸಿದ ಕಾಮತ್: ಇದಕ್ಕೂ ಮುನ್ನ ದೇವದತ್ತ ಕಾಮತ್, ‘ಕೆಲವು ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದಂತೆ ದಕ್ಷಿಣ ಆಫ್ರಿಕಾ, ಕೆನಡಾ, ಭಾರತ ಸೇರಿದಂತೆ ವಿವಿಧ ಕೋರ್ಟ್‌ಗಳ ತೀರ್ಪುಗಳನ್ನು ಉಲ್ಲೇಖಿಸಿ, ‘ಧಾರ್ಮಿಕ ಆಚರಣೆಗಳನ್ನು ಪ್ರತಿಬಂಧಿಸುವುದು ಸಲ್ಲದು. ಟರ್ಕಿ ರೀತಿಯ ನಕಾರಾತ್ಮಕ ಜಾತ್ಯತೀತ ಮನೋಭಾವ ನಮ್ಮದಲ್ಲ. ಸರ್ವಧರ್ಮ, ಸಮಭಾವದ ನಾವುಗಳು ಸಕಾರಾತ್ಮಕ ಜಾತ್ಯತೀತ ಮನೋಭಾವ ಹೊಂದಿದವರು. ತಲೆಗೆ ಸ್ಕಾರ್ಫ್ ಧರಿಸಲು ವಿನಾಯಿತಿ ನೀಡಿದರೆ, ಅದು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿಗೆ ಅನುಗುಣವಾಗಿರುತ್ತದೆ’ ಎಂದು ವಿವರಿಸಿದರು.

‘ಹಿಜಾಬ್ ಧರಿಸುವ ಆಚರಣೆ ಹಾನಿರಹಿತವಾದದ್ದು ಎಂಬುದನ್ನು ನ್ಯಾಯಪೀಠ ಮನಗಾಣಬೇಕು. ಸಂವಿಧಾನದ 25ನೇ ವಿಧಿಯ ಮೂಲತತ್ವದ ಅನುಸಾರ ಧಾರ್ಮಿಕ ನಂಬಿಕೆಗಳ ಆಚರಣೆಯನ್ನು ರಕ್ಷಿಸಬೇಕು. ಮುಸ್ಲಿಂ ವಿದ್ಯಾರ್ಥಿನಿಯರು ಶಾಲೆ–ಕಾಲೇಜುಗಳಲ್ಲಿ ಸಮವಸ್ತ್ರದ್ದೇ ಬಣ್ಣದ ಹಿಜಾಬ್ ಧರಿಸಲು ಅವಕಾಶ ಮಾಡಿಕೊಡಬೇಕು. ಈಗಾಗಲೇ ನೀಡಿರುವ ಮಧ್ಯಂತರ ಆದೇಶವು ಅವರ ಮೂಲಭೂತ ಹಕ್ಕುಗಳನ್ನು ಅಮಾನತುಗೊಳಿಸಿದೆ. ಆದ್ದರಿಂದ, ಮಧ್ಯಂತರ ಆದೇಶ ಮುಂದುವರಿಸಬೇಡಿ’ ಎಂದು ಮನವಿ ಮಾಡಿದರು.

ಅರ್ಜಿದಾರರ ಪರ ಮತ್ತೊಬ್ಬ ವಕೀಲ ಮೊಹಮದ್ ತಾಹಿರ್, ‘ಸರ್ಕಾರವು, ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶವನ್ನು ದುರುಪಯೋಗಪಡಿಸಿಕೊಂಡಿದೆ’ ಎಂದು ಆಕ್ಷೇಪಿಸಿ, ‘ರಾಜ್ಯದ ವಿವಿಧೆಡೆ ಶಾಲೆ–ಕಾಲೇಜುಗಳಲ್ಲಿ ಮುಸ್ಲಿಂ ಹುಡುಗಿಯರಿಗೆ ತಮ್ಮ ಹಿಜಾಬ್ ತೆಗೆದುಹಾಕಲು ಒತ್ತಾಯಿಸಲಾಗುತ್ತಿದೆ. ಕಲಬುರಗಿಯಲ್ಲಿ ಸರ್ಕಾರಿ ಅಧಿಕಾರಿಗಳು ಉರ್ದು ಶಾಲೆಗೆ ತೆರಳಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಹಿಜಾಬ್ ತೆಗೆಯುವಂತೆ ಒತ್ತಾಯಿಸಿದ್ದಾರೆ’ ಎಂದರು.

ಇದಕ್ಕೆ ಮುಖ್ಯ ನ್ಯಾಯಮೂರ್ತಿಗಳು, ‘ಈ ಬಗ್ಗೆ ಸೂಚನೆ ಪಡೆಯಲು ನಾವು ಪ್ರತಿವಾದಿಗಳಿಗೆ ಹೇಳುತ್ತೇವೆ’ ಎಂದು ಪ್ರತಿಕ್ರಿಯಿಸಿದರಲ್ಲದೇ, ‘ಹಿಜಾಬ್ ಧರಿಸುವ ಹುಡುಗಿಯರು ಮತ್ತು ಶಿಕ್ಷಕರನ್ನು ತಡೆಯುವ ಮೂಲಕ ಅಧಿಕಾರಿಗಳು ಹೈಕೋರ್ಟ್ ಆದೇಶವನ್ನು ದುರುಪಯೋಗಪಡಿಸಿಕೊಂಡಿದ್ದಾರೆ’ ಎಂದು ಆರೋಪಿಸಲಾದ ಈ ಪ್ರತ್ಯೇಕ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ನಿರಾಕರಿಸಿದರು.

‘ಹಿಜಾಬ್: ದಾರುಲ್ ಉಲೂಮ್ ಹೊಣೆ’

ನವದೆಹಲಿ: ಹಿಜಾಬ್ ಧರಿಸುವಂತೆ ಮುಸ್ಲಿಂ ಯುವತಿಯರ ಮೇಲೆ ಒತ್ತಡ ಹೇರುತ್ತಿರುವುದಕ್ಕೆ ದೇವಬಂದ್‌ನ ದಾರುಲ್ ಉಲೂಮ್ ಹೊಣೆ ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ (ಎನ್‌ಸಿಪಿಸಿಆರ್) ಅಧ್ಯಕ್ಷ ಪ್ರಿಯಾಂಕ್ ಕನುಂಗೊ ಹೇಳಿದ್ದಾರೆ.

‘ದಾರುಲ್ ಉಲೂಮ್‌ನ ವೆಬ್‌ಸೈಟ್‌ನಲ್ಲಿ ಕೆಲ ‘ಫತ್ವಾ’ಗಳನ್ನು ಪ್ರಕಟಿಸಲಾಗಿದೆ. ಕೆಲ ಫತ್ವಾಗಳಲ್ಲಿನ ವಿಷಯಗಳಿಂದ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಹೀಗಾಗಿ, ನೋಟಿಸ್ ಜಾರಿ ಮಾಡಲಾಗಿದೆ’ ಎಂದು ಕನುಂಗೊ ಹೇಳಿದ್ದಾರೆ.

‘ಜನವರಿ 15ರಂದು ನೋಟಿಸ್ ಕಳಿಸಲಾಗಿದೆ. ಈ ವಾರ ಉತ್ತರ ಕೈಸೇರುವ ನಿರೀಕ್ಷೆ ಇದೆ’ ಎಂದು ಹೇಳಿದ್ದಾರೆ.

‘ಹಿಜಾಬ್ ಧರಿಸಲು ಅನುಮತಿ ನೀಡದ ಶಾಲೆಗಳಿಗೆ ಮುಸ್ಲಿಂ ಬಾಲಕಿಯರನ್ನು ಕಳಿಸುವುದನ್ನು ನಿಲ್ಲಿಸಬೇಕು ಎಂದು ಒಂದು ಫತ್ವಾದಲ್ಲಿ ಹೇಳಲಾಗಿದೆ. ಬೋಧನೆ ಮಾಡುವ ವ್ಯಕ್ತಿ ಪುರುಷರಿದ್ದರೆ, ನಿರ್ದಿಷ್ಟ ವಯಸ್ಸು ದಾಟಿರುವ ಬಾಲಕಿಯರನ್ನು ಆ ಶಾಲೆಗೆ ಕಳಿಸಬಾರದು ಎಂಬುದಾಗಿ ಮತ್ತೊಂದು ಫತ್ವಾ ಹೇಳುತ್ತದೆ. ಹಿಜಾಬ್ ಹಿನ್ನೆಲೆಯಲ್ಲಿ ಪ್ರತಿಭಟನೆಗಳನ್ನು ದೇವಬಂದ್‌ನ ದಾರುಲ್ ಉಲೂಮ್ ಆಯೋಜಿಸುತ್ತಿರುವುದರಲ್ಲಿ ಯಾವುದೇ ಸಂಶಯ ಇಲ್ಲ’ ಎಂದು ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ದಾರುಲ್ ಉಲೂಮ್ ವಕ್ತಾರ ಅಶ್ರಫ್ ಉಸ್ಮಾನಿ ಅವರು ಈ ಆರೋಪಗಳನ್ನು ತಳ್ಳಿ ಹಾಕಿದ್ದಾರೆ. ಸಂಘಟನೆ ವಿರುದ್ಧ ನಡೆಸುತ್ತಿರುವ ಸಂಘಟಿತ ದಾಳಿಯ ಭಾಗವಾಗಿ ಇಂತಹ ಆರೋಪಗಳನ್ನು ಮಾಡಲಾಗುತ್ತದೆ ಎಂದಿದ್ದಾರೆ.

ಗೊಂದಲ ತಿಳಿಗೊಳಿಸಲು ಆಗ್ರಹ

ಬೆಂಗಳೂರು: ‘ಹಿಜಾಬ್ ಧರಿಸಿ ಬಂದಿದ್ದ ಕಾರಣಕ್ಕೆ ಪರೀಕ್ಷೆ ಬರೆಯಲು ಬಿಡುತ್ತಿಲ್ಲ. ಸಾಕಷ್ಟು ಕಡೆಗಳಲ್ಲಿ ಶಿಕ್ಷಕಿಯರಿಗೂ ಹಿಜಾಬ್ ತೆಗೆದು ಬರುವಂತೆ ಒತ್ತಾಯಿಸಲಾಗುತ್ತಿದೆ. ಇದರಿಂದ ಗೊಂದಲ ಮುಂದುವರಿದಿದೆ’ ಎಂದು ವಿರೋಧಪಕ್ಷದ ಉಪನಾಯಕ ಯು.ಟಿ.ಖಾದರ್ ಆಕ್ರೋಶ ವ್ಯಕ್ತಪಡಿಸಿದರು.

ಯು.ಟಿ.ಖಾದರ್

ವಿಧಾನಸಭೆಯಲ್ಲಿ ಮಂಗಳವಾರ ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ಹಿಜಾಬ್ ವಿಷಯವಾಗಿ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದ ಬಳಿಕವೂ ಶಾಲೆಗಳಲ್ಲಿ ಗೊಂದಲ ಮುಂದುವರಿದಿದೆ. ತಕ್ಷಣವೇ ಸರಿಪಡಿಸಬೇಕು. ಇಲ್ಲವಾದಲ್ಲಿ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಾರೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, ‘ಯಾವುದೇ ಗೊಂದಲವಿಲ್ಲ. ಹೈಕೋರ್ಟ್‌ನ ಮಧ್ಯಂತರ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತೇವೆ’ ಎಂದು ತಿಳಿಸಿದರು.

ಹೆಚ್ಚಿನ ಅನುದಾನ: ಮುಸ್ಲಿಂ ಶಾಸಕರ ಬೇಡಿಕೆ

ಬೆಂಗಳೂರು: ಈ ಬಾರಿಯ ಬಜೆಟ್‌ನಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಬೇಕು. ವಿದ್ಯಾರ್ಥಿ ವೇತನಕ್ಕೆ ಅನುದಾನ ಹೆಚ್ಚಿಸಬೇಕು ಎಂದು ಕಾಂಗ್ರೆಸ್ ಪಕ್ಷದಲ್ಲಿನ ಮುಸ್ಲಿಂ ಸಮುದಾಯದ ಶಾಸಕರು ಮುಖ್ಯಮಂತ್ರಿಯವರಿಗೆ ಕೋರಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಬಳಿಕ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಅವರು, ಅಲ್ಪಸಂಖ್ಯಾತರ ಶಿಕ್ಷಣ ಮತ್ತು ಇತರ ಕ್ಷೇತ್ರಗಳಲ್ಲಿನ ಅಭಿವೃದ್ಧಿಗೆ ಹೆಚ್ಚು ಅನುದಾನ ಕೋರಿದ್ದೇವೆ’ ಎಂದರು.

‘ಹಿಜಾಬ್ ವಿಚಾರದಲ್ಲಿ ಹೈಕೋರ್ಟ್ ಸಂವಿಧಾನ ಬದ್ಧವಾಗಿ ತೀರ್ಪು ನೀಡುವ ವಿಶ್ವಾಸವಿದೆ. ತೀರ್ಪಿಗೆ ನಾವು ಬದ್ಧರಿದ್ದೇವೆ. ಆದರೆ, ಸರ್ಕಾರ ಹಿಜಾಬ್ ಮತ್ತು ಕೇಸರಿ ಶಾಲು ವಿವಾದವನ್ನು ಸರಿಯಾಗಿ ನಿರ್ವಹಿಸಿಲ್ಲ. ಇದರಿಂದ ಸಮಸ್ಯೆಯಾಗಿದೆ’ ಎಂದು ಹೇಳಿದರು.

‘ಹಿಜಾಬ್ ಪ್ರಕರಣದಲ್ಲಿ ಹಲವು ಸಂಘಟನೆಗಳ ಕಾಣದ ಕೈಗಳಿವೆ. ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮುಖ್ಯಮಂತ್ರಿಯವರಿಗೆ ನೀಡಿದ್ದೇವೆ. ಕೆಲವು ಶಾಲೆ–ಕಾಲೇಜುಗಳ ಮಕ್ಕಳ ವಿಚಾರದಲ್ಲಿ ಸರ್ಕಾರ ನಡೆದುಕೊಂಡ ರೀತಿ ಸರಿ ಇಲ್ಲ’ ಎಂದು ಸಲೀಂ ಹೇಳಿದರು.

ನಿಯೋಗದಲ್ಲಿ ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್ ಶಾಸಕರಾದ ತನ್ವೀರ್ ಸೇಠ್, ಜಮೀರ್ ಅಹಮದ್ ಖಾನ್, ಎನ್.ಎ.ಹ್ಯಾರಿಸ್, ಖನೀಜ್ ಫಾತೀಮಾ, ರಿಜ್ವಾನ್ ಅರ್ಷದ್, ನಜೀರ್ ಅಹ್ಮದ್ ಇದ್ದರು.

ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಚನ್ನಿ ಆಯ್ಕೆಗೆ ಅತೃಪ್ತಿ

ಸಿಗದ ಮನ್ನಣೆ: ಸಿಧು ಪ್ರಚಾರದಿಂದ ದೂರ

• ಗೌತಮ್ ಧೀರ್

ಅಮೃತಸರ: ಪಂಜಾಬ್ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರು ತಾವು ಸ್ಪರ್ಧಿಸಿರುವ ಅಮೃತಸರ ಪೂರ್ವ ಕ್ಷೇತ್ರದ ಹೊರಗೆ ಪ್ರಚಾರಕ್ಕೆ ಹೋಗಿದ್ದು ಬಹಳ ಕಡಿಮೆ. ಸಿಧು ಅವರ ಈ ನಡವಳಿಕೆ ಪಕ್ಷದಲ್ಲಿ ಅತೃಪ್ತಿಗೆ ಕಾರಣವಾಗಿದೆ.

ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಕಾಂಗ್ರೆಸ್ ಪಕ್ಷ ಘೋಷಿಸಿದೆ. ಇದು ಸಿಧು ಅವರ ಅಸಮಾಧಾನಕ್ಕೆ ಕಾರಣವಾಗಿದೆ. ಹಾಗಾಗಿಯೇ, ಪ್ರಚಾರ ಬಿರುಸುಗೊಂಡಿದ್ದರೂ ಸಿಧು ಅವರು ತಣ್ಣಗೆ ಉಳಿದಿದ್ದಾರೆ ಎನ್ನಲಾಗಿದೆ. ಇದೇ 20ರಂದು ಪಂಜಾಬ್ ವಿಧಾನಸಭೆಗೆ ಮತದಾನ ನಡೆಯಲಿದೆ.

ಸಿಧು ಅವರ ಹೆಂಡತಿ ನವಜೋತ್ ಕೌರ್ ಮತ್ತು ಮಗಳು ಸಬಿಯಾ ಅವರು ಚನ್ನಿ ಅವರನ್ನು ಟೀಕಿಸಲು ಹಿಂದೆ

ಚನ್ನಿ

ಸಿಧು

ಮುಂದೆ ನೋಡುತ್ತಿಲ್ಲ. ಚನ್ನಿ ಅವರು ತಮ್ಮನ್ನು 'ಸಾಮಾನ್ಯ ಮನುಷ್ಯ' ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಇದನ್ನು ಕೌರ್ ಮತ್ತು ಸಬಿಯಾ ಪ್ರಶ್ನಿಸುತ್ತಿದ್ದಾರೆ. ತಾಯಿ–ಮಗಳಿಬ್ಬರೂ ಸಿಧು ಕ್ಷೇತ್ರದಲ್ಲಿ ಮನೆ ಮನೆ ಪ್ರಚಾರ ನಡೆಸುತ್ತಿದ್ದಾರೆ. 'ಚನ್ನಿ ಅವರು ಸಾಮಾನ್ಯ ವ್ಯಕ್ತಿ ಏನೂ ಅಲ್ಲ. ಅವರ ಸಂಪತ್ತಿನ ಮೌಲ್ಯ ದೊಡ್ಡ ಮೊತ್ತವೇ ಆಗಿದೆ' ಎಂದು ಪ್ರಚಾರದ ವೇಳೆಯಲ್ಲಿ ಹೇಳುತ್ತಿದ್ದಾರೆ. ಚನ್ನಿ ಅವರು ಸಾಮಾನ್ಯ ವ್ಯಕ್ತಿ ಎಂದು ರಾಹುಲ್ ಅವರನ್ನು ತಪ್ಪುದಾರಿಗೆ ಎಳೆಯಲಾಗಿದೆ ಎಂದೂ ಕೌರ್ ಆಪಾದಿಸಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸಂಗ್ರೂರ್ ಕ್ಷೇತ್ರದ ಧುರಿ ಎಂಬಲ್ಲಿ ಭಾನುವಾರ ಚುನಾವಣಾ ಪ್ರಚಾರ ಸಭೆ ನಡೆಸಿದ್ದರು. ಕಾರ್ಯಕ್ರಮದಲ್ಲಿ ಸಿಧು ಅವರು ಹಾಜರಿದ್ದರು. ಆದರೆ, ಸಿಧು ಅವರು ವೇದಿಕೆ ಏರಲು ನಿರಾಕರಿಸಿದ್ದರು. ರಾಜ್ಯದ ಜನರು ಚನ್ನಿ ಅವರ ಮಾತು ಕೇಳಬೇಕಿದೆ. ಏಕೆಂದರೆ ಅವರು ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಎಂಬ ಅರ್ಥ ಬರುವ ರೀತಿಯಲ್ಲಿ ಸಿಧು ಅವರು ಚನ್ನಿ ಅವರತ್ತ ಕೈತೋರಿದ್ದರು.

ಚನ್ನಿ ಅವರು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಣೆಯಾದ ಬಳಿಕ ತಮ್ಮ ಕ್ಷೇತ್ರದ ಹೊರಗೆ ಹೆಚ್ಚಿನ ರ‍್ಯಾಲಿಯಲ್ಲಿ ಸಿಧು ಭಾಗವಹಿಸಿಲ್ಲ. ಆದರೆ, ಕಾಂಗ್ರೆಸ್ ಮುಖಂಡರಾದ ರಾಹುಲ್ ಮತ್ತು ಪ್ರಿಯಾಂಕಾ ಅವರು ಭಾಗವಹಿಸಿದ ಸಮಾರಂಭಗಳಿಗೆ ಹಾಜರಾಗಿದ್ದಾರೆ. ಎಲ್ಲಿ ಪ್ರಚಾರ ಮಾಡಬೇಕು ಎಂದು ಹೈಕಮಾಂಡ್ ಹೇಳುತ್ತದೆಯೋ ಅಲ್ಲೆಲ್ಲ ಪ್ರಚಾರ ಮಾಡುವುದಾಗಿ ಸಿಧು ಹೇಳಿಕೊಳ್ಳುತ್ತಿದ್ದಾರೆ.

ಹೊಣೆಯಿಂದ ನುಣುಚುವ ಯತ್ನ

ಪಂಜಾಬ್ ಚುನಾವಣಾ ಕಣವು ದಿನ ಕಳೆದಂತೆ ಸಂಕೀರ್ಣಗೊಳ್ಳುತ್ತಿದೆ. ಸಾಂಪ್ರದಾಯಿಕವಾದ ನೇರ ಹಣಾಹಣಿ ನಿಧಾನಕ್ಕೆ ಮರೆಯಾಗುತ್ತಿದೆ. ಬಹುಕೋನ ಸ್ಪರ್ಧೆ ಕಾಣಿಸುತ್ತಿದೆ. ಐದು ಪ್ರಮುಖ ಪಕ್ಷಗಳು ಗೆಲುವಿಗೆ ತೀವ್ರವಾಗಿ ಶ್ರಮಿಸುತ್ತಿವೆ. 'ಸಿಧು ಅವರು ಈ ಹಿಂದಿನಂತೆ ಬಿರುಸಿನಿಂದ ಪ್ರಚಾರ ಮಾಡುತ್ತಿಲ್ಲ. ಚುನಾವಣೆಯಲ್ಲಿ ಪಕ್ಷವು ಗೆಲ್ಲದಿದ್ದರೆ ಅದರ ಹೊಣೆಯನ್ನು ತಾವು ಹೊರಬೇಕಾಗಬಹುದು ಎಂಬುದು ಇದಕ್ಕೆ ಒಂದು ಕಾರಣ' ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್ ಪಕ್ಷವು ಪಂಜಾಬ್‌ನಲ್ಲಿ ಗೆಲ್ಲಬೇಕಿದ್ದರೆ ಸಿಧು ಅವರ ಕೊಡುಗೆ ಕಾಂಗ್ರೆಸ್‌ಗೆ ಬೇಕೇಬೇಕು. ಆದರೆ, ಗೆಲ್ಲುವಲ್ಲಿ ಪಕ್ಷವು ವಿಫಲವಾದರೆ, ಅದರ ಹೊಣೆಯನ್ನು ಚನ್ನಿ ಅವರ ತಲೆಗೆ ಕಟ್ಟಬಹುದು ಎಂಬ ಲೆಕ್ಕಾಚಾರವೂ ಸಿಧು ಅವರಲ್ಲಿ ಇದೆ.

ಚನ್ನಿ ಅವರಿಗೂ ಕಳೆದುಕೊಳ್ಳುವುದಕ್ಕೆ ಹೆಚ್ಚೇನೂ ಇಲ್ಲ. ಏಕೆಂದರೆ ಮುಖ್ಯಮಂತ್ರಿ ಹುದ್ದೆಗೆ ಅವರು ಏರಿದ್ದೇ ಆಕಸ್ಮಿಕ. ದಲಿತ ಹಿನ್ನೆಲೆಯು ಅವರಿಗೆ ಮುಖ್ಯಮಂತ್ರಿ ಸ್ಥಾನ ಸಿಗಲು ಕಾರಣವಾಗಿತ್ತು. ಜತೆಗೆ, ಅವರು ಅಧಿಕಾರದಲ್ಲಿ ಇದ್ದ ಅವಧಿಯು ಕೆಲವೇ ತಿಂಗಳು ಮಾತ್ರ. ತಮ್ಮ ಸರ್ಕಾರದ ಸಾಧನೆ ನೋಡಿ ಮತ ಕೊಡಿ ಎಂದು ಚನ್ನಿ ಅವರು ಕೇಳುವುದು ಸಾಧ್ಯವಿಲ್ಲ. ಹಾಗಾಗಿ, ಪಕ್ಷ ಸೋತರೆ ಅದರ ಹೊಣೆಯಿಂದ ಚನ್ನಿ ಅವರು ತಪ್ಪಿಸಿಕೊಳ್ಳಬಹುದು ಎಂದು ವಿಶ್ಲೇಷಕರು ಹೇಳುತ್ತಾರೆ.

ರೋಡ್ ಶೋ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉತ್ತರ ಪ್ರದೇಶದ ಕಾನ್ಪುರ ಸಮೀಪ ಮಂಗಳವಾರ ರೋಡ್ ಶೋ ನಡೆಸಿ ಜನರತ್ತ ಗೆಲುವಿನ ಚಿಹ್ನೆ ತೋರಿದರು– ಪಿಟಿಐ ಚಿತ್ರ

ಪ್ರಧಾನಿ ಮೋದಿ, ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ವಿರುದ್ಧ ರಾಹುಲ್ ವಾಗ್ದಾಳಿ

'ವ್ಯಕ್ತಿಗಳ ಹಿಂದಿನ ಗುಪ್ತಶಕ್ತಿ ಅರಿತು ಮತಹಾಕಿ'

ಚಂಡೀಗಡ (ಪಿಟಿಐ): 'ರಾಜಕೀಯ ಮುಖಂಡರ ಮುಖ ನೋಡಿ ಮತ ಹಾಕಬೇಡಿ. ಅವರ ಹಿಂದಿರುವ ಗುಪ್ತ ಶಕ್ತಿಗಳು ಮಾಡುತ್ತಿರುವ ಕೆಲಸಗಳನ್ನು ಅರ್ಥೈಸಿಕೊಂಡು ಮತಹಾಕಿ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪಂಜಾಬ್ ಮತದಾರರಿಗೆ ಕರೆ ನೀಡಿದ್ದಾರೆ. ಈ ಮೂಲಕ, ಪ್ರಧಾನಿ ನರೇಂದ್ರ ಮೋದಿ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಟೀಕಿಸಿದ್ದಾರೆ.

'ಮೋದಿ ಅವರು ಒಬ್ಬ ವ್ಯಕ್ತಿಯಲ್ಲ. ಅವರ ಹಿಂದೆ ಗುಪ್ತವಾಗಿ ಕೆಲಸ ಮಾಡುವ ಹಲವು ಶಕ್ತಿಗಳಿವೆ. ಮೋದಿ ಅವರ ಹಿಂದಿರುವ ಶಕ್ತಿ ಯಾರೆಂದು ಗೊತ್ತೇ? ದೇಶದ ಮೂರು–ನಾಲ್ಕು ಶ್ರೀಮಂತರು ರೈತರನ್ನು ಕಬಳಿಸಲು ಯತ್ನಿಸುತ್ತಿದ್ದಾರೆ. ರೈತರ ಬಳಿಯಿರುವ ಸಾಕಷ್ಟು ಹಣ, ಜಮೀನು, ಸರ್ಕಾರದ



ಪಂಜಾಬ್‌ನ ರಾಜ್‌ಪುರದಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಚುನಾವಣಾ ರ‍್ಯಾಲಿ ವೇಳೆ ರಾಹುಲ್ ಗಾಂಧಿ ಅವರನ್ನು ಕಾರ್ಯಕರ್ತರು ಸನ್ಮಾನಿಸಿದರು–ಪಿಟಿಐ ಚಿತ್ರ

ಗೋದಾಮುಗಳು ತಮಗೆ ಬೇಕು ಎಂದು ಉದ್ಯಮಿಗಳು ಬೇಡಿಕೆಯಿಟ್ಟಿದ್ದಾರೆ' ಎಂದು ರಾಹುಲ್ ಆಪಾದಿಸಿದ್ದಾರೆ.

'ಮೋದಿ ಅವರ ಹಿಂದೆ ಬಡವರ ಶಕ್ತಿ ಇದೆಯೇ? ಇಲ್ಲ. ಜನರು ಸಂಕಷ್ಟದಲ್ಲಿದ್ದಾರೆ. ರೈತರ ಜೀವನವನ್ನು ಸಂಕಷ್ಟಕ್ಕೆ ತಳ್ಳುವ ಮೂರು ಕೃಷಿ ಕಾಯ್ದೆಗಳನ್ನು ಮೋದಿ ರೂಪಿಸಿದ್ದರು. ಒಂದು ವರ್ಷ ಪ್ರತಿಭಟನೆ ನಡೆಸಿದ ರೈತರ ಬೆಂಬಲ ಅವರಿಗೆ ಇರಲಿಲ್ಲ. ಇದ್ದಿದ್ದರೆ 700 ರೈತರು ಸಾಯಬೇಕಾದ ಪರಿಸ್ಥಿತಿ ಬರುತ್ತಿರಲಿಲ್ಲ' ಎಂದು ರಾಹುಲ್ ಹೇಳಿದ್ದಾರೆ.

ಆಮ್ ಆದ್ಮಿ ಪಕ್ಷವನ್ನು ತರಾಟೆಗೆ ತೆಗೆದುಕೊಂಡಿರುವ ಅವರು, ಒಂದು ಬಾರಿ ಅವಕಾಶ ನೀಡಿ ಎಂದು ಕೇಳಿಕೊಳ್ಳುತ್ತಿರುವವರು ಪಂಜಾಬ್ ಅನ್ನು ನಾಶಮಾಡಲಿದ್ದಾರೆ ಎಂದು ಆರೋಪಿಸಿದರು. 'ಒಮ್ಮೆ ಅಧಿಕಾರ ನೀಡಿ ಎಂದು ಹಂಬಲಿಸುವವರಿಂದ ರಾಜ್ಯ ಸುಟ್ಟು ಹೋಗಲಿದೆ. ನನ್ನ ಮಾತುಗಳನ್ನು ನೆನಪಿನಲ್ಲಿಟ್ಟುಕೊಳ್ಳಿ' ಎಂದು ಅವರು ಹೇಳಿದ್ದಾರೆ.

> **ಪೆಟ್ರೋಲ್, ಡೀಸೆಲ್ ಬೆಲೆಗಳು ಏರಿಕೆಯಾಗುತ್ತಿದ್ದು, ಇದರ ಲಾಭ ಯಾರಿಗೆ ಸಿಗುತ್ತಿದೆ? ನೋಟು ರದ್ದತಿ, ಜಿಎಸ್‌ಟಿ, ಕೃಷಿ ಕಾಯ್ದೆ ಜಾರಿಗೆ ತಂದ ಶಕ್ತಿಗಳೇ ಇದರ ಹಿಂದೆ ಕೆಲಸ ಮಾಡುತ್ತಿವೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಎಸ್‌ಎಡಿ ನಾಯಕ ಬಿಕ್ರಮ್ ಸಿಂಗ್ ಮಜಿಥಿಯಾ ಅವರಿಗೆ ಕೇಜ್ರಿವಾಲ್ ಅವರು ಈ ಹಿಂದೆ ಕ್ಷಮೆಯಾಚಿಸಿದ್ದನ್ನು ಉಲ್ಲೇಖಿಸಿದ ರಾಹುಲ್, 'ನನ್ನ ಮೇಲೆ ಮಾನನಷ್ಟ ಮೊಕದ್ದಮೆಗಳು ಸೇರಿದಂತೆ 20 ಪ್ರಕರಣಗಳಿವೆ. ಆದರೆ ನಾನು ಯಾರ ಮುಂದೆ ಕ್ಷಮೆ ಯಾಚಿಸಿದ್ದೇನೆ ಹೇಳಿ' ಎಂದರು.

ಬಿಜೆಪಿ ಜೊತೆ ಸಂಪರ್ಕದಲ್ಲಿ ಇದ್ದಿದ್ದರಿಂದ ಕ್ಯಾ. ಅಮರಿಂದರ್ ಸಿಂಗ್ ಅವರನ್ನು ಪಂಜಾಬ್ ಮುಖ್ಯಮಂತ್ರಿ ಹುದ್ದೆಯಿಂದ ತೆಗೆಯಲಾಯಿತು ಎಂದು ತಮ್ಮ ಪಕ್ಷದ ನಿರ್ಧಾರದವನ್ನು ರಾಹುಲ್ ಸಮರ್ಥಿಸಿಕೊಂಡರು. ಇದೇ 20ರಂದು ನಡೆಯಲಿರುವ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಯಾವುದೇ ಪ್ರಯೋಗಕ್ಕೆ ಮುಂದಾಗದಂತೆ ಜನರಿಗೆ ಕರೆ ನೀಡಿರುವ ಅವರು, 'ಪಂಜಾಬ್‌ನಲ್ಲಿ ಶಾಂತಿಯ ವಾತಾವರಣ ಮುಖ್ಯ. ಈ ರಾಜ್ಯವು ಪ್ರಯೋಗಗಳನ್ನು ನಡೆಸಲು ಪ್ರಯೋಗಾಲಯವಲ್ಲ. ಗಡಿ ರಾಜ್ಯದಲ್ಲಿ ಕಾಂಗ್ರೆಸ್‌ನಿಂದ ಮಾತ್ರ ಶಾಂತಿ ಕಾಪಾಡಿಕೊಳ್ಳಲು ಸಾಧ್ಯ' ಎಂದಿದ್ದಾರೆ.

ಮಣಿಪುರ: ಕಾಂಗ್ರೆಸ್ ಪರ ಅಲೆ– ಇಬೋಬಿ

ಪ್ರಜಾವಾಣಿ ವಾರ್ತೆ

ಗುವಾಹಟಿ: 'ಮಣಿಪುರದ ಚಿಂತೆ ಬಿಟ್ಟುಬಿಡಿ' – ಇದು ರಾಜ್ಯದ ಹಿರಿಯ ಕಾಂಗ್ರೆಸ್ ಮುಖಂಡ ಒಕ್ರಮ್ ಇಬೋಬಿ ಸಿಂಗ್ ಅವರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರಿಗೆ ಹೇಳಿದ ಸರಳ ಮಾತು. ಮಣಿಪುರ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ನಡೆದ ವರ್ಚುವಲ್ ಸಂವಾದದಲ್ಲಿ ಪ್ರಿಯಾಂಕಾ ಗಾಂಧಿ ಜೊತೆ ಇಬೋಬಿ ಸಿಂಗ್ ಭಾಗಿಯಾಗಿದ್ದರು.

'ಮಣಿಪುರದ ಜನರು ಬದಲಾವಣೆ ಬಯಸಿದ್ದು, ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರಗಳ ವಿರುದ್ಧ ಸೆಟೆದು ನಿಂತಿದ್ದಾರೆ. ರಾಜ್ಯದಲ್ಲಿ ನಮ್ಮ ಪರವಾದ ಅಲೆ ಇದೆ. ಯುದ್ಧದ ರೀತಿಯಲ್ಲಿ ನಾವು ರಾಜ್ಯದ ಚುನಾವಣೆಯನ್ನು ಬಲಿಷ್ಠ ಶಕ್ತಿಯೊಂದಿಗೆ ಎದುರಿಸಿ ಮತ್ತೆ ಅಧಿಕಾರಕ್ಕೆ ಬರಲಿದ್ದೇವೆ' ಎಂದು ಇಬೋಬಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇವರು 2002ರಿಂದ 2017ರವರೆಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದರು.

ಮಣಿಪುರದಲ್ಲಿ ಫೆ. 28 ಹಾಗೂ

> **ಮಣಿಪುರದ ಸಾಮಾಜಿಕ ವೈವಿಧ್ಯತೆಗೆ ಬಿಜೆಪಿ ಬೆದರಿಕೆಯಾಗಿದೆ. ಪಕ್ಷ ಅಧಿಕಾರಕ್ಕೆ ಬಂದರೆ ರಾಜ್ಯದ ಐತಿಹಾಸಿಕ ಗಡಿ ಹಾಗೂ ಪ್ರಾದೇಶಿಕ ಸಮಗ್ರತೆಯನ್ನು ರಕ್ಷಿಸಲಿದೆ**
> **ಪ್ರಿಯಾಂಕಾ ಗಾಂಧಿ,**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಮಾರ್ಚ್ 3ರಂದು ವಿಧಾನಸಭಾ ಚುನಾವಣೆ ನಡೆಯಲಿದ್ದು, 60ರ ಪೈಕಿ 54 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಇಬೋಬಿ ಅವರನ್ನೇ ಪಕ್ಷ ನೆಚ್ಚಿಕೊಂಡಿದ್ದು, ಐದು ಪಕ್ಷಗಳ ಜೊತೆ ಮೈತ್ರಿ ಮಾಡಿಕೊಂಡಿದೆ.

2017ರ ಚುನಾವಣೆಯಲ್ಲಿ 28 ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆಸ್ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ, ಪ್ರಾದೇಶಿಕ ಪಕ್ಷಗಳಾದ ಎನ್‌ಪಿಪಿ ಹಾಗೂ ಎನ್‌ಪಿಎಫ್ ಸಹಕಾರದಿಂದ ಬಿಜೆಪಿ ಅಧಿಕಾರಕ್ಕೆ ಏರಿತ್ತು. ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿದ್ದ ಕಂಥೋಜಮ್ ಗೋವಿಂದದಾಸ್ ಸೇರಿದಂತೆ ಹಲವರು ಚುನಾವಣೆಗೆ ಮುನ್ನ ಬಿಜೆಪಿ ಸೇರ್ಪಡೆಯಾದ ಬಳಿಕ ಇಬೋಬಿ ಅವರ ಮೇಲೆ ಒತ್ತಡ ಹೆಚ್ಚಿದೆ.

ಬಿಜೆಪಿ ನಾಯಕರು ರಾಜ್ಯದಲ್ಲಿ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದರೂ, ಕಾಂಗ್ರೆಸ್ ನಾಯಕರು ಇನ್ನೂ ಏಕೆ ರಾಜ್ಯದತ್ತ ಸುಳಿದಿಲ್ಲ ಎಂದು ಕಾಂಗ್ರೆಸ್ ಕಾರ್ಯಕರ್ತರು ಪ್ರಶ್ನಿಸಿದ್ದಾರೆ. ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಕಿರಣ್ ರಿಜಿಜು, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಮೊದಲಾದ ಬಿಜೆಪಿ ಮುಖಂಡರು ರಾಜ್ಯದಲ್ಲಿ ಪ್ರಚಾರ ನಡೆಸಿದ್ದಾರೆ.

ಪ್ರಜಾಮತ ಪ್ರಜಾವಾಣಿ ಕನ್ನಡ ಧ್ವನಿ ಪಾಡ್‌ಕಾಸ್ಟ್
ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡ, ಮಣಿಪುರ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ನಿಷ್ಪಕ್ಷಪಾತ ಸುದ್ದಿ, ವಿಶ್ಲೇಷಣೆಗಳಿಗೆ ಆಲಿಸಿರಿ
ಪ್ರಜಾವಾಣಿ ಪಾಡ್‌ಕಾಸ್ಟ್
ಪ್ರತಿ ರಾತ್ರಿ 9.00 ಗಂಟೆಗೆ
prajavani.net/podcast

ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ ಅಶ್ವಿನಿ ಕುಮಾರ್

ನವದೆಹಲಿ: ಕಾಂಗ್ರೆಸ್‌ನ ಹಿರಿಯ ಮುಖಂಡ ಹಾಗೂ ಕೇಂದ್ರದ ಮಾಜಿ ಕಾನೂನು ಸಚಿವ ಅಶ್ವಿನಿ ಕುಮಾರ್ ಅವರು ಮಂಗಳವಾರ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ. 46 ವರ್ಷಗಳ ಹಿಂದೆ ಕಾಂಗ್ರೆಸ್ ಸೇರಿದ್ದ ಅವರು ಪಂಜಾಬ್ ವಿಧಾನಸಭಾ ಚುನಾವಣೆಗೆ ಒಂದು ವಾರ ಬಾಕಿಯಿರುವಾಗ ಪಕ್ಷದ ತೊರೆದಿರುವುದು ಅಚ್ಚರಿ ಮೂಡಿಸಿದೆ.

2002ರಿಂದ 2016ರವರೆಗೆ ರಾಜ್ಯಸಭಾ ಸದಸ್ಯರಾಗಿದ್ದ ಅವರು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದು ತಮ್ಮ ರಾಜೀನಾಮೆಗೆ ಕಾರಣವನ್ನು ವಿವರಿಸಿದ್ದಾರೆ. ಮುಂದಿನ ನಡೆಯನ್ನು ತಿಳಿಸದ ಅವರು, ಯಾವ ಪಕ್ಷವನ್ನೂ ಸೇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಕಾಂಗ್ರೆಸ್ ಪಕ್ಷವು ವಾಸ್ತವದೊಂದಿಗೆ ಸಂಪರ್ಕವನ್ನು ಕಳೆದುಕೊಂಡಿದ್ದು, ರಾಷ್ಟ್ರದ ಜನರ ಮನೋಭಾವವನ್ನು ಪ್ರತಿಬಿಂಬಿಸುತ್ತಿಲ್ಲ ಎಂದಿದ್ದಾರೆ. 'ಸ್ಫೂರ್ತಿದಾಯಕ ನಾಯಕತ್ವದ ಕೊರತೆ, ಆಂತರಿಕ ವಿಚಾರಗಳ ನಿರ್ವಹಣೆ ಕೊರತೆಯಿಂದ ನೊಂದು ನನ್ನ ಹಾಗೂ ಕಾಂಗ್ರೆಸ್ ನಡುವಿನ 46 ವರ್ಷಗಳ ಬಾಂಧವ್ಯವನ್ನು ಕೊನೆಗೊಳಿಸುವ ನಿರ್ಧಾರಕ್ಕೆ ಬಂದಿದ್ದೇನೆ. ನನ್ನ ಹಿಂದಿನ ಎರಡು ತಲೆಮಾರುಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದವು' ಎಂದು ಅವರು ಹೇಳಿದ್ದಾರೆ.

ನೆಹರೂ–ಗಾಂಧಿ ಕುಟುಂಬದ ನಿಷ್ಠರಾಗಿದ್ದ, ಡಾ. ಮನಮೋಹನ್ ಸಿಂಗ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಅವರಿಗೆ ನಂತರದ ದಿನಗಳಲ್ಲಿ ಪಕ್ಷ ಹೆಚ್ಚಿನ ಜವಾಬ್ದಾರಿ ನೀಡಲಿಲ್ಲ. ಆದರೆ ಪಕ್ಷದಲ್ಲಿ ಆಮೂಲಾಗ್ರ

> **ಪಕ್ಷದ ಹೊರಗಿದ್ದುಕೊಂಡು ವಿಸ್ತೃತ ನೆಲೆಗಟ್ಟಿನ ರಾಷ್ಟ್ರೀಯ ಹಿತಾಸಕ್ತಿಯ ಕೆಲಸಗಳನ್ನು ಉತ್ತಮವಾಗಿ ಮಾಡಲು, ಸಾರ್ವಜನಿಕ ಕೆಲಸಗಳಲ್ಲಿ ಮುಂದುವರಿಯಲು ಬಯಸುತ್ತೇನೆ**
> **ಅಶ್ವಿನಿ ಕುಮಾರ್,** ಮಾಜಿ ಸಚಿವ

ಬದಲಾವಣೆಗೆ ಒತ್ತಾಯಿಸಿದ್ದ ಜಿ–23 ಸದಸ್ಯರ ವಿರುದ್ಧ ಅಶ್ವಿನಿ ದನಿ ಎತ್ತಿದ್ದರು. ಇತ್ತೀಚೆಗೆ, ರಾಜ್ಯಸಭೆಯ ಮುಖ್ಯ ಸಚೇತಕ ಜೈರಾಂ ರಮೇಶ್ ಅವರನ್ನು ಸುದ್ದಿ ಮಾಧ್ಯಮ ಹಾಗೂ ಟ್ವಿಟರ್‌ನಲ್ಲಿ ಟೀಕಿಸಿದ್ದರು. ಗುಲಾಂ ನಬಿ ಆಜಾದ್ ಅವರು ತಮಗೆ ಸಂದ ಪದ್ಮ ಪುರಸ್ಕಾರವನ್ನು ತಿರಸ್ಕರಿಸಬೇಕಿತ್ತು ಎಂಬ ರಮೇಶ್ ಮಾತಿಗೆ ಅಶ್ವಿನಿ ಆಕ್ಷೇಪ ವ್ಯಕ್ತಪಡಿಸಿದ್ದರು.

ಅಶ್ವಿನಿ ಅವರು ಪಂಜಾಬ್‌ನಲ್ಲಿ ಜನಪ್ರಿಯ ನಾಯಕರಲ್ಲದಿದ್ದರೂ, ಚುನಾವಣೆಗೆ ಕೆಲವೇ ದಿನಗಳಿರುವಾಗ ರಾಜೀನಾಮೆ ನೀಡಿರುವುದು ರಾಜಕೀಯ ವಲಯದಲ್ಲಿ ಅಚ್ಚರಿಗೆ ಕಾರಣವಾಗಿದೆ. 2013ರಲ್ಲಿ ಮನಮೋಹನ್ ಸಿಂಗ್ ಸರ್ಕಾರದ ಅವಧಿಯಲ್ಲಿ ಸಿಬಿಐ ಸ್ಥಿತಿಗತಿ ವರದಿಯನ್ನು ತಿರುಚಿದ್ದರು ಎಂಬ ಆರೋಪದ ಕಾರಣಕ್ಕೆ ಅವರು ಸಂಪುಟ ತೊರೆದಿದ್ದರು. ಆದರೂ, ಜಪಾನ್‌ಗೆ ಪ್ರಧಾನಮಂತ್ರಿಗಳ ಪ್ರತಿನಿಧಿಯಾಗಿ ನಿಯೋಜನೆಗೊಂಡಿದ್ದರು.

ರಾಯ್‌ಬರೇಲಿ, ಫತೇಪುರದಲ್ಲಿ ಬಿಜೆಪಿ ವಿರುದ್ಧ ವಾಗ್ದಾಳಿ

ದಿಗಿಲು, ಮೌನ, ಶೂನ್ಯ: ಅಖಿಲೇಶ್ ವ್ಯಾಖ್ಯಾನ

ರಾಯಬರೇಲಿ/ಲಖನೌ: ಉತ್ತರ ಪ್ರದೇಶದಲ್ಲಿ ಆಡಳಿತಾರೂಢ ಬಿಜೆಪಿಗೆ ಪ್ರಮುಖ ಸವಾಲು ಒಡ್ಡುತ್ತಿರುವ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಹೊಸ ಘೋಷಣೆ ಮೂಲಕ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ರಾಜ್ಯದಲ್ಲಿ ಎರಡು ಹಂತಗಳ ಮತದಾನ ನಡೆದಿದ್ದು, ಉಳಿದ ಹಂತಗಳಲ್ಲಿ ಬಿಜೆಪಿ ಪರಿಸ್ಥಿತಿ ಹೇಗಿದೆ ಎಂದು ಅವರು ವಿವರಿಸಿದ್ದಾರೆ. ಸನ್, ಸುನ್, ಶೂನ್ಯ ಎಂಬ ಮೂರು 'ಎಸ್'ಗಳನ್ನು ಅವರು ಉದಾಹರಿಸಿದ್ದಾರೆ. 'ಮೊದಲ ಹಂತದ ಚುನಾವಣೆ ಬಳಿಕ ಬಿಜೆಪಿ ದಿಗಿಲುಗೊಂಡಿತು (ಸನ್). ಎರಡನೇ ಹಂತದ ಚುನಾವಣೆ ಬಳಿಕ ಪಕ್ಷ ಮೌನವಾಗಿದೆ (ಸುನ್). ಮೂರನೇ ಹಂತದ ಬಳಿಕ ಪಕ್ಷವು ಶೂನ್ಯಕ್ಕೆ ಕುಸಿಯಲಿದೆ' ಎಂದು ಅವರು ವಿವರಣೆ ನೀಡಿದ್ದಾರೆ.

ಉತ್ತರ ಪ್ರದೇಶದ ಫತೇಪುರ ಹಾಗೂ ರಾಯಬರೇಲಿಯಲ್ಲಿ ನಡೆದ ಚುನಾವಣಾ ರ‍್ಯಾಲಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಮೂರನೇ ಹಂತದ ಚುನಾವಣೆಯಲ್ಲಿ ಬಿಜೆಪಿಗೆ ಖಾತೆ ತೆರೆಯಲೂ ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಬುಂದೇಲ್‌ಖಂಡ ವ್ಯಾಪ್ತಿಯ 16 ಜಿಲ್ಲೆಗಳಲ್ಲಿ ಫೆ.20ರಂದು ಮೂರನೇ ಹಂತದ ಮತದಾನ ನಿಗದಿಯಾಗಿದೆ.

ಬಡವರಿಗೆ ಐದು ವರ್ಷ ಉಚಿತ ದಿನಸಿ: ಒಂದು ಕೆ.ಜಿ ತುಪ್ಪ ಒಳಗೊಂಡಂತೆ ಬಡವರಿಗೆ ಐದು ವರ್ಷಗಳ ಕಾಲ ಉಚಿತ ದಿನಸಿ ಪದಾರ್ಥ ನೀಡುವುದಾಗಿ ಅಖಿಲೇಶ್ ಯಾದವ್ ಅವರು ಮಂಗಳವಾರ ಭರವಸೆ ನೀಡಿದ್ದಾರೆ.

'ಬಿಜೆಪಿ ಸರ್ಕಾರವು ಈ

ಕಾನ್ಪುರದ ಸರಸೌಲ್ ಎಂಬಲ್ಲಿ ಮಂಗಳವಾರ ನಡೆದ ಚುನಾವಣಾ ರ‍್ಯಾಲಿಗೆ ಬಂದ ಅಖಿಲೇಶ್ ಅವರನ್ನು ಕಾರ್ಯಕರ್ತರು ಹೂಗುಚ್ಛ ನೀಡಿ ಸ್ವಾಗತಿಸಿದರು–ಪಿಟಿಐ ಚಿತ್ರ

> **ಚುನಾವಣಾ ಕಣದಲ್ಲಿ ಲೆಕ್ಕಕ್ಕೇ ಇಲ್ಲದಂತಿರುವ ಕಾಂಗ್ರೆಸ್ ಹಾಗೂ ಬಿಎಸ್‌ಪಿಗೆ ಮತ ಹಾಕಿ ನಿಮ್ಮ ಮತಗಳನ್ನು ವ್ಯರ್ಥ ಮಾಡಬೇಡಿ**
> **ಅಖಿಲೇಶ್ ಯಾದವ್,** ಎಸ್‌ಪಿ ಅಧ್ಯಕ್ಷ

ಚುನಾವಣೆ ಮುಗಿಯುವವರೆಗೆ ಮಾತ್ರ ದಿನಸಿ ಪದಾರ್ಥಗಳನ್ನು ನೀಡಲಿದೆ. ಚುನಾವಣೆ ನಂತರ ದಿನಸಿ ಸಿಗುವುದಿಲ್ಲ. ನವೆಂಬರ್‌ನಲ್ಲೇ ದಿನಸಿ ಕಾರ್ಯಕ್ರಮ ಕೊನೆಗೊಂಡಿತ್ತು. ಆದರೆ ಚುನಾವಣೆ ಘೋಷಣೆಯಾಗಿದ್ದರಿಂದ ಕಾರ್ಯಕ್ರಮವನ್ನು ಮಾರ್ಚ್‌ವರೆಗೆ ವಿಸ್ತರಿಸಲಾಯಿತು' ಎಂದು ಹೇಳಿದ್ದಾರೆ.

'ರಾಜ್ಯದಲ್ಲಿ ಸಮಾಜವಾದಿ ಪಕ್ಷ ಅಧಿಕಾರದಲ್ಲಿದ್ದಾಗ ದಿನಸಿ ಪೂರೈಸಲಾಗುತ್ತಿತ್ತು. ಪಕ್ಷ ಅಧಿಕಾರದಲ್ಲಿದ್ದ ಎಲ್ಲ ಅವಧಿಯಲ್ಲೂ ಈ ಕಾರ್ಯಕ್ರಮ ಇತ್ತು. ಈ ಬಾರಿ ಪಕ್ಷ ಅಧಿಕಾರಕ್ಕೆ ಬಂದರೆ, ದಿನಸಿಯ ಭಾಗವಾಗಿ ಸಾಸಿವೆ ಎಣ್ಣೆ, ಎರಡು ಎಲ್‌ಪಿಜಿ ಸಿಲಿಂಡರ್ ನೀಡಲು ಉದ್ದೇಶಿಸಲಾಗಿದೆ. ಬಡಜನರ ಆರೋಗ್ಯ ಉತ್ತಮಪಡಿಸುವ ಉದ್ದೇಶದಿಂದ ದಿನಸಿಯ ಜೊತೆಗೆ ಒಂದು ಕಿಲೋ ತುಪ್ಪ ನೀಡಲಾಗುವುದು' ಎಂದು ಅಖಿಲೇಶ್ ಭರವಸೆ ನೀಡಿದ್ದಾರೆ.

ಬಿಜೆಪಿ ಸರ್ಕಾರ ನೀಡುತ್ತಿರುವ ದಿನಸಿಯಲ್ಲಿ ಗುಣಮಟ್ಟದ ಕೊರತೆಯಿದೆ ಎಂದು ಅವರೂ ದೂರಿದ್ದಾರೆ. ಉಪ್ಪಿನಲ್ಲಿ ಗಾಜಿನ ಚೂರುಗಳು ಸಿಕ್ಕಿರುವ ಬಗ್ಗೆ ವರದಿಗಳಿವೆ ಎಂದಿರುವ ಅವರು, ಗುಜರಾತ್‌ನಿಂದ ಉಪ್ಪು ಬರುತ್ತಿಲ್ಲವೇ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಖಾಲಿಯಿರುವ 11 ಲಕ್ಷ ಹುದ್ದೆಗಳಿಗೆ ನೇಮಕಾತಿ ನಡೆಸಿ, ಯುವಜನರಿಗೆ ಉದ್ಯೋಗ ನೀಡುವುದಾಗಿ ಅವರು ಭರವಸೆ ನೀಡಿದರು. 'ಬಿಜೆಪಿ ಮುಖಂಡರು ಮನೆಮನೆ ಪ್ರಚಾರಕ್ಕೆ ಹೋಗಿದ್ದಾಗ ಕೆಲವು ಗ್ರಾಮಗಳಲ್ಲಿ ಜನರು ಖಾಲಿ ಸಿಲಿಂಡರ್‌ಗಳನ್ನು ತೋರಿಸಿದರು. ಹೀಗಾಗಿ ಮುಖಂಡರ ಮನೆಮನೆ ಪ್ರಚಾರ ನಿಂತುಹೋಗಿದೆ' ಎಂದರು.

ಬಿಜೆಪಿ ಶಿಕ್ಷಿಸಿ: ಎಸ್‌ಕೆಎಂ ಕರೆ

(ಲಖಿಂಪುರ ಖೇರಿ ವರದಿ): ಪ್ರಧಾನಿ ನರೇಂದ್ರ ಮೋದಿ ಅವರ ಭರವಸೆಯ ಹೊರತಾಗಿಯೂ ರೈತರ ಬೇಡಿಕೆಗಳನ್ನು ಈಡೇರಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಮಂಗಳವಾರ ಆರೋಪಿಸಿದೆ.

ಲಖಿಂಪುರ ಖೇರಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಮುಖಂಡ ಶಿವಕುಮಾರ್ ಶರ್ಮಾ ಅವರು, ಕನಿಷ್ಠ ಬೆಂಬಲ ಬೆಲೆ ಒಳಗೊಂಡಂತೆ ಹಲವು ಭರವಸೆಗಳನ್ನು ಕೇಂದ್ರ ನೀಡಿತ್ತಾದರೂ, ಯಾವುದನ್ನೂ ಈಡೇರಿಸುವ ಗೋಜಿಗೆ ಹೋಗಿಲ್ಲ ಎಂದು ಅವರು ಆರೋಪಿಸಿದ್ದಾರೆ.

'ನಾವು ಮತ ನೀಡಿ ಎಂದು ಯಾರನ್ನೂ ಕೇಳುವುದಿಲ್ಲ. ಆದರೆ ಬಿಜೆಪಿಯನ್ನು ಶಿಕ್ಷಿಸಿ ಎಂದು ಕೇಳಿಕೊಳ್ಳುತ್ತೇವೆ. ಯಾರಿಗೆ ಮತ ಚಲಾಯಿಸಬೇಕು ಎಂಬುದು ರೈತರಿಗೆ ಗೊತ್ತಿದೆ. ಯಾರು ಸರ್ಕಾರ ರಚಿಸಬೇಕು ಎಂದು ನಿರ್ಧರಿಸುವುದು ನಾವಲ್ಲ. ಆದರೆ ಯಾರು ನಮ್ಮನ್ನು ಬೆಂಬಲಿಸುತ್ತಾರೋ ಆ ಸರ್ಕಾರವನ್ನು ನಾವು ಬೆಂಬಲಿಸುತ್ತೇವೆ' ಎಂದು ಅವರು ಹೇಳಿದ್ದಾರೆ.

ಚುನಾವಣಾ ಕಣದಲ್ಲಿ...

- **ಗುಂಡಿಟ್ಟು ಹತ್ಯೆ:** ಸಮಾಜವಾದಿ ಪಕ್ಷದ ಮತಗಟ್ಟೆ ಏಜೆಂಟ್ ಸುಧೀರ್ ಕುಮಾರ್ ಎಂಬವರನ್ನು ಪ್ರತಿಸ್ಪರ್ಧಿ ಗುಂಪಿನ ವ್ಯಕ್ತಿಗಳು ಗುಂಡು ಹಾರಿಸಿ ಮಂಗಳವಾರ ಹತ್ಯೆ ಮಾಡಿದ್ದಾರೆ. ಗುಂಡಿನ ದಾಳಿಯಲ್ಲಿ ಇನ್ನೊಬ್ಬ ವ್ಯಕ್ತಿಯೂ ಗಾಯಗೊಂಡಿದ್ದಾರೆ. ಉತ್ತರ ಪ್ರದೇಶದ ತಿಹಾರ್ ಕ್ಷೇತ್ರದ ಮತಗಟ್ಟೆಯೊಂದರಲ್ಲಿ ಮತ ಚಲಾವಣೆಗೆ ಸಂಬಂಧಿಸಿ ಸುಧೀರ್ ಮತ್ತು ಇನ್ನೊಂದು ಗುಂಪಿನ ನಡುವೆ ಸೋಮವಾರ ವಾಗ್ವಾದ ನಡೆದಿತ್ತು. ತಿಹಾರ್ ಕ್ಷೇತ್ರದಲ್ಲಿ ಸೋಮವಾರ ಮತದಾನ ನಡೆದಿದೆ
- **ಘರ್ಷಣೆಯಲ್ಲಿ ಗಾಯ:** ಉತ್ತರ ಪ್ರದೇಶದ ತಿಹಾರ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಲೊನಾ ಕುಶ್ವಾಹಾ ಅವರ ಬೆಂಬಲಿಗರಾದ ಆರು ಮಂದಿ ಘರ್ಷಣೆಯಲ್ಲಿ ಗಾಯಗೊಂಡಿದ್ದಾರೆ. ಘರ್ಷಣೆ ಸೋಮವಾರ ರಾತ್ರಿ ನಡೆದಿದೆ. ಸಮಾಜವಾದಿ ಪಕ್ಷದ ಅಭ್ಯರ್ಥಿ ರೋಶನ್ ಲಾಲ್ ವರ್ಮಾ ಅವರ ಬೆಂಬಲಿಗರು ಮತ್ತು ಬಿಜೆಪಿ ಬೆಂಬಲಿಗರ ನಡುವೆ ಘರ್ಷಣೆ ಆಗಿದೆ. ಬಳಿಕ, ಕುಶ್ವಾಹಾ ಬೆಂಬಲಿಗರು ರಸ್ತೆ ತಡೆ ನಡೆಸಿದ್ದಾರೆ. ಪೊಲೀಸರು ಬಲ ಪ್ರಯೋಗಿಸಿ ಪ್ರತಿಭಟನಕಾರರನ್ನು ತೆರವು ಮಾಡಿದರು. 60 ಮಂದಿಯ ವಿರುದ್ಧ ಪ್ರಕರಣ ದಾಖಲಾಗಿದೆ
- **ಗೆಲುವಿನ ವಿಶ್ವಾಸ:** ಕಾಂಗ್ರೆಸ್ ಮತ್ತು ಗೋವಾ ಫಾರ್ವರ್ಡ್ ಪಾರ್ಟಿ ಮೈತ್ರಿಕೂಟಕ್ಕೆ ಗೋವಾ ವಿಧಾನಸಭೆಯಲ್ಲಿ ಬಹುಮತ ದೊರೆಯಲಿದೆ ಎಂದು ಕಾಂಗ್ರೆಸ್ ಹೇಳಿಕೊಂಡಿದೆ. ಬಿಜೆಪಿಗೆ 10 ಕ್ಷೇತ್ರಗಳಲ್ಲಿ ಗೆಲುವು ದೊರೆಯಬಹುದು ಎಂದು ಗೋವಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಗಿರೀಶ್ ಚೋಡಣ್‌ಕರ್ ಭವಿಷ್ಯ ನುಡಿದಿದ್ದಾರೆ. ಗೋವಾದ ಎಲ್ಲ 40 ಕ್ಷೇತ್ರಗಳಿಗೆ ಸೋಮವಾರ ಮತದಾನ ನಡೆದಿತ್ತು. ಶೇ 78.94ರಷ್ಟು ಮತದಾನ ಆಗಿದೆ.
- **ಎಸ್‌ಪಿ, ಬಿಎಸ್‌ಪಿ ವಿರುದ್ಧ ಶಾ ಟೀಕೆ:** ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜ ಪಕ್ಷದ ಆಳ್ವಿಕೆಯಲ್ಲಿ ಉತ್ತರ ಪ್ರದೇಶದ ಅರ್ಥ ವ್ಯವಸ್ಥೆ ಕುಸಿದಿತ್ತು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆಪಾದಿಸಿದ್ದಾರೆ. ಯೋಗಿ ಆದಿತ್ಯನಾಥ ಅವರ ಐದು ವರ್ಷದ ಆಳ್ವಿಕೆಯಲ್ಲಿ ಅರ್ಥ ವ್ಯವಸ್ಥೆ ಸರಿ ದಾರಿಗೆ ಬಂತು ಎಂದು ಶಾ ಹೇಳಿಕೊಂಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸಲು ಉತ್ತರ ಪ್ರದೇಶದಲ್ಲಿ ಬಿಜೆಪಿಯನ್ನು ಗೆಲ್ಲಿಸಿ ಎಂದು ಶಾ ಕೋರಿದರು. ಶಾ ಅವರು ಔರೈಯಾದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡಿದರು.

ಜಾಮೀನು: 'ಸುಪ್ರೀಂ' ಮೊರೆಗೆ ನಿರ್ಧಾರ

ಲಖಿಂಪುರ ಖೇರಿ: ನಾಲ್ವರು ರೈತರು ಸೇರಿದಂತೆ ಎಂಟು ಜನರ ಸಾವಿಗೆ ಕಾರಣವಾದ ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಸುಪ್ರೀಂ ಕೋರ್ಟ್ ಮೊರೆ ಹೋಗಲಿದೆ ಎಂದು ರೈತ ನಾಯಕ ರಾಕೇಶ್ ಟಿಕಾಯತ್ ಮಂಗಳವಾರ ಹೇಳಿದ್ದಾರೆ.

ರಾಕೇಶ್ ಟಿಕಾಯತ್

ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಪ್ರಕರಣದ ಪ್ರಮುಖ ಆರೋಪಿಯಾಗಿದ್ದು, ಜಾಮೀನಿನ ಮೇಲೆ ಹೊರ ಬಂದಿದ್ದಾರೆ.

'ಇಡೀ ದೇಶ ಮತ್ತು ಜಗತ್ತು ಅತ್ಯಂತ ಕುಖ್ಯಾತ ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣವನ್ನು ವೀಕ್ಷಿಸಿದೆ. ಆಶಿಶ್ ಮಿಶ್ರಾ ಅವರು ಘೋರ ಅಪರಾಧ ಮಾಡಿದರೂ ಮೂರು ತಿಂಗಳೊಳಗೆ ಜಾಮೀನು ಪಡೆಯುತ್ತಾರೆ. ಅವರು ಜೈಲಿನಿಂದ ಹೊರಬರುವುದನ್ನು ಎಲ್ಲರೂ ನೋಡುತ್ತಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಕೆಎಂ ಸುಪ್ರೀಂ ಮೊರೆಹೋಗಲಿದೆ' ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಆಶಿಶ್ ಮಿಶ್ರಾ ಬಿಡುಗಡೆ

ಲಖನೌ: ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದ ಪ್ರಮುಖ ಆರೋಪಿ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಅವರನ್ನು ಜಾಮೀನಿನ ಮೇಲೆ ಜೈಲಿನಿಂದ ಮಂಗಳವಾರ ಬಿಡುಗಡೆ ಮಾಡಲಾಗಿದೆ.

ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ವೇಳೆ ಎಸ್‌ಯುವಿ ಹರಿಸಿ ನಾಲ್ವರು ರೈತರು ಸೇರಿದಂತೆ ಎಂಟು ಜನರ ಹತ್ಯೆ ಪ್ರಕರಣವು ಉತ್ತರ ಪ್ರದೇಶದ ಲಖಿಂಪುರ–ಖೇರಿಯಲ್ಲಿ ಕಳೆದ ವರ್ಷ ಅಕ್ಟೋಬರ್ 3ರಂದು ನಡೆದಿತ್ತು. ಆಶಿಶ್ ಮಿಶ್ರಾ ಅವರೇ ರೈತರ ಮೇಲೆ ಎಸ್‌ಯುವಿ ಹರಿಸಿದ್ದಾರೆ ಎಂದು ಆರೋಪಿಸಲಾಗಿತ್ತು. ನಂತರ, ಆಶಿಶ್ ಮಿಶ್ರಾ ಅವರನ್ನು ಎಸ್‌ಐಟಿ ಬಂಧಿಸಿತ್ತು. ನಾಲ್ಕು ತಿಂಗಳ ಬಳಿಕ ಅಲಹಾಬಾದ್ ಕೋರ್ಟ್ ಅವರಿಗೆ ಕಳೆದ ಗುರುವಾರ ಜಾಮೀನು ಮಂಜೂರು ಮಾಡಿತ್ತು.

'ಹಾಗಾದರೆ ನಮಗೆ ಇಂತಹ ಸರ್ವಾಧಿಕಾರಿ ಸರ್ಕಾರ ಬೇಕೇ ಅಥವಾ ವಾಹನ ನುಗ್ಗಿಸಿ ಜನರನ್ನು ಸಾಯಿಸುವವರು ಮೂರೇ ತಿಂಗಳೊಳಗೆ ಜೈಲಿನಿಂದ ಹೊರಬರುವ ಈ ವ್ಯವಸ್ಥೆ ಬೇಕೇ ಎಂದು ಪ್ರಶ್ನಿಸಿದ ಟಿಕಾಯತ್, ಇಂಥವರು ಮುಂದಿನ ದಿನಗಳಲ್ಲಿ ಸಾರ್ವಜನಿಕರೊಂದಿಗೆ ಹೇಗೆ ವರ್ತಿಸುತ್ತಾರೆ ಎಂಬುದು ಮುಖ್ಯ. ಇವು ನಮ್ಮ ಸಮಸ್ಯೆಗಳು. ಇದನ್ನು ಜನರು ಅರ್ಥಮಾಡಿಕೊಳ್ಳಬೇಕಿದೆ' ಎಂದರು.

'ಪ್ರಕರಣದ ವಿಚಾರಣೆಯನ್ನು ನ್ಯಾಯಾಲಯವು ಆನ್‌ಲೈನ್‌ನಲ್ಲಿ ನಡೆಸುತ್ತಿದ್ದ ಸಂದರ್ಭದಲ್ಲಿ ಪ್ರಾಸಿಕ್ಯೂಷನ್ ತನ್ನ ವಿಷಯ ಪ್ರಸ್ತಾಪಿಸಿದಾಗ ವಿದ್ಯುತ್ ವ್ಯತ್ಯಯ ಉಂಟಾಯಿತು. ಹಾಗಾಗಿ, ನ್ಯಾಯಾಲಯದ ಮುಂದೆ ಸಂಪೂರ್ಣ ವಿಷಯವನ್ನು ಪ್ರಸ್ತುತಪಡಿಸಲು ಸಾಧ್ಯವಾಗಲಿಲ್ಲ' ಎಂದರು.

ರೈತರು ಮತ್ತು ಯುವ ಸಮುದಾಯಕ್ಕೆ ಸಂಬಂಧಿಸಿ ವಿಷಯಗಳ ಬಗ್ಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಉತ್ತರಪ್ರದೇಶ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಬಿಜೆಪಿಯು ಅಭಿವೃದ್ಧಿಗಾಗಿ ಕೆಲಸ ಮಾಡುವ ಬದಲು ಕೋಮುವಾದದ ವಿಷಯಗಳ ಆಧಾರದ ಮೇಲೆ ಚುನಾವಣೆಗಳನ್ನು ಎದುರಿಸುತ್ತಿದೆ' ಎಂದರು.

ಚಂಪಾರಣ್ : ಗಾಂಧೀಜಿ ಪ್ರತಿಮೆಗೆ ಹಾನಿ

ಮೋತಿಹಾರಿ, ಬಿಹಾರ (ಪಿಟಿಐ): ಮಹಾತ್ಮಗಾಂಧಿ ಅವರು ಚಂಪಾರಣ್ ಸತ್ಯಾಗ್ರಹವನ್ನು ಆರಂಭಿಸಿದ್ದ ನೆನಪಿಗಾಗಿ, ಆ ಸ್ಥಳದಲ್ಲಿ ಸ್ಥಾಪಿಸಿದ್ದ ಗಾಂಧೀಜಿ ಪ್ರತಿಮೆಯನ್ನು ಕಿಡಿಗೇಡಿಗಳು ಹಾನಿಗೊಳಿಸಿದ್ದಾರೆ. ಈ ಬೆಳವಣಿಗೆಗೆ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಪೂರ್ವ ಚಂಪಾರಣ್ ಜಿಲ್ಲೆ ಮ್ಯಾಜಿಸ್ಟ್ರೇಟ್ ಶೀರ್ಷತ್ ಕಪಿಲ್ ಅಶೋಕ್ ಅವರು, 'ಚರಕ ಪಾರ್ಕ್‌ನಲ್ಲಿದ್ದ ಪ್ರತಿಮೆಯನ್ನು ಜಖಂಗೊಳಿಸಿ, ಕೆಳಗೆ ಬೀಳಿಸಲಾಗಿದೆ. ಕಿಡಿಗೇಡಿಗಳ ಪತ್ತೆಗೆ ಕ್ರಮವಹಿಸಿದ್ದು, ಕಾನೂನು ಕ್ರಮ ಜರುಗಿಸಲಾಗುವುದು' ಎಂದು ತಿಳಿಸಿದ್ದಾರೆ.

ಪ್ರತಿಮೆಗೆ ಹಾನಿ ಕುರಿತಂತೆ ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ ವ್ಯಕ್ತವಾಗಿದೆ. ಘಟನೆ ಸ್ಥಳದಲ್ಲಿ ಭಾನುವಾರ ರಾತ್ರಿ ಕೆಲ ಧಾರ್ಮಿಕ ಘೋಷಣೆಗಳು ಕೇಳಿಬಂದವು. ಬಲಪಂಥೀಯ ಗುಂಪುಗಳ ಕೈವಾಡ ಇರಬಹುದು ಎಂಬ ಆರೋಪ ಕೇಳಿ ಬಂದಿದೆ.

ಆದರೆ, ಈ ಬಗ್ಗೆ ಪ್ರತಿಕ್ರಿಯಿಸಲು ಜಿಲ್ಲಾ ಮ್ಯಾಜಿಸ್ಟ್ರೇಟ್ ನಿರಾಕರಿಸಿದ್ದಾರೆ. 'ಗಾಂಧೀಜಿ ಅವರು ಅಹಿಂಸೆಯನ್ನು ಪ್ರತಿಪಾದಿಸುತ್ತಿದ್ದರು. ಇಂಥ ಕೃತ್ಯಗಳ ಮೂಲಕ ಎಂದಿಗೂ ಸತ್ಯವನ್ನು ಹತ್ತಿಕ್ಕಲಾಗದು' ಎಂದೂ ಪ್ರತಿಪಾದಿಸಿದ್ದಾರೆ.

ಸಾಮಾಜಿಕ ಹೊಣೆಗಾರಿಕೆ ಕಾರ್ಯಕ್ರಮದಡಿ ಪಾರ್ಕ್ ನಿರ್ವಹಣೆಯನ್ನು ಪವರ್ ಗ್ರಿಡ್ ಕಾರ್ಪೊರೇಷನ್ ಸಂಸ್ಥೆ ವಹಿಸಿಕೊಂಡಿದೆ. ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಸೇರಿದಂತೆ ಸುರಕ್ಷತಾ ಕ್ರಮ ವಹಿಸಲು ಸಂಸ್ಥೆಗೆ ಸಲಹೆ ಮಾಡುತ್ತೇವೆ ಎಂದು ಹೇಳಿದರು.

ಬಲವಂತವಾಗಿ ಇಂಡಿಗೋ ಪುಷ್ಪಕೃಷಿ ಕೈಗೊಳ್ಳಲು ಒತ್ತಡ ಹೇರುವುದನ್ನು ವಿರೋಧಿಸಿ ಬ್ರಿಟಿಷ್ ಆಡಳಿತದ ವಿರುದ್ಧ ಮಹಾತ್ಮಗಾಂಧಿ ಅವರು 1917ರಲ್ಲಿ ಈ ಸ್ಥಳದಿಂದ ಸತ್ಯಾಗ್ರಹ ಆಂದೋಲನವನ್ನು ಆರಂಭಿಸಿದ್ದರು.

ವಿದ್ಯಾರ್ಥಿನಿ ಆತ್ಮಹತ್ಯೆ: ಸಿಬಿಐನಿಂದ ಎಫ್‌ಐಆರ್

ಚೆನ್ನೈ: ವಿದ್ಯಾರ್ಥಿನಿ ಲಾವಣ್ಯ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಮದ್ರಾಸ್ ಹೈಕೋರ್ಟ್‌ನ ಮದುರೈ ಪೀಠದ ನಿರ್ದೇಶನದಂತೆ ಸಿಬಿಐ ಮಂಗಳವಾರ ಎಫ್‌ಐಆರ್ ದಾಖಲಿಸಿದೆ.

ತನಿಖೆ ನಡೆಸುವಂತೆ ಮದ್ರಾಸ್ ಹೈಕೋರ್ಟ್ ಜನವರಿ 31ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ತಮಿಳು ನಾಡು ಸರ್ಕಾರ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು. ತನಿಖೆ ನಡೆಸುವಂತೆ ಸುಪ್ರೀಂ ಸೋಮವಾರ ಸೂಚಿಸಿತ್ತು.

ತಂಜಾವೂರು ಜಿಲ್ಲೆ ಮೈಕಲ್‌ಪಟ್ಟಿಯಲ್ಲಿರುವ ಸೇಕ್ರೆಡ್ ಹಾರ್ಟೆಡ್ ಹೈಯರ್ ಸೆಕಂಡರಿ ಸ್ಕೂಲ್‌ನ ಲಾವಣ್ಯ (17) ಎಂಬ ವಿದ್ಯಾರ್ಥಿನಿ ಜ.9ರಂದು ವಿಷ ಸೇವಿಸಿದ್ದಳು. ಚಿಕಿತ್ಸೆಗೆ ಸ್ಪಂದಿಸದೇ ಜ. 19ರಂದು ಮೃತಪಟ್ಟಿದ್ದಳು.

'ತನ್ನನ್ನು ಒತ್ತಾಯಪೂರ್ವಕವಾಗಿ ಕ್ರೈಸ್ತ ಮತಕ್ಕೆ ಮತಾಂತರ ಮಾಡುವ ಯತ್ನಗಳಿಂದ ಬೇಸತ್ತು ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ಬಿಜೆಪಿ ಆರೋಪಿಸಿದೆ.

ಬಂಧನ: ಲಾವಣ್ಯ ಸಾವಿಗೆ ನ್ಯಾಯ ನೀಡಬೇಕು ಎಂದು ಒತ್ತಾಯಿಸಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಮನೆ ಮುಂದೆ ಮತಪ್ರದರ್ಶನ ಮಾಡಿದ ಎಬಿವಿಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಿಧಿ ತ್ರಿಪಾಠಿ ಸೇರಿ 32 ಮಂದಿ ಕಾರ್ಯಕರ್ತರನ್ನು ಪೊಲೀಸರು ಮಂಗಳವಾರ ಬಂಧಿಸಿದರು.

ಮೇವು ಹಗರಣ: ಇನ್ನೊಂದು ಪ್ರಕರಣದಲ್ಲೂ ಲಾಲು ದೋಷಿ

ರಾಂಚಿ (ಪಿಟಿಐ): ಮೇವು ಹಗರಣಕ್ಕೆ ಸಂಬಂಧಿಸಿ ಡೊರಂಡಾ ಖಜಾನೆಯಿಂದ ₹139.5 ಕೋಟಿ ದುರುಪಯೋಗ ಮಾಡಿಕೊಂಡಿದ್ದ ಪ್ರಕರಣದಲ್ಲಿ ರಾಷ್ಟ್ರೀಯ ಜನತಾದಳದ (ಆರ್‌ಜೆಡಿ) ಮುಖ್ಯಸ್ಥ, ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲು ಪ್ರಸಾದ್ ಅವರನ್ನು ಸಿಬಿಐ ವಿಶೇಷ ನ್ಯಾಯಾಲಯವು ದೋಷಿ ಎಂದು ಘೋಷಿಸಿದೆ. ಶಿಕ್ಷೆಯ ಪ್ರಮಾಣವನ್ನು ಫೆ.18ರಂದು ಪ್ರಕಟಿಸಲಿದೆ.

ಈ ಪ್ರಕರಣ ಸಂಬಂಧ ಜನವರಿ 29ರಂದು ವಿಚಾರಣೆ ಪೂರ್ಣಗೊಳಿಸಿದ್ದ ಕೋರ್ಟ್, ತೀರ್ಪು ಕಾಯ್ದಿರಿಸಿತ್ತು. ಇದೇ ಹಗರಣಕ್ಕೆ ಸಂಬಂಧಿಸಿದ ಇತರೆ ನಾಲ್ಕು ಪ್ರಕರಣಗಳಲ್ಲಿ ಲಾಲು ಈಗಾಗಲೇ 14 ವರ್ಷ ಶಿಕ್ಷೆಗೆ ಗುರಿಯಾಗಿದ್ದಾರೆ.

ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಸ್.ಕೆ.ಶಶಿ ಅವರು ಲಾಲು ಸೇರಿದಂತೆ 99 ಆರೋಪಿಗಳ ವಿರುದ್ಧದ ಆರೋಪ ಕುರಿತು ಕಳೆದ ವರ್ಷದ ಫೆಬ್ರುವರಿಯಿಂದಲೂ ವಿಚಾರಣೆ ನಡೆಸಿದ್ದರು. ಕೊನೆಯ ಆರೋಪಿ ಡಾ.ಶೈಲೇಂದ್ರ ಕುಮಾರ್ ಅವರಿಗೆ ಸಂಬಂಧಿಸಿದಂತೆ ವಿಚಾರಣೆ ಜನವರಿ 29ರಂದು ಪೂರ್ಣಗೊಂಡಿತ್ತು. ಎಲ್ಲ ಆರೋಪಿಗಳು ವ್ಯಕ್ತಿಗತವಾಗಿ ಹಾಜರಿದ್ದರು. ಪ್ರಕರಣದಲ್ಲಿ ಒಟ್ಟು 170 ಮಂದಿ ಆರೋಪಿಗಳಿದ್ದು, ಈ ಪೈಕಿ 55 ಮಂದಿ ಮೃತಪಟ್ಟಿದ್ದಾರೆ. ಇಬ್ಬರು ಆರೋಪಗಳನ್ನು ಒಪ್ಪಿಕೊಂಡಿದ್ದರೆ, ಆರು ಮಂದಿ ತಲೆಮರೆಸಿಕೊಂಡಿದ್ದಾರೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ

ನವದೆಹಲಿ: ದೇಶದಲ್ಲಿ 44 ದಿನಗಳ ಬಳಿಕ ದೈನಂದಿನ ಕೋವಿಡ್ ಪ್ರಕರಣಗಳ ಸಂಖ್ಯೆಯು 30 ಸಾವಿರಕ್ಕಿಂತ ಕಡಿಮೆಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆಯು 4,23,127ಕ್ಕೆ ಇಳಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಮಂಗಳವಾರ ಹೇಳಿದೆ.

ಇದುವರೆಗಿನ ಸೋಂಕಿತರ ಸಂಖ್ಯೆ 4.26 ಕೋಟಿ. ಮಂಗಳವಾರ 347 ಮಂದಿ ಕೋವಿಡ್‌ನಿಂದ ಸಾವಿಗೀಡಾಗಿದ್ದು, ಒಟ್ಟು ಸಾವಿಗೀಡಾದವರ ಸಂಖ್ಯೆ 5.9 ಲಕ್ಷಕ್ಕೆ ಏರಿದೆ. ಸತತ ಒಂಬತ್ತು ದಿನಗಳಿಂದ ಪ್ರತಿನಿತ್ಯ 1ಲಕ್ಷಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಪ್ರಕರಣಗಳು ದಾಖಲಾಗುತ್ತಿವೆ.

ದೇಶದಾದ್ಯಂತ ಕೋವಿಡ್ ಚೇತರಿಕೆಯ ಪ್ರಮಾಣವು 97.82 ಆಗಿದೆ. 24 ಗಂಟೆಗಳ ಅವಧಿಯಲ್ಲಿ 55,755 ಮಂದಿ ಗುಣಮುಖರಾಗಿದ್ದಾರೆ ಎಂದು ಆರೋಗ್ಯ ಸಚಿವಾಲಯವು ಮಾಹಿತಿ ನೀಡಿದೆ.

ಲಸಿಕೆ ಪ್ರಮಾಣಪತ್ರದ ಅಗತ್ಯವಿಲ್ಲ (ಪುರಿ ವರದಿ): ದೇಶದಾದ್ಯಂತ ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಫೆ.21ರಿಂದ ಪುರಿಯ ಜಗನ್ನಾಥ ದೇವಾಲಯ ಪ್ರವೇಶಿಸಲು ಭಕ್ತರು ಲಸಿಕೆಯ ಎರಡು ಡೋಸ್ ಪ್ರಮಾಣಪತ್ರ ಅಥವಾ ಆರ್‌ಟಿಪಿಸಿಆರ್ ವರದಿ ಸಲ್ಲಿಸುವ ಅಗತ್ಯವಿಲ್ಲ ಎಂದು ಶ್ರೀ ಜಗನ್ನಾಥ ದೇವಾಲಯದ ಆಡಳಿತ ಮಂಡಳಿಯು ತಿಳಿಸಿದೆ.

ಷೇರುಪೇಟೆ ವಹಿವಾಟು ▲ 1,736



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,842
ಇಂದಿನ ಅಂತ್ಯ	17,352
▲	509
ದಿನದ ಗರಿಷ್ಠ	17375

ವಿನಿಮಯ ದರ

$ ಡಾಲರ್	75.32
£ ಪೌಂಡ್	102.11
€ ಯುರೊ	85.49
¥ ಯೆನ್ (100ಕ್ಕೆ)	65.11

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹435
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1355 (1360)
ಸೋಯಾ (ರಿಫೈನ್ಡ್)	₹1318(1325)
ಸೂರ್ಯಕಾಂತಿ (ರಿಫೈನ್ಡ್)	₹1330 (1320)
ಪಾಮೋಲಿನ್	₹1275 (1275)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

9ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕೆ.ಎಸ್.ಹನುಮಂತಪ್ಪ (M.A., K.S.A.S)
01–06–1955 – 16–02–2013
ನಿಮ್ಮ ಸವಿ ನೆನಪುಗಳು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ನೀವು ನಮ್ಮೆಲ್ಲರ ಬಾಳಿನಲ್ಲಿ ನಂದಾದೀಪವಾಗಿ ಬೆಳಗುತ್ತಿದ್ದೀರಿ
ಇಂತಿ: ಶ್ರೀಮತಿ ಮಂಜುಳಾ ಹೆಚ್, ಮಕ್ಕಳು ಮತ್ತು ಬಂಧು–ಮಿತ್ರರು

ಚಿರಸ್ಮರಣೆ

ಶ್ರೀಮತಿ ಸರೋಜಮ್ಮ
16–02–2002
ಇಂತಿ ಪತಿ: ಎಂ. ಚಿಕ್ಕಪ್ಪಯ್ಯ ಹಾಗೂ ಕುಟುಂಬದವರು

ಮುಂಬೈ ಧಾರಣೆ

ಶೇಂಗಾ

15-2-2022

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	9150-9200
ದಪ್ಪ ಗುಜರಾತ್(ಹೊಸ)	8400-8450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1365 (1370)
ಒಂದು ವಾರದ ಡೆಲಿವರಿ	1360 (1365)
ಸೋಯಾ ಕಚ್ಚಾ	1272 (1285)
ಪಾಮ್ ವಾರದ ಡೆಲಿವರಿ	1273 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1240)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
49,400 (49,600)
ಬೆಳ್ಳಿ ಕೆ.ಜಿ 63,050 (64,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಹೆಚ್ಚಲಿದೆ ಜಾಹೀರಾತು ಮೇಲಿನ ವೆಚ್ಚ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022ರಲ್ಲಿ ದೇಶದಲ್ಲಿ ಜಾಹೀರಾತು ವೆಚ್ಚಗಳು ಎಷ್ಟಾಗಬಹುದು ಎಂಬ ಅಂದಾಜನ್ನು ಗ್ರೂಪ್‌ಎಂ ಇಂಡಿಯಾ ಮಂಗಳವಾರ ಪ್ರಕಟಿಸಿದೆ.

ಇದರ ಅನ್ವಯ ಈ ವರ್ಷದಲ್ಲಿ ಒಟ್ಟು ₹ 1.07 ಲಕ್ಷ ಕೋಟಿಯಷ್ಟು ಹಣ ಜಾಹೀರಾತು ಗಳಿಗಾಗಿ ವೆಚ್ಚ ಆಗಲಿದೆ.

ಜಾಹೀರಾತು ವೆಚ್ಚಗಳಲ್ಲಿ 2022ರಲ್ಲಿ ಶೇಕಡ 22ರಷ್ಟು ಏರಿಕೆ ಆಗಲಿದೆ ಎಂದು ವರದಿ ಹೇಳಿದೆ. ಜಾಗತಿಕ ಮಟ್ಟದ ಟಾಪ್–10 ಮಾರುಕಟ್ಟೆಗಳ ಪೈಕಿ ಭಾರತದ ಮಾರುಕಟ್ಟೆಯು ಅತ್ಯಂತ ವೇಗದ ಬೆಳವಣಿಗೆ ಕಾಣಲಿದೆ.

‘ಸಾಂಕ್ರಾಮಿಕದ ಸಂದರ್ಭದಲ್ಲಿ ಡಿಜಿಟಲ್ ಮಾಧ್ಯಮದ ಮೂಲಕ ಜಾಹೀರಾತು ನೀಡುವುದು ಹೆಚ್ಚಾಗಿದೆ’ ಎಂದು ಗ್ರೂಪ್‌ಎಂನ ದಕ್ಷಿಣ ಏಷ್ಯಾದ ಸಿಇಒ ಪ್ರಶಾಂತ್ ಕುಮಾರ್ ಹೇಳಿದ್ದಾರೆ.

‘ಜಾಹೀರಾತಿಗಾಗಿ ಮಾಡುವ ವೆಚ್ಚಗಳಲ್ಲಿ ಶೇಕಡ 45ರಷ್ಟು ಪಾಲು ಡಿಜಿಟಲ್ ಮಾಧ್ಯಮದ ಕಡೆ ಹರಿಯಲಿದೆ’ ಎಂದು ಕಂಪನಿಯ ಬೆಳವಣಿಗೆ ಮತ್ತು ಪರಿವರ್ತನೆ ವಿಭಾಗದ ಅಧ್ಯಕ್ಷ ತುಷಾರ್ ವ್ಯಾಸ್ ಹೇಳಿದ್ದಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಬಿ.ಎಂ. ವಿನಯ್, ಸಾಗರ

- **ಪ್ರಶ್ನೆ: ನಾನು ಡಿಸ್ಕೌಂಟ್ ಬ್ರೋಕರೇಜ್ ಕಂಪನಿಯೊಂದರ ಆ್ಯಪ್ ಬಳಸಿ ಷೇರು ಹೂಡಿಕೆ ಮಾಡುತ್ತಿದ್ದೇನೆ. ಕಳೆದ ಎರಡು ವರ್ಷಗಳಿಂದ ಇದನ್ನು ನಾನು ಮಾಡುತ್ತ ಬಂದಿದ್ದೇನೆ. ನನ್ನ ಆದಾಯಕ್ಕೆ ಹೋಲಿಸಿದರೆ ದೊಡ್ಡ ಮೊತ್ತವನ್ನು ಷೇರುಗಳಲ್ಲಿ ತೊಡಗಿಸಿದ್ದೇನೆ. ನನ್ನ ಪ್ರಶ್ನೆ ಏನೆಂದರೆ, ಒಂದು ವೇಳೆ ಈ ಡಿಸ್ಕೌಂಟ್ ಬ್ರೋಕರೇಜ್ ಕಂಪನಿ ಬಾಗಿಲು ಮುಚ್ಚಿದಲ್ಲಿ ನಾನು ಖರೀದಿಸಿರುವ ಷೇರುಗಳ ಕಥೆ ಏನಾಗುತ್ತದೆ? ನಾನು ನಷ್ಟ ಅನುಭವಿಸಬೇಕಾಗುತ್ತದೆಯೇ? ನನ್ನ ಅನುಮಾನ ಪರಿಹರಿಸಿ.**

ಉತ್ತರ: ಭಾರತದಲ್ಲಿರುವ ಯಾವುದೇ ಬ್ರೋಕರೇಜ್ ಕಂಪನಿಗಳು, ಷೇರುಪೇಟೆಯಲ್ಲಿ ತಮ್ಮ ಗ್ರಾಹಕರ ಷೇರುಗಳಲ್ಲಿ ವ್ಯವಹರಿಸಬೇಕಾದರೆ, ಮೊದಲು ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ ಅಥವಾ ನ್ಯಾಷನಲ್ ಸೆಕ್ಯುರಿಟಿಸ್ ಡಿಪಾಸಿಟರಿ ಲಿಮಿಟೆಡ್ ಎಂಬ ಡಿಪಾಸಿಟರಿಗಳಲ್ಲಿ ತಮ್ಮ ದಾಖಲಾತಿ ಹೊಂದಿರಬೇಕಾಗುತ್ತದೆ. ಇವು ಹೂಡಿಕೆದಾರರ ಷೇರುಗಳ ಸಂರಕ್ಷಣೆಗಾಗಿರುವ ಸಂಸ್ಥೆಗಳು. ಷೇರುಪೇಟೆಯಲ್ಲಾಗುವ ಎಲ್ಲ ವ್ಯವಹಾರಗಳೂ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನಿಯಮಾನುಸಾರವೇ ನಡೆಯಬೇಕು. ಎಲ್ಲ ಬ್ರೋಕರೇಜ್ ಕಂಪನಿಗಳು ಪ್ರತಿದಿನದ ವಹಿವಾಟು ಮುಗಿದ ತಕ್ಷಣ ಹೂಡಿಕೆದಾರರ ಷೇರುಗಳ ವರ್ಗಾವಣೆ ವ್ಯವಹಾರವನ್ನು ತಾಳೆಮಾಡಿ ಡಿಪಾಸಿಟರಿಗಳಿಗೆ ಮಾಹಿತಿ ನೀಡಬೇಕು. ಇಲ್ಲಿ ಬ್ರೋಕರೇಜ್ ಕಂಪನಿಗಳದ್ದು ‘ಮಧ್ಯವರ್ತಿ’ ರೀತಿಯ ಪಾತ್ರ. ನಿಜ ಅರ್ಥದಲ್ಲಿ, ನೀವು ಮಾಡಿರುವ ಷೇರು ಹೂಡಿಕೆ ಎಲೆಕ್ಟ್ರಾನಿಕ್ ರೂಪದಲ್ಲಿ ಡಿಪಾಸಿಟರಿಗಳ ಅಧೀನದಲ್ಲಿ ಇರುತ್ತದೆಯೇ ಹೊರತು ಬ್ರೋಕರೇಜ್ ಕಂಪನಿಗಳ ನಿಯಂತ್ರಣದಲ್ಲಿ ಅಲ್ಲ.

ಬ್ರೋಕರೇಜ್ ಕಂಪನಿಗಳು ಡಿಪಾಸಿಟರಿಯ ಏಜೆಂಟ್ ಆಗಿ ಕೆಲಸ ನಿರ್ವಹಿಸುವ ಸಂಸ್ಥೆಗಳು. ಇವು ಹೂಡಿಕೆದಾರ ಹಾಗೂ ಡಿಪಾಸಿಟರಿಯ ನಡುವೆ ದಲ್ಲಾಳಿ ಕೆಲಸವನ್ನಷ್ಟೇ ಮಾಡುತ್ತವೆ. ನೀವು ಡಿಮ್ಯಾಟ್ ಖಾತೆ ಹೊಂದಿರುವುದು ಡಿಪಾಸಿಟರಿಗಳಲ್ಲೇ ಹೊರತು ಬ್ರೋಕರೇಜ್ ಕಂಪನಿಗಳಲ್ಲಿ ಅಲ್ಲ. ನಿಮ್ಮ ಪ್ರಶ್ನೆಯಂತೆ, ಬ್ರೋಕರೇಜ್ ಸಂಸ್ಥೆಯು ದಿವಾಳಿಯಾದರೆ, ಹೂಡಿಕೆದಾರರ ಖಾತೆಯಲ್ಲಿನ ಷೇರುಗಳನ್ನು ಅವರ ಆಯ್ಕೆಯಂತೆ ಇತರ ಯಾವುದೇ ಬ್ರೋಕರೇಜ್ ಸಂಸ್ಥೆಗಳಿಗೆ ವರ್ಗಾಯಿಸಲಾಗುತ್ತದೆ. ಹೊಂದಿದ ಷೇರುಗಳು ನಷ್ಟವಾಗುವ ಯಾವುದೇ ಆತಂಕ ಬೇಡ.

ನಿಮ್ಮ ಸಮಸ್ಯೆಯನ್ನು ಇನ್ನೂ ಒಂದು ಹಂತ ಮುಂದುವರಿಸಿ ಯೋಚಿಸೋಣ. ನಿಮ್ಮ ಷೇರು ವ್ಯವಹಾರದ ಖಾತೆಯಲ್ಲಿರುವ (ಟ್ರೇಡಿಂಗ್ ಖಾತೆ) ಹಣ ಬ್ರೋಕರೇಜ್ ಸಂಸ್ಥೆ ದಿವಾಳಿಯಾದ ಸಂದರ್ಭದಲ್ಲಿ ಏನಾಗುತ್ತದೆ ಎಂಬುದು ಗಂಭೀರವಾದುದು. ಇಂತಹ ಸಂದರ್ಭದಲ್ಲಿ ಸೆಬಿ ತನ್ನ ‘ಹೂಡಿಕೆದಾರರ ಸಂರಕ್ಷಣಾ ನಿಧಿ’ಯಿಂದ ಹೂಡಿಕೆದಾರರಿಗೆ ಪರಿಹಾರ ಕಲ್ಪಿಸಿಕೊಡುತ್ತದೆ. ಇದಕ್ಕಾಗಿ ಹೂಡಿಕೆದಾರರು, ಬ್ರೋಕರೇಜ್ ಸಂಸ್ಥೆ ದಿವಾಳಿಯಾದೊಡನೆ ಅಥವಾ ಗರಿಷ್ಠ ಮೂರು ವರ್ಷದೊಳಗೆ ಪರಿಹಾರಕ್ಕಾಗಿ ಸೆಬಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ.

ಹೆಸರು ಬೇಡ, ಊರು ಬೇಡ

- **ಪ್ರಶ್ನೆ: ನಾನು ದ್ವಿಚಕ್ರ ವಾಹನ ಖರೀದಿಗೆ ಸಾಲ ಮಾಡಬೇಕು ಎಂದು ತೀರ್ಮಾನಿಸಿದ್ದೇನೆ. ಅಂದಾಜು ₹ 60 ಸಾವಿರ ಸಾಲ ಮಾಡಬೇಕಾಗಿ ಬರಬಹುದು. ನನ್ನ ಪ್ರಶ್ನೆ ಹೀಗಿದೆ: ಸಾಲವನ್ನು ರಾಷ್ಟ್ರೀಕೃತ ಬ್ಯಾಂಕ್ ಅಥವಾ ಖಾಸಗಿ ಬ್ಯಾಂಕ್‌ಗಳಿಂದ ಮಾಡಿದರೆ ಒಳ್ಳೆಯದೋ? ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವುದು ಒಳ್ಳೆಯದೋ? ಆ್ಯಪ್ ಮೂಲಕ ಸಿಗುವ ಸಾಲವನ್ನು ಪಡೆದರೆ ಒಳಿತೋ? ಆ್ಯಪ್ ಮೂಲಕ ಸಾಲ ಪಡೆಯುವಾಗ ಹುಷಾರಾಗಿ ವ್ಯವಹಾರ ನಡೆಸಬೇಕು ಎಂದು ಹಲವು ಕಡೆ ಓದಿದ್ದೇನೆ. ನನ್ನ ಅನುಮಾನ ಬಗೆಹರಿಸಿ.**

ಉತ್ತರ: ಬ್ಯಾಂಕಿಂಗ್ ಸಂಸ್ಥೆಗಳಾಗಲಿ, ಬ್ಯಾಂಕೇತರ ಹಣಕಾಸು ಸಂಸ್ಥೆಗಳಾಗಿರಲಿ, ಅವುಗಳು ನಡೆಸುವ ಹಣಕಾಸು ವ್ಯವಹಾರಗಳೆಲ್ಲವೂ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಯಮಾವಳಿ ಅಥವಾ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಅಡಿ ನಡೆಯಬೇಕು. ರಾಷ್ಟ್ರೀಕೃತ ಬ್ಯಾಂಕ್, ಖಾಸಗಿ ಬ್ಯಾಂಕ್ ಅಥವಾ ಯಾವುದೇ ಬ್ಯಾಂಕೇತರ ಹಣಕಾಸು ಸಂಸ್ಥೆಯ ವ್ಯವಹಾರಗಳು ಆರ್‌ಬಿಐ ನಿಯಮಾವಳಿ ಪ್ರಕಾರವೇ ನಡೆಯಬೇಕು. ಹೀಗಾಗಿ ನೀವು ಎಲ್ಲಿ ಸಾಲ ಪಡೆದರೂ ಅನ್ವಯವಾಗುವ ಕಾನೂನಿನ ಚೌಕಟ್ಟು ಒಂದೇ.

ಬ್ಯಾಂಕಿಂಗ್ ಸಂಸ್ಥೆಗಳು ಪರಸ್ಪರ ಪೈಪೋಟಿ ನೀಡುತ್ತಿದ್ದು, ಗ್ರಾಹಕರನ್ನು ಆಕರ್ಷಿಸಲು ಅನೇಕ ಸೇವೆಗಳನ್ನು ನೀಡುತ್ತಿವೆ. ಆದರೂ ಸಾಲ ಮಂಜೂರಾತಿಯ ಮೂಲ ನಿಯಮಗಳು ಒಂದೇ ಆಗಿರುತ್ತವೆ. ಗ್ರಾಹಕರ ಸೇವೆಗಳ ವಿಚಾರದಲ್ಲಿ ದಸ್ತಾವೇಜು ಪ್ರಕ್ರಿಯೆ, ಸಾಲದ ಮೇಲಣ ಶುಲ್ಕ, ಬಡ್ಡಿ ದರ, ಮುಂಪಾವತಿ ಶುಲ್ಕ, ಗ್ರಾಹಕರಿಗೆ ಸಮಾಲೋಚನಾ ಸೇವೆ ಹಾಗೂ ಸ್ಪಂದಿಸುವ ಸಮಯಾವಕಾಶ ಇಂಥವುಗಳಲ್ಲಿ ಬೇರೆ ಬೇರೆ ಸಂಸ್ಥೆಗಳ ನಡುವೆ ಭಿನ್ನತೆ ಇರಬಹುದು. ಹೀಗಾಗಿ ಇಷ್ಟೂ ಅಂಶಗಳನ್ನು ಪರಿಗಣಿಸಿ, ನಿಮ್ಮ ಅಗತ್ಯಕ್ಕೆ ಹೊಂದಿಕೆಯಾಗುವ ಸಂಸ್ಥೆಯಿಂದ ಸಾಲ ಪಡೆಯಿರಿ. ನಿಮಗೆ ಆರ್ಥಿಕವಾಗಿ ಅಗ್ಗವಾಗುವ ಹಾಗೂ ಸರಳ ರೀತಿಯಲ್ಲಿ ಸಾಲ ಒದಗಿಸಿಕೊಡುವ ಸಂಸ್ಥೆಯನ್ನು ಆಯ್ಕೆ ಮಾಡಿ. ಇದರ ಮೊದಲು ಎರಡೋ ಮೂರೋ ಸಂಸ್ಥೆಗಳಿಂದ ಅವರು ವಿಧಿಸುವ ಬಡ್ಡಿ ದರ, ಮಾಸಿಕ ಕಂತು, ಷರತ್ತುಗಳ ಸಮಗ್ರ ಮಾಹಿತಿಯನ್ನು ಕಲೆಹಾಕಿ ತುಲನೆ ಮಾಡಿ ನಿರ್ಧಾರ ಕೈಗೊಳ್ಳಿ. ನಿಮ್ಮ ಕ್ರೆಡಿಟ್ ರೇಟಿಂಗ್ ಚೆನ್ನಾಗಿದ್ದರೆ, ಖಾಸಗಿ ಬ್ಯಾಂಕ್ ಅಥವಾ ಬ್ಯಾಂಕೇತರ ಹಣಕಾಸು ಸಂಸ್ಥೆಗಳಲ್ಲಿ ತುಸು ಕಡಿಮೆ ಬಡ್ಡಿ ದರಕ್ಕೆ ಸಾಲ ಕೋರುವ ಅವಕಾಶವಿರುತ್ತದೆ.

ಆ್ಯಪ್ ಮೂಲಕ ಸಾಲ ಪಡೆಯುವ ವಿಚಾರವಾಗಿ ಎರಡು ಮಾತು. ಅನಧಿಕೃತವಾಗಿ ಸಾಲ ನೀಡುವ ಡಿಜಿಟಲ್ ವೇದಿಕೆಗಳಿಂದ ಸಾಲ ತೆಗೆದುಕೊಳ್ಳದಂತೆ ಆರ್‌ಬಿಐ ಎಚ್ಚರಿಕೆ ನೀಡುತ್ತ ಬರುತ್ತಿದೆ. ಅಂತಹ ವೇದಿಕೆಗಳು ಸರಿಯಾದ ವೆಬ್‌ಸೈಟ್ ಹೊಂದಿವೆಯೇ, ಆರ್‌ಬಿಐ ನೀಡುವ ನೋಂದಣಿ ಪ್ರಮಾಣಪತ್ರ ಹೊಂದಿವೆಯೇ, ಗ್ರಾಹಕರ ಅಹವಾಲುಗಳನ್ನು ಪರಿಹರಿಸುವ ಗ್ರಾಹಕ ಸೇವಾ ದೂರವಾಣಿ ಅಥವಾ ಇ-ಮೇಲ್ ಹೊಂದಿವೆಯೇ ಎಂಬುದನ್ನು ಪರಿಶೀಲಿಸಿ. ಅಕ್ರಮವಾಗಿ ಸಾಲ ನೀಡುವ ಆ್ಯಪ್‌ಗಳ ಸಂಖ್ಯೆ ವೃದ್ಧಿಯಾಗುತ್ತಿದೆ, ವೈಯಕ್ತಿಕ ಮಾಹಿತಿ ಸೋರಿಕೆಯಾದ ವರದಿಗಳೂ ಇವೆ. ಆದ್ದರಿಂದ ಸಾಲ ಪಡೆಯುವ ವಿಚಾರದಲ್ಲಿ ಯೋಚಿಸಿ ಹಣಕಾಸು ಸಂಸ್ಥೆಗಳನ್ನು ಆರಿಸುವುದು ಸೂಕ್ತ. ಈ ದೃಷ್ಟಿಯಲ್ಲಿ ಹೇಳುವುದಾದರೆ, ಬ್ಯಾಂಕ್ ಅಥವಾ ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವುದೇ ಒಳಿತು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಭಾರತಕ್ಕೆ ‘ಜಿ–20’ ಅಧ್ಯಕ್ಷ ಸ್ಥಾನ: ಸಚಿವಾಲಯ ಸ್ಥಾಪನೆಗೆ ಅಸ್ತು

ನವದೆಹಲಿ (ಪಿಟಿಐ): ಭಾರತ ‘ಜಿ–20’ಯ ಅಧ್ಯಕ್ಷ ಸ್ಥಾನ ಅಲಂಕರಿಸುತ್ತಿರುವ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಸಿದ್ಧತೆಗಳಿಗೆ ಸಂಬಂಧಿಸಿ ಸಚಿವಾಲಯ ಸ್ಥಾಪನೆಗೆ ಕೇಂದ್ರ ಸಚಿವ ಸಂಪುಟ ಮಂಗಳವಾರ ಅನುಮೋದನೆ ನೀಡಿತು.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟದ ಸಭೆಯಲ್ಲಿ ಈ ಅನುಮೋದನೆ ನೀಡಲಾಯಿತು ಎಂದು ಪ್ರಕಟಣೆ ತಿಳಿಸಿದೆ.

20 ರಾಷ್ಟ್ರಗಳ ಸಂಘಟನೆಯಾದ ‘ಜಿ–20’ ಅಧ್ಯಕ್ಷ ಸ್ಥಾನವನ್ನು ಇದೇ ವರ್ಷ ಡಿ. 1ರಂದು ಭಾರತ ಅಲಂಕರಿಸಲಿದ್ದು, 2023ರ ನ. 30ರ ವರೆಗೆ ಅಧಿಕಾರಾವಧಿ ಇರಲಿದೆ. ಮುಂದಿನ ವರ್ಷ ಭಾರತವು ಜಿ–20 ಶೃಂಗಸಭೆಯನ್ನು ಆಯೋಜಿಸಲಿದೆ.

ಹಣ ಅಕ್ರಮ ವರ್ಗಾವಣೆ ವಿವಿಧೆಡೆ ಇ.ಡಿ ಶೋಧ

ನವದೆಹಲಿ: 1993ರ ಮುಂಬೈ ಸ್ಫೋಟ ಪ್ರಕರಣದ ಸೂತ್ರದಾರ ದಾವೂದ್ ಇಬ್ರಾಹಿಂ ವಿರುದ್ಧ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಈಚೆಗೆ ದಾಖಲಿಸಿಕೊಂಡಿದ್ದ ಎಫ್‌ಐಆರ್ ಆಧರಿಸಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮಂಗಳವಾರ ಮುಂಬೈನ ವಿವಿಧೆಡೆ ಶೋಧ ಕಾರ್ಯ ನಡೆಸಿದ್ದಾರೆ.

ಭೂಗತಲೋಕದ ಕಾರ್ಯಾಚರಣೆ, ಅಕ್ರಮ ಆಸ್ತಿ, ಹವಾಲ ವಹಿವಾಟಿಗಾಗಿ ನಡೆದಿರುವ ಹಣ ಅಕ್ರಮ ವರ್ಗಾವಣೆಯ ತನಿಖೆಯ ಸಂಬಂಧ ಶೋಧ ನಡೆದಿದೆ ಎಂದು ಇ.ಡಿ ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 430- 450
ನಡುಗೋಲು 500-550
ರಾಶಿ 600-650
ರಾಶಿ ಉತ್ತಮ 650-700
ಜರಡಿ 750 - 800
ಹೆರಕಿದ್ದು 1,100-1,150
ಹಸಿರು ಸಾಧಾರಣ 600-700
ಹಸಿರು ಉತ್ತಮ 900-950
ಹಸಿರು ಅತಿ ಉತ್ತಮ 1,200-1,250
ಕಾಳು ಮೆಣಸು 535 - 540
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-53000
ಭದ್ರಾವತಿ
ರಾಶಿ 44099-45879
ಚನ್ನಗಿರಿ
ರಾಶಿ 44099-46500
ಚಿತ್ರದುರ್ಗ
ಆಪಿ 45229-45669
ಬೆಟ್ಟೆ 36219-36659
ಕೆಂಪುಗೋಟು 31109-31510
ರಾಶಿ 44739-45189
ಕಾರ್ಕಳ
ಹೊಸತು 40000-45000
ಹಳತು 46000-53000
ಪುತ್ತೂರು
ಕೋಕ 11000-26000
ಹೊಸತು 27500-45000
ಸಾಗರ
ಬಿಳಿಗೋಟು 18239-27699
ಚಾಲಿ 21389-46359
ಕೋಕ 13189-28799
ಕೆಂಪುಗೋಟು 21129-37199
ರಾಶಿ 37569-45799
ಸಿಪ್ಪೆಗೋಟು 17389-17389
ಶಿವಮೊಗ್ಗ
ಬೆಟ್ಟೆ 46010-51369
ಗೊರಬಲು 17005-34399
ರಾಶಿ 42109-45822
ಸರಕು 52869-75696
ಸಿದ್ದಾಪುರ
ಬಿಳಿಗೋಟು 21899-35399
ಚಾಲಿ 45311-47100
ಕೋಕ 21299-29012
ಹೊಸಚಾಲಿ 33769-39399
ಕೆಂಪುಗೋಟು 24499-36269
ರಾಶಿ 43199-47699
ತಟ್ಟಿಬೆಟ್ಟೆ 36689-43099
ಶಿರಸಿ
ಬೆಟ್ಟೆ 31609-43818
ಬಿಳಿಗೋಟು 21599-38199
ಚಾಲಿ 28296-40651
ರಾಶಿ 40699-46909

ರೇಷ್ಮೆಗೂಡು ಮಾರುಕಟ್ಟೆ
ರಾಮನಗರ
ಮಿಶ್ರ ತಳಿ:400-773
ದ್ವಿತಳಿ: 560-960

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15950	16000	16000	247.55 ಸೆಂಟ್ಸ್
ಎಸಿ	7810	7400	7700	
ಆರ್‌ಪಿ	7650	7600	7900	
ಆರ್‌ಸಿ	4080	3950	4025	2263ಡಾಲರ್ಸ್

ಗಳಿಕೆಯ ಹಾದಿಗೆ ಮರಳಿದ ಷೇರುಪೇಟೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸಂವೇದಿ ಸೂಚ್ಯಂಕಗಳು ಮಂಗಳವಾರದ ವಹಿವಾಟಿನಲ್ಲಿ ಭಾರಿ ಏರಿಕೆ ದಾಖಲಿಸಿದವು. ರಷ್ಯಾ ಮತ್ತು ಉಕ್ರೇನ್ ನಡುವಿನ ಬಿಕ್ಕಟ್ಟು ತಿಳಿಯಾಗುವ ಸೂಚನೆಗಳು ದೊರೆತಿದ್ದು ಸೂಚ್ಯಂಕಗಳ ಏರಿಕೆಗೆ ಒಂದು ಕಾರಣವಾಯಿತು. ಇದರ ಜೊತೆಯಲ್ಲೇ, ಹೂಡಿಕೆದಾರರು ಕಡಿಮೆ ಬೆಲೆಗೆ ಸಿಗುತ್ತಿದ್ದ ಇಂಧನ, ಹಣಕಾಸು ಮತ್ತು ಐ.ಟಿ. ವಲಯದ ಷೇರುಗಳನ್ನು ಖರೀದಿಸಿದರು.

ಉಕ್ರೇನ್ ಗಡಿಯಲ್ಲಿ ಜಮಾವಣೆ ಆಗಿದ್ದ ರಷ್ಯಾದ ಕೆಲವು ಸೈನಿಕರು ತಮ್ಮ ನೆಲೆಗಳಿಗೆ ಮರಳುತ್ತಿದ್ದಾರೆ ಎಂಬ ವರದಿಗಳ ಕಾರಣದಿಂದಾಗಿ ಯುರೋಪಿನ ಷೇರು ಮಾರುಕಟ್ಟೆಗಳಲ್ಲಿ ಉತ್ಸಾಹದ ವಹಿವಾಟು ಕಂಡುಬಂತು. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಹೆಚ್ಚಿಸಿಕೊಂಡಿದ್ದು ಕೂಡ ಭಾರತದ ಷೇರುಪೇಟೆಗಳ ಉತ್ಸಾಹವನ್ನು ಹೆಚ್ಚಿಸಿತು ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮಂಗಳವಾರ 1,736 ಅಂಶ ಏರಿಕೆ ದಾಖಲಿಸಿತು. 2021ರ ಫೆಬ್ರುವರಿ 1ರ ನಂತರ ಒಂದು ದಿನದಲ್ಲಿ ಸೂಚ್ಯಂಕ ಕಂಡಿರುವ ಅತಿದೊಡ್ಡ ಏರಿಕೆ ಇದು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 509 ಅಂಶ ಏರಿಕೆಯಾಯಿತು.

ಸಾಂದರ್ಭಿಕ ಚಿತ್ರ

‘ಜನವರಿಯಲ್ಲಿ ದೇಶದ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 6.01ಕ್ಕೆ ತಲುಪಿರುವುದು ತುಸು ಅವಧಿಯವರೆಗೆ ಮಾರುಕಟ್ಟೆಯ ಚಿಂತೆಗೆ ಕಾರಣವಾಗಲಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮಾರುಕಟ್ಟೆಯಲ್ಲಿ ಈಗ ಕಂಡುಬಂದಿರುವ ಭಾರಿ ಪ್ರಮಾಣದ ಏರಿಳಿತಗಳು ತುಸು ಅವಧಿಯವರೆಗೆ ಮುಂದುವರಿಯುವ ನಿರೀಕ್ಷೆ ಇದೆ ಎಂದು ರೆಲಿಗೇರ್ ಬ್ರೋಕಿಂಗ್‌ನ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 28 ಪೈಸೆ ಹೆಚ್ಚಾಗಿ 75.32ಕ್ಕೆ ತಲುಪಿದೆ.

ಎಬಿಜಿ ಶಿಪ್‌ಯಾರ್ಡ್ ಪ್ರಕರಣ: ಲುಕ್‌ಔಟ್ ನೋಟಿಸ್

ನವದೆಹಲಿ: ಎಬಿಜಿ ಶಿಪ್‌ಯಾರ್ಡ್ ಕಂಪನಿಯ ₹22,842 ಕೋಟಿ ವಂಚನೆ ಪ್ರಕರಣದಡಿ ಕಂಪನಿಯ ಮಾಜಿ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ರಿಷಿ ಕಮಲೇಶ್ ಅಗರ್‌ವಾಲ್ ಹಾಗೂ ಇತರ 8 ಮಂದಿ ವಿರುದ್ಧ ಕೇಂದ್ರ ತನಿಖಾ ದಳ(ಸಿಬಿಐ) ಲುಕ್‌ಔಟ್ ನೋಟಿಸ್ ಜಾರಿ ಮಾಡಿದೆ.

‘ಆರೋಪಿಗಳು ದೇಶ ಬಿಟ್ಟು ಹೋಗದಂತೆ ನೋಟಿಸ್ ಜಾರಿ ಮಾಡಲಾಗಿದೆ’ ಎಂದು ಸಿಬಿಐ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಐಸಿಐಸಿಐ ಬ್ಯಾಂಕ್ ನೇತೃತ್ವದ 24 ಬ್ಯಾಂಕ್‌ಗಳ ಒಕ್ಕೂಟಕ್ಕೆ ವಂಚಿಸಿರುವ ಆರೋಪದ ಅಡಿ ಎಬಿಜಿ ಶಿಪ್‌ಯಾರ್ಡ್ ಕಂಪನಿ ಮತ್ತು ಅದರ ಆಗಿನ ಅಧ್ಯಕ್ಷ, ವ್ಯವ ಸ್ಥಾಪಕ ರಿಷಿ ಕಮಲೇಶ್ ಅಗರ್‌ವಾಲ್ ಮತ್ತು ಇತರರ ವಿರುದ್ಧ 2019ರ ನವೆಂಬರ್ 8ರಂದು ಸಿಬಿಐ ಪ್ರಕರಣ ದಾಖಲಿಸಿತ್ತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

URGENT REQUIREMENT: LED-TECHNICIAN, Looking For Candidates From any ITI/ Diploma, Freshers Can Apply. 9739320044.

General

✔ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC PUC Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

ಮೂಡಬಿದ್ರೆಯಲ್ಲಿರುವ IN ಕಂಪೆನಿಗೆ ಯುವಕ-ಯುವತಿಯರು ಬೇಕಾಗಿದ್ದಾರೆ. ಉತ್ತಮ ವೇತನದೊಂದಿಗೆ ಊಟ, ವಸತಿಯುಚಿತ. 7619503727/ 7204965727.

✔ ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-48,000/- 9739066244, 7406066011

✔ ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

Marketing & Sales

LALSWEETS PVT Ltd Urgently require sales Representative for immediate joining Male candidates with 2 wheeler Salary up to 21K+ Conveyance+ Incentives Please contact 8660499891/ 8884564876

Part-Time Jobs

✔ ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ವಯಸ್ಸಾದವರನ್ನು,ವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಮಹಿಳೆಯರು, ಯುವಕರು ಬೇಕಾಗಿದ್ದಾರೆ. ತಕ್ಷಣ ವಸತಿಯೂಟದೊಂದಿಗೆ ಸಂಬಳ 16,000 - 23,000. 6366324863, 9663196788

ಡ್ರೈವರ್ ಮತ್ತು ಮನೆ ಕೆಲಸದವರು ಬೇಕಾಗಿದ್ದಾರೆ
ಒಂದೇ ಕುಟುಂಬದರಾದರೆ ವಸತಿ ಸೌಲಭ್ಯ ಹಾಗೂ ಮಾಸಿಕ 25000/– ವೇತನ
ನಾಗರಭಾವಿ, ಬೆಂಗಳೂರು.
ಸಂಪರ್ಕಿಸಿ
98450 41912
99728 68241

Walk-in

PURCHASE OFFICER for manufacturing company at Malleshwaram Need to join immediately. Contact: 9741165652

LIASOINING OFFICER Full-time Employee required for manufacturing company in Nelamangala for land, labour, pollution board related issues. :9741165652

SENIOR DESIGN Engineer, Experience in designing machinery for furnace sheet metal fabrication company in Malleshwaram must join immediately. CTC: 30K- 50K :9844520035

FITTERS AND Welders required for factory at Nelamangala, Must join immediately. Salary: 20k- 25k, with accommodation :9003755930

SENIOR PROJECT Manager Required, Manufacturing company in Nelamangala for sheet metal fabrication of furnaces. Must join immediately. CTC: 35k-50K :9844520055

ವ್ಯಾಪಾರ

Business Offers

Finance

COMPANY PROVIDES All Types of Loan Personal, Property, Project & Business. ROI 4% (Per Annum) Required Agents & DSA, 55000/- Salary & 4% Commission: 8950259135

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಭವಿಷ್ಯ

Astrology

★॥ಶ್ರೀಶಕ್ತಿ ಸಾಯಿಬಾಬಾ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್_ಕಛೇರಿ, ಸಾಲಬಾಧೆ, ಯಾವುದೇ_ಸಮಸ್ಯೆಯಿದ್ದರೂ. 100% ಶಾಶ್ವತ_ಪರಿಹಾರ. 9591588881

'ವಿಶ್ವಖ್ಯಾತಿಯ ದಕ್ಷಿಣಕನ್ನಡ' ಕೇರಳಿಯ ದೈವಸಂಭೂತ ಜ್ಯೋತಿಷ್ಯ,ವಾಸ್ತುಗುರು ಶ್ರೀದೇವಾನಂದನ್ ರವರಿಂದ ಜೀವನದ ಸರ್ವತೋಮುಖಿ ಅಭಿವೃದ್ಧಿ,ಸುಖಶಾಂತಿ, ನೆಮ್ಮದಿಗಾಗಿ,ಸರ್ವಮನಇಚ್ಛ, ಮಹಾವಶೀಕರಣ,ಆಕರ್ಷಣಾ, ಸಂಮೋಹನ ಮತ್ತು ಶತ್ರು ಸಂಬಂಧಿತ,ದುಷ್ಟಶಕ್ತಿ ಮಾಯಾವಿಗಳ ಇಂದೇ ಪರಿಹಾರಕ್ಕಾಗಿ.9845005009

★॥ವಶೀಕರಣ ಸ್ಪೆಷಲಿಸ್ಟ್॥★ ಸ್ತ್ರೀ_ಪುರುಷ ವಶೀಕರಣ, ಸಂಭೋಗ ವಶೀಕರಣ, ಗಂಡ_ಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 27 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9008968867

★ಅಂಭಾಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೇಯಿರಲಿ 2 ದಿನದಲ್ಲಿ ಪರಿಹಾರ.9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★॥ನಂ.1 ಸ್ತ್ರೀಪುರುಷ॥★ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಒಂದು ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ. ಪಾಂಡುರಂಗ ಗುರೂಜಿ. 9972033162

ಪ್ರವಾಸ

Travel

ವಾರಣಾಸಿ, ಗಯಾ, ನೈಮಿಷಾರಣ್ಯ, ಅಯೋಧ್ಯ 14.02.2022, 09.03.2022 ರಿಂದ 7 ದಿನಗಳು/ ವಿಜಯವಾಡ, ಭದ್ರಾಚಲಂ, ಅನ್ನಾವರಂ, ಪಂಚರಾಮ ಮಂದಿರಗಳು 07.03.2022 ರಿಂದ 10 ದಿನಗಳು/ ಸೋಮನಾಥ್, ದ್ವಾರಕಾ,ಉಜ್ಜಯಿನಿ, ಓಂಕಾರೇಶ್ವರ್, ಮಾತ್ರಗಯಾ, ಅಷ್ಟಜ್ಯೋತಿರ್ಲಿಂಗಗಳು 09.03.2022 ರಿಂದ 15/10 ದಿನಗಳು/ ಗಂಗೋತ್ರಿ, ಯಮುನೋತ್ರಿ, ಕೇದಾರನಾಥ್, ಬದರಿನಾಥ್, ಕಾಶಿ,ಗಯಾ 27.04.2022,29.04.2022 ರಿಂದ 14/18 ದಿನಗಳು ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್, ಚಾಮರಾಜಪೇಟೆ, ಬೆಂಗಳೂರು-18

ಆನಂದ್ ವಿಹಾರಿಯಿಂದ ಸುಸಜ್ಜಿತ ವ್ಯವಸ್ಥೆಗಳೊದಿಗೆ 04.03.2022, 25.03.2022 ರಿಂದ 7 ದಿನಗಳ ಶಿರಡಿ, ಪಂಡರಾಪುರ, ಬಾದಾಮಿ. 18.03.2022 ರಿಂದ 8/17 ದಿನಗಳ ಗುಜರಾತ್, ರಾಜಸ್ಥಾನ್. 21.03.2022, 03.04.2022 ರಿಂದ 7/13 ದಿನಗಳ ಕಾಶಿ,ಗಯಾ, ಹರಿದ್ವಾರ. 12.05.2022, 26.05.2022 ರಿಂದ 13/15 ದಿನಗಳ ಚಾರ್-ಧಾಮ್-ಯಾತ್ರೆ. 03.04.2022, 08.04.2022 ರಿಂದ 11/17 ದಿನಗಳ ಪುರಿ.ಕಲ್ಕತ್ತ,ಕಾಶಿ, ನೇಪಾಳ. 03.04.2022, 25.04.2022 ರಿಂದ 12 ದಿನಗಳ ಶಿಮ್ಲಾ,ಮನಾಲಿ, ವೈಷ್ಣೋದೇವಿ ಪ್ರವಾಸಗಳಿಗೆ ಸಂಪರ್ಕಿಸಿ: 080-23385837, 8088887677

10/03/2022, 11/15 ದಿನಗಳು ದೆಹಲಿ, ಆಗ್ರ, ಅಲಹಾಬದ್,ಕಾಶಿ, ಗಯಾ, ಅಯೋಧ್ಯ, ಹರಿದ್ವರ, ಇತ್ಯಾದಿ. (ಕೆಲವೇ ಸೀಟುಗಳಿವೆ) ಫೆಬ್ರವರಿ, ಮಾರ್ಚ್ ಏಪ್ರಿಲ್‌ನಲ್ಲಿ ಅಂಡಮಾನ್ ಹವಳದ್ವೀಪ Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9845560219/ 9739847429.

06.04.2022, 10 ದಿನಗಳು ದೆಹಲಿ, ಅಮೃತ್ಸರ್, ವೈಷ್ಣೋದೇವಿ, ಕುಲುಮನಾಲಿ/ 25.04.2022, 8 ದಿನಗಳು ಕಾಶಿ,ಗಯಾ,ಕಲ್ಕತ್ತಾ, ಭುವನೇಶ್ವರ್ ಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ, ಬೆಂಗಳೂರು-03. 9448294477

ಆರ್. ಗಾಂಧಿ ಟೂರ್ಸ್: 3.3.2022 4ದಿನಗಳು ಅಹೋಬಿಲ, ಶ್ರೀಶೈಲ. ಮಂತ್ರಾಲಯ, 13.5.2022 17ದಿನಗಳು ವೈಷ್ಣೋದೇವಿ, ಕುಲುಮನಾಲಿ ಸಪ್ತಶಕ್ತಿಪೀಠ. 9902433500/ 9945445809

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 17/03/22 ನೇಪಾಳ, ಮುಕ್ತಿನಾಥ, ಕಾಶಿ. 14/04/22 ದೆಹಲಿ, ವೈಷ್ಣೋದೇವಿ, ಕುಲು ಮನಾಲಿ. 12/05/22 ಚಾರ್ಧಾಮ್ ಯಾತ್ರಾ. 9880621353

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.



ಭಾರತೀಯ ಡಿಜಿಟಲ್ ಗೇಮ್‌ಗಳು

ಭಾರತೀಯ ಪರಿಕಲ್ಪನೆಗಳನ್ನು ಇಟ್ಟುಕೊಂಡು ಡೆವಲಪ್ ಮಾಡಿರುವ ಗೇಮ್‌ಗಳು ಭಾರತೀಯ ಸಂಸ್ಕೃತಿ, ಪರಿಸರ ಹಾಗೂ ಹಿನ್ನೆಲೆಯ ಮೇಲೆ ಬೆಳಕು ಚೆಲ್ಲುತ್ತವೆ. ಇದರಿಂದ, ಮಕ್ಕಳಿಗೆ ಗೇಮ್‌ನ ಖುಷಿ ಸಿಗುವುದರ ಜೊತೆಗೆ ಭಾರತೀಯ ಸಂಸ್ಕೃತಿಯ ಪರಿಚಯವೂ ಆಗುತ್ತದೆ.

ಕೃಷ್ಣ ಭಟ್

ಮೊಬೈಲ್ ನಮ್ಮೆಲ್ಲರ ಕೈಗೆ ಬರುವುದಕ್ಕೂ ಮೊದಲು ಚಿನ್ನಿದಾಂಡು, ಬುಗುರಿಗಳೆಲ್ಲ ಭಾರಿ ಕುತೂಹಲ ಕೆರಳಿಸುವ ಆಟಗಳಾಗಿದ್ದವು. ಆಮೇಲೆ ಕ್ರಿಕೆಟ್ ಕ್ರೇಜ್ ಬಂತು. ಕ್ರಿಕೆಟ್ ನೋಡುವುದಷ್ಟೇ, ಆಡುವುದೂ ಇತ್ತು. ಕೈಗೆ ಸ್ಮಾರ್ಟ್‌ಫೋನ್‌ಗಳು ಬಂದ ಮೇಲೆ ಮಕ್ಕಳು ಮೈದಾನಕ್ಕಿಳಿದು ಬೆವರುವುದಿಲ್ಲ. ಮನೆಯಲ್ಲಿನ ಕೋಚ್‌ನಲ್ಲೋ ಬೀನ್‌ಬ್ಯಾಗ್‌ನಲ್ಲೋ ಕುಳಿತು ಬೆನ್ನು ಬೆವರಿಸಿಕೊಳ್ಳುತ್ತಾ, ಸ್ಮಾರ್ಟ್‌ಫೋನ್‌ನಲ್ಲಿನ ಗೇಮ್‌ನಲ್ಲಿ ಮುಳುಗುತ್ತಾರೆ.

ಅಲ್ಲಿ ಚಿನ್ನಿದಾಂಡು, ಬುಗುರಿಗಳೆಲ್ಲ ಇಲ್ಲ. ಅಲ್ಲಿರುವುದು ಏನಿದ್ದರೂ ಗನ್, ಬಾಂಬ್, ಕತ್ತಿ, ಕುದುರೆಗಳೇ! ವಿದೇಶದ ಯಾವುದೋ ಒಂದು ರಾಜ ಮನೆತನ. ಅದರಲ್ಲಿ ಕಳ್ಳಕಾಕರು, ಅವರನ್ನು ಸದೆಬಡಿಯುವುದು ಅಥವಾ ಇನ್ನೂ ಹುಚ್ಚು ಕ್ರೇಜ್ ಬೇಕೆಂದರೆ, ಆಡುವವರೇ ಕಳ್ಳರು! ಆ ಅರಮನೆಯನ್ನು ಲೂಟಿ ಮಾಡುವುದು. ಇಂಥ ಗೇಮ್‌ಗಳು ಜನಪ್ರಿಯವಾಗುತ್ತಾ ಹಲವು ವರ್ಷಗಳೇ ಸಂದಿವೆ. ಆದರೆ, ಇಲ್ಲಿ ಇರುವುದೆಲ್ಲವೂ ವಿದೇಶಿ ಸೆಟ್ಟಿಂಗ್‌ಗಳು. ಏಕೆಂದರೆ, ಇವನ್ನೆಲ್ಲ ಡೆವಲಪ್ ಮಾಡಿರುವುದು ವಿದೇಶಿ ಗೇಮಿಂಗ್ ಡೆವಲಪ್ ಮಾಡುವ ಸಂಸ್ಥೆಗಳೇ. ಹೀಗಾಗಿ, ಅವು ಸಹಜವಾಗಿ ವಿಶ್ವದ ಎಲ್ಲ ಜನರನ್ನೂ ಮೆಚ್ಚಿಸುವುದಕ್ಕಾಗಿ ಯುರೋಪ್ ದೇಶಗಳ ಸೆಟ್ಟಿಂಗ್‌ಗಳನ್ನೇ ಮೂಲವನ್ನಾಗಿ ಇಟ್ಟುಕೊಳ್ಳುತ್ತವೆ. ಆದರೆ, ಕಳೆದ 2-3 ವರ್ಷಗಳಿಂದ ಭಾರತೀಯ ಗೇಮ್‌ಗಳಿಗೂ ಇದೇ ರೀತಿಯ ಆಸಕ್ತಿ ಮೂಡಿದೆ. ಹಲವು ಹೂಡಿಕೆದಾರರು ಭಾರತೀಯ ಹಿನ್ನೆಲೆಯನ್ನು ಹೊಂದಿರುವ ಗೇಮ್ ಪರಿಕಲ್ಪನೆಗಳನ್ನು ಅಭಿವೃದ್ಧಿಪಡಿಸುತ್ತಿವೆ. ಈಗಾಗಲೇ, 'ರಾಜಿ: ಆ್ಯನ್ ಏನ್ಶಿಯಂಟ್ ಎಪಿಕ್' ಎಂಬ ಗೇಮ್ ಬಿಡುಗಡೆಯಾಗಿದ್ದು, ಅದು ಸಾಕಷ್ಟು ಸದ್ದನ್ನೂ ಮಾಡಿದೆ. ಪುಣೆ ಮೂಲದ ನಾಡ್ಡಿಂಗ್ ಹೆಡ್ಸ್ ಗೇಮ್ಸ್ ಎಂಬ ಸಂಸ್ಥೆ ಈ ಗೇಮ್ ಡೆವಲಪ್ ಮಾಡಿದೆ. 2020 ರಲ್ಲೇ ಬಿಡುಗಡೆಯಾದ ಈ ಗೇಮ್‌ಗೆ ಹಲವು ಪ್ರಶಸ್ತಿಗಳೂ ಸಂದಿವೆ. ಈ ಗೇಮ್ ಸಾಕಷ್ಟು ಸದ್ದು ಮಾಡುತ್ತಿದ್ದಂತೆಯೇ, ಭಾರತೀಯ ಮೂಲದ ಇಂಥ ಗೇಮ್‌ಗಳತ್ತ ಡೆವಲಪರ್‌ಗಳ ಚಿತ್ತ ಹರಿದಿದೆ.

ಕಳೆದ ಎರಡು ವರ್ಷಗಳಲ್ಲಿ ಕೋವಿಡ್‌ನಿಂದಾಗಿ ಮಕ್ಕಳು ಮನೆಯಲ್ಲಿ ಹೆಚ್ಚು ಕಾಲ ಇರುವುದು ಮತ್ತು ಶಾಲಾಶಿಕ್ಷಣದಲ್ಲಿ ವ್ಯತ್ಯಯ ಆಗಿರುವುದರಿಂದ ಗೇಮ್‌ಗಳ ಬಳಕೆದಾರರ ಸಂಖ್ಯೆ ವ್ಯಾಪಕವಾಗಿ ಏರಿಕೆಯಾಗಿದೆ. ಮಕ್ಕಳು ಮೊದಲಿಗಿಂತ ಹೆಚ್ಚು ಕಾಲ ಸ್ಮಾರ್ಟ್‌ಫೋನ್‌ನಲ್ಲಿ ಕಳೆಯುತ್ತಿದ್ದಾರೆ. ಅದರ ಜೊತೆಗೆ, ಪಿಸಿ ಹಾಗೂ ಎಕ್ಸ್‌ಬಾಕ್ಸ್ ಗೇಮಿಂಗ್‌ಗೂ ಭಾರತದಲ್ಲಿ ಮಕ್ಕಳು ಉತ್ಸಾಹ-



ಆಸಕ್ತಿಗಳನ್ನು ತೋರಿಸುತ್ತಿದ್ದಾರೆ.

ಭಾರತದಲ್ಲಿ ಗೇಮ್ ಡೆವಲಪರ್‌ಗಳಿಗೇನೂ ಕೊರತೆ ಇಲ್ಲ. ಆದರೆ, ಗೇಮ್ ಡೆವಲಪ್ ಮಾಡುವಲ್ಲಿ ಭಾರತೀಯತೆಯ ಕೊರತೆ ಇದೆ. ರಾಜಿ ಜೊತೆಗೆ 'ಯೋಧ' ಕೂಡ ಬಿಡುಗಡೆಗೆ ಸಿದ್ಧವಾಗುತ್ತಿದೆ. ಹೈದರಾಬಾದ್ ಮೂಲದ ಆಗ್ರೆ ಹೆಡ್ ಸ್ಟುಡಿಯೋಸ್ 'ಯೋಧ' ಎಂಬ ಗೇಮ್ ಅಭಿವೃದ್ಧಿಪಡಿಸುತ್ತಿದೆ. ಇವೆಲ್ಲ ಅಂತರರಾಷ್ಟ್ರೀಯ ಗುಣಮಟ್ಟದಲ್ಲಿ ಬಿಡುಗಡೆಯಾಗುತ್ತಿರುವುದು ಅತ್ಯಂತ ಕುತೂಹಲದ ಸಂಗತಿ.

ಇತ್ತೀಚೆಗೆ ಬಿಡುಗಡೆಯಾದ ಇನ್ನೊಂದು ಗೇಮ್ ಹೊಯ್ಸಳರ ಕಾಲದ ಹಿನ್ನೆಲೆಯನ್ನು ಹೊಂದಿದೆ. 'ಅನ್‌ಚಾರ್ಟೆಡ್: ದಿ ಲಾಸ್ಟ್ ಲೆಗಸಿ' ಎಂಬ ಈ ಗೇಮ್‌ನಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ವಿವಿಧ ಕಡೆಗೆ ಓಡಾಡಿ ಗಣೇಶನ ದಂತವನ್ನು ಹುಡುಕಾಟ ನಡೆಸುವುದೇ ಮುಖ್ಯ ಸಂಗತಿ. ಈ ಗೇಮ್ ತುಂಬ ಜನಪ್ರಿಯವೂ ಆಯಿತು. ಇದೇ ರೀತಿ ಟೊರೊಂಟೊ ಮೂಲದ ವಿಸ್ಸೈ ಸ್ಟುಡಿಯೋಸ್ ಭಾರತೀಯ ಅಡುಗೆಯ ಗೇಮ್ 'ವೆನ್‌ಬಾ' ಅನ್ನು ಎರಡು ವರ್ಷಗಳ ಹಿಂದೆ ಪರಿಚಯಿಸಿತ್ತು. ಇದು ಕೂಡ ಗೇಮ್ ಪ್ರಿಯರಿಗೆ ಇಷ್ಟವಾಗಿತ್ತು.

ಸಾಮಾನ್ಯವಾಗಿ ಭಾರತೀಯ ಗೇಮ್ ಡೆವಲಪರ್‌ಗಳಿಗೆ ಹೂಡಿಕೆದಾರರನ್ನು ಹುಡುಕುವುದೇ ದೊಡ್ಡ ಸಮಸ್ಯೆಯಾಗುತ್ತಿತ್ತು. ಭಾರತೀಯ ಗೇಮ್‌ಗಳು ಕಡಿಮೆ ಬಜೆಟ್‌ನವು ಎಂಬ ಒಂದು ಪೂರ್ವಗ್ರಹ ಗೇಮಿಂಗ್ ಮಾರ್ಕೆಟ್‌ನಲ್ಲಿ ಈಗಾಗಲೇ ಬೆಳೆದು ನಿಂತುಬಿಟ್ಟಿದೆ. ಅದನ್ನು ಮೀರಿ, ದೊಡ್ಡ ಬಜೆಟ್‌ನ ಗೇಮ್ ಡೆವಲಪ್ ಮಾಡುವುದು ಸುಲಭದ ಮಾತಲ್ಲ. ಹೂಡಿಕೆದಾರರನ್ನು ಮೆಚ್ಚಿಸಲು ಇವರು ಪಾಶ್ಚಾತ್ಯ ಸಂಸ್ಥೆಗಳಿಂದ ಹೆಚ್ಚಿನ ಪರಿಶ್ರಮವನ್ನು ಹಾಕಬೇಕಾಗುತ್ತಿದೆ. ಏಕೆಂದರೆ, ಮಾರುಕಟ್ಟೆಯಲ್ಲಿ ಭಾರತೀಯವಾದ ದೊಡ್ಡ ಬಜೆಟ್‌ನ ಗೇಮ್‌ಗಳಿಗೆ ಬೇಡಿಕೆ ಇಲ್ಲ ಎಂಬ ಪೂರ್ವಗ್ರಹ ಈಗಾಗಲೇ ಬೇರುಬಿಟ್ಟಿದೆ. ಈ ನಿಟ್ಟಿನಲ್ಲಿ ಹೊಸ ತಲೆಮಾರಿನ ಗೇಮ್ ಡೆವಲಪ್‌ಮೆಂಟ್ ಸಂಸ್ಥೆಗಳು ಹುಟ್ಟಿಕೊಂಡು ಕಾರ್ಯನಿರತವಾಗಿವೆ.

ಇದೆಲ್ಲದರ ಜೊತೆಗೆ ಇನ್ನೊಂದು ಕುತೂಹಲಕರ ಸಂಗತಿಯೆಂದರೆ, ಭಾರತೀಯ ಪರಿಕಲ್ಪನೆಗಳನ್ನು ಇಟ್ಟುಕೊಂಡು ಗೇಮ್ ಡೆವಲಪ್ ಮಾಡುವ ನಿಟ್ಟಿನಲ್ಲಿ ಇತ್ತೀಚೆಗೆ ವಿದೇಶಿ ಸಂಸ್ಥೆಗಳೂ ಆಸಕ್ತಿ ತೋರಿಸುತ್ತಿವೆ. ಪಶ್ಚಿಮ ಘಟ್ಟದ ಹಿನ್ನೆಲೆ ಹೊಂದಿರುವ ಅನ್‌ಚಾರ್ಟೆಡ್ ಗೇಮ್ ಅನ್ನು ಡೆವಲಪ್ ಮಾಡಿದ್ದು ಅಮೆರಿಕದ ನಾಟಿ ಡಾಗ್ ಎಂಬ ಸಂಸ್ಥೆ. ಹಾಗೆಯೇ, ಇದೇ ರೀತಿಯ ಹಲವು ಗೇಮ್‌ಗಳು ಕಳೆದ ಎರಡು ವರ್ಷಗಳಲ್ಲಿ ಮಾರುಕಟ್ಟೆಗೆ ಬಂದಿದ್ದು, ಇವು ಸಾಕಷ್ಟು ಜನಪ್ರಿಯವೂ ಆದವು. ಇವೆಲ್ಲ ಭಾರತೀಯ ಸಂಸ್ಕೃತಿ, ಪರಿಸರ ಹಾಗೂ ಹಿನ್ನೆಲೆಯ ಮೇಲೆ ಬೆಳಕು ಚೆಲ್ಲುತ್ತವೆ. ಇದರಿಂದ, ಮಕ್ಕಳಿಗೆ ಗೇಮ್‌ನ ಖುಷಿ ಸಿಗುವುದರ ಜೊತೆಗೆ ಭಾರತೀಯ ಸಂಸ್ಕೃತಿಯ ಪರಿಚಯವೂ ಆಗುತ್ತದೆ.

ಕಣ್ಣಿಗೆ ಕಾಣದ ಮಾಸ್ಕ್!

ಕ್ಷಮಾ ವಿ. ಭಾನುಪ್ರಕಾಶ್

ಎಲ್ಲೆಲ್ಲೂ ಬಗೆಬಗೆಯ ಚಿತ್ತಾರದ, ಅನೇಕ ಪದರಗಳ, ತೊಳೆದು ಬಳಸಬಹುದಾದ ಅಥವಾ ಬಳಸಿ ಬಿಸಾಡಬಹುದಾದ ಮಾಸ್ಕ್‌ಗಳ ಹಾವಳಿ. ಅದರಲ್ಲೂ ಸೀರೆ, ಕುರ್ತಾಗಳ ಜೊತೆಗೆ ಮ್ಯಾಚಿಂಗ್ ಮಾಸ್ಕ್ ಬೇರೆ! ಹೀಗಿರುವಾಗ ಕಣ್ಣಿಗೇ ಕಾಣದ ಮಾಸ್ಕ್ ಇದೆ ಎಂದಾಗ ಅಚ್ಚರಿಯಾಗುತ್ತದೆ, ಅಲ್ವೇ? ಇದು ಹೆಲ್ಸಿಂಕೀ ವಿಶ್ವವಿದ್ಯಾಲಯದ ಸಂಶೋಧಕರ ನವನವೀನ ಕೊಡುಗೆ. ಕಣ್ಣಿಗೆ ಕಾಣದ್ದು ಎಂದರೆ ಪಾರದರ್ಶಕ ಬಟ್ಟೆಯಿಂದ ತಯಾರಾದದ್ದು ಖಂಡಿತ ಅಲ್ಲ; ಇಲ್ಲಿ ನಾವು ಮಾತನಾಡುತ್ತಿರುವುದು ಮೂಗಿನ ಒಳಗೆ ಹಾಕಿಕೊಳ್ಳುವ ಮಾಸ್ಕ್ ಬಗ್ಗೆ. ಇಲ್ಲಿ ಮಾಸ್ಕ್ ಎಂದಾಗ ಅದು ಬಟ್ಟೆಯದ್ದೇ ಆಗಬೇಕಿಲ್ಲವಲ್ಲ! ವೈರಸ್ ಅನ್ನು ನಮ್ಮ ದೇಹದೊಳಗೆ ಸೇರದಂತೆ ತಡೆಯುವ ತಡೆಗೋಡೆಯಾಗಿದ್ದರೆ ಸಾಕು. ಹೀಗೆ ಯೋಚಿಸಿದ ಸಂಶೋಧಕರು, ಕೋವಿಡ್-19 ವೈರಾಣುವಿನ ವಿರುದ್ಧ ಆಣ್ವಿಕ ನೆಲೆಗಟ್ಟಿನಲ್ಲಿ ಹೋರಾಡಲು ಸಜ್ಜಾದರು. ಎಷ್ಟೇ ಪದರಗಳ ಮಾಸ್ಕ್ ಧರಿಸಿದರೂ, ಅದನ್ನು ಸರಿಯಾಗಿ ಧರಿಸದಿದ್ದಲ್ಲಿ ಅಥವಾ ಸ್ವಚ್ಛಗೊಳಿಸುವಲ್ಲಿ ಹಿಂದುಮುಂದಾದರೂ ಸಮಸ್ಯೆ ತಪ್ಪಿದ್ದಲ್ಲ. ಅದರ ಬದಲು ವಿಜ್ಞಾನಿ ಆನ್ನಾ ಮಕೇಲ ಹಾಗೂ ತಂಡದ ಸಂಶೋಧಕರ ಕೊಡುಗೆಯನ್ನು ಬಳಸಿದರೆ, ವೈರಾಣುವು ನಮ್ಮ ದೇಹದೊಳಗೆ ಪ್ರವೇಶ ಪಡೆಯಲು ಸಾಧ್ಯವೇ ಇಲ್ಲ.

ಕೋವಿಡ್-19 ವೈರಾಣುವಿನ ಆಣ್ವಿಕ ರಚನೆಯ ಬಗ್ಗೆ ಈಗಾಗಲೇ ಲಭ್ಯವಿರುವ ಮಾಹಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಹೆಲ್ಸಿಂಕಿಯ ಸೂಕ್ಷ್ಮಜೀವಾಣುತಜ್ಞರು, ಅದಕ್ಕೆ ವಿರೋಧೀ ಅಣುಗಳನ್ನು ತಯಾರಿಸಲು ಸಜ್ಜಾದರು. ವೈರಾಣುವನ್ನು ನಾಶ ಮಾಡಬೇಕಾದರೆ, ಮೊದಲು ಅದರ ಪ್ರೊಟೀನ್ ಹೊರಕವಚದ ಬಗ್ಗೆ ಆಣ್ವಿಕ ನೆಲೆಗಟ್ಟಿನಲ್ಲಿ ಅರಿತಿರಬೇಕು. ಆಗ ಆ ಹೊರಕವಚದ ಅತಿಮುಖ್ಯ ಭಾಗಗಳನ್ನು ನಿರ್ದಿಷ್ಟವಾಗಿ ಗುರಿಯಾಗಿಸಿ ನಾಶಪಡಿಸಿದರೆ, ವೈರಾಣುವಿನ ಅಸ್ತಿತ್ವಕ್ಕೇ ಕೊಡಲಿಪೆಟ್ಟು ಬಿದ್ದ ಹಾಗೆ. ಇದನ್ನು ನಮ್ಮೊಳಗಿರುವ ರೋಗನಿರೋಧಕ ವ್ಯವಸ್ಥೆಯು ಸಾಧ್ಯವಾಗಿಸುತ್ತದೆಯಾದರೂ ಅದು ಸಾಧ್ಯವಾಗುವುದು ಯಾವಾಗ ಗೊತ್ತೆ? ವೈರಾಣುವು ನಮ್ಮೊಳಗೆ ಸೇರಿ, ರೋಗಲಕ್ಷಣಗಳನ್ನು ಪ್ರಚುರಪಡಿಸಿ, ಕಾಡಿದಾಗ ಮಾತ್ರ. ನಮ್ಮ ರೋಗನಿರೋಧಕತೆಯಲ್ಲಿ ಸಮಸ್ಯೆ ಇದ್ದರೆ, ವೈರಾಣುವಿನ ಕೈ ಮೇಲಾಗಿ, ಅನಾಹುತ ಕಟ್ಟಿಟ್ಟ ಬುತ್ತಿ. ಈಗ ಕಂಡುಬಂದಿರುವ ಕೋವಿಡ್-19 ವೈರಾಣುವಿನ ರೂಪಾಂತರಿಗಳನ್ನೆಲ್ಲ ಅಧ್ಯಯನ ಮಾಡಿ, ಅವುಗಳ ವಿರುದ್ಧ ನಮ್ಮ ರೋಗನಿರೋಧಕಶಕ್ತಿ ಹೆಚ್ಚಿಸುವ ಸಲುವಾಗಿ ವ್ಯಾಕ್ಸಿನ್ ನೀಡಲಾಗುತ್ತಿದೆ. ಆ ಲಸಿಕೆ ಕೂಡ ಅಶಕ್ತ ವೈರಾಣುವನ್ನೋ, ವೈರಾಣುವಿನ ಭಾಗವನ್ನೋ ತನ್ನೊಳಗೆ ಇರಿಸಿಕೊಂಡಿರುತ್ತದೆ. ನಾಟಕಕ್ಕೆ ಮುನ್ನ ರಿಹರ್ಸಲ್ ನಡೆಸುವಂತೆ, ನಿಜವಾಗಲೂ ಕೋವಿಡ್ ವೈರಾಣು ಬಂದರೆ ಏನು ಮಾಡಬೇಕು ಎಂಬ ತರಬೇತಿಯನ್ನು ಲಸಿಕೆಯು ನಮ್ಮ ದೇಹಕ್ಕೆ ನೀಡಿ, ಸಜ್ಜುಗೊಳಿಸಿರುತ್ತದೆ. ಆದರೆ, ವೈರಾಣುವು ಒಳಗೇ ಬರದಂತೆ ತಡೆಯುವುದು ಇನ್ನೂ ಸೂಕ್ತವಲ್ಲವೇ? ಹಾಗಾಗಿಯೇ, ಮೂಗಿನ ಬಾಗಿಲ ಬಳಿ ಬಂದ ವೈರಾಣು ಅತಿಥಿಯನ್ನು, ಅಲ್ಲಿಯೇ ನಿರ್ನಾಮ ಮಾಡಿ, ಬಂದ ದಾರಿಗೆ ಸುಂಕವಿಲ್ಲವೆಂದು ಸಾರುವುದು ಈ ಹೊಸ ಮಾಸ್ಕ್‌ನ ಆಶಯ.

ಇಲ್ಲಿ, ಈಗಾಗಲೇ ಹೇಳಿದಂತೆ ಮಾಸ್ಕ್ ಎಂದರೆ ಬಟ್ಟೆಯ ಮುಖಗವಸಲ್ಲ; ಬದಲಿಗೆ ಮೂಗಿನ ಒಳಗೆ ಸಿಂಪಡಿಸಿಕೊಳ್ಳುವ ಒಂದು ವಿಶಿಷ್ಟ ಸ್ಪ್ರೇ! ಜೀವರಾಸಾಯನಿಕವಾಗಿ ಇದರ ಹೆಸರು 'ಟ್ರಿಸ್‌ಬಿ 92'. ಈ ಸಂಶೋಧಕರ ತಂಡವು ತಯಾರಿಸಿರುವ ಈ ಸ್ಪ್ರೇ ರೂಪದ ಮಾಸ್ಕನ್ನು, ಮೂಗಿನ ಹೊಳ್ಳೆಗಳೊಳಗೆ ಒಮ್ಮೆ ಪೂಸಿಕೊಂಡರೆ ಮುಗೀತು, ಎಂಟು ಗಂಟೆಗಳ ಕಾಲ ಅದು ಕೋವಿಡ್ ವೈರಸ್‌ನಿಂದ ನಮಗೆ ಸುರಕ್ಷತೆ ನೀಡುತ್ತದೆಯಂತೆ. ಈ ಸಿಂಪಡಣೆಯಲ್ಲಿರುವ 'ಟ್ರಿಸ್‌ಬಿ 92' ಎಂಬ ಜೀವರಾಸಾಯನಿಕ ಅಣುವು, ವೈರಾಣುವಿನ ಹೊರಕವಚದ ನಿರ್ದಿಷ್ಟ ಸ್ಪೈಕ್ ಪ್ರೊಟೀನಿನ ಮೇಲೆ ದಾಳಿಮಾಡಿ, ವೈರಾಣುವನ್ನು ಅಶಕ್ತಗೊಳಿಸುತ್ತದೆ ಮತ್ತು ನಮ್ಮ ಜೀವಕಣಗಳೊಳಗೆ ವೈರಾಣುವು ಪ್ರವೇಶ ಪಡೆಯದಂತೆ ನೋಡಿಕೊಳ್ಳುತ್ತದೆ. ಇದು ಒಂದು ಬಗೆಯ ಕೋವಿಡ್-19 ವೈರಾಣು ಮಾತ್ರವಲ್ಲ, ಅದರ ಸಂಬಂಧಿಗಳಾದ ಸಾರ್ಸ್ ವೈರಾಣುಗಳೆಲ್ಲವನ್ನೂ ಮಟ್ಟಹಾಕುತ್ತದೆ ಎನ್ನುತ್ತದೆ ಈ ಅಧ್ಯಯನ. ಈ ಜೀವರಾಸಾಯನಿಕ ಮಾಸ್ಕ್ ಇನ್ನೂ ಮಾರುಕಟ್ಟೆಯಲ್ಲಿ ಲಭ್ಯವಿಲ್ಲವಾದರೂ, ಪ್ರಯೋಗದ ಕೊನೆಯ ಹಂತದಲ್ಲಿರುವ ಈ 'ಟ್ರಿಸ್‌ಬಿ 92' ಸ್ಪ್ರೇ, ಇನ್ನು ಕೊಂಚ ಸಮಯದಲ್ಲೇ ಎಲ್ಲರಿಗೂ ಸುಲಭವಾಗಿ ಸಿಗಲಿದೆ ಎನ್ನುತ್ತಾರೆ ಆಸ್ಟ್ರೇಲಿಯಾದ ವಿಜ್ಞಾನಿಗಳು. ಇದರ ದಯೆಯಿಂದಾದರೂ, ಉಸಿರುಗಟ್ಟಿಸುವ ಮುಖಗವಸುಗಳಿಂದ ಮುಕ್ತಿ ಸಿಗಬಹುದೇನೋ!

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ 6 ರಚನೆಗಳು

ಗಣಿತಶಾಸ್ತ್ರ

ಎಸ್ಸೆಸ್ಸೆಲ್ಸಿ

ಒಂದು ರೇಖಾಖಂಡವನ್ನು ದತ್ತ ಅನುಪಾತದಲ್ಲಿ ವಿಭಾಗಿಸುವುದು

ಹಂತ 1: ಕೊಟ್ಟಿರುವ ಅಳತೆಯ ರೇಖಾಖಂಡವನ್ನು ಎಳೆಯಿರಿ.

ಹಂತ 2: ದತ್ತ ರೇಖಾಖಂಡಕ್ಕೆ ಲಘುಕೋನ ಏರ್ಪಡುವಂತೆ ಒಂದು ಕಿರಣವನ್ನು ರಚನೆ ಮಾಡಿ.

ಹಂತ 3: ದತ್ತ ಅನುಪಾತದ ಮೊತ್ತದಷ್ಟು ಬಿಂದುಗಳನ್ನು ರಚಿಸಿದ ಕಿರಣದ ಮೇಲೆ ಗುರುತಿಸಿರಿ.

ಹಂತ 4: ರಚಿಸಿದ ಕಿರಣದ ಕೊನೆಯ ಬಿಂದುವನ್ನು ದತ್ತ ರೇಖಾಖಂಡದ ಕೊನೆಯ ಬಿಂದುವಿಗೆ ಸೇರಿಸಿ.

ಹಂತ 5: ದತ್ತ ಅನುಪಾತದ ಮೊದಲ ಅನುಪಾತದಷ್ಟಿನ ಬಿಂದುವಿನಿಂದ **ಹಂತ** 4ರಲ್ಲಿ ಎಳೆದ ಸರಳರೇಖೆಗೆ ಸಮಾಂತರವಿರುವಂತೆ ದತ್ತ ರೇಖಾಖಂಡಕ್ಕೆ ಒಂದು ಸರಳರೇಖೆಯನ್ನು ಎಳೆಯಿರಿ.

ಉದಾಹರಣೆ 1: 7.6 ಸೆಂ.ಮೀ. ಉದ್ದವಿರುವ ಒಂದು ರೇಖಾಖಂಡವನ್ನು ಎಳೆಯಿರಿ ಮತ್ತು ಇದನ್ನು 5:8 ಅನುಪಾತದಲ್ಲಿ ವಿಭಾಗಿಸಿ. ಎರಡೂ ಭಾಗಗಳನ್ನು ಅಳೆಯಿರಿ.

ಪರಿಹಾರ: ಹಂತ 1: 7.6 ಸೆಂ.ಮೀ. ಅಳತೆಯ AB ರೇಖಾಖಂಡವನ್ನು ಎಳೆಯಿರಿ.

ಹಂತ 2: AB ರೇಖಾಖಂಡಕ್ಕೆ ಲಘುಕೋನ ಏರ್ಪಡುವಂತೆ ಒಂದು ಕಿರಣ AX ರಚನೆ ಮಾಡಿ.

ಹಂತ 3: 5:8 ಅನುಪಾತದ ಮೊತ್ತವಾದ 13 ಬಿಂದುಗಳನ್ನು AX ಕಿರಣದ ಮೇಲೆ ಗುರುತಿಸಿರಿ. (A_1, A_2, A_3,….. A_{13})

ಹಂತ 4: AX ಕಿರಣದ ಕೊನೆಯ ಬಿಂದುವನ್ನು AB ರೇಖಾಖಂಡದ B ಬಿಂದುವಿಗೆ ಸೇರಿಸಿ.

ಹಂತ 5: 5:8 ಅನುಪಾತದ ಮೊದಲ ಅನುಪಾತವಾದ 5 ಬಿಂದುವಿನಿಂದ (A5) A13B ರೇಖೆಗೆ ಸಮಾಂತರವಿರುವಂತೆ AB ರೇಖಾಖಂಡಕ್ಕೆ ಒಂದು ಸರಳರೇಖೆಯನ್ನು ಎಳೆಯಿರಿ.



ತ್ರಿಭುಜ ಮತ್ತು ಅನುಪಾತಾಂಕವನ್ನು ನೀಡಿದ್ದಾಗ ಸಮರೂಪ ತ್ರಿಭುಜವನ್ನು ರಚಿಸುವುದು

(ABC ಒಂದು ಲಘುಕೋನ ತ್ರಿಭುಜವೆಂದು ಪರಿಗಣಿಸಿದಾಗ)

ಹಂತ 1: ಕೊಟ್ಟಿರುವ ಅಳತೆಯ ABC ತ್ರಿಭುಜ ರಚಿಸಿ.

ಹಂತ 2: ದತ್ತ ತ್ರಿಭುಜದ A ಶೃಂಗದ ಅಭಿಮುಖ ಬಾಹುವಿನೊಂದಿಗೆ (BC) ಲಘುಕೋನ ಏರ್ಪಡುವಂತೆ ಒಂದು ಕಿರಣವನ್ನು ಎಳೆಯಿರಿ.

ಹಂತ 3: ದತ್ತ ಅನುಪಾತದ ಅತಿ ಹೆಚ್ಚು ಸಂಖ್ಯೆಗಳಷ್ಟು ಬಿಂದುಗಳನ್ನು ರಚಿಸಿದ ಕಿರಣದ ಮೇಲೆ ಗುರುತಿಸಿರಿ.

ಹಂತ 4: ರಚಿಸಿದ ಕಿರಣದ ಕೊನೆಯ ಬಿಂದುವನ್ನು ದತ್ತ ತ್ರಿಭುಜದ ಉಳಿದ ಶೃಂಗ ಬಿಂದು (C)ವಿಗೆ ಸೇರಿಸಿ.

ಹಂತ 5: ರಚಿಸಿದ ಬಿಂದುಗಳಿಂದ ಹಂತ 4ರಲ್ಲಿ ಎಳೆದ ಸರಳರೇಖೆಗೆ ಸಮಾಂತರವಿರುವಂತೆ ದತ್ತ ಅನುಪಾತದ ಅತಿ ಚಿಕ್ಕಸಂಖ್ಯೆಯಷ್ಟರ ಬಿಂದುವಿನಿಂದ ತ್ರಿಭುಜದ ಬಾಹು (BC)ವಿಗೆ ಸರಳರೇಖೆಯನ್ನು ಎಳೆಯಿರಿ.

ಹಂತ 6: ಹಂತ 5 ರಲ್ಲಿ ಎಳೆದ ಸರಳರೇಖೆಯು ಛೇದಿಸಿದ ಬಿಂದುವಿನಿಂದ CA ಬಾಹುವಿಗೆ ಸಮಾಂತರ ರೇಖೆಯನ್ನು AB ಬಾಹುವನ್ನು ಛೇದಿಸುಂತೆ ಎಳೆಯಿರಿ.

ಉದಾಹರಣೆ: 4cm, 5cm ಮತ್ತು 6cm ಬಾಹುಗಳಿರುವ ಒಂದು ತ್ರಿಭುಜವನ್ನು ರಚಿಸಿ ನಂತರ ಇದಕ್ಕೆ ಸಮರೂಪವಾಗಿರುವ ಮತ್ತೊಂದು ತ್ರಿಭುಜವನ್ನು ರಚಿಸಿ. ರಚಿಸಬೇಕಾದ ಈ ತ್ರಿಭುಜದ ಪ್ರತಿಯೊಂದು ಬಾಹುವು ಮೊದಲು ರಚಿಸಿದ ತ್ರಿಭುಜದ ಅನುರೂಪ ಬಾಹುಗಳ ರಷ್ಟು ಇರಬೇಕು.



ವೃತ್ತದ ಹೊರಗಿನ ಒಂದು ಬಿಂದುವಿನಿಂದ ವೃತ್ತಕ್ಕೆ ಸ್ಪರ್ಶಕಗಳನ್ನು ರಚಿಸುವುದು

ಹಂತ 1: ದತ್ತ ತ್ರಿಜ್ಯದ ಅಳತೆಯಿರುವ ಔ ಕೇಂದ್ರವಿರುವ ವೃತ್ತವನ್ನು ರಚಿಸಿ.

ಹಂತ 2: ವೃತ್ತದ ಹೊರಗಿನ ಬಿಂದು P ಯನ್ನು ಗುರುತಿಸಿ. O ಮತ್ತು P ಯನ್ನು ಸೇರಿಸಿ.

ಹಂತ 4: PO ಅನ್ನು ಅರ್ಧಿಸಿ, ಅದರ ಮಧ್ಯಬಿಂದು M ಆಗಿರಲಿ.

ಹಂತ 5: M ನ್ನು ಕೇಂದ್ರವಾಗಿರಿಸಿ MO ತ್ರಿಜ್ಯದಿಂದ, ಒಂದು ವೃತ್ತವನ್ನು ಎಳೆಯಿರಿ. ಇದು ದತ್ತ ವೃತ್ತವನ್ನು Q ಮತ್ತು R ಬಿಂದುಗಳಲ್ಲಿ ಛೇದಿಸಲಿ.

ಹಂತ 6: P, Q ಮತ್ತು P, R ಸೇರಿಸಿ.



ಶ್ರೀನಿವಾಸ ಡಿ. ಶೆಟ್ಟಿ, ಶಿಕ್ಷಣ ಸಂಯೋಜಕರು, ಬಿಇಒ ಕಚೇರಿ, ಅರಕಲಗೂಡು

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿ ಗಣಿತದ 'ಕನ್‌ಸ್ಟ್ರಕ್ಷನ್' ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ

ಮಾತೃಕೆಗಳು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಗಣಿತದ 'ಮಾತೃಕೆಗಳು' ವಿಷಯದ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತಶಾಸ್ತ್ರ

ಪಿಯುಸಿ

1) $A=\begin{bmatrix}-2\\4\\5\end{bmatrix}, B=\begin{bmatrix}1 & 3 & -6\end{bmatrix}$ ಆದರೆ

(AB)' = B'A' ಅನ್ನು ಪರಿಶೀಲಿಸಿ

ಪರಿಹಾರ:- $A=\begin{bmatrix}-2\\4\\5\end{bmatrix}, B=\begin{bmatrix}1 & 3 & -6\end{bmatrix}$

ದತ್ತ ಮಾತೃಕೆಗಳಾಗಿವೆ

ಆದ್ದರಿಂದ, $AB=\begin{bmatrix}-2\\4\\5\end{bmatrix}\begin{bmatrix}1 & 3 & -6\end{bmatrix}=\begin{bmatrix}-2 & -6 & 12\\4 & 12 & -24\\5 & 15 & -30\end{bmatrix}$

ಈಗ $A'=\begin{bmatrix}-2 & 4 & 5\end{bmatrix}, B'=\begin{bmatrix}1\\3\\-6\end{bmatrix}$

$\therefore B'A'=\begin{bmatrix}1\\3\\-6\end{bmatrix}\begin{bmatrix}-2 & 4 & 5\end{bmatrix}=\begin{bmatrix}-2 & 4 & 5\\-6 & 12 & 15\\12 & -24 & -30\end{bmatrix}=(AB)'$

ಸ್ಪಷ್ಟವಾಗಿ (AB)' = B'A'

2) A ಮತ್ತು B ಒಂದೇ ದರ್ಜೆಯ ಸಮಾಂಗ ಮಾತೃಕೆಗಳಾದರೆ, ಆಗ AB ಯು ಸಮಾಂಗ ಮಾತೃಕೆ ಆದರೆ ಮತ್ತು ಆಗಬೇಕಿದ್ದರೆ AB = BA ಎಂದು ತೋರಿಸಿ.

ಪರಿಹಾರ:-A ಮತ್ತು B ಎರಡೂ ಸಮಾಂಗ ಮಾತೃಕೆಗಳಾಗಿವುದರಿಂದ, A' = A ಮತ್ತು B' = B AB ಯು ಸಮಾಂಗ ಆಗಿರಲಿ, ಆಗ (AB)' = AB ಆದರೆ (AB)' = B'A' = BA ಆದ್ದರಿಂದ BA = AB ವಿಲೋಮವಾಗಿ, AB = BA ಆದರೆ AB ಯು ಸಮಾಂಗ ಎಂದು ಸಾಧಿಸುವುದು ಈಗ (AB)' = B'A' = B A [A ಮತ್ತು B ಗಳು ಸಮಾಂಗ ಆದ ಕಾರಣ] = AB ಆದ್ದರಿಂದ AB ಯು ಸಮಾಂಗ ಆಗಿರುತ್ತದೆ

3)

$$f(x)=\sin 3x,\ x\in\left[0,\frac{\pi}{2}\right]$$

ಉತ್ಪನ್ನವು ಯಾವ ಯಾವ ಅಂತರಾಳಗಳಲ್ಲಿ (a) ವೃದ್ಧಿಸುವುದು (b) ಕ್ಷೀಣಿಸುವುದು ಎನ್ನುವುದನ್ನು ಕಂಡುಹಿಡಿಯಿರಿ.

ಪರಿಹಾರ: f(x) = sin 3x ಅಥವಾ f(x) = –3 cos 3x

∴ f'(x) = 0 ಆದರೆ

$3x=\frac{\pi}{2},\frac{3\pi}{2}$

ಆದ್ದರಿಂದ $x=\frac{\pi}{6}$ ಮತ್ತು $\frac{\pi}{2}$

ಈಗ $x=\frac{\pi}{6}$ ಬಿಂದುವು $\left[0,\frac{\pi}{2}\right]$

ಅಂತರಾಳವನ್ನು ಎರಡು ಬೇರ್ಪಟ್ಟ ಅಂತರಾಳಗಳನ್ನಾಗಿ ವಿಭಜಿಸುತ್ತದೆ.

ಅವುಗಳು $\left[0,\frac{\pi}{2}\right]$ ಮತ್ತು $\left[\frac{\pi}{6},\frac{\pi}{2}\right]$ ಆಗಿರುತ್ತದೆ.

$\forall x\in\left[0,\frac{\pi}{6}\right]\ 0\le x<\frac{\pi}{6}\Rightarrow 0\le 3x<\frac{\pi}{2}$

ಆದ್ದರಿಂದ $f'(x)<0$

$\forall x\in\left(\frac{\pi}{6},\frac{\pi}{2}\right),\ \frac{\pi}{6}<x<\frac{\pi}{2}\Rightarrow\frac{\pi}{2}<3x<\frac{3\pi}{2}$

ಆದ್ದರಿಂದ $f'(x)<0$



$\therefore\left[0,\frac{\pi}{6}\right]$ ಅಂತರಾಳದಲ್ಲಿ, f ಕಟ್ಟುನಿಟ್ಟಾಗಿ ವೃದ್ಧಿಸುತ್ತದೆ ಮತ್ತು

$\therefore\left[\frac{\pi}{6},\frac{\pi}{2}\right]$ ಅಂತರಾಳದಲ್ಲಿ, f ಕಟ್ಟುನಿಟ್ಟಾಗಿ ಕ್ಷೀಣಿಸುತ್ತದೆ.

x = 0 ಮತ್ತು 6/π ಬಿಂದುಗಳಲ್ಲಿ f ಅವಿಚ್ಛಿನ್ನವಾಗಿದೆ. ಆದರಿಂದ ಪ್ರಮೇಯ 1ರಿಂದ

$\left[0,\frac{\pi}{6}\right]$ ಅಂತರಾಳದಲ್ಲಿ f ವೃದ್ಧಿಸುತ್ತದೆ ಮತ್ತು $\left[\frac{\pi}{6},\frac{\pi}{2}\right]$ ಅಂತರಾಳದಲ್ಲಿ f ಕ್ಷೀಣಿಸುತ್ತದೆ

4) $y=\frac{x-7}{(x-2)(x-3)}$ ವಕ್ರರೇಖೆಗೆ, ಅದು x-ಅಕ್ಷವನ್ನು ಬೇಧಿಸುವ ಬಿಂದುವಿನಲ್ಲಿ, ಸ್ಪರ್ಶಕದ ಸಮೀಕರಣವನ್ನು ಕಂಡುಹಿಡಿಯಿರಿ.

ಪರಿಹಾರ: x-ಅಕ್ಷದ ಮೇಲೆ, y = 0. ವಕ್ರರೇಖೆಯ ಸಮೀಕರಣದಿಂದ y = 0 ಆದಾಗ x = 7. ಆದ್ದರಿಂದ ವಕ್ರರೇಖೆಯು, x-ಅಕ್ಷವನ್ನು (7, 0) ಬಿಂದುವಿನಲ್ಲಿ ಛೇದಿಸುತ್ತದೆ. ವಕ್ರ ರೇಖೆಯ ಸಮೀಕರಣವನ್ನು xಗೆ ಅನುಗುಣವಾಗಿ ನಿಶ್ಚನ್ನ ಮಾಡಿದರೆ

$\frac{dy}{dx}=\frac{(1-y)(2x-5)}{(x-2)(x-3)}$ ಅಥವಾ $\left.\frac{dy}{dx}\right]=\frac{1-0}{5(4)}=\frac{1}{20}$

∴ಸ್ಪರ್ಶಕದ ಓಟವು 1/20 ಆಗಿರುತ್ತದೆ. ಆದ್ದರಿಂದ (7, 0) ಬಿಂದುವಿನಲ್ಲಿ ಸ್ಪರ್ಶಕದ ಸಮೀಕರಣವು

$$y-0=\frac{1}{20}(x-7)$$

ಅಥವಾ

20y – x + 7 = 0

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಒಂದು ಸ್ಪರ್ಶ, ಮುಗುಳ್ನಗೆ, ಸ್ನೇಹಪೂರ್ವಕ ಮಾತು, ಆಲಿಸುವ ಕಿವಿ, ಪ್ರಾಮಾಣಿಕವಾದ ಅಭಿನಂದನೆ ಅಥವಾ ಚಿಕ್ಕ ವಿಷಯದ ಬಗ್ಗೆ ತೋರುವ ಕಾಳಜಿಯನ್ನು ಬಹಳಷ್ಟು ಬಾರಿ ನಿರ್ಲಕ್ಷಿಸುತ್ತೇವೆ. ಆದರೆ ಇವುಗಳಿಗೆ ಬದುಕನ್ನು ಬದಲಿಸುವ ಶಕ್ತಿ ಇರುತ್ತದೆ. -ಲಿಯೊ ಬುಸ್ಕಾಗ್ಲಿಯ

ಮಿತಿ ಮೀರಿದ ಹಣದುಬ್ಬರ ಹೆಚ್ಚಿಸಬಹುದೇ ರೆಪೊ ದರ?

ಗ್ರಾಹಕ ಬೆಲೆ ಸೂಚ್ಯಂಕವನ್ನು ಆಧರಿಸಿದ ಚಿಲ್ಲರೆ ಹಣದುಬ್ಬರ ದರವು ಜನವರಿಯಲ್ಲಿ ಶೇಕಡ 6.01ಕ್ಕೆ ತಲುಪಿದೆ. ಇದು ಏಳು ತಿಂಗಳ ಗರಿಷ್ಠ ಮಟ್ಟ. ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇಕಡ 4ಕ್ಕೆ ಮಿತಿಗೊಳಿಸುವ ಹೊಣೆಯನ್ನು ಹೊರಿಸಿದೆ. ಹಣದುಬ್ಬರವು ಶೇ 4ಕ್ಕಿಂತ 2 ಅಂಶದಷ್ಟು ಹೆಚ್ಚು ಅಥವಾ 2 ಅಂಶದಷ್ಟು ಕಡಿಮೆ ಆಗಲು ಅವಕಾಶ ಇದೆ. ಆದರೆ, ಜನವರಿಯಲ್ಲಿ ದಾಖಲಾಗಿರುವ ಚಿಲ್ಲರೆ ಹಣದುಬ್ಬರ ದರವು ಗರಿಷ್ಠ ಮಿತಿಯನ್ನು (ಶೇ 6) ಕೂಡ ದಾಟಿದೆ ಎಂಬುದು ಗಮನಾರ್ಹವೂ ಹೌದು, ಕಳವಳಕಾರಿಯೂ ಹೌದು. ಈಚೆಗೆ ಮುಕ್ತಾಯಗೊಂಡ ಆರ್‌ಬಿಐ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯು ರೆಪೊ ಹಾಗೂ ರಿವರ್ಸ್ ರೆಪೊ ದರಗಳಲ್ಲಿ ಯಾವುದೇ ಬದಲಾವಣೆ ಮಾಡದಿರುವ ತೀರ್ಮಾನ ಕೈಗೊಂಡಿದೆ. ದೇಶದಲ್ಲಿ ಹಣದುಬ್ಬರ ಪ್ರಮಾಣವು ಜಾಸ್ತಿ ಆಗುತ್ತಿರುವ ಹೊತ್ತಿನಲ್ಲಿ, ಆರ್‌ಬಿಐ ಕನಿಷ್ಠಪಕ್ಷ ರಿವರ್ಸ್ ರೆಪೊ ದರವನ್ನಾದರೂ ತುಸು ಜಾಸ್ತಿ ಮಾಡಿ, ಹಣಕಾಸು ನೀತಿಯಲ್ಲಿ ಬದಲಾವಣೆ ತರುವತ್ತ ಮುಖ ಮಾಡಬಹುದು ಎಂಬ ನಿರೀಕ್ಷೆಗಳು ಇದ್ದವು. ಆದರೆ, ಅಂತಹ ಯಾವ ತೀರ್ಮಾನವನ್ನೂ ಕೈಗೊಳ್ಳದೆ, ಯಥಾಸ್ಥಿತಿಯನ್ನು ಮುಂದುವರಿಸಿದೆ. ಅಂದರೆ, ಕೇಂದ್ರೀಯ ಬ್ಯಾಂಕ್ ತನ್ನ ಹಣಕಾಸು ನೀತಿಯನ್ನು ಹಣಕಾಸಿನ ನೀತಿಯನ್ನು ಮುಂದುವರಿಸಿದೆ. ಕೋವಿಡ್‌ನಿಂದ ಜರ್ಜರಿತ ಆಗಿ, ತುಸು ಚೇತರಿಸಿಕೊಂಡಿರುವ ಅರ್ಥ ವ್ಯವಸ್ಥೆಗೆ ಇನ್ನಷ್ಟು ಉತ್ತೇಜನ ನೀಡುವ ಉದ್ದೇಶದಿಂದ ಆರ್‌ಬಿಐ ಹೊಂದಾಣಿಕೆಯ ಹಣಕಾಸು ನೀತಿಯನ್ನು ಮುಂದುವರಿಸಿಕೊಂಡು ಹೋಗಲು ತೀರ್ಮಾನಿಸಿದೆ ಎನ್ನಬಹುದಾಗಿದೆ. ಹಣದುಬ್ಬರದ ಸವಾಲನ್ನು ಅದು ಉಪೇಕ್ಷಿಸಿದೆಯೇ ಎಂಬ ಪ್ರಶ್ನೆ ಇದೆ.

ಜನರಿಗೆ ಪ್ರತಿ ದಿನ ಅನುಭವಕ್ಕೆ ಬರುತ್ತಿರುವ ಹಣದುಬ್ಬರದ ಸಮಸ್ಯೆಯನ್ನು ಪರಿಹರಿಸುವ ಹೊಣೆ ಆರ್‌ಬಿಐ ಮೇಲಿದೆ

ಹಣದುಬ್ಬರದ ಸಮಸ್ಯೆಯು ಪ್ರಸ್ತುತ ಸಂದರ್ಭದಲ್ಲಿ ಜಗತ್ತಿನ ಬೇರೆ ಬೇರೆ ದೇಶಗಳನ್ನು ಕಾಡುತ್ತಿದೆ. ಈ ಸಮಸ್ಯೆಯು ಭಾರತಕ್ಕೆ ಮಾತ್ರ ಸೀಮಿತವಾಗಿ ಇಲ್ಲ ಎಂಬುದು ನಿಜ. ಆದರೆ, ಜಗತ್ತಿನ ಹಲವು ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರವನ್ನು ಹೆಚ್ಚಿಸುವ ಹೆಜ್ಜೆ ಇರಿಸಿವೆ ಅಥವಾ ಹೆಚ್ಚಿಸುವುದಾಗಿ ಹೇಳಿವೆ. ಈ ಮೂಲಕ, ಹಣಕಾಸು ವ್ಯವಸ್ಥೆಯಲ್ಲಿನ ನಗದು ಹರಿವಿನ ಪ್ರಮಾಣವನ್ನು ತಗ್ಗಿಸಿ, ಹಣದುಬ್ಬರವನ್ನು ನಿಯಂತ್ರಣಕ್ಕೆ ತರುವ ಆಲೋಚನೆಯಲ್ಲಿ ಇವೆ. ಆದರೆ, ಆರ್‌ಬಿಐ ನೇತೃತ್ವದ ಹಣಕಾಸು ನೀತಿ ಸಮಿತಿಯ ಸಭೆಯ ನಂತರ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ್ದ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು, ದೇಶದ ಮಾರುಕಟ್ಟೆಗಳಲ್ಲಿ ಉತ್ಪನ್ನಗಳು ಮತ್ತು ಸೇವೆಗಳಿಗೆ ಸಾರ್ವಜನಿಕರಿಂದ ಬರುವ ಬೇಡಿಕೆಯು ಕೋವಿಡ್ ಪೂರ್ವದ ಹಂತವನ್ನು ಇನ್ನೂ ತಲುಪಿಲ್ಲ ಎಂದು ಹೇಳಿದ್ದರು. ಈಗ ಹಣದುಬ್ಬರವು ಗರಿಷ್ಠ ಮಿತಿಯನ್ನೂ ಮೀರಿ ಬೆಳೆದಿರುವುದರ ಪರಿಣಾಮವಾಗಿ, ಸಾರ್ವಜನಿಕರ ಕಡೆಯಿಂದ ಬರುವ ಬೇಡಿಕೆಗಳು ಇನ್ನಷ್ಟು ಕಡಿಮೆ ಆಗುವ ಅಪಾಯ ಇದ್ದೇ ಇದೆ. ಈಗಿನ ಹಣದುಬ್ಬರದ ಪ್ರಮಾಣವನ್ನು ಪರಿಗಣಿಸಿದರೆ, ಜಾಗತಿಕ ಮಟ್ಟದಲ್ಲಿ ಕೇಂದ್ರೀಯ ಬ್ಯಾಂಕ್‌ಗಳು ಕೈಗೊಳ್ಳುತ್ತಿರುವ ತೀರ್ಮಾನಗಳನ್ನು ಗಮನಿಸಿದರೆ, ಈಗ ಚಾಲ್ತಿಯಲ್ಲಿ ಇರುವ ರೆಪೊ ದರ ಮತ್ತು ರಿವರ್ಸ್ ರೆಪೊ ದರದಲ್ಲಿ ಬದಲಾವಣೆ ತರುವುದರ ಅಗತ್ಯ ಕಾಣಿಸುತ್ತಿದೆ.

ಪೆಟ್ರೋಲ್ ಹಾಗೂ ಡೀಸೆಲ್‌ನ ದೇಶಿ ಮಾರುಕಟ್ಟೆ ದರ ಹಾಗೂ ಚಿಲ್ಲರೆ ಹಣದುಬ್ಬರ ದರದ ನಡುವೆ ನೇರ ಸಂಬಂಧ ಇದೆ. ಉತ್ತರಪ್ರದೇಶ ಸೇರಿದಂತೆ ದೇಶದ ಪ್ರಮುಖ ರಾಜ್ಯಗಳ ವಿಧಾನಸಭಾ ಚುನಾವಣೆಯು ಸನಿಹವಾದ ಹೊತ್ತಿನಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕೇಂದ್ರ ಸರ್ಕಾರವು ದೊಡ್ಡ ಮಟ್ಟದಲ್ಲಿ ತಗ್ಗಿಸಿತು. ಬಹುತೇಕ ರಾಜ್ಯಗಳು ಮೌಲ್ಯವರ್ಧಿತ ತೆರಿಗೆ ಕಡಿಮೆ ಮಾಡಿದವು. ಗರಿಷ್ಠ ಮಟ್ಟ ತಲುಪಿದ್ದ ಪೆಟ್ರೋಲ್, ಡೀಸೆಲ್ ಬೆಲೆ ಈ ಕಾರಣಗಳಿಂದಾಗಿ ತುಸು ಕಡಿಮೆ ಆಯಿತು. ಆದರೆ ಈಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ, ಪ್ರಮುಖ ರಾಜ್ಯಗಳ ವಿಧಾನಸಭಾ ಚುನಾವಣೆ ಮುಗಿದ ನಂತರ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವಾಗುವುದು ಬಹುತೇಕ ಖಚಿತ. ಹೆಚ್ಚಳದ ಪ್ರಮಾಣ ಎಷ್ಟು ಎಂಬುದನ್ನು ಈಗಲೇ ಅಂದಾಜಿಸಲು ಆಗದು. ಇವೆರಡರ ಬೆಲೆ ಹೆಚ್ಚಳ ಆದೊಡನೆ ಹಣದುಬ್ಬರ ಪ್ರಮಾಣವು ಇನ್ನಷ್ಟು ಜಾಸ್ತಿ ಆಗಬಹುದು. ಆಗ, ಹಣದುಬ್ಬರವನ್ನು ನಿಯಂತ್ರಿಸಲು ಬಡ್ಡಿ ದರ ಹೆಚ್ಚಿಸುವುದು ಆರ್‌ಬಿಐಗೆ ಅನಿವಾರ್ಯ ಆಗಬಹುದು. ಹಣದುಬ್ಬರವು ಜನರಿಗೆ ಪ್ರತಿದಿನವೂ ಅನುಭವಕ್ಕೆ ಬರುತ್ತಿರುವ ಸಮಸ್ಯೆ. ಈ ಸಮಸ್ಯೆಯನ್ನು ಪರಿಹರಿಸುವ ಹೊಣೆ ಇರುವುದು ಆರ್‌ಬಿಐ ಮೇಲೆ. ಕೋವಿಡ್ ಅಪ್ಪಳಿಸಿದಾಗ ಬಡ್ಡಿ ದರವನ್ನು ತಗ್ಗಿಸಿ, ವ್ಯವಸ್ಥೆಯಲ್ಲಿ ನಗದು ಹರಿವು ಹೆಚ್ಚಿಸಿದ್ದು ಅನಿವಾರ್ಯ ಆಗಿದ್ದಿರಬಹುದು. ಆದರೆ, ಹಣದುಬ್ಬರವು ತಾನೇ ನಿಗದಿ ಮಾಡಿಕೊಂಡಿರುವ ಮಿತಿಯನ್ನೂ ಮೀರಿ ಸಾಗುತ್ತಿರುವಾಗ ಅದನ್ನು ನಿಯಂತ್ರಿಸಲು ಬಿಗಿಯಾದ ಕ್ರಮಗಳನ್ನು ಆರ್‌ಬಿಐ ಕೈಗೊಳ್ಳಬೇಕು.

ದಿನದ ಟ್ವೀಟ್

ಭರವಸೆಯ ಬೆಳಕು

ಲಖನೌದಲ್ಲಿ ಒಟ್ಟಿಗೆ ಅಡ್ಡಾಡುತ್ತಿದ್ದ ನಾಲ್ವರು ಯುವ ವೈದ್ಯಕೀಯ ವಿದ್ಯಾರ್ಥಿಗಳನ್ನು ಭೇಟಿಯಾದೆ. ಅವರು ಹೇಳಿದರು, 'ನಮ್ಮ ಈ ಗುಂಪಿನಲ್ಲಿ ಮುಸ್ಲಿಂ, ರಜಪೂತ, ಬ್ರಾಹ್ಮಣ, ಯಾದವ ಸಮುದಾಯಕ್ಕೆ ಸೇರಿದವರಿದ್ದೇವೆ. ಮೊದಲಿಗೆ ನಾವೆಲ್ಲರೂ ಭಾರತೀಯರು, ನಮಗೆ ಉತ್ತಮ ಉದ್ಯೋಗಾವಕಾಶಗಳು ಬೇಕೇ ವಿನಾ ಹಿಂದೂ– ಮುಸ್ಲಿಂ ಕದನಗಳಲ್ಲ!' ಭರವಸೆ ಉಳಿದಿದೆ!
#ElectionsOnMyPlate

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಬೆಂಗಳೂರಿನ ಯು.ಬಿ. ಸಿಟಿಯಲ್ಲಿ 2017ರಲ್ಲಿ ನಡೆದ ಹೊಡೆದಾಟದ ಘಟನೆಯಲ್ಲಿ ಮೊಹಮ್ಮದ್ ನಲಪಾಡ್ ಅವರನ್ನು ಬಂಧಿಸಿದ ಅಂದಿನ ಸರ್ಕಾರವು ಹ್ಯಾಕರ್ ಶ್ರೀಕಿಯನ್ನು ಬಂಧಿಸದೆ ಖಾಸಗಿ ವಿಮಾನದಲ್ಲಿ ಎಲ್ಲಿಗೆ ಕಳುಹಿಸಿತ್ತು? ಯಾರು ಕಳುಹಿಸಿದ್ದರು? ಬಿಟ್‌ಕಾಯಿನ್ ವಿಚಾರ ಬಯಲಿಗೆ ಬರಬಾರದು ಎಂಬ ಕಾರಣಕ್ಕೆ ಶ್ರೀಕಿ ಪರಾರಿಯಾಗುವಂತೆ ಮಾಡಲಾಗಿತ್ತು.

ಪಿ.ರಾಜೀವ್, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ
ಭಾನುವಾರ, 16-2-1997

● **ಆಲಮಟ್ಟಿ: ಮುಖ್ಯಮಂತ್ರಿಗಳ ಸಭೆ ಸಾಧ್ಯತೆ**

ಹೈದರಾಬಾದ್, ಫೆ. 15 (ಪಿಟಿಐ)– ಆಲಮಟ್ಟಿ ಅಣೆಕಟ್ಟು ವಿವಾದಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಆಂಧ್ರಪ್ರದೇಶ ಮತ್ತು ಕರ್ನಾಟಕದ ಮುಖ್ಯಮಂತ್ರಿಗಳು ಇದೇ 18ರಂದು ನವದೆಹಲಿಯಲ್ಲಿ ಸಭೆ ಸೇರುವ ಸಾಧ್ಯತೆ ಇದೆ.

ಮುಖ್ಯಮಂತ್ರಿಗಳ ಒಕ್ಕೂಟವು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಅವರ ನೇತೃತ್ವದಲ್ಲಿ ರಚಿಸಿರುವ ತಜ್ಞರ ಸಮಿತಿಯು ವಿವಾದಕ್ಕೆ ಸಂಬಂಧಿಸಿದಂತೆ ತನ್ನ ವರದಿ ಸಲ್ಲಿಸಿದೆ ಎಂದು, ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ತಿಳಿಸಿದ್ದಾರೆ.

ಸಂಸತ್ ಸದಸ್ಯರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

50 ವರ್ಷಗಳ ಹಿಂದೆ
ಬುಧವಾರ, 16-2-1972

● **ಪಶ್ಚಿಮ ರಾಷ್ಟ್ರಗಳಲ್ಲಿ ಶಸ್ತ್ರಾಸ್ತ್ರ ಸ್ಪರ್ಧೆ ಉಲ್ಬಣ: ರಷ್ಯಾ ನೀತಿ ಕಾರಣ– ಹ್ಯೂಂ**

ಹಾಂಕಾಂಗ್, ಫೆ. 15– ಸೋವಿಯತ್ ಸರ್ಕಾರವು ತನ್ನ ಶಸ್ತ್ರಾಸ್ತ್ರ ಸಂಗ್ರಹಣೆಯನ್ನು ಹೆಚ್ಚಿಸಿಕೊಂಡರೆ ಪಶ್ಚಿಮ ರಾಷ್ಟ್ರಗಳಲ್ಲಿಯೂ ಶಸ್ತ್ರಾಸ್ತ್ರ ಉತ್ಪಾದನೆ ಹೆಚ್ಚಬಹುದು ಎಂದು ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಸರ್ ಅಲೆಕ್ ಡಗ್ಲಾಸ್ ಹ್ಯೂಂ ಅವರು ಭವಿಷ್ಯ ನುಡಿದಿದ್ದಾರೆ.

ರಷ್ಯನ್ನರು ತಮ್ಮ ಶಸ್ತ್ರಾಸ್ತ್ರ ಸಂಗ್ರಹ ಕಾರ್ಯಕ್ರಮವನ್ನು ಮುಂದುವರಿಸಿದರೆ ಅದಕ್ಕೆ ತಕ್ಕಂತೆ ಪಶ್ಚಿಮ ರಾಷ್ಟ್ರಗಳಲ್ಲಿ ಪ್ರತಿಕ್ರಿಯೆ ಇರಲೇಬೇಕಲ್ಲ. ಇದರಿಂದ ಶಸ್ತ್ರಾಸ್ತ್ರ ಸ್ಪರ್ಧೆ ಉಲ್ಬಣಗೊಳ್ಳುವುದು ಖಚಿತ. ರಷ್ಯನ್ನರು ಸೇರಿದಂತೆ ಸಂಬಂಧಪಟ್ಟ ಎಲ್ಲರಿಗೂ ಇದು ಆತಂಕಕಾರಿಯೇ ಎಂದೂ ಅವರು ಆತಂಕ ವ್ಯಕ್ತಪಡಿಸಿದರು.

● **ಚುನಾವಣಾ ಕಣದಲ್ಲಿ ಮುಖ್ಯಮಂತ್ರಿಗಳು**

ನವದೆಹಲಿ, ಫೆ. 15– ಮುಂದೆ ನಡೆಯಲಿರುವ ವಿಧಾನಸಭೆ ಚುನಾವಣೆಗಳಲ್ಲಿ ಮೂವರು ಮುಖ್ಯಮಂತ್ರಿಗಳ ನೇರ ಸ್ಪರ್ಧೆ ಇದೆ. 16ರಲ್ಲಿ 14 ರಾಜ್ಯಗಳ ಮುಖ್ಯಮಂತ್ರಿಗಳು ಚುನಾವಣೆಗಳಲ್ಲಿ ಸ್ಪರ್ಧಿಸಿದ್ದಾರೆ. ಕಣಕ್ಕಿಳಿಯದ ಇಬ್ಬರು ಮುಖ್ಯಮಂತ್ರಿಗಳೆಂದರೆ ಮೈಸೂರಿನ ವೀರೇಂದ್ರ ಪಾಟೀಲ್ ಮತ್ತು ಗುಜರಾತಿನ ಹಿತೇಂದ್ರ ದೇಸಾಯಿ ಅವರು. ಈ ಎರಡು ರಾಜ್ಯಗಳಲ್ಲೂ ರಾಷ್ಟ್ರಪತಿ ಆಳ್ವಿಕೆ ಬರುವುದಕ್ಕೆ ಮುನ್ನ ಸಂಸ್ಥಾ ಕಾಂಗ್ರೆಸ್ ನೇತೃತ್ವದ ಸರ್ಕಾರಗಳಿದ್ದವು.

ಜಮ್ಮು ಕಾಶ್ಮೀರದ ಸಯ್ಯದ್ ಮೀರ್ ಕಾಸಿಂ ಮತ್ತು ಮೇಘಾಲಯದ ಕ್ಯಾಪ್ಟನ್ ವಿಲಿಯಂಸನ್ ಸಂಗ್ಮ ಈ ಇಬ್ಬರು ಮುಖ್ಯಮಂತ್ರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಚಿವರು ದುರುಳರಾದರೆ ನಾಡು ಮರುಭೂಮಿಯಾದೀತು
ಪಂಕ್ತಿಭೇದದ ನಾಡಲ್ಲಿ ಹಿಜಾಬ್‌ಗೆ ವಿರೋಧ?

ಗತಿಬಿಂಬ
ವೈ.ಗ.ಜಗದೀಶ್

'ಸರ್ವ ಜನಾಂಗದ ಶಾಂತಿಯ ತೋಟ'ವಾಗಿರುವ ಕರ್ನಾಟಕದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಆತಂಕಕಾರಿ. ಈದ್ಗಾ ಮೈದಾನ, ಬಾಬಾಬುಡನ್‌ಗಿರಿ, ಗೋಹತ್ಯೆ, ಮತಾಂತರದ ವಿಷಯಗಳನ್ನು ಚರ್ಚೆಯ ಕೇಂದ್ರಕ್ಕೆ ತಂದು, ಚರ್ಚ್ ಮೇಲೆ ದಾಳಿ, ಪಬ್‌ಗಳ ಮೇಲೆ ದಾಳಿಗಳನ್ನು ನಡೆಸಿ, ಸಮುದಾಯಗಳ ಮಧ್ಯೆ ಇದ್ದ ನಂಬಿಕೆ, ಸಾಮರಸ್ಯ ಛಿದ್ರಗೊಳಿಸುವ ಕೆಲಸ ದಶಕಗಳಿಂದ ನಡೆಯುತ್ತಾ ಬಂದಿದೆ. ವಯಸ್ಕರ ಮಧ್ಯೆ ವಿಷಬೀಜ ಬಿತ್ತಿದ ಬಳಿಕ ಮುಂದಿನ ಹೆಜ್ಜೆಯನ್ನು ಕೋಮುಶಕ್ತಿಗಳು ಇಟ್ಟಿವೆ. ಮಕ್ಕಳನ್ನು ದೇವರೆಂದು ನಂಬಿದ ಸಂಸ್ಕೃತಿ ನಮ್ಮದು. ಜಾತಿ– ಭೇದ– ಧರ್ಮದ ಅಮಲಿಲ್ಲದೇ ಹಂಚಿ ತಿನ್ನುವ, ಕೂಡಿ ಕಲಿಯುವ ವಯಸ್ಸಿನ ಮಕ್ಕಳಲ್ಲಿ ಪರಸ್ಪರರು ಕಚ್ಚಾಡುವುದಕ್ಕೆ ಹುಟ್ಟಿದವರು ಎಂಬ ಭಾವ ಬೆಳೆಸುವುದು ಅಪಾಯಕಾರಿ.

ಸಮುದಾಯಗಳಲ್ಲಿ ತೆಳುವಾಗಿ ಇದ್ದ ಅಭದ್ರತೆಯ ಭಾವನೆಯನ್ನು ಬಿಗಿಗೊಳಿಸಿ, 'ನಿಮ್ಮ ರಕ್ಷಣೆಗೆ ನಾವು ಮಾತ್ರ ಇರುವುದು, ನಾವು ಹೇಳಿದಂತೆ ನಡೆಯಿರಿ' ಎಂದು ಪ್ರತಿಪಾದಿಸುವ ಆರ್‌ಎಸ್‌ಎಸ್ ಮತ್ತು ಪಿಎಫ್‌ಐ ಸಂಘಟನೆಗಳು ಒಂದೇ ನಾಣ್ಯದ ಎರಡು ಮುಖಗಳಂತೆ. ತಾರತಮ್ಯ–ಓಲೈಕೆ ರಾಜಕಾರಣದಿಂದ ಅನ್ಯಾಯವಾಗಿದೆ, ಭಯದಲ್ಲಿ ನರಳುವಂತೆ ಮಾಡಲಾಗಿದೆ ಎಂದು ಎರಡೂ ಸಮುದಾಯದವರಲ್ಲಿ ಆತಂಕ ಸೃಷ್ಟಿಸಿ, ಅದನ್ನು ತಮ್ಮ ರಾಜಕೀಯ ಬಂಡವಾಳ ಮಾಡಿಕೊಳ್ಳುವುದು ಉಭಯ ಬಣಗಳ ದುರುದ್ದೇಶ. ಮುಸ್ಲಿಮರಲ್ಲಿ ಅಭದ್ರತೆ, ಭಯ ತುಂಬಿ, ಅದನ್ನು ತಮ್ಮ ಸಂಘಟನೆಯ ಬಲಕ್ಕೆ ಅಡಿಪಾಯ ಹಾಕಿಕೊಳ್ಳುವ ಕೆಲಸವನ್ನು ಬೇರೆ ಬೇರೆ ಸಂಘಟನೆಗಳ ಹೆಸರಿನಲ್ಲಿ ಪಿಎಫ್‌ಐ ಮಾಡುತ್ತಾ ಬಂದಿದೆ. ಸದ್ಯಕ್ಕೆ ಮೂಲಭೂತವಾದಿಗಳಂತೆ ತೋರುತ್ತಿರುವ ಈ ಸಂಘಟನೆಯ ಕಾರ್ಯಕರ್ತರು ತಮ್ಮ ಶಕ್ತಿಯನ್ನು ಬಳಸಿಕೊಳ್ಳಲು ಹಿಂಸಾಮಾರ್ಗವನ್ನು ಹಿಡಿದಿದ್ದೂ ಇದೆ. ಕಾಂಗ್ರೆಸ್ ನೇತೃತ್ವದ ಸರ್ಕಾರ ಇದ್ದಾಗ ಇವರ ಮೇಲಿದ್ದ ಮೊಕದ್ದಮೆಗಳನ್ನು ವಾಪಸ್ ಪಡೆದು, ರಾಜಕಾರಣ ಮಾಡಿದ್ದೂ ಆಗಿದೆ. ಇದು ಪಿಎಫ್‌ಐಗೆ ಬಲ ತಂದುಕೊಟ್ಟಿತಲ್ಲದೇ ಹಿಂಸಾಮಾರ್ಗಕ್ಕೆ ಪ್ರೇರಣೆಯನ್ನೂ ನೀಡಿತು. ಬಿಜೆಪಿ ಅಧಿಕಾರಕ್ಕೆ ಬಂದಾಗ, ಸಂಘ ಪರಿವಾರದ ವಿವಿಧ ಸಂಘಟನೆಗಳು, ವ್ಯಕ್ತಿಗಳ ಮೇಲಿದ್ದ ಮೊಕದ್ದಮೆಗಳನ್ನು ವಾಪಸ್ ಪಡೆದು, ಕೆಡುಕು ಬಯಸುವವರಿಗೆ ಅಭಯವನ್ನೂ ತೋರಿತು. ಹೀಗೆ ಬೆಳೆದ ಸಂಘಟನೆಗಳು, ಕಾರ್ಯಕರ್ತರು ಈಗ ಯಾರ ಮಾತನ್ನೂ ಕೇಳದಷ್ಟು ಮಟ್ಟಕ್ಕೆ ಬೆಳೆದು, ಭಸ್ಮಾಸುರರಾಗಿ ನಿಂತಿದ್ದಾರೆ.

ಹಿಜಾಬ್ ವಿರೋಧದ ವಿಷಯ ವಿಶ್ವದಲ್ಲಿ ದೇಶದ ಮಾನ ಹರಾಜು ಹಾಕಿದೆ. ಪರಿಶಿಷ್ಟ ಸಮುದಾಯದ ಎರಡು ವರ್ಷದ ಮಗು ಆಂಜನೇಯನ ಗುಡಿ ಪ್ರವೇಶಿಸಿತೆಂಬ ಕಾರಣಕ್ಕೆ ಪೋಷಕರಿಗೆ ದಂಡ ಹಾಕಿದ ಘಟನೆ ಕುಷ್ಟಗಿಯಲ್ಲಿ ನಡೆದಿತ್ತು. ಅಸ್ಪೃಶ್ಯತೆಯ ಹೀನ ಆಚರಣೆ, ಅಮಾನವೀಯ ಪಂಕ್ತಿಭೇದದ ಪದ್ಧತಿ ಇರುವ ನಾಡಿನಲ್ಲಿ ಹಿಜಾಬ್‌ಗೆ ವಿರೋಧವೆಂಬುದೇ ಅಪಹಾಸ್ಯ. ಉಡುಗೆ–ತೊಡುಗೆ, ಆಚಾರ–ವಿಚಾರಗಳು ಅದನ್ನು ಪಾಲಿಸುವವರ ನಂಬಿಕೆಗೆ ಬಿಟ್ಟ ವಿಚಾರವಾಗಬೇಕು. ಸಂಬಂಧಪಡದವರು ಮೂಗು ತೂರಿಸಿದರೆ, ದೇಶದ ಮಾನ ಹೀಗೆ ಹರಾಜಾಗುತ್ತಲೇ ಇರುತ್ತದೆ. ಹಿಜಾಬ್ ಹಾಕಬೇಕೇ ಬೇಡವೇ ಎಂಬುದು ಆಯಾ ವಿದ್ಯಾರ್ಥಿನಿಯ ಅಥವಾ ಮಹಿಳೆಯ ಆಯ್ಕೆಗೆ ಬಿಟ್ಟ ವಿಷಯ. ಹಿಜಾಬ್ ತೆಗೆಸದಿದ್ದರೆ ನಾವು ಕೇಸರಿ ಶಾಲು, ಪೇಟ ಹಾಕುತ್ತೇವೆ ಎಂದು ವಿದ್ಯಾರ್ಥಿಗಳು ಮೊಂಡು ಹಿಡಿಯುವುದು ರಾಜಕೀಯ. ಅಷ್ಟಕ್ಕೂ ತಲೆ ಮೇಲೆ ಹಿಜಾಬ್ ಹಾಕಿಕೊಂಡು ಬಂದರೆ ಶಿಕ್ಷಕರು ಅಥವಾ ಸಹಪಾಠಿಗಳಿಗೆ ಆಗುವ ತೊಂದರೆಯಾದರೂ ಏನು? ತೀರಾ ಖಾಸಗಿಯಾದ ವಿಷಯವನ್ನು ಬೀದಿಗೆ ತಂದು ನಿಲ್ಲಿಸಿ ರಾಜಕಾರಣ ಮಾಡಲು ಹೊರಟಿದ್ದು ಅಕ್ಷಮ್ಯ.

ಶಾಲೆಗಳಲ್ಲಿ ಸಮವಸ್ತ್ರಕ್ಕಷ್ಟೇ ಅವಕಾಶ, ಹಿಜಾಬ್‌ಗೆ ಅವಕಾಶ ಇಲ್ಲ ಎನ್ನುವವರಿದ್ದಾರೆ. ಅಯ್ಯಪ್ಪಸ್ವಾಮಿ ಮಾಲೆ ಹಾಕಿದವರು ಕಪ್ಪು ಬಣ್ಣದ ಬಟ್ಟೆ ತೊಟ್ಟು ಬರುವುದು ಸಾಮಾನ್ಯ. ಬಯಲುಸೀಮೆಯ ಜಿಲ್ಲೆಗಳಲ್ಲಿ ಹೆಣ್ಣು–ಗಂಡು ಭೇದವಿಲ್ಲದೇ ಹಣೆಗೆ ವಿಭೂತಿ ಪಟ್ಟೆ ಹಾಕಿಕೊಂಡು ಬರುವುದು ಉಂಟು. ಅದಕ್ಕೆ ಯಾವುದೇ ತಕರಾರು ಇರಲಿಲ್ಲ. ವಿಚಿತ್ರವೆಂದರೆ, ಸರ್ಕಾರಿ ಕಚೇರಿಗಳಲ್ಲಿ ಯಾವುದೇ ಧರ್ಮದ ಕುರುಹು ಇರಬಾರದು ಎಂಬ ವಾದ ಮೊದಲಿನಿಂದಲೂ ಇದೆ. ಪ್ರತೀ ಶುಕ್ರವಾರ ಶಾಲೆಗಳಲ್ಲಿ ಸರಸ್ವತಿ ಪೂಜೆ, ವರ್ಷಕ್ಕೊಮ್ಮೆ ಗಣೇಶೋತ್ಸವ ಮಾಡುತ್ತಾರೆ. ಸರಸ್ವತಿಯಿಂದ ದೂರ ಇರುವ ಸಚಿವರು ತಮ್ಮ ಕಚೇರಿಯಲ್ಲಿ ಶುಕ್ರವಾರ 'ಲಕ್ಷ್ಮಿ' ಪೂಜೆ ಮಾಡಿಸುತ್ತಾರೆ. ಆಯುಧಪೂಜೆಯ ದಿನ ಪೊಲೀಸ್ ಠಾಣೆಗಳಲ್ಲಿ, ಬಸ್‌ಗಳಲ್ಲಿ ಅದ್ದೂರಿ ಪೂಜೆ ಮಾಡಲಾಗುತ್ತದೆ. ಇವೆಲ್ಲ ಯಾರು ಹೇರಿದ ಸಂಸ್ಕೃತಿ? ಅಸ್ಪೃಶ್ಯತೆಯ ಕಾರಣಕ್ಕೆ ಪೂಜೆಯಿಂದ ದೂರವೇ ಉಳಿದಿದ್ದ ಪರಿಶಿಷ್ಟ ಜಾತಿಯವರು ಎಂದಾದರೂ ಇದನ್ನು ವಿರೋಧಿಸಿದ್ದುಂಟಾ? ಭಿನ್ನ ನಂಬಿಕೆಯುಳ್ಳ ಮುಸ್ಲಿಂ, ಕ್ರೈಸ್ತರು ಎಂದಾದರೂ ತಕರಾರು ತೆಗೆದಿದ್ದಾರೆಯೇ? ಮಕ್ಕಳು ಹಿಜಾಬ್ ಧರಿಸಬಾರದು ಎಂದು ಶುರುವಾದ ವಿವಾದವೀಗ, ಮಕ್ಕಳನ್ನು ಶಾಲೆ ಬಳಿ ಬಿಡಲು ಬರುವ ಪೋಷಕರು ಸಹ ಬುರ್ಖಾ ಧರಿಸಬಾರದು ಎಂಬಲ್ಲಿಗೆ ಬಂದು ನಿಂತಿದೆ.

ಸಂವಿಧಾನದ ಆಶಯದಂತೆ ನಡೆಯುತ್ತೇವೆ ಎಂದು ಪ್ರಮಾಣವಚನ ಸ್ವೀಕರಿಸಿದ ಸಚಿವರು ಹಿಜಾಬ್ ವಿಷಯದಲ್ಲಿ ನಡೆದುಕೊಂಡ ರೀತಿ ಅವರ ಅಪರಾಧಿಕ ಮನೋಭಾವವನ್ನು ತೋರಿಸುತ್ತದೆ. ಮಕ್ಕಳಲ್ಲಿ ಭ್ರಾತೃತ್ವ, ಸಾಮರಸ್ಯವನ್ನು ಮೂಡಿಸಬೇಕಾದ ಶಿಕ್ಷಣ ಸಚಿವರು, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕಾದ ಗೃಹ ಸಚಿವರು, ಕನ್ನಡ ಮತ್ತು ಸಂಸ್ಕೃತಿಯನ್ನು ಕಾಯಬೇಕಾದ ಕನ್ನಡ ಮತ್ತು ಸಂಸ್ಕೃತಿ ಸಚಿವರು ನಡೆದುಕೊಂಡ ರೀತಿ ಅವರು ಹೊಂದಿರುವ ಹುದ್ದೆಗೆ ತಕ್ಕ ನಡವಳಿಕೆಯಲ್ಲ. ಇಂತಹ ಸೂಕ್ಷ್ಮ ವಿಚಾರಗಳಲ್ಲಿ ಸಮಸ್ಯೆ ಉದ್ಭವಿಸಿದಾಗ, ಅದನ್ನು ಸೌಹಾರ್ದಯುತವಾಗಿ ಶಮನ ಮಾಡುವ ಸಾಂವಿಧಾನಿಕ ಕರ್ತವ್ಯವನ್ನು ಸಚಿವರು ನಿರ್ವಹಿಸಬೇಕಿತ್ತು. ಜನರಿಗೆ ನೆಮ್ಮದಿಯ ಜೀವನ ಕೊಡಬೇಕಾದ ಸಚಿವರು ದುರುಳರಂತೆ ನಡೆದುಕೊಳ್ಳಲಾರಂಭಿಸಿದರೆ ನಾಡು ಮರುಭೂಮಿಯಾಗುತ್ತದೆ.

ಬಿಜೆಪಿಯೊಳಗೆ ಇರುವ ಆಂತರಿಕ ಕಲಹವೂ ಇದರ ಹಿಂದೆ ಕೆಲಸ ಮಾಡಿದಂತೆ ಮೇಲ್ನೋಟಕ್ಕೆ ತೋರುತ್ತದೆ. ಆರು ತಿಂಗಳ ಹಿಂದೆ ಯಡಿಯೂರಪ್ಪ ಅವರನ್ನು ಇಳಿಸಿ, ಮುಖ್ಯಮಂತ್ರಿ ಸ್ಥಾನಕ್ಕೆ ಬಸವರಾಜ ಬೊಮ್ಮಾಯಿ ಅವರನ್ನು ಕೂರಿಸಲಾಯಿತು. ಬೊಮ್ಮಾಯಿ ದೆಹಲಿಗೆ ಹೋದ ಅವಧಿಯಲ್ಲೇ ವಿಚ್ಛಿದ್ರಕಾರಕ ಶಕ್ತಿಗಳು ವಿಕಾರ ಮೆರೆದು ದೇಶದ ಮಾನ ಹರಾಜು ಹಾಕಿದ್ದನ್ನು ನೋಡಿದರೆ, ಆಡಳಿತ ವೈಫಲ್ಯವನ್ನು ಬಿಂಬಿಸುವ ಯತ್ನದ ಹಿಂದೆ ಕಾಣದ ಕೈಗಳು ಕೆಲಸ ಮಾಡಿದಂತೆ ತೋರುತ್ತದೆ. ದುಷ್ಟಶಕ್ತಿಗಳನ್ನು ಬೆಳೆಯಗೊಟ್ಟರೆ ಅದು ಸಂವಿಧಾನದ ರೀತಿ ಅಧಿಕಾರ ನಡೆಸುವ ರಾಜಕೀಯ ಪಕ್ಷಗಳಿಗೆ ಕಂಟಕವಾಗಿ ಪರಿಣಮಿಸುತ್ತದೆ. ಬೊಮ್ಮಾಯಿ ಕೂಡ ಇಂತಹ ಸಂದಿಗ್ಧ ಕಾಲದಲ್ಲಿ ತಮ್ಮ ಸಚಿವರಿಗೆ ಕಿವಿ ಹಿಂಡಿ, ಸರಿದಾರಿಯಲ್ಲಿ ನಡೆಯುವಂತೆ ಕಟ್ಟಪ್ಪಣೆ ವಿಧಿಸುವ ಹೊಣೆ ಮರೆತಿದ್ದು ಸರಿಯಲ್ಲ. ಪಿಎಫ್‌ಐ ಅನ್ನು ಬೆಳೆಸಿ ಕಾಂಗ್ರೆಸ್‌ನ ಶೇ 2–3ರಷ್ಟು ಮತಗಳನ್ನು ಕಿತ್ತುಕೊಂಡರೆ ಕಾಂಗ್ರೆಸ್‌ಗೆ ಹಿನ್ನಡೆಯಾಗುತ್ತದೆ ಎಂಬ ಬಿಜೆಪಿಯ ಲೆಕ್ಕಾಚಾರವೂ ಇದರ ಹಿಂದೆ ಇದ್ದಂತಿದೆ.

ಮಂಡ್ಯದ ವಿದ್ಯಾರ್ಥಿನಿ ಬೀಬಿ ಮುಸ್ಕಾನ್ ಖಾನ್ ಕೂಗಿದ ಘೋಷಣೆ ಈ ವಿಷಯವನ್ನು ಇಡೀ ವಿಶ್ವಕ್ಕೆ ತಲುಪಿಸಿತು. ಕೇಸರಿ ಶಾಲು ಹೊದ್ದು ಅನಿರೀಕ್ಷಿತವಾಗಿ ಗೂಳಿಗಳಂತೆ ಮುಗಿಬಿದ್ದ ಪಡೆಯನ್ನು ಎದುರಿಸಲು ಆ ಕ್ಷಣದಲ್ಲಿ ಬೀಬಿಗೆ ಕಂಡಿದ್ದು, ಪ್ರತಿಯೊಬ್ಬ ಮನುಷ್ಯನಿಗೂ ಜೀವವೇ ಹೋಗಿಬಿಟ್ಟಿತು ಎಂಬ ಅಸಹಾಯಕ ಸ್ಥಿತಿಯೊಳಗೆ ಆಸರೆಯಾಗುವ ದೇವರಷ್ಟೇ. ಹಾಗಾಗಿಯೇ 'ಅಲ್ಲಾಹು ಅಕ್ಬರ್' ಎಂದು ಕೂಗಿದಳು. ಕಷ್ಟ ಬಂದಾಗ, 'ರಾಮ ಕೃಷ್ಣ, ಈಶ್ವರ ಕಾಪಾಡಪ್ಪ' ಎಂದು ಗೋಗರೆಯುವ ರೀತಿಯಲ್ಲಿತ್ತಷ್ಟೇ. ಅದು ಬಿಟ್ಟರೆ ಆಕೆ, 'ರಕ್ಷಣೆಗೆ ಬೊಮ್ಮಾಯಿ, ಜ್ಞಾನೇಂದ್ರ ಬನ್ನಿ' ಎಂದು ಕೂಗಿ ಕರೆಯಲು ಸಾಧ್ಯವಿತ್ತೇ?

ಚುರುಮುರಿ



ವಸ್ತ್ರ ವೈರಸ್

● ಮಣ್ಣೆರಾಜು

'ಸಾರ್, ಮಗಳು ಪಮ್ಮಿಯ ಆರೋಗ್ಯ ತಪಾಸಣೆ ಮಾಡಿ, ವಸ್ತ್ರ ವೈರಸ್ ಇದ್ದರೆ ಲಸಿಕೆ, ಚಿಕಿತ್ಸೆ ಕೊಡಿ...' ಎಂದು ಶಂಕ್ರಿ, ಸುಮಿ ತಜ್ಞರಿಗೆ ಮನವಿ ಮಾಡಿದರು.

ಪಮ್ಮಿಯನ್ನು ತಪಾಸಣೆ ಮಾಡಿದ ತಜ್ಞರು, 'ವಸ್ತ್ರ ವೈರಸ್ ಅಂಟಿಲ್ಲ, ಕಾಲೇಜಿನಲ್ಲಿ ಕಾಯಿಲೆ ತಡೆ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು' ಎಂದರು.

'ಈ ಕಾಯಿಲೆಗೂ ಮಾಸ್ಕ್ ಹಾಕಬೇಕಾ ಸಾರ್?' ಸುಮಿ ಕೇಳಿದಳು.

'ಹೌದು, ಮೂಗು, ಬಾಯಿ ಜೊತೆಗೆ ಕಿವಿಗೂ ಮಾಸ್ಕ್ ಹಾಕಬೇಕು. ವಸ್ತ್ರ ವೈರಸ್ ಕಿವಿಯಿಂದ ಕಿವಿಗೆ ಬೇಗ ಹರಡುತ್ತದೆ'.

'ಈ ಕಾಯಿಲೆ ಲಕ್ಷಣಗಳೇನು ಸಾರ್?' ಶಂಕ್ರಿ ಕೇಳಿದ.

'ಕಲರ್ ಬ್ಲೈಂಡ್‌ನೆಸ್, ಇಷ್ಟವಿಲ್ಲದ ಬಣ್ಣ ಕಂಡರೆ ಕಣ್ಣುರಿ, ಅಸಹಿಷ್ಣುತೆ, ಅಸಮಾನತೆ ರೀತಿಯ ಅವಲಕ್ಷಣಗಳೇ ಈ ರೋಗದ ಲಕ್ಷಣಗಳು'.

'ಕಾಲೇಜಿನಲ್ಲಿ ಒಮ್ಮೊಮ್ಮೆ ನನಗೂ ಈ ರೀತಿ ಆಗುತ್ತಿತ್ತು ಸಾರ್' ಅಂದಳು ಪಮ್ಮಿ.

'ಸೋಂಕಿತರಿಂದ ಅಂತರ ಕಾಪಾಡಿಕೋ, ಅವರ ಬಣ್ಣದ ಮಾತುಗಳಿಗೆ ಮರುಳಾಗಬೇಡ, ಸೋಂಕು ಅಂಟಿಸಿಕೊಂಡರೆ ಹೋಂ ಕ್ವಾರಂಟೈನ್ ಮಾಡಿ ಆನ್‌ಲೈನ್ ಕ್ಲಾಸ್ ಮಾಡ್ತಾರೆ, ಹುಷಾರು!...' ತಜ್ಞರು ಎಚ್ಚರಿಸಿದರು.

'ಕಾಲೇಜಿಗೆ ಪೊಲೀಸ್ ಕಾವಲಿದೆ ಅಂತ ನೆಗ್ಲೆಕ್ಟ್ ಮಾಡ್ಬೇಡ, ವಿಕೃತ ವೈರಸ್‌ಗಳು ಹೇಗಾದ್ರೂ ನುಗ್ಗಿಬಿಡುತ್ತವೆ' ಎಂದಳು ಸುಮಿ.

'ಕೊರೊನಾ ಮೊದಲ ಅಲೆ ವಯೋ-ವೃದ್ಧರನ್ನು ಬಾಧಿಸಿತ್ತು, ಮತ್ತೊಂದು ಅಲೆ ವಯಸ್ಕರನ್ನೂ ಕಾಡಿತ್ತು. ವಸ್ತ್ರ ವೈರಸ್ ಶಾಲಾಕಾಲೇಜು ಮಕ್ಕಳಿಗೆ ವಕ್ಕರಿಸಿಕೊಂಡಿದೆ. ಅದರಲ್ಲೂ, ವೋಟರ್ ಲಿಸ್ಟ್‌ಗೆ ಹೊಸದಾಗಿ ಸೇರಿರುವ, ಸೇರಲು ಸಮೀಪವಿರುವ ವಯಸ್ಸಿನವರನ್ನು ಇದು ಕಾಡುತ್ತಿದೆ' ಶಂಕ್ರಿ ಸಂಕಟಪಟ್ಟ.

'ಧೈರ್ಯವಾಗಿರಿ, ವಸ್ತ್ರ ವೈರಸ್ ಸೀಜನ್ ಕಾಯಿಲೆ, ಎಲೆಕ್ಷನ್ ಸೀಜನ್ ಮುಗಿದ ಮೇಲೆ ನಿಯಂತ್ರಣಕ್ಕೆ ಬರುತ್ತದೆ ಎಂದು ಪರಿಣತರು, ಪ್ರಾಜ್ಞರು ಅಧ್ಯಯನದಿಂದ ಕಂಡುಕೊಂಡಿದ್ದಾರೆ...' ಎಂದರು ತಜ್ಞರು.

ಸಂಗತ

ಒತ್ತುವರಿ ತಡೆಗೆ ಹೊಸ ಅಸ್ತ್ರ

ಭೂಮಿಯ ವ್ಯವಸ್ಥಿತ ದಾಖಲೀಕರಣದಿಂದ ಅಕ್ರಮ ತಡೆ ಸಾಧ್ಯ

● ಮಲ್ಲಿಕಾರ್ಜುನ ಹೆಗ್ಗಳಗಿ

ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಭೂದಾಖಲೆಯ ವ್ಯವಸ್ಥಿತ ನಿರ್ವಹಣೆ, ಸಂಪೂರ್ಣ ಡಿಜಿಟಲೀಕರಣ ಮತ್ತು ಭೂ ಆಧಾರ್ ನಂಬರ್ ವಿಧಾನ ಜಾರಿಗೆ ತರಲು ದೇಶದ ಸಮಗ್ರ ಭೂ ದಾಖಲೀಕರಣ ಯೋಜನೆ (ನ್ಯಾಷನಲ್ ಜನರಿಕ್ ಡಾಕ್ಯುಮೆಂಟ್ ರಿಜಿಸ್ಟ್ರೇಶನ್ ಸಿಸ್ಟಮ್- ಎನ್‌ಜಿಡಿಆರ್‌ಎಸ್) ಪ್ರಕಟಿಸಿರುವುದು ಅತ್ಯಂತ ಮಹತ್ವದ ನಿರ್ಧಾರವಾಗಿದೆ.

ಬೆಂಗಳೂರು ನಗರ ಮತ್ತು ಸುತ್ತಲಿನ ಭಾಗದಲ್ಲಿ ಒತ್ತುವರಿಯಾಗಿರುವ ಭೂಮಿಯನ್ನು ಗುರುತಿಸಿ ವರದಿ ನೀಡಲು ಸರ್ಕಾರ 2007ರಲ್ಲಿ ಎ.ಟಿ.ರಾಮಸ್ವಾಮಿ ಅವರ ನೇತೃತ್ವದಲ್ಲಿ ಸಮಿತಿ ರಚಿಸಿತ್ತು. ಈ ಸಮಿತಿ ಮೂವತ್ತು ಸಾವಿರ ಎಕರೆ ಭೂಮಿ ಒತ್ತುವರಿಯಾಗಿರುವುದಾಗಿ ವರದಿ ನೀಡಿತು. ಇದರ ಅನ್ವಯ, ಸುಮಾರು 7,000 ಎಕರೆ ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿತು. ವಿಚಿತ್ರ ಸಂಗತಿ ಎಂದರೆ, ವಶಪಡಿಸಿಕೊಂಡ ಈ ಭೂಮಿಗೆ ಬೇಲಿ ಹಾಕಿ ರಕ್ಷಣೆ ಮಾಡದೇ ಇದ್ದುದರಿಂದ ಪುನಃ ಈ ಭೂಮಿಯನ್ನು ಒತ್ತುವರಿ ಮಾಡಲಾಗಿದೆ.

ದೇಶದ ತುಂಬ ದೇವಾಲಯಗಳ, ಐತಿಹಾಸಿಕ ಸ್ಮಾರಕಗಳ, ಸಾರ್ವಜನಿಕ ಟ್ರಸ್ಟ್, ಗೋಮಾಳ, ಸರ್ಕಾರಿ ಭೂಮಿಯ ದೊಡ್ಡ ಪ್ರಮಾಣದ ಅತಿಕ್ರಮಣ ನಡೆದಿದೆ. ಭೂ ದಾಖಲೀಕರಣದ ಹೊಸ ವ್ಯವಸ್ಥೆಯಿಂದ ಇದನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಲು ಅನುಕೂಲವಾಗುತ್ತದೆ.

ದೇಶದ ನ್ಯಾಯಾಲಯಗಳಲ್ಲಿ ಗಣನೀಯ ಪ್ರಮಾಣದ ವ್ಯಾಜ್ಯಗಳು ಭೂಮಿಗೆ ಸಂಬಂಧಿಸಿದ ಪ್ರಕರಣಗಳಾಗಿರುವುದು ಗಮನಿಸಬೇಕಾದ ಸಂಗತಿ. ಜಮೀನು ಹಂಚಿಕೆಯ ವಿವಾದಗಳಿಂದಾಗಿ ಕುಟುಂಬ ಸದಸ್ಯರ ನೆಮ್ಮದಿ ಹಾಳಾಗಿದೆ. ಪಾಲುಗಾರರ ನಡುವೆ ಕಲಹಗಳು ಹುಟ್ಟಿಕೊಂಡಿವೆ. ಭೂಮಿ ಭೌತಿಕ ಸಂಪತ್ತಾಗಿರುವುದರ ಜೊತೆಗೆ ಭಾವನಾತ್ಮಕ ಸಂಬಂಧವನ್ನೂ ಹೊಂದಿದೆ.

ಭಾರತದಲ್ಲಿ ಮೌರ್ಯ ಅರಸರ ಕಾಲಕ್ಕೆ ಖಾಸಗಿ ಆಸ್ತಿಯಾಗಿ ಭೂಮಿ ಗಡಿ ನಿರ್ಧರಿಸುವ ಕೆಲಸ ಆರಂಭವಾಯಿತು. ಮೊಘಲರ ಕಾಲದಲ್ಲಿ ಇದು ಮುಂದುವರಿಯಿತು. ಬ್ರಿಟಿಷರ ಆಡಳಿತದ ಕಾಲಕ್ಕೆ ಭೂ ದಾಖಲೆ ತಯಾರಿಕೆಗೆ ಹೆಚ್ಚು ಒತ್ತು ನೀಡಲಾಯಿತು. ಲಿಖಿತ ದಾಖಲೆ ಸಿದ್ಧಪಡಿಸುವ ಪರಿಪಾಟವೂ ಆರಂಭವಾಯಿತು. ಆಗ ದೇಶದಲ್ಲಿದ್ದ ಸಂಸ್ಥಾನಿಕರು ತಮ್ಮ ಸಂಸ್ಥಾನಕ್ಕೆ ಸಂಬಂಧಿಸಿ ಭಿನ್ನ ಭಿನ್ನ ನಿಯಮಗಳನ್ನು ಜಾರಿಗೆ ತಂದಿದ್ದರು. ಆಳರಸರ ನಡುವಿನ ತಿಕ್ಕಾಟ ಹಾಗೂ ಬ್ರಿಟಿಷರ ಕಾನೂನು ಗೊಂದಲದಿಂದಾಗಿ ಭೂ ಕಬಳಿಕೆ ವಿಪರೀತವಾಗಿ ನಡೆಯಿತು. ಬಲಶಾಲಿಗಳು ಭಯ ಹುಟ್ಟಿಸುವ ಮೂಲಕ ದುರ್ಬಲ ರೈತರ ಭೂಮಿಯನ್ನು ತಮ್ಮದನ್ನಾಗಿ ಮಾಡಿಕೊಂಡರು. ಜಮೀನ್ದಾರಿ ಪದ್ಧತಿಯಲ್ಲಿ ಸಾವಿರಾರು ಎಕರೆ ಸಾಗುವಳಿ ಭೂಮಿಯನ್ನು ಒಬ್ಬನೇ ಹೊಂದಿರುವುದಕ್ಕೆ ಅವಕಾಶವಿತ್ತು. ಜಮೀನ್ದಾರ ತನ್ನ ಭೂಮಿಯಲ್ಲಿ ದುಡಿಯುವ ರೈತರನ್ನು ಗುಲಾಮರಂತೆ ನಡೆಸಿಕೊಳುತ್ತಿದ್ದ. ಸ್ವಾತಂತ್ರ್ಯ ಬಂದ ನಂತರವೂ ಅದೇ ಪದ್ಧತಿ ಮುಂದುವರಿಯಿತು.

ಕರ್ನಾಟಕದಲ್ಲಿ ಗೇಣಿ ಪದ್ಧತಿ ವಿರೋಧಿಸಿ 1951ರಲ್ಲಿ ನಡೆದ ಸಾಗರ ತಾಲ್ಲೂಕು ಕಾಗೋಡು ರೈತ ಸತ್ಯಾಗ್ರಹ ನಾಡಿನ ಇತಿಹಾಸದಲ್ಲಿ ಒಂದು ಚಿರಸ್ಮರಣೀಯ ಅಧ್ಯಾಯ. ಭೂ ಸುಧಾರಣೆ ಶಾಸನದ ಸ್ಫೂರ್ತಿಯ ನೆಲೆ. ರಾಮಮನೋಹರ ಲೋಹಿಯಾ, ಶಾಂತವೇರಿ ಗೋಪಾಲಗೌಡರು ಈ ಹೋರಾಟದ ನೇತೃತ್ವ ವಹಿಸಿದ್ದರು. ಇದರಿಂದ ರೈತರಲ್ಲಿ ಜಾಗೃತಿ ಮೂಡಿತು ಮಾತ್ರವಲ್ಲ, ಹೊಸ ಸಾಮಾಜಿಕ ಚಿಂತನೆಗಳು ಆರಂಭವಾದವು.

ಭೂಮಿ ದಾಖಲೀಕರಣ ಯೋಜನೆಯ ಸಮರ್ಪಕ ನಿರ್ವಹಣೆಯಿಂದ ವ್ಯಕ್ತಿಯೊಬ್ಬ ಹೊರ ರಾಜ್ಯಗಳೂ ಸೇರಿದಂತೆ ಬೇರೆ ಬೇರೆ ಕಡೆ ಹೊಂದಿದ ಭೂ ಸಂಪತ್ತಿನ ಸ್ಪಷ್ಟ ವಿವರ ದೊರಕುತ್ತದೆ. ಪ್ರತೀ ತುಂಡು ಭೂಮಿಗೆ 14 ಸಂಖ್ಯೆಯ ಒಂದು ಡಿಜಿಟಲ್ ನಂಬರ್ ಕೊಡಲಾಗುವುದು. ಅದನ್ನು 'ಭೂ ಆಧಾರ್' ನಂಬರ್ ಎಂದು ಕರೆಯಲಾಗುತ್ತದೆ. ವ್ಯಕ್ತಿಯೊಬ್ಬ ಕೃಷಿ ಭೂಮಿ ಹೊಂದುವುದಕ್ಕೆ ಮಿತಿ ನಿಗದಿಪಡಿಸಲಾಗಿದೆ. ಆದರೆ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ನಿವೇಶನಗಳನ್ನು ಹೊಂದುವುದಕ್ಕೆ ಮಿತಿ ಇಲ್ಲ. ಈ ಹೊಸ ವಿಧಾನದಿಂದ ನಿವೇಶನಗಳನ್ನು ಹೊಂದಿದ ಮಾಹಿತಿ ದೊರೆಯುವುದು. ಹಣ ಮತ್ತು ಬೆಲೆಬಾಳುವ ವಸ್ತುಗಳನ್ನು ಮುಚ್ಚಿ ಇಡಬಹುದು, ಆದರೆ ಭೂ ಸಂಪತ್ತನ್ನು ಮುಚ್ಚಿಡಲು ಸಾಧ್ಯವಿಲ್ಲ. ಭೂ ಆಧಾರ್ ನಂಬರ್‌ನಿಂದ ಈ ಮಾಹಿತಿ ಬಹಿರಂಗಗೊಳ್ಳುತ್ತದೆ.

ಪ್ರತೀ ರಾಜ್ಯದಲ್ಲಿ ಭೂ ಕಾನೂನುಗಳು ಭಿನ್ನವಾಗಿವೆ. ಉದಾಹರಣೆಗೆ, ಹಿಮಾಚಲ ಪ್ರದೇಶದಲ್ಲಿ ನಗರ ಮತ್ತು ಗ್ರಾಮೀಣ ಎಂಬ ವರ್ಗೀಕರಣ ಇಲ್ಲ. ಕೃಷಿ ಸಂಶೋಧನೆಯ ಕಾರ್ಯ ಕೈಗೊಳ್ಳುವುದಕ್ಕೆ ಬಳಸುವ ಭೂಮಿ ಖರೀದಿಗೆ ಕರ್ನಾಟಕ, ಗುಜರಾತ್, ಮಹಾರಾಷ್ಟ್ರದಲ್ಲಿ ಬಹಳ ರಿಯಾಯಿತಿಗಳು ಇವೆ. ಆದರೆ ಆಂಧ್ರಪ್ರದೇಶದಲ್ಲಿ ಕೆಲವು ನಿಬಂಧನೆಗಳಿವೆ. ಕೇಂದ್ರ ಸರ್ಕಾರದ ಮಟ್ಟದಲ್ಲಿ ನಡೆಯುವ ಭೂ ದಾಖಲೀಕರಣದಲ್ಲಿ ಇದನ್ನು ಗಮನಿಸುವುದು ಅವಶ್ಯ. ಭೂಮಿಯ ವ್ಯವಸ್ಥಿತ ದಾಖಲೀಕರಣದಿಂದ ಎಲ್ಲಕ್ಕಿಂತ ಮುಖ್ಯವಾಗಿ ಸಂಪತ್ತಿನ ಕರ ವಸೂಲಿಗೆ ಅನುಕೂಲವಾಗುವುದು. ಸಂಪತ್ತು ಹೊಂದಿರುವುದಕ್ಕೆ ಆದಾಯದ ಮೂಲಗಳನ್ನು ವಿಚಾರಿಸಲು ನೆರವಾಗುವುದು. ಇದರಿಂದ ಅನೇಕ ಆರ್ಥಿಕ ಅಕ್ರಮ ವ್ಯವಹಾರಗಳನ್ನು ತಡೆಯಬಹುದಾಗಿದೆ.

ರಾಜ್ಯಗಳ ಮಟ್ಟದಲ್ಲಿ ಭೂ ಕಾನೂನು ಸುಧಾರಣೆಯ ಪ್ರಯತ್ನಗಳು ಆಗಾಗ ನಡೆದಿವೆ. ಆದರೆ ಸಮರ್ಪಕವಾಗಿ ಜಾರಿಯಾಗಿಲ್ಲ. ಕೇಂದ್ರ ಸರ್ಕಾರ ನಿಷ್ಠುರವಾಗಿ ಈ ಯೋಜನೆ ಕಾರ್ಯರೂಪಕ್ಕೆ ತರುವುದು ಅವಶ್ಯವಿದೆ.

ವಾಚಕರ ವಾಣಿ

ಬೆಂಗಳೂರಿನ ಅಭಿವೃದ್ಧಿಗೆ ಬೇಕು ಇಚ್ಛಾಶಕ್ತಿ

ರಾಜಧಾನಿ ಬೆಂಗಳೂರು ನಗರ ಇಂದಿಗೂ ಮೂಲ ಸೌಕರ್ಯಗಳ ಕೊರತೆಯಿಂದ ಮುಕ್ತವಾಗಿಲ್ಲ. ಕಾಲಕಾಲಕ್ಕೆ ತೊಳೆದುಕೊಂಡು ಹೋಗುವ ರಸ್ತೆಗಳನ್ನು ಹಾಕಲು ಆಡಳಿತವು ಸಮರಸಿದ್ಧ ಸ್ಥಿತಿಯಲ್ಲಿ ಇರುತ್ತದೆ. ದೀರ್ಘಾವಧಿ ಬಾಳಿಕೆ ಬರುವ ರಸ್ತೆಗಳು ಬೆಂಗಳೂರಿನಲ್ಲಿ ಇಲ್ಲ. ಪ್ರತೀ ರಸ್ತೆಯಲ್ಲೂ ಅವೈಜ್ಞಾನಿಕವಾದ ಉಬ್ಬುಗಳು, ದೊಡ್ಡ ದೊಡ್ಡ ಗುಂಡಿಗಳು ಇವೆ. ಪ್ರತೀ ಮಳೆಗಾಲದಲ್ಲಿ ರಾಜಕಾಲುವೆಗಳು ಉಕ್ಕಿ ಹರಿಯುತ್ತವೆ.

ಬೆಂಗಳೂರಿನ ಬೆಳವಣಿಗೆಯ ವೇಗಕ್ಕೆ ಯೋಜನಾಬದ್ಧವಾಗಿ ಕೆಲಸ ನಿರ್ವಹಿಸುವ ಆಡಳಿತಗಾರರ ಕೊರತೆಯಿದೆ. ದೀರ್ಘಾವಧಿಯ ಬಗ್ಗೆ ಯೋಚಿಸದೆ ಬರೀ ತೇಪೆ ಹಾಕುವ ಕೆಲಸಕ್ಕೆ ಸರ್ಕಾರ ಆದ್ಯತೆ ನೀಡುತ್ತಿದೆ. ರಾಜಕಾಲುವೆ ಅಭಿವೃದ್ಧಿಗಾಗಿ ₹1,556 ಕೋಟಿ ನೀಡುವುದಾಗಿ ಭರವಸೆ ನೀಡಿದ್ದ ಸರ್ಕಾರ, ಸದ್ಯಕ್ಕೆ ಈ ಉದ್ದೇಶಕ್ಕೆ ₹ 411.31 ಕೋಟಿಯನ್ನು ಮಾತ್ರ ಬಳಸಿಕೊಳ್ಳಲು ಸಿದ್ಧತೆ ನಡೆಸಿರುವುದು (ಪ್ರ.ವಾ., ಫೆ. 14) ದುರದೃಷ್ಟಕರ. ಈ ಬಾರಿಯ ಮಳೆಗಾಲದಲ್ಲಿ ಕೆರೆಗಳು ಕೋಡಿ ಬಿದ್ದು ಬಡಾವಣೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾದದ್ದನ್ನು ಸರ್ಕಾರ ಮರೆತಂತಿದೆ. ಹಣಕಾಸಿನ ಕೊರತೆಯ ನೆಪವೊಡ್ಡಿ ಇಂತಹ ಕಾಮಗಾರಿಗೆ ನಿಗದಿಯಾದ ಹಣವನ್ನು ಮೊಟಕುಗೊಳಿಸಿ, ಕ್ರಿಯಾಯೋಜನೆಯನ್ನು ಸಂಕ್ಷಿಪ್ತಗೊಳಿಸುವುದರಿಂದ ಸಮಸ್ಯೆಗಳು ಪುನರಾವರ್ತನೆಯಾಗುತ್ತವೆ. ಈ ದಿಸೆಯಲ್ಲಿ ಸರ್ಕಾರ ದೃಢನಿಲುವು ತಾಳಿ, ನಿಗದಿಪಡಿಸಿದ್ದಷ್ಟು ಹಣವನ್ನು ಕೊಟ್ಟು ನಗರದ ಕೆಲವು ಸಮಸ್ಯೆಗಳಿಗೆ ಪರಿಹಾರ ಒದಗಿಸಲಿ.

ರಿಪ್ಪನ್‌ಪೇಟೆ ನಟರಾಜ್, ಬೆಂಗಳೂರು

ನಿಮ್ಮ ಮನೆಯವರೂ ಅಸಹ್ಯಪಟ್ಟಾರು...

ಸಮವಸ್ತ್ರ ಸಂಹಿತೆಗೆ ಸಂಬಂಧಿಸಿದಂತೆ ಶಾಲಾ ಕಾಲೇಜುಗಳಲ್ಲಿ ನಡೆಯುತ್ತಿರುವ ವಾದ ವಿವಾದಗಳಲ್ಲಿ ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳಬೇಕಾದ ನಮ್ಮ ಜನಪ್ರತಿನಿಧಿಗಳು, ಮಹಿಳೆಯರು ಧರಿಸುವ ತುಂಡುಡುಗೆಯಿಂದ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿವೆ ಎಂಬ ಬಾಲಿಶ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇದಕ್ಕೆ ಖಂಡನೆ ವ್ಯಕ್ತವಾದಾಗ, 'ನಮಗೆ ಹೆಣ್ಣು ಮಕ್ಕಳ ಮೇಲೆ ಗೌರವ ಇದೆ. ನನ್ನ ಮಾತಿನಿಂದ ನೋವಾಗಿದ್ದರೆ ಕ್ಷಮೆ ಕೇಳುತ್ತೇನೆ' ಎನ್ನುತ್ತಾರೆ.

ಸ್ವಾಮಿ ಪ್ರಜಾಪ್ರತಿನಿಧಿಗಳೇ, ಇಂತಹ ವಿವೇಚನಾರಹಿತ ಹೇಳಿಕೆಗಳಿಂದ ನಿಮ್ಮ ಮನೆಯ ಹೆಣ್ಣು ಮಕ್ಕಳೂ ನಿಮ್ಮ ಬಗ್ಗೆ ಅಸಹ್ಯ ಪಡಬಹುದೆಂಬ ಅರಿವಾದರೂ ಇರಲಿ.

ಸುವರ್ಣ ಸಿ.ಡಿ., ತರೀಕೆರೆ

ಬೆದರಿಸಲು ಅಸ್ತ್ರ ಇಲ್ಲದಂತಾದೀತು

'ಹಿಂದಿನ ಸರ್ಕಾರದ ಮುಖಂಡರ ಅಸಲಿ ಬಣ್ಣ ಬಯಲು ಮಾಡುವೆ', 'ಇವರ ಜಾತಕ ಬಿಚ್ಚಿಡುವೆ' ಎಂಬೆಲ್ಲ ಪೌರುಷದ ಮಾತುಗಳನ್ನು ನಮ್ಮ ರಾಜಕೀಯ ನಾಯಕರು ಆಗಾಗ ಹೇಳುವುದನ್ನು ಕೇಳುತ್ತಲೇ ಇರುತ್ತೇವೆ. ಅಧಿಕಾರದ ರುಚಿ ಸವಿಯುತ್ತಿರುವಾಗ ಎಲ್ಲವೂ ಚಂದವಾಗಿಯೇ ಕಾಣಿಸುತ್ತಿರುತ್ತವೆ. ಕೈಯಲ್ಲಿ ಮಾಡಲು ಕೆಲಸವಿಲ್ಲದಾಗ ಈ ರೀತಿಯಲ್ಲಿ ಸುದ್ದಿಯಲ್ಲಿರಲು ಪ್ರಯತ್ನಿಸುವುದು ಹೊಸದೇನಲ್ಲ. ಇಂತಹ ನಡೆ ಸಲ್ಲದು.

ಕ್ರಿಯೆಗೆ ಪ್ರತಿಕ್ರಿಯೆ ಎಂಬಂತೆ ಅವರೂ ನಿಮ್ಮ ಬಣ್ಣ ಬಯಲು ಮಾಡಿದರೆ? ಬಯಲಿನಲ್ಲಿ ಅಷ್ಟೆಲ್ಲ ಬಣ್ಣಗಳನ್ನು ತುಂಬಲು ಜಾಗ ಇರಲಾರದು. ಅಷ್ಟೇ ಅಲ್ಲ, ಒಮ್ಮೆ ಬಯಲು ಮಾಡಿಬಿಟ್ಟರೆ ಮುಂದೆ ಬೆದರಿಸಲು ಅಸ್ತ್ರವೇ ಇಲ್ಲದಂತೆ ಆಗುವುದಿಲ್ಲವೇ?

ಭರತ್ ಬಿ.ಎನ್., ಬೆಂಗಳೂರು

ಜನಪದ ಪರಂಪರೆಗೆ ಅಪಮಾನ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು 30 ಸಾವಿರ 'ಹೆಬ್ಬೆಟ್ಟುಗಳು' ಪರಿಷತ್ತಿನ ಸದಸ್ಯರಾಗಿರುವುದಾಗಿಯೂ, ಅವರಿಗೆ ಅಕ್ಷರ ಕಲಿಸಿ ಪರೀಕ್ಷೆ ನಡೆಸುವುದಾಗಿಯೂ ಹೇಳಿಕೆ ನೀಡಿದ್ದಾರೆ (ಪ್ರ.ವಾ., ಫೆ. 12). ಒಂದು ಭಾಷಾ ಸಮುದಾಯದಲ್ಲಿ ಅಕ್ಷರಸ್ಥರು ಮತ್ತು ಅನಕ್ಷರಸ್ಥರು ಎಂಬ ವಿಂಗಡಣೆ ಮಾಡುವುದೇ ಅಪರಾಧ. ನಾವೀಗ ಅನುಸಂಧಾನ ಮಾಡುತ್ತಿರುವ ಕನ್ನಡ ಸಾಹಿತ್ಯ- ಸಂಸ್ಕೃತಿಯ ಬೆಳವಣಿಗೆಯಲ್ಲಿ ಅಕ್ಷರಸ್ಥರಿಗಿಂತ ಅನಕ್ಷರಸ್ಥರ ಕೊಡುಗೆ ದೊಡ್ಡದು.

ಅಕ್ಷರ ಗೊತ್ತಿರುವುದಕ್ಕೂ ಸಾಹಿತ್ಯಕ್ಕೂ ನೇರಾನೇರ ಸಂಬಂಧವಿಲ್ಲ. ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಕಾರ್ಯಕ್ರಮ ಮಾಡುವುದು ಒಳ್ಳೆಯದಾದರೂ, ಅಧ್ಯಕ್ಷರ ಮಾತುಗಳು ಅನಕ್ಷರಸ್ಥರ ಸದಸ್ಯತ್ವ ಅಪಮಾನವೆಂಬಂತೆ ಇದ್ದು, ಅವರನ್ನು 'ಹೆಬ್ಬೆಟ್ಟುಗಳು' ಎಂದು ವ್ಯಂಗ್ಯ ಮಾಡುವ ಮೂಲಕ ಬಹುದೊಡ್ಡ ಜನಪದ ಪರಂಪರೆಗೆ ಅಪಮಾನ ಮಾಡಿದಂತಾಗಿದೆ.

ಹುಲಿಕುಂಟೆ ಮೂರ್ತಿ, ಬೆಂಗಳೂರು

ಸೀಟು ಬೆಲ್ಟ್: ಆಧಾರರಹಿತ ತರ್ಕ

ಕಾರುಗಳಲ್ಲಿ ಎಲ್ಲ ಫ್ರಂಟ್ ಫೇಸಿಂಗ್ (ಮುಂಬದಿ ಮುಖ ಮಾಡಿರುವ) ಸೀಟುಗಳಿಗೂ ವಾಹನ ತಯಾರಕರು ಕಡ್ಡಾಯವಾಗಿ ಸೀಟು ಬೆಲ್ಟ್ ಅಳವಡಿಸುವಂತೆ ಅಧಿಸೂಚನೆ ಹೊರಡಿಸಲಾಗುವುದು ಎಂದು ಕೇಂದ್ರ ಸಾರಿಗೆ ಸಚಿವರು ತಿಳಿಸಿದ್ದಾರೆ. 2025ರ ಒಳಗೆ ರಸ್ತೆ ಅಪಘಾತದ ಸಾವಿನ ಪ್ರಮಾಣವನ್ನು ಕಡಿತಗೊಳಿಸುವ ಗುರಿಯನ್ನು ಹೊಂದಲಾಗಿದೆ ಎಂದು ಅವರು ಹೇಳಿದ್ದಾರೆ. ವಾಹನ ಸವಾರರು ಹೆಲ್ಮೆಟ್ ಧರಿಸಿದ ಮಾತ್ರಕ್ಕೆ ಅಥವಾ ಸೀಟು ಬೆಲ್ಟ್ ಹಾಕಿಕೊಂಡ ಮಾತ್ರಕ್ಕೆ ಅಪಘಾತಗಳಿಂದ ತಪ್ಪಿಸಿಕೊಳ್ಳುತ್ತಾರೆ. ಒಂದು ವೇಳೆ ಅಪಘಾತಕ್ಕೀಡಾದರೂ ಸಾಯುವುದಿಲ್ಲ ಎಂಬ ತರ್ಕವೇ ಆಧಾರರಹಿತ.

ಮುಖ್ಯವಾಗಿ, ಅಪಘಾತಗಳಾಗುತ್ತಿರುವುದು ರಸ್ತೆಯಲ್ಲಿನ ಅವೈಜ್ಞಾನಿಕ ಉಬ್ಬುಗಳು, ಗುಂಡಿಗಳು, ಅಸಮರ್ಪಕ ಸಂಕೇತಸೂಚಕ ಫಲಕಗಳ ಅಳವಡಿಕೆಯಂತಹ ಕಾರಣಗಳಿಂದ ಎಂಬುದನ್ನು ಗಮನಿಸಬೇಕಿದೆ. ರಸ್ತೆಗಳನ್ನು ಸರಿಪಡಿಸದೆ, ತರಹೇವಾರಿ ಅತ್ಯಧಿಕ ವೇಗದ ವಾಹನಗಳನ್ನು ಉತ್ಪಾದಿಸುತ್ತಿದ್ದರೆ, ಸ್ಪರ್ಧೆಗೆ ಬಿದ್ದವರಂತೆ ಪ್ರಖರ ಹೆಡ್‌ಲೈಟುಗಳನ್ನು ಬಳಸಲು ಅವಕಾಶ ನೀಡುತ್ತಿದ್ದರೆ, ಪ್ರತಿಯೊಂದು ವಾಹನದ ಹಿಂಭಾಗ ಮತ್ತು ಮುಂಭಾಗದಲ್ಲಿ ಪ್ರತಿಫಲಕಗಳನ್ನು ಅಳವಡಿಸದೇ ಇದ್ದರೆ ಅಪಘಾತಗಳು ಹೇಗೆ ಕಡಿಮೆಯಾದಾವು? ಸೀಟು ಬೆಲ್ಟ್ ಕಡ್ಡಾಯದ ಜೊತೆಗೆ ಈ ಅಂಶಗಳತ್ತಲೂ ಗಮನಹರಿಸಿದರೆ ಸಾರಿಗೆ ಸಚಿವರು ಜನಸಾಮಾನ್ಯರ ಬಗ್ಗೆ ಹೊಂದಿರುವ ಕಳಕಳಿಗೆ ಅರ್ಥ ಬರುತ್ತದೆ.

ಡಾ. ಚನ್ನು ಅ. ಹಿರೇಮಠ, ರಾಣೆಬೆನ್ನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉತ್ತರ ಪ್ರದೇಶ, ಕೇರಳ, ಪಶ್ಚಿಮ ಬಂಗಾಳ...
ಅಭಿವೃದ್ಧಿ ಮಾದರಿಯ ತಾಳೆ

- ಉತ್ತರ ಪ್ರದೇಶ
- ಜಮ್ಮು-ಕಾಶ್ಮೀರ
- ಪಶ್ಚಿಮ ಬಂಗಾಳ
- ಕೇರಳ
- ಗುಜರಾತ್
- ಕರ್ನಾಟಕ

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

‘ನಾವು ಅಧಿಕಾರಕ್ಕೆ ಬರದೇ ಇದ್ದರೆ, ಉತ್ತರ ಪ್ರದೇಶವು ಜಮ್ಮು-ಕಾಶ್ಮೀರ, ಪಶ್ಚಿಮ ಬಂಗಾಳ ಮತ್ತು ಕೇರಳದಂತೆ ಆಗುತ್ತದೆ’ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಹೇಳಿದ್ದು ಬಾರಿ ಚರ್ಚೆಗೆ ಕಾರಣವಾಗಿದೆ. ಯೋಗಿ ಅವರ ಹೇಳಿಕೆಗೆ ಈ ರಾಜ್ಯಗಳ ಮುಖ್ಯಮಂತ್ರಿಗಳು, ನಾಯಕರು ಮತ್ತು ನಾಗರಿಕರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಉತ್ತರ ಪ್ರದೇಶ ಮತ್ತು ಈ ಮೂರು ರಾಜ್ಯಗಳ ಅಭಿವೃದ್ಧಿಯ ವಿವಿಧ ಆಯಾಮಗಳನ್ನು ಹೋಲಿಕೆ ಮಾಡಿ ನೋಡುವವರೆಗೂ ಈ ಚರ್ಚೆ ಹೋಗಿದೆ.

‘ಉತ್ತರ ಪ್ರದೇಶವು ಬೇರೆ ರಾಜ್ಯಗಳಿಗೆ ಹೋಲಿಸಿದರೆ ತೀರಾ ಹಿಂದೆ ಉಳಿದಿದೆ. ಅದಕ್ಕಿಂತ ಹೆಚ್ಚು ಅಭಿವೃದ್ಧಿ ಹೊಂದಿರುವ ಕೇರಳ, ಪಶ್ಚಿಮ ಬಂಗಾಳ ಮತ್ತು ಜಮ್ಮು-ಕಾಶ್ಮೀರದಂತೆ ಆಗುವುದಾದರೆ, ಉತ್ತರ ಪ್ರದೇಶದ ಜನರು ಖುಷಿ ಪಡಲಿದ್ದಾರೆ’ ಎಂದು ಬಿಜೆಪಿಯೇತರ ಪಕ್ಷಗಳ ನಾಯಕರು ಹೇಳಿದ್ದಾರೆ.

‘ಯೋಗಿ ಆದಿತ್ಯನಾಥ ಅವರು ಹೋಲಿಕೆಗೆ ಆಯ್ಕೆ ಮಾಡಿಕೊಂಡ ಈ ಮೂರೂ ರಾಜ್ಯಗಳು ಬಹುತೇಕ ಕ್ಷೇತ್ರಗಳಲ್ಲಿ ಉತ್ತರ ಪ್ರದೇಶಕ್ಕಿಂತ ಮುಂದೆ ಇವೆ. ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಬಿಜೆಪಿಯ ಡಬಲ್ ಎಂಜಿನ್ ಸರ್ಕಾರವಿದ್ದರೂ, ಉತ್ತರ ಪ್ರದೇಶ ಅಭಿವೃದ್ಧಿಯಾಗಿಲ್ಲ’ ಎಂದು ಹಲವು ಜನರು ಸಾಮಾಜಿಕ ಜಾಲತಾಣಗಳಲ್ಲಿ ಬೊಟ್ಟುಮಾಡಿ ತೋರಿಸುತ್ತಿದ್ದಾರೆ. ವಿರೋಧ ಪಕ್ಷಗಳು ಅಧಿಕಾರದಲ್ಲಿ ಇರುವ ರಾಜ್ಯಗಳು, ಬಿಜೆಪಿ ಅಧಿಕಾರದಲ್ಲಿ ಇರುವ ರಾಜ್ಯಗಳಿಗಿಂತ ಈ ಕ್ಷೇತ್ರಗಳಲ್ಲಿ ಹೆಚ್ಚು ಪ್ರಗತಿ ಸಾಧಿಸಿವೆ. ಹೀಗಾಗಿ ಅಭಿವೃದ್ಧಿಯಲ್ಲಿನ ಈ ಅಂತರವನ್ನು ಎತ್ತಿ ತೋರಿಸಲಾಗುತ್ತಿದೆ. ಉತ್ತರ ಪ್ರದೇಶದ ಸ್ಥಿತಿಗತಿಯ ಜತೆಗೆ ಕೇರಳ, ಪಶ್ಚಿಮ ಬಂಗಾಳ ಮತ್ತು ಜಮ್ಮು-ಕಾಶ್ಮೀರದಲ್ಲಿ ಆಗಿರುವ ಅಭಿವೃದ್ಧಿಯನ್ನು ಹೋಲಿಸಲಾಗುತ್ತಿದೆ.

2014ರ ಲೋಕಸಭಾ ಚುನಾವಣೆಗೂ ಮುನ್ನ ಗುಜರಾತ್ ಮಾದರಿಯ ಅಭಿವೃದ್ಧಿ ಎಂಬುದು ಬಿಜೆಪಿಯ ಪ್ರಚಾರದ ಕೇಂದ್ರಬಿಂದು ಆಗಿತ್ತು. ಆದರೆ ಗುಜರಾತ್ ಮಾದರಿ ಏನು ಎಂಬುದನ್ನು ಬಿಜೆಪಿ ವಿವರಿಸಿರಲಿಲ್ಲ. ಆದರೆ, ಗುಜರಾತ್ ಸಹ ಅಭಿವೃದ್ಧಿಯ ಈ ಆಯಾಮಗಳಲ್ಲಿ ಕೇರಳ ಮತ್ತು ಜಮ್ಮು-ಕಾಶ್ಮೀರಕ್ಕಿಂತ ಹಿಂದೆ ಉಳಿದಿದೆ. ಕೇಂದ್ರ ಸರ್ಕಾರವೇ ಬಿಡುಗಡೆ ಮಾಡಿರುವ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ವರದಿಯ ದತ್ತಾಂಶಗಳೂ ಇದನ್ನೇ ಹೇಳುತ್ತವೆ. ಹೀಗಾಗಿ ಬಿಜೆಪಿ ಹೇಳುತ್ತಿರುವ ಅಭಿವೃದ್ಧಿಯ ಮಾದರಿಗಳನ್ನು ಜನರು ಸಾಮಾಜಿಕ ಜಾಲತಾಣಗಳಲ್ಲಿ ಲೇವಡಿ ಮಾಡುತ್ತಿದ್ದಾರೆ.

ಉತ್ತರ ಪ್ರದೇಶ ಮತ್ತು ಬೇರೆ ರಾಜ್ಯಗಳು ಅಭಿವೃದ್ಧಿಯ ವಿವಿಧ ಆಯಾಮಗಳಲ್ಲಿ ಸಾಧಿಸಿರುವ ಪ್ರಗತಿಯ ಚಿತ್ರಣ ಇಲ್ಲಿದೆ.

ಎಲ್‌ಪಿಜಿ ಬಳಕೆ

‘ಡಬಲ್ ಎಂಜಿನ್’ ಸರ್ಕಾರವಿದ್ದರೆ ಅಭಿವೃದ್ಧಿಗೆ ವೇಗ ಬರುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯ ನಾಯಕರು ಪದೇ ಪದೇ ಹೇಳುತ್ತಿರುತ್ತಾರೆ. ಈಗ ಚುನಾವಣೆ ಎದುರಿಸುತ್ತಿರುವ ಐದು ರಾಜ್ಯಗಳಲ್ಲೂ ಇದು ಪ್ರಚಾರದ ಕೇಂದ್ರದಲ್ಲಿದೆ. ಆದರೆ ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಇದ್ದರೂ, ಎಲ್‌ಪಿಜಿ ಬಳಕೆಯಲ್ಲಿ ಉತ್ತರ ಪ್ರದೇಶ ಹಿಂದೆ ಉಳಿದಿದೆ. ಮೋದಿ ಅವರ ಮಹತ್ವಾಕಾಂಕ್ಷೆಯ ಉಜ್ವಲ ಯೋಜನೆಯೂ ಉತ್ತರ ಪ್ರದೇಶದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನವಾಗಿಲ್ಲ. ರಾಜ್ಯದ ಶೇ 49ರಷ್ಟು ಕುಟುಂಬಗಳು ಮಾತ್ರ ಎಲ್‌ಪಿಜಿ ಅಥವಾ ನೈಸರ್ಗಿಕ ಅನಿಲದ ಸಂಪರ್ಕ ಹೊಂದಿವೆ. ಆದರೆ ಕೇರಳದಲ್ಲಿ ಈ ಪ್ರಮಾಣವು ಶೇ 72.1ರಷ್ಟು ಇದೆ. ಈ ಕ್ಷೇತ್ರದಲ್ಲಿ ಪಶ್ಚಿಮ ಬಂಗಾಳವು ತೀರಾ ಹಿಂದೆ ಉಳಿದಿದೆ. ರಾಜ್ಯದ ಶೇ 40ರಷ್ಟು ಕುಟುಂಬಗಳು ಮಾತ್ರ ಎಲ್‌ಪಿಜಿ ಸಂಪರ್ಕ ಹೊಂದಿವೆ.



ಶೌಚಾಲಯ

ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷಿ ಯೋಜನೆಯಾದ ಸ್ವಚ್ಛ ಭಾರತದ ಅಡಿ ಶೌಚಾಲಯ ನಿರ್ಮಿಸುವ ಕಾರ್ಯಕ್ರಮವು ಉತ್ತರ ಪ್ರದೇಶದಲ್ಲಿ ಸರಿಯಾಗಿ ಅನುಷ್ಠಾನಕ್ಕೆ ಬಂದಿಲ್ಲ. ರಾಜ್ಯದ ಶೇ 68.8ರಷ್ಟು ಕುಟುಂಬಗಳು ಮಾತ್ರ ಶೌಚಾಲಯ ಹೊಂದಿವೆ. ಆದರೆ ಕೇರಳದಲ್ಲಿ ಶೌಚಾಲಯ ಹೊಂದಿರುವ ಕುಟುಂಬಗಳ ಪ್ರಮಾಣ ಶೇ 98.7ರಷ್ಟು. ಪಶ್ಚಿಮ ಬಂಗಾಳದಲ್ಲಿ ಈ ಪ್ರಮಾಣವು ಉತ್ತರ ಪ್ರದೇಶಕ್ಕಿಂತ ಕಡಿಮೆ ಇದೆ.



ಅಪರಾಧ: ಅಜಗಜಾಂತರ

ಕೇರಳ, ಪಶ್ಚಿಮ ಬಂಗಾಳ ಹಾಗೂ ಜಮ್ಮು ಕಾಶ್ಮೀರದಲ್ಲಿ 2020ರಲ್ಲಿ ನಡೆದ ಅಪರಾಧ ಪ್ರಕರಣಗಳನ್ನು ಬಿಜೆಪಿ ಅಧಿಕಾರದಲ್ಲಿರುವ ಉತ್ತರ ಪ್ರದೇಶ, ಗುಜರಾತ್ ಹಾಗೂ ಕರ್ನಾಟಕದಲ್ಲಿ ಅದೇ ವರ್ಷ ನಡೆದ ಅಪರಾಧ ಪ್ರಕರಣಗಳ ನಡುವೆ ಹೋಲಿಸಿ ನೋಡಿದರೆ ಸಾಕಷ್ಟು ಅಂತರವಿದೆ. ಉತ್ತರ ಪ್ರದೇಶ ಹಾಗೂ ಗುಜರಾತ್‌ನಲ್ಲಿ ವರ್ಷದಲ್ಲಿ 3.5 ಲಕ್ಷಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗಿವೆ. ಆದರೆ ಕೇರಳ, ಪಶ್ಚಿಮ ಬಂಗಾಳದಲ್ಲಿ ಈ ಪ್ರಕರಣಗಳ ಸಂಖ್ಯೆ 1.5 ಲಕ್ಷದ ಆಸುಪಾಸಿನಲ್ಲಿದೆ. ಕೇಂದ್ರಾಡಳಿತ ಪ್ರದೇಶ ಜಮ್ಮು ಕಾಶ್ಮೀರದಲ್ಲಿ 25 ಸಾವಿರ ಪ್ರಕರಣಗಳು ಮಾತ್ರ ವರದಿಯಾಗಿವೆ. ಕರ್ನಾಟಕದಲ್ಲಿ 2018, 2019ರಲ್ಲಿ ತಲಾ 1.20 ಲಕ್ಷದಷ್ಟಿದ್ದ ಪ್ರಕರಣಗಳು 2020ರಲ್ಲಿ ಒಂದು ಲಕ್ಷಕ್ಕೆ ಇಳಿದಿವೆ.



ಮಕ್ಕಳ ಮರಣ ದರ

ಉತ್ತರ ಪ್ರದೇಶದಲ್ಲಿ ಐದು ವರ್ಷದೊಳಗಿನ ಮಕ್ಕಳ ಮರಣ ದರವು ಗರಿಷ್ಠ ಮಟ್ಟದಲ್ಲಿದೆ. ರಾಜ್ಯದಲ್ಲಿ ಜನಿಸುವ 1000 ಮಕ್ಕಳಲ್ಲಿ, 59.8ರಷ್ಟು ಮಕ್ಕಳು ಐದು ವರ್ಷದೊಳಗೇ ಮೃತಪಡುತ್ತಿದ್ದಾರೆ. ಕೇರಳ, ಪಶ್ಚಿಮ ಬಂಗಾಳ ಮತ್ತು ಜಮ್ಮು-ಕಾಶ್ಮೀರದಲ್ಲಿ ಈ ದರ ಕಡಿಮೆ ಇದೆ. ಕೇರಳದಲ್ಲಿ ಈ ದರವು 5.2ರಷ್ಟು ಇದ್ದು, ಇದು ಅತ್ಯಂತ ಕನಿಷ್ಠಮಟ್ಟವಾಗಿದೆ. ಬಿಜೆಪಿ 20ಕ್ಕಿಂತಲೂ ಹೆಚ್ಚು ವರ್ಷಗಳಿಂದ ಅಧಿಕಾರದಲ್ಲಿರುವ ಗುಜರಾತ್‌ನಲ್ಲಿ ಈ ದರವು 37.6ರಷ್ಟು ಇದೆ. ಬಿಜೆಪಿ ಸರ್ಕಾರವೇ ಇರುವ ಕರ್ನಾಟಕದಲ್ಲೂ ಈ ದರ 29.5ರಷ್ಟು ಇದೆ.



ಲಿಂಗಾನುಪಾತ

ಲಿಂಗಾನುಪಾತದಲ್ಲಿ ಉತ್ತರ ಪ್ರದೇಶದ ಸ್ಥಿತಿ ಉತ್ತಮವಾಗಿದೆ. ಆದರೆ, ಪಶ್ಚಿಮ ಬಂಗಾಳ ಮತ್ತು ಕೇರಳ ಸ್ಥಿತಿ ಉತ್ತರ ಪ್ರದೇಶಕ್ಕಿಂತಲೂ ಉತ್ತಮವಾಗಿದೆ.

1000 : 1017
1000 : 948
1000 : 1049
1000 : 1121
1000 : 965
1000 : 1034

ಸಾಕ್ಷರತೆ

ಸಾಕ್ಷರತೆಯಲ್ಲಿ ಉತ್ತರ ಪ್ರದೇಶವು ತೀರಾ ಹಿಂದೆ ಉಳಿದಿದೆ. ಕೇರಳದಲ್ಲಿ ಸಾಕ್ಷರತೆ ಪ್ರಮಾಣವು ಶೇ 97.3ರಷ್ಟು ಇದ್ದರೆ, ಉತ್ತರ ಪ್ರದೇಶದಲ್ಲಿ ಸಾಕ್ಷರತೆ ಪ್ರಮಾಣವು ಶೇ 73ರಷ್ಟು ಇದೆ. ಮಹಿಳಾ ಸಾಕ್ಷರತೆ ಪ್ರಮಾಣದಲ್ಲಿ ಉತ್ತರ ಪ್ರದೇಶವು (ಶೇ 66.1) ಬೇರೆಲ್ಲಾ ರಾಜ್ಯಗಳಿಗಿಂತ ತೀರಾ ಹಿಂದೆ ಉಳಿದಿದೆ. ಗುಜರಾತ್‌ನಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣ ಶೇ 73.5ರಷ್ಟು ಇದೆ. ಆದರೆ ಈವರೆಗೆ ಬಿಜೆಪಿಯೇತರ ಪಕ್ಷಗಳೇ ಆಡಳಿತ ನಡೆಸಿರುವ ಕೇರಳದಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣ ಶೇ 97.4ರಷ್ಟು ಇದ್ದರೆ, ಪಶ್ಚಿಮ ಬಂಗಾಳದಲ್ಲಿ ಶೇ 72.9ರಷ್ಟು ಮತ್ತು ಜಮ್ಮು-ಕಾಶ್ಮೀರದಲ್ಲಿ ಶೇ 74.3ರಷ್ಟು ಇದೆ.



ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-5ರ ವರದಿಗಳು, ಭಾರತದಲ್ಲಿ ಅಪರಾಧ-2020 ವರದಿ, ಪಿಟಿಐ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 46

ಮಾಸದ ಪೂಜಾಫಲಗಳು

‘ಪೂಃ’ ಎಂದರೆ ಭೋಗ. ‘ಪೂಜಾ’ಶಬ್ದದ ಅರ್ಥವು ವೇದಗಳಲ್ಲಿ ನಿರೂಪಿಸಲಾಗಿದೆ. ಆದುದರಿಂದ ಇಷ್ಟದೇವತಾ ಪೂಜೆಯು ಭೋಗಪ್ರದವಾದುದು. ಸಕಲ ಇಷ್ಟಾರ್ಥಗಳನ್ನೂ ಜ್ಞಾನವನ್ನೂ ಭೋಗವನ್ನೂ ಕೊಡುವುದು ‘ಪೂಜೆ’ ಎಂಬ ಶಬ್ದಕ್ಕೆ ಅರ್ಥ. ಕೃಷ್ಣಪಕ್ಷದ ಚತುರ್ಥಿಯಂದು ಮಹಾಗಣಪತಿಯನ್ನು ಪೂಜಿಸಿದರೆ ಆ ಪಕ್ಷದಲ್ಲಿ ಮಾಡಿದ ಪಾಪಗಳು ನಷ್ಟವಾಗುವುದು. ಶ್ರಾವಣಮಾಸದಲ್ಲಿ ಹಸ್ತಾನಕ್ಷತ್ರ, ಸಪ್ತಮೀ ತಿಥಿಗಳಿರುವ ಭಾನುವಾರ ಮತ್ತು ಮಾಘಮಾಸದ ಶುಕ್ಲ ಸಪ್ತಮಿಯಲ್ಲಿ ಬರುವ ಭಾನುವಾರದಂದು ಸೂರ್ಯನನ್ನು ಪೂಜಿಸಬೇಕು. ಜ್ಯೇಷ್ಠ ಮತ್ತು ಭಾದ್ರಪದಮಾಸಗಳಲ್ಲಿ ಶ್ರವಣನಕ್ಷತ್ರ ಮತ್ತು ದ್ವಾದಶೀತಿಥಿಗಳಿರುವ ಬುಧವಾರದಂದು ವಿಷ್ಣುವನ್ನು ಪೂಜಿಸಿದರೆ ಇಷ್ಟಾರ್ಥ ಸಿದ್ಧಿಸಿ ಸಂಪತ್ತು ಲಭಿಸುವುದು ಎಂದು ಸೂತಮುನಿ ಮಾಸದ ಪೂಜಾಫಲಗಳನ್ನು ತಿಳಿಸುತ್ತಾನೆ

ಹನ್ನೆರಡು ದಾನಗಳನ್ನು ಮಾಡಿದರೆ, ಯಾವ ಫಲವು ಲಭಿಸುವುದೋ ಆ ಫಲ ಶ್ರಾವಣಮಾಸದ ದ್ವಾದಶಿಯಲ್ಲಿ ವಿಷ್ಣುವನ್ನು ಪೂಜಿಸಿದರೆ ಲಭಿಸುವುದು. ದ್ವಾದಶಿಯಲ್ಲಿ ಹನ್ನೆರಡು ಜನರನ್ನು ವಿಷ್ಣುವಿನ ಹನ್ನೆರಡು ನಾಮಗಳಿಂದ ಷೋಡಶೋಪಚಾರವಾಗಿ ಪೂಜಿಸಿದರೆ, ವಿಷ್ಣು ಸಂತುಷ್ಟನಾಗುವನು. ಕರ್ಕಾಟಮಾಸದ ನವಮಿಯಲ್ಲಿ ಮೃಗಶಿರಾನಕ್ಷತ್ರವಿರುವ ಸೋಮವಾರದಂದು ಜಗನ್ಮಾತೆ ಪಾರ್ವತಿಯನ್ನರ್ಚಿಸಿದರೆ ಐಶ್ವರ್ಯವು ಲಭಿಸುವುದು. ಆಶ್ವಯುಜಮಾಸದಲ್ಲಿ ಶುಕ್ಲಪಕ್ಷದ ನವಮಿಯಂದು ಮಾಡಿದ ಪೂಜೆಯಿಂದ ಸಕಲ ಇಷ್ಟಾರ್ಥಗಳು ನೆರವೇರುವುವು. ಮಾಘಮಾಸದ ಕೃಷ್ಣಚತುರ್ದಶಿಯಲ್ಲಿ ಆರ್ದ್ರಾನಕ್ಷತ್ರದಲ್ಲಿ ಶಿವನನ್ನು ಪೂಜಿಸಿದರೆ ಸಕಲ ಇಷ್ಟಾರ್ಥಗಳೂ ನೆರವೇರಿ, ಆಯುಷ್ಯ ವೃದ್ಧಿಯಾಗುವುದು.

ವಾರಾದಿದೇವತೆಗಳನ್ನು ಕಾರ್ತಿಕಮಾಸದಲ್ಲಿ ಪೂಜಿಸುವುದು ಪ್ರಶಸ್ತವಾದುದು. ಕಾರ್ತಿಕಮಾಸದಲ್ಲಿ ಎಲ್ಲಾ ದೇವತೆಗಳನ್ನೂ ದಾನ, ತಪಸ್ಸು, ಹೋಮ, ಜಪ, ವ್ರತ ಇವುಗಳಿಂದ ಅರ್ಚಿಸಬೇಕು. ಕಾರ್ತಿಕಮಾಸದಲ್ಲಿ ದೇವತೆಗಳನ್ನು ಪೂಜಿಸಿದರೆ ಸಕಲ ಭೋಗಗಳೂ ಲಭಿಸುವುದು; ಭಯ ನಾಶವಾಗುವುದು. ಕಾರ್ತಿಕಮಾಸದ ಆದಿತ್ಯವಾರಗಳಲ್ಲಿ ಆದಿತ್ಯನನ್ನು ಪೂಜಿಸುವುದರಿಂದ ಕುಷ್ಠ ಮುಂತಾದ ಮಹಾರೋಗಗಳು ನಾಶವಾಗುವುದು. ಕೃತ್ತಿಕಾ ನಕ್ಷತ್ರವಿರುವ ಸೋಮವಾರಗಳಲ್ಲಿ ಅಥವಾ ಕಾರ್ತಿಕ ಸೋಮವಾರಗಳಲ್ಲಿ ಶಿವನನ್ನು ಅರ್ಚಿಸಿದರೆ ಬಡತನವೆಲ್ಲವೂ ನಾಶವಾಗಿ, ಸಕಲ ಸಂಪತ್ತೂ ಲಭಿಸುವುದು. ನಾವು ವಾಸಿಸುವ ಮನೆ ಮತ್ತು ಕಾರ್ಯಕ್ಷೇತ್ರ, ಅಂದರೆ ಗದ್ದೆ-ಹೊಲ ಮತ್ತಿತರ ಕೆಲಸ ಮಾಡುವ ಸ್ಥಳಗಳು ಸಮೃದಿಯಾಗುವುದು.

ಕಾರ್ತಿಕಮಾಸದ ಮಂಗಳವಾರದಂದು ಷಣ್ಮುಖನನ್ನು ಪೂಜಿಸುವುದರಿಂದ ವಾಕ್ಸಿದ್ಧಿ ಲಭಿಸುವುದು. ಕಾರ್ತಿಕಮಾಸದ ಬುಧವಾರಗಳಲ್ಲಿ ವಿಷ್ಣುವನ್ನು ಪೂಜಿಸುವುದರಿಂದ ಒಳ್ಳೆಯ ಸಂತಾನ ಲಭಿಸುವುದು. ಕಾರ್ತಿಕಮಾಸದ ಗುರುವಾರಗಳಲ್ಲಿ ಬ್ರಹ್ಮನನ್ನು ಮತ್ತು ಶುಕ್ರವಾರಗಳಲ್ಲಿ ಗಣಪತಿಯನ್ನು ಪೂಜಿಸಿ ದಾನಮಾಡಿದರೆ, ಭೋಗವೃದ್ಧಿಯಾಗುವುದು. ಕಾರ್ತಿಕಮಾಸದ ಶನಿವಾರಗಳಲ್ಲಿ ರುದ್ರ, ವಿಷ್ಣು, ಬ್ರಹ್ಮರನ್ನು ಪೂಜಿಸಿದರೆ ಬ್ರಹ್ಮಜ್ಞಾನವು ಲಭಿಸುವುದು. ಅಲ್ಲದೆ ಧನ್ವಂತರೀ ಅಶ್ವಿನೀದೇವತೆಗಳನ್ನು ಪೂಜಿಸಿದರೆ ಆಯಾಯ ಕಾಲಗಳಲ್ಲಿ ಉದ್ಭವಿಸುವ ರೋಗಗಳು ಮತ್ತು ಅಪಮೃತ್ಯು ನಾಶವಾಗುವುದು.

ಶಾಲ್ಯನ್ನದ ನೈವೇದ್ಯವು ಪ್ರಶಸ್ತವಾದುದು. ಧನುರ್ಮಾಸದಲ್ಲಿ ಅನೇಕ ಬಗೆಯ ಅನ್ನಗಳನ್ನು ನಿವೇದಿಸಬೇಕು. ಮಾರ್ಗಶಿರಮಾಸದಲ್ಲಿ ಅನ್ನದಾನ ಮಾಡಿದರೆ ಪಾಪನಾಶವಾಗಿ ಇಷ್ಟಸಿದ್ಧಿ, ಆರೋಗ್ಯ, ಧರ್ಮ, ವೇದಾರ್ಥಜ್ಞಾನ, ಒಳ್ಳೆಯ ಆಚಾರ, ಶಾಶ್ವತವಾದ ಯೋಗ ಮತ್ತು ಬ್ರಹ್ಮಜ್ಞಾನ ಲಭಿಸುವುದು. ಧನುರ್ಮಾಸದಲ್ಲಿ ಪ್ರತಿದಿನವೂ ಉಪವಾಸವಿದ್ದು ಜಿತೇಂದ್ರಿಯನಾಗಿ ಮಧ್ಯಾಹ್ನದವರೆಗೆ ವೇದಮಾತೆಯಾದ ಗಾಯತ್ರೀಮಂತ್ರವನ್ನು ಜಪಿಸಬೇಕು. ಮಧ್ಯಾಹ್ನದ ನಂತರ ರಾತ್ರಿ ಮಲಗುವವರೆಗೆ ಪಂಚಾಕ್ಷರೀಮಂತ್ರ ಜಪಿಸಬೇಕು. ಅದರಿಂದ ಜ್ಞಾನವನ್ನು ಪಡೆದು ಮರಣದನಂತರ ಮುಕ್ತಿಯನ್ನು ಪಡೆಯುವರು.

ನೈವೇದ್ಯವೆಲ್ಲವೂ ಹನ್ನೆರಡು ವಿಧವಾಗಿರಬೇಕು. ಹನ್ನೆರಡು ಫಲಗಳು, ಹನ್ನೆರಡು ಅಡಕೆ, ಮೂವತ್ತಾರು ವಿಳ್ಳೆಯದೆಲೆ, ಪಚ್ಚಕರ್ಪೂರ ಮತ್ತಿತರ ಐದು ಸುಗಂಧದ್ರವ್ಯಗಳಿಂದ ಕೂಡಿದ ತಾಂಬೂಲ ಮಹಾನೈವೇದ್ಯ ಎನಿಸುತ್ತದೆ. ಇಂತಹ ಮಹಾನೈವೇದ್ಯವನ್ನು ದೇವರಿಗೆ ನಿವೇದಿಸಬೇಕು. ದೇವರಿಗೆ ನಿವೇದಿಸಿದ ಮೇಲೆ ಆ ಮಹಾನೈವೇದ್ಯವನ್ನು ದೇವಭಕ್ತರಿಗೆ ದಾನಮಾಡಬೇಕು. ಕಾರ್ತಿಕಮಾಸದಲ್ಲಿ ಸಂಕ್ರಮಣ, ವ್ಯತೀಪಾತ, ಜನ್ಮನಕ್ಷತ್ರ ಮುಂತಾದುವುಗಳಿರುವ ಪುಣ್ಯದಿನಗಳಲ್ಲಿ ಮತ್ತು ಯುಗಾದಿ ಮತ್ತು ಹುಣ್ಣಿಮೆಯಲ್ಲಿ ಜನ್ಮನೈವೇದ್ಯವನ್ನು ಮಾಡಬೇಕು. ಜನ್ಮನೈವೇದ್ಯವನ್ನು ಶಿವನಿಗೆ ಮಾತ್ರ ಅರ್ಪಿಸಬೇಕು. ಏಕೆಂದರೆ, ಲಿಂಗಸ್ವರೂಪದಿಂದಿರುವ ಶಿವನೇ ಜನ್ಮವನ್ನು ಉಂಟುಮಾಡುವವನು. ಆದುದರಿಂದ ಜನ್ಮನಿವೃತ್ತಿ ಆಗಬೇಕಾದರೆ ಶಿವನಿಗೆ ಮಾತ್ರ ಜನ್ಮನೈವೇದ್ಯವನ್ನು ಮಾಡಬೇಕು ಎಂದು ಸೂತಮುನಿಯು ತಿಳಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಕೇಂದ್ರ ಸಚಿವ ಸಂಪುಟವು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದೆ. ‘ಈ ಶಿಕ್ಷಣ ನೀತಿಯ ಅನ್ವಯ, ಈ ಬಾರಿಯ 10ನೇ ತರಗತಿ ವಿದ್ಯಾರ್ಥಿಗಳಿಗೆ ಬೋರ್ಡ್ ಪರೀಕ್ಷೆಗಳು ಇರುವುದಿಲ್ಲ’ ಎಂಬ ಬರಹವುಳ್ಳ ಸಂದೇಶವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಕೇಂದ್ರ ಶಿಕ್ಷಣ ಸಚಿವರು ಈ ಸಂಬಂಧ ಆದೇಶ ಹೊರಡಿಸಿದ್ದಾರೆ ಎಂದು ಸಂದೇಶದಲ್ಲಿ ಉಲ್ಲೇಖಿಸಲಾಗಿದೆ.



ಬೋರ್ಡ್ ಪರೀಕ್ಷೆ ರದ್ದತಿ ಕುರಿತು ಹರಿದಾಡುತ್ತಿರುವ ಸಂದೇಶ ಸುಳ್ಳು ಎಂದು ಪಿಐಬಿ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ಬೋರ್ಡ್ ಪರೀಕ್ಷೆ ರದ್ದುಗೊಳಿಸಿರುವ ಕುರಿತಂತೆ ಶಿಕ್ಷಣ ಇಲಾಖೆಯು ಸದ್ಯಕ್ಕೆ ಯಾವುದೇ ಆದೇಶ ಹೊರಡಿಸಿಲ್ಲ. ಎನ್‌ಇಪಿ ಅಡಿಯಲ್ಲಿ 10ನೇ ತರಗತಿ ಪರೀಕ್ಷೆ ಮುಂದುವರಿಯುವುದಿಲ್ಲ ಎಂಬ ಸುದ್ದಿಯಿಂದ ವಿದ್ಯಾರ್ಥಿಗಳು ಗೊಂದಲಕ್ಕೆ ಒಳಗಾಗಬಾರದು ಎಂದು ತಿಳಿಸಿದೆ.

ಗುಂಡಣ್ಣ

ಬೆರಗಿನ ಬೆಳಕು
ಗುರುರಾಜ ಕರಜಗಿ

ಪ್ರಕೃತಿಯ ರೂಢಿ

ಕಾಡುಹಕ್ಕಿ ಹುಳಕ್ಕೆ ವರ್ಣಚಿತ್ರಗಳೇಕೆ ? |
ನೋಡುವರ ಕಣ್ಣೊಲವ ಬೇಡುವಳೆ ಸೃಷ್ಟಿ ? ||
ಮಾಡುವಾ ಮಾಟಗಳನಾದನಿತು ಬೆಳಗಿಪುದು |
ರೂಢಿಯಾ ಪ್ರಕೃತಿಯದು – ಮಂಕುತಿಮ್ಮ
|| 565 ||

ಪದ-ಅರ್ಥ: ಕಣ್ಣೊಲವ = ಕಣ್ಣಿನ + ಒಲವ, ಮಾಟಗಳನಾದನಿತು = ಮಾಟಗಳನ್ನು + ಆದ + ಅನಿತು, ರೂಢಿ = ಅಭ್ಯಾಸ

ವಾಚ್ಯಾರ್ಥ: ಕಾಡು ಹಕ್ಕಿಗೆ, ಹುಳಕ್ಕೆ ಅಷ್ಟು ಸುಂದರವಾದ ಬಣ್ಣಗಳೇಕೆ? ನೋಡುವವರ ಕಣ್ಣಿನ ಪ್ರೀತಿಯನ್ನೂ, ಅಭಿಮಾನವನ್ನು ಬೇಡುತ್ತಾಳೆಯೇ ಸೃಷ್ಟಿ? ಮಾಡುವ ಚೆಂದದ ಕೃತಿಯನ್ನು ಆದಷ್ಟು ಚೆನ್ನಾಗಿ ಮಾಡಿ ಬೆಳಗಿಸುವುದು ಪ್ರಕೃತಿಯ ಅಭ್ಯಾಸ.

ವಿವರಣೆ: ಒಂದು ದಿನ ನ್ಯಾಶನಲ್ ಜಿಯೋಗ್ರಾಫಿಕ್‌ನ ಒಂದು ಕಾರ್ಯಕ್ರಮ ನೋಡುತ್ತಿದ್ದೆ. ಲಂಕಾದ ಒಂದು ಅತ್ಯಂತ ಅಕ್ಷತ ಅರಣ್ಯದ ದೃಶ್ಯಗಳನ್ನು ತೋರಿಸುತ್ತಿದ್ದರು. ಅಲ್ಲಿ ನಾನೆಂದೂ ಕಂಡರಿಯದ ಪ್ರಪಂಚವೊಂದು ಅನಾವರಣವಾಗಿತ್ತು. ಅಲ್ಲಿಯ ಪಕ್ಷಿಗಳು, ಪ್ರಾಣಿಗಳು ತುಂಬ ಅಪರೂಪದವು. ಅವುಗಳ ಬಣ್ಣ, ಆಕಾರ ಎಷ್ಟು ಚೆಂದ! ಕೆಲವೊಂದು ಪಕ್ಷಿಗಳಂತೂ ಚಿತ್ರ ಬರೆದಂತೆ ವರ್ಣಮಯವಾಗಿದ್ದವು. ಆ ಕಾಡುಗಳಲ್ಲಿ ಸಾಮಾನ್ಯರು ಹೋಗುವುದೇ ಅಸಾಧ್ಯ. ಅಂಥ ದುರ್ಗಮ ಸ್ಥಳಗಳಲ್ಲಿ ಅಂಥ ಸುಂದರ ಪಕ್ಷಿಗಳು, ಪ್ರಾಣಿಗಳು! ಇವು ನಮ್ಮ ಕಣ್ಣಿಗೆ ಬೀಳುವ ಪ್ರಪಂಚದಲ್ಲಿದ್ದರೆ ಎಷ್ಟೊಂದು ಜನ ಸಂತೋಷಪಡಬಹುದಿತ್ತಲ್ಲ ಎಂದುಕೊಂಡೆ.

ನಂತರ ನನಗೆ ಹೊಳೆದದ್ದೆಂದರೆ ಪ್ರಕೃತಿ ಆ ಸುಂದರ ಜೀವಗಳನ್ನು ಸೃಷ್ಟಿಮಾಡಿದ್ದು ಮನುಷ್ಯರಿಂದ ಮೆಚ್ಚಿಗೆ ಪಡೆಯಲಿಕ್ಕಲ್ಲ. ಅದು ತನಗೆ ಸಾಧ್ಯವಾದದ್ದನ್ನು ತುಂಬ ಚೆನ್ನಾಗಿ ಮಾಡಿ ಅದ್ಭುತವಾಗಿ ಬೆಳಗಿಸುವುದು. ಪ್ರಕೃತಿ ಅದನ್ನೇ ಶತಶತಮಾನಗಳಿಂದ ಮಾಡುತ್ತ ರೂಢಿಯಾಗಿಸಿಕೊಂಡಿದೆ. ಕವಿ ಪು.ತಿ.ನರವರ ಕವನವೊಂದು ಹೀಗಿದೆ –

.....ಚಿಕವೂ ಕುವ್ವೆ? ಏನ್ ಸವಿ |
ಅಜರಾಮರವಿದು ಅಚ್ಚರಿ
ಪುರಾಣ ನೂತನವು
ಕೋಟಿ ಕೋಟಿ ಕೋಗಿಲೆ ಮೈ
ತರಗೆಲೆಯಂತುದುರಿದೆ ಸೈ
ಇದನು ಹಿಡಿದು ಬಿಡುವಾಟದಿ
ಋತು ಋತು ಯುಗ ಯುಗವೂ

ಕೋಗಿಲೆಯ ಕೂಗು ಅಜರಾಮರವಾಗಿದೆ! ಕೋಗಿಲೆಯ ಆಯಸ್ಸು ಚಿಕ್ಕದು. ಆದರೆ ಪ್ರತಿ ಯುಗದ, ಪ್ರತಿ ಋತುಮಾನದಲ್ಲಿ ಬರುವ ಹೊಸ ಕೋಗಿಲೆಯ ‘ಚಿಕುಹೂ’ ಎಂಬ ಕೂಗು ವೃದ್ಧಾಪ್ಯಗಳಿಲ್ಲದೆ, ಸಾವಿಲ್ಲದೆ ಅಜರಾಮರವಾಗುತ್ತದೆ. ಇದು ಪ್ರಕೃತಿಯ ಅದ್ಭುತ ಮಾಟಗಾರಿಕೆ. ಕೋಟಿ ಕೋಟಿ ಕೋಗಿಲೆಗಳು ತರಗೆಲೆಗಳಂತೆ ಕಳೆದುಹೋಗಿದ್ದರೂ ಕೋಗಿಲೆಯ ಮನಸೆಳೆಯುವ ಕೂಗು ಕ್ಷಣವಾದರೂ ಅದರ ಮಾಧುರ್ಯವನ್ನು ಹಿಡಿದಿಟ್ಟಿದೆ. ಅದನ್ನೇ ಪು.ತಿ.ನ. ಈ ‘ಹಿಡಿದು ಬಿಡುವಾಟ’ ‘ಪುರಾಣ’ದಷ್ಟು ಹಳೆಯದು ಮತ್ತು ಬೆರಗು ಹುಟ್ಟಿಸುವಷ್ಟು ‘ನೂತನ’ ಎನ್ನುತ್ತಾರೆ.

ಸೃಷ್ಟಿಗೆ ಇದೇ ರೂಢಿ ಎನ್ನುತ್ತದೆ ಕಗ್ಗ. ಕೋಟಿ ಕೋಟಿ ವರ್ಷಗಳಲ್ಲಿ ಪ್ರಕೃತಿ ತನಗೆ ತೃಪ್ತಿಯಾಗುವಂತೆ ಅತ್ಯದ್ಭುತ ಪ್ರಾಣಿ, ಪಕ್ಷಿ ಪ್ರಪಂಚವನ್ನು ಸೃಷ್ಟಿಸಿ, ಯಾರ ಮೆಚ್ಚಿಗೆಗೂ ಕಾಯದೆ, ಅವುಗಳನ್ನು ಬೆಳಗಿಸುತ್ತಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಫೆಬ್ರುವರಿ 16, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ – ಶಿಶಿರ ಋತು ಕುಂಭ ಮಾಸದ 04 ನೇ ದಿನ ತಿಥಿ: (ಮಾಘ ಶುಕ್ಲ) ಪೂರ್ಣಿಮಾ ಗಂ. 22-27 ನಕ್ಷತ್ರ: ಆಶ್ಲೇಷ ಗಂ. 15-14 ಯೋಗ: ಶೋಭನ ಗಂ. 20-43, ಕರಣ: ವಿಷ್ಟಿ ಗಂ. 10-09. ರಾಹುಕಾಲ : ಮಧ್ಯಾಹ್ನ 12:00 – 01:30 ಸೂರ್ಯೋದಯ : 06-56 ಸೂರ್ಯಾಸ್ತ : 06-33 ಮುಸ್ಲಿಂ ದಿನಾಂಕ : 14 ರಜಬ್ ದಿನ ವಿಶೇಷ : ಮಾಘಿ ಪೂರ್ಣಿಮಾ, ಗುರು ರವಿದಾಸರ ಜನ್ಮದಿನ (ತಿಥಿ ಪ್ರಕಾರ) ಅದೃಷ್ಟ ಸಂಖ್ಯೆ: 1, 8

ಮೇಷ: ದೇವರ ಅನುಗ್ರಹದಿಂದ ನೀವು ಬಹಳ ಹಳೆಯದಾದ ಹಾಗೂ ಕೌಟುಂಬಿಕವಾದ ಮುಖ್ಯ ಕೆಲಸವೊಂದನ್ನು ಪೂರ್ಣಗೊಳಿಸುವಿರಿ. ವೈದ್ಯ ವಿದ್ಯಾರ್ಥಿಗಳು ಓದಿನಲ್ಲಿ ಹೆಚ್ಚಿನ ಪರಿಶ್ರಮ ವಹಿಸುವರು.

ವೃಷಭ: ಕಾನೂನು ವಿದ್ಯಾರ್ಥಿಗಳು ತಮ್ಮ ಮುಂಬರುವ ಪರೀಕ್ಷೆಗಾಗಿ ಹೆಚ್ಚು ಮಾಹಿತಿಯನ್ನು ಸಂಗ್ರಹಿಸಲು ಉತ್ತಮ ದಿನ. ಅನಿರೀಕ್ಷಿತವಾದರೂ ನಿಮ್ಮ ಬದುಕಿನಲ್ಲಿ ಒಳ್ಳೆಯ ಬೆಳವಣಿಗೆಗಳಾಗುವ ಲಕ್ಷಣಗಳು ಕಾಣುತ್ತಿವೆ.

ಮಿಥುನ: ಸೌಹಾರ್ದಯುತ ಸಂಬಂಧಗಳನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ತೆರಿಗೆ ಅಧಿಕಾರಿಗಳಿಗೆ ಮಧ್ಯಾಹ್ನದ ನಂತರದ ಸಮಯದಲ್ಲಿ ಕೆಲಸಗಳ ಒತ್ತಡ ಕಡಿಮೆಯಾಗಲಿದೆ. ಸೃಜನಶೀಲತೆಗೆ ಹೆಚ್ಚಿನ ಮನ್ನಣೆ ದೊರಕುವುದು.

ಕರ್ಕಾಟಕ: ನಿಮ್ಮ ಆಫೀಸಿನ ಕೆಲಸದ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗುವುದು. ನಿಮ್ಮ ಸ್ಪರ್ಧಾ ಮನೋಭಾವಗಳು ತೀವ್ರಗೊಳ್ಳುವುದು. ಅನಿರೀಕ್ಷಿತವಾಗಿ ಆಗುವ ನಿಮ್ಮ ಹಳೆಯ ಗೆಳೆಯನ ಭೇಟಿ ಸಂತಸ ತರುವುದು.

ಸಿಂಹ: ಮಕ್ಕಳ ವಿಷಯದಲ್ಲಿ ಹೆಚ್ಚಿನ ಕಾಳಜಿಯನ್ನು ತೋರಿದಲ್ಲಿ ಅವರ ಭವಿಷ್ಯಕ್ಕೆ ಉತ್ತಮವಾಗುವುದು. ಪುಸ್ತಕ ಓದುವ ಹವ್ಯಾಸ ಹೊಂದಿದವರಿಗೆ ಉತ್ತಮವಾದ ನಿಮ್ಮ ಅಭಿರುಚಿಗೆ ತಕ್ಕಂತಹ ಪುಸ್ತಕವು ದೊರಕುವುದು.

ಕನ್ಯಾ: ಭಾವನೆಯ ಬದಲು ವಾಸ್ತವದತ್ತ ಗಮನ ಹರಿಸಲು ಸೂಕ್ತ ಸಮಯ. ಪ್ರಾಪಂಚಿಕ ಬದುಕಿನ ಬಗ್ಗೆ ತಿಳಿದುಕೊಳ್ಳಿ. ನಟನಾ ವೃತ್ತಿಯವರಿಗೆ ಖ್ಯಾತಿ ಮತ್ತು ಸಂಪತ್ತು ಹರಿದು ಬರಲಿದೆ. ಕಾಗದ ಪತ್ರಗಳ ನಿರ್ವಹಣೆಯಲ್ಲಿ ಎಚ್ಚರ ವಹಿಸಿ.

ತುಲಾ: ಕೋರ್ಟ್ ವ್ಯವಹಾರದಲ್ಲಿ ಕೆಲವೊಂದು ಸನ್ನಿವೇಶಗಳು ನಿಮ್ಮ ಪರವಾಗಿರುವಂತೆ ತೋರುವುದರಿಂದ ನಿರಾಳವಾಗಿ ಮುಂದುವರೆಯಿರಿ. ಈಗಿನ ನಿಮ್ಮೆಲ್ಲಾ ವ್ಯವಹಾರಗಳಲ್ಲಿ ಅಭಿವೃದ್ಧಿ ಸಾಧಿಸಬಲ್ಲಿರಿ. ಈಶ್ವರ.

ವೃಶ್ಚಿಕ: ಗುರಿ ಸಾಧಿಸಲು ಅನಿವಾರ್ಯವಾಗಿರುವ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳುವುದು ಉತ್ತಮ. ಕಾರ್ಮಿಕ ವರ್ಗದವರಿಗೆ ಹೆಚ್ಚಿನ ಸವಲತ್ತುಗಳು ಒದಗುವುವು. ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣಿತಿಯನ್ನು ಪಡೆದುಕೊಳ್ಳುವಿರಿ.

ಧನು: ಕುಟುಂಬದ ಅಭಿವೃದ್ಧಿಗೆ ಅಂತಃಕಲಹ, ಹಿತಶತ್ರುಗಳ ಬಾಧೆಯು ಅನುಭವಕ್ಕೆ ಬರಲಿದೆ. ಹಿರಿಯರ ಬಳಿಯಲ್ಲಿ ಅನಾವಶ್ಯಕವಾದ ವಿವಾದ, ಗೊಂದಲಗಳಿಗೆ ಅವಕಾಶ ನೀಡಬೇಡಿ. ಧರ್ಮಕಾರ್ಯಗಳನ್ನು ಮಾಡಿ.

ಮಕರ: ದಿನದ ದೈನಂದಿನ ಬದುಕಿನಲ್ಲಿ ವಿಘ್ನಗಳು ಎದುರಾಗುತ್ತದೆ. ಕ್ರೀಡಾಪಟುಗಳಿಗೆ ಪಂದ್ಯದಲ್ಲಿ ಹೆಚ್ಚಿನ ಜಯ ಪ್ರಾಪ್ತಿಯಾಗುವುದು. ಶುಭ ಕಾರ್ಯದ ನಿಮಿತ್ತವಾಗಿ ದೂರದ ಊರಿಗೆ ಪ್ರಯಾಣ ಸಂಭವಿಸುವುದು.

ಕುಂಭ: ಲೇವಾದೇವಿ ವ್ಯವಹಾರ ನಡೆಸುವವರು ಈ ದಿನ ವಿಶ್ರಾಂತಿ ಪಡೆಯುವುದು ಉತ್ತಮ. ಸುಖ ಸಂಪತ್ತನ್ನು ದೇಹ ಬಾಧೆ ಕಸಿದುಕೊಳ್ಳುವುದು. ಕಾರ್ಮಿಕರ ಅಸಹಕಾರದಿಂದ ಗೃಹ ನಿರ್ಮಾಣ ಕಾರ್ಯ ವಿಳಂಬವಾಗುತ್ತದೆ.

ಮೀನ: ಈ ದಿನ ಬೇರೆಯವರ ಸಹಾಯ ಅಪೇಕ್ಷಿಸದೆ ಕಾರ್ಯ ಸಾಧಿಸಿಕೊಳ್ಳಿ. ವೈವಾಹಿಕ ಸಂಬಂಧಗಳು ಗಟ್ಟಿಗೊಳ್ಳಲಿವೆ. ಎಲೆಕ್ಟ್ರಿಕಲ್ ಉಪಕರಣಗಳ ಮಾರಾಟಗಾರರಿಗೆ ಮತ್ತು ಕಬ್ಬಿಣ ವ್ಯಾಪಾರಿಗಳಿಗೆ ಹೆಚ್ಚು ಲಾಭ.

ಪದಬಂಧ 4871
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಡಿಮೆ ದರ್ಜೆಯ ಸಾಮಾನು (5)
3.ಆ ಸಾರೆ ದೊರೆತ ಆಶ್ರಯ! (3)
5.ಶಿರೋನಾಮೆಯಿದು (5)
7.ಪುಸ್ತಕದ ಮೇಲು ಹೊದಿಕೆ (2)
9.ರಾತ್ರಿಯ ವಿರುದ್ಧ ಪದ (3)
11.ಕನಸಲ್ಲಿ ಕಾಣಿಸಿದ ಕೊಳೆ (2)
13.ಶ್ರೇಷ್ಠವರ್ಗದ ಸನ್ಯಾಸಿ (5)
15.ಕುಲ ಕೊನೆಗಿದ್ದಾಗ ಸೇರಿದ ಗುಂಪು! (3)
16.ವರದಿಯನ್ನು ಸಿದ್ಧಪಡಿಸುವವನು (5)

ಮೇಲಿಂದ ಕೆಳಕ್ಕೆ
1.ಕರದಲ್ಲಿರುವ ಚಿನ್ನ (4)
2.ಆನೆಯನ್ನು ನಡೆಸುವವನು (3)
4.ಸಿದ್ಧತೆಗೊಂದು ಪರ್ಯಾಯ ಪದ (3)
6.ಬೈಯಲು ಸೂಕ್ತವೆನಿಸಿದ ವಿಸ್ತಾರ ಸ್ಥಳ (3)
8.ರಹಸ್ಯವಿಲ್ಲಿ ಉಲ್ಟಾ ಪಲ್ಟಾ ಆಗಿದೆಯಲ್ಲಾ? (2)
9.ಈತ ಕೆಟ್ಟವನು (3)
10.ಕಂಬಿ ಹತ್ತಿರ ನಿಂತು ತೋರಿದ ವೈಯ್ಯಾರ (2)
12.ಒಳ್ಳೆಯ ನಡತೆ (4)
13.ಹೊಗಳಿಕೆಯನ್ನು ಹೀಗೆನ್ನಿ (3)
14.ಸರಾಗವಾದುದು ಸರದೊಳಗಿದೆ! (3)



4870ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಪಮ 3.ಡಕಾಯಿತ
4.ಗದರು 5.ಮಲಯಜ
7.ಗಜಮುಖ 9.ವನವಾಸ
11.ಆಭರಣ 12.ರದಪ
14.ರಣ ಹದ್ದು
15.ಲವಾಜಮೆ

ಮೇಲಿಂದ ಕೆಳಕ್ಕೆ:
1.ಅಗ್ರ 2.ಮದಗಜ 3.ಡಮರುಗ
6.ಲಶುನ 8.ಮುಕುರ
10.ಸರಹದ್ದು
11.ಆಪತ್ಕಾಲ 13.ಆಮೆ

ಸುಡೊಕು 5257

	4			2		7		3
6		9	5		7		4	
	3			8		6		
	7			9			3	
	9	3	6		8			4
4				5		8		
7			8		9			
	5							7
	8			4		9		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5256 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ವೆಸ್ಟ್ ಇಂಡೀಸ್ ಎದುರು ಟಿ20 ಸರಣಿ ಆರಂಭ ಇಂದು; ವಿಶ್ವಕಪ್ ಟೂರ್ನಿಗೆ ಪೂರ್ವಾಭ್ಯಾಸ

ಯುವ ಆಟಗಾರರಿಗೆ ‘ಪರೀಕ್ಷೆ’

ಕೋಲ್ಕತ್ತ (ಪಿಟಿಐ): ಆಸ್ಟ್ರೇಲಿಯಾದಲ್ಲಿ ಈ ವರ್ಷ ನಡೆಯಲಿರುವ ಟ್ವೆಂಟಿ–20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಲು ಭಾರತ ತಂಡದ ‘ಪೂರ್ವಾಭ್ಯಾಸ’ ಬುಧವಾರ ಆರಂಭವಾಗಲಿದೆ.

ಈಡನ್ ಗಾರ್ಡನ್‌ನಲ್ಲಿ ನಡೆಯಲಿರುವ ವೆಸ್ಟ್ ಇಂಡೀಸ್ ಎದುರಿನ ಸರಣಿಯ ಮೊದಲ ಪಂದ್ಯದಲ್ಲಿ ರೋಹಿತ್ ಶರ್ಮಾ ಬಳಗದಲ್ಲಿರುವ ಯುವ ಪ್ರತಿಭೆಗಳಿಗೆ ಈ ಸರಣಿಯು ‘ಪರೀಕ್ಷೆ’ಯ ಕಣವಾಗಲಿದೆ. ಈಚೆಗೆ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಹರಾಜಿನಲ್ಲಿ ದೊಡ್ಡ ಮೊತ್ತ ಗಳಿಸಿದ ಹತ್ತು ಆಟಗಾರರು ಈ ತಂಡದಲ್ಲಿದ್ದಾರೆ.

ಅದರಲ್ಲಿ ₹15.25 ಕೋಟಿ ಗಳಿಸಿದ ಇಶಾನ್ ಕಿಶನ್, ₹ 12.5 ಕೋಟಿ, ಹರ್ಷಲ್ ಪಟೇಲ್ ಮತ್ತು ಶಾರ್ದೂಲ್ ಠಾಕೂರ್ ತಲಾ ₹ 10.75 ಕೋಟಿ ಪ್ರಮುಖರಾಗಿದ್ದಾರೆ. ಇವರಿಗೆ ಕಣಕ್ಕಿಳಿಯುವ ಅವಕಾಶ ಸಿಗುವ ಸಾಧ್ಯತೆ ಹೆಚ್ಚಿದೆ.ಏಕದಿನ ಸರಣಿಯಲ್ಲಿ ಜಯಭೇರಿ ಬಾರಿಸಿರುವ ಆತಿಥೇಯ ಬಳಗವು ಆತ್ಮವಿಶ್ವಾಸದಲ್ಲಿದೆ. ಆ ಸರಣಿಯಲ್ಲಿ ರೋಹಿತ್ ಜೊತೆಗೆ ಇನಿಂಗ್ಸ್ ಆರಂಭಿಸಲು ಇಶಾನ್, ರಿಷಭ್ ಮತ್ತು ಶಿಖರ್ ಧವನ್ ಅವರನ್ನು ಕಣಕ್ಕಿಳಿಸಿ ಪ್ರಯೋಗ ನಡೆಸಲಾಗಿತ್ತು. ಕೆ.ಎಲ್. ರಾಹುಲ್ ನಾಲ್ಕನೇ ಕ್ರಮಾಂಕದಲ್ಲಿ ಆಡಿದ್ದರು.

ಟಿ20 ಸರಣಿಯಲ್ಲಿ ಯುವ ಬ್ಯಾಟರ್ ಋತುರಾಜ್ ಗಾಯಕವಾಡ್, ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ ಅಥವಾ ನಿಕಟಪೂರ್ವ ನಾಯಕ ವಿರಾಟ್ ಕೊಹ್ಲಿ ಅವರಿಗೆ ಇನಿಂಗ್ಸ್ ಆರಂಭಿಸುವ ಅವಕಾಶ ಸಿಗಬಹುದು.

ಕಳೆದ ಎರಡು ವರ್ಷಗಳಿಂದ ಯಾವುದೇ ಮಾದರಿಯಲ್ಲಿಯೂ ವಿರಾಟ್ ಶತಕ ಗಳಿಸಿಲ್ಲ. ಏಕದಿನ ಸರಣಿಯಲ್ಲಿ ಕೂಡ ಲಯ ಕಂಡುಕೊಳ್ಳುವಲ್ಲಿ ವಿಫಲರಾಗಿದ್ದರು. ಆದ್ದರಿಂದ ಅವರಿಗೂ ತಮ್ಮ ಫಾರ್ಮ್ ಕಂಡುಕೊಳ್ಳಲು ಇದು ಪ್ರಮುಖ ಸರಣಿಯಾಗಿದೆ.

ಮಧ್ಯಮ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್ ಮೇಲೆ ವಿಶ್ವಾಸವಿಡಬಹುದು. ರಿಷಭ್ ಕೂಡ ಮಹತ್ವದ ಇನಿಂಗ್ಸ್ ಆಡುವಲ್ಲಿ ಸಮರ್ಥರು. ಶ್ರೇಯಸ್ ಕೂಡ ಇರುವುದರಿಂದ ಬಲಿಷ್ಠ ಲೈನ್ ಅಪ್ ಎಂದು ಹೇಳಬಹುದು.

ಇಬ್ಬರು ಸ್ಪಿನ್ನರ್ ಮತ್ತು ಮೂವರು ಮಧ್ಯಮವೇಗಿಗಳೊಂದಿಗೆ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚು. ಶಾರ್ದೂಲ್, ದೀಪಕ್ ಮತ್ತು ಹರ್ಷಲ್ ಉತ್ತಮ ಬ್ಯಾಟಿಂಗ್ ಕೂಡ ಮಾಡಬಲ್ಲರು. ಮೊದಲ ಅಂತರರಾಷ್ಟ್ರೀಯ ಪಂದ್ಯ ಆಡಲು ಸಿದ್ಧವಾಗಿರುವ ಸ್ಪಿನ್ನರ್ ರವಿ ಬಿಷ್ಣೋಯಿ ವಿಂಡೀಸ್ ಬ್ಯಾಟಿಂಗ್ ಪಡೆಗೆ ಹೇಗೆ ಸವಾಲೊಡ್ಡುವರೆಂಬ ಕುತೂಹಲ ಕೆರಳಿದೆ. ವಿಂಡೀಸ್ ತಂಡವು ಟಿ20 ಕ್ರಿಕೆಟ್‌ನಲ್ಲಿ ಅಚ್ಚರಿ ಫಲಿತಾಂಶ ನೀಡುವುದು ಪರಿಪಾಠ. ನಾಯಕ ಪೊಲಾರ್ಡ್ ಮತ್ತು ನಿಕೊಲಸ್ ಪೂರನ್ ಅವರ ಆಟ ಮಹತ್ವದಾಗಲಿದೆ.

ನಾಯಕ ರೋಹಿತ್ ಶರ್ಮಾ ಮತ್ತು ಸಹ ಆಟಗಾರರು ಓಟದ ಅಭ್ಯಾಸ ನಡೆಸಿದರು –ಪಿಟಿಐ ಚಿತ್ರ

ಪಂದ್ಯ ಆರಂಭ	ರಾತ್ರಿ 7ರಿಂದ
ನೇರಪ್ರಸಾರ	ಸ್ಟಾರ್ ಸ್ಪೋರ್ಟ್ಸ್
ಬಲಾಬಲ	
ಪಂದ್ಯ	17
ಭಾರತ ಜಯ	10
ವೆಸ್ಟ್ ಇಂಡೀಸ್ ಜಯ	6
ಡ್ರಾ	1

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಇಶಾನ್ ಕಿಶನ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್‌ಕೀಪರ್), ವೆಂಕಟೇಶ್ ಅಯ್ಯರ್, ದೀಪಕ್ ಚಾಹರ್, ಶಾರ್ದೂಲ್ ಠಾಕೂರ್, ರವಿ ಬಿಷ್ಣೋಯಿ, ಯಜುವೇಂದ್ರ ಚಾಹಲ್, ಮೊಹಮ್ಮದ್ ಸಿರಾಜ್, ಭುವನೇಶ್ವರ್ ಕುಮಾರ್, ಆವೇಶ್ ಖಾನ್, ಹರ್ಷಲ್ ಪಟೇಲ್, ಋತುರಾಜ್ ಗಾಯಕವಾಡ, ದೀಪಕ್ ಹೂಡಾ, ಕುಲದೀಪ್ ಯಾದವ್, ಹರ್‌ಪ್ರೀತ್ ಬ್ರಾರ್.

ವೆಸ್ಟ್ ಇಂಡೀಸ್: ಕೀರನ್ ಪೊಲಾರ್ಡ್ (ನಾಯಕ), ನಿಕೋಲಸ್ ಪೂರನ್ (ಉಪನಾಯಕ), ಫ್ಯಾಬಿಯನ್ ಅಲೆನ್, ಡರೆನ್ ಬ್ರಾವೊ, ರಾಸ್ಟನ್ ಚೇಸ್, ಶೆಲ್ಡನ್ ಕಾಟ್ರೆಲ್, ಡಾಮ್ನಿಕ್ ಡ್ರೇಕ್ಸ್, ಜೇಸನ್ ಹೋಲ್ಡರ್, ಶಾಯ್ ಹೋಪ್, ಅಕೀಲ್ ಹುಸೇನ್, ಬ್ರೆಂಡನ್ ಕಿಂಗ್, ರೊವ್‌ಮನ್ ಪೊವೆಲ್, ರೊಮಾರಿಯಾ ಶೇಫರ್ಡ್, ಒಡಿಯನ್ ಸ್ಮಿತ್, ಕೈಲ್ ಮೇಯರ್ಸ್, ಹೇಡನ್ ವಾಲ್ಶ್ ಜೂನಿಯರ್.

ಕೊಹ್ಲಿಯ ಮೇಲೆ ಒತ್ತಡ ಹೇರದಿರಿ: ರೋಹಿತ್

ಕೋಲ್ಕತ್ತ (ಪಿಟಿಐ): ಫಾರ್ಮ್ ಕೊರತೆಯಿಂದ ಪರದಾಡುತ್ತಿರುವ ವಿರಾಟ್ ಕೊಹ್ಲಿಯನ್ನು ಬೆನ್ನತ್ತದಿರಿ. ಸಮಯ ಬಂದಾಗ ಎಲ್ಲವೂ ಸರಿಯಾಗುತ್ತದೆ. ಅವರು ಆಟಕ್ಕೆ ಕುದುರಿಕೊಳ್ಳುವರು ಎಂದು ಭಾರತ ಸೀಮಿತ ಓವರ್‌ಗಳ ತಂಡದ ನಾಯಕ ರೋಹಿತ್ ಶರ್ಮಾ ಮಾಧ್ಯಮಗಳಿಗೆ ಮನವಿ ಮಾಡಿಕೊಂಡರು.

ವಿಂಡೀಸ್ ತಂಡದ ಎದುರಿನ ಮೊದಲ ಪಂದ್ಯದ ಮುನ್ನಾದಿನವಾದ ಮಂಗಳವಾರ ರೋಹಿತ್ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು.

‘ಸ್ವಲ್ಪ ಸಮಯ ನೀವು (ಪತ್ರಕರ್ತರು) ಶಾಂತಿಯಿಂದ ಇದ್ದರೆ ಎಲ್ಲವೂ ಸರಿ ಹೋಗಲಿದೆ. ವಿರಾಟ್ ಅವರು ಯಾವುದೇ ಒತ್ತಡದಲ್ಲಿ ಇಲ್ಲ. ಅವರ ಮನೋದಾರ್ಢ್ಯವು ಶ್ರೇಷ್ಠ ಮಟ್ಟದಲ್ಲಿದೆ. ಅವರಿಗೆ ಒತ್ತಡದ ಸನ್ನಿವೇಶಗಳನ್ನು ನಿಭಾಯಿಸುವುದು ಕರಗತವಾಗಿದೆ’ ಎಂದರು.

ರೋಹಿತ್ ಶರ್ಮಾ

ವಿರಾಟ್ ಕೊಹ್ಲಿ

ಮೊಹಾಲಿಯಲ್ಲಿ ವಿರಾಟ್ ಕೊಹ್ಲಿ ಟೆಸ್ಟ್ ‘ಶತಕ’

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ತಮ್ಮ ವೃತ್ತಿಜೀವನದ ನೂರನೇ ಟೆಸ್‌ಟ್ ಪಂದ್ಯವನ್ನು ಮೊಹಾಲಿಯಲ್ಲಿ ಆಡಲಿದ್ದಾರೆ.

ಮಾರ್ಚ್ 4ರಿಂದ 8ರವರೆಗೆ ನಡೆಯುವ ಭಾರತ ಮತ್ತು ಶ್ರೀಲಂಕಾ ಎದುರಿನ ಸರಣಿಯ ಮೊದಲ ಪಂದ್ಯವು ಕೊಹ್ಲಿಗೆ ಮೈಲುಗಲ್ಲಾಗಲಿದೆ. ಎರಡನೇ ಪಂದ್ಯವು ಬೆಂಗಳೂರಿನಲ್ಲಿ ನಡೆಯಲಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಮಂಗಳವಾರ ಸರಣಿಯ ಪರಿಷ್ಕೃತ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ಈ ಹಿಂದೆ ನೀಡಿದ್ದ ವೇಳಾಪಟ್ಟಿಯಲ್ಲಿ ಮೊದಲು ಟೆಸ್ಟ್ ಸರಣಿ ನಂತರ ಟಿ20 ಸರಣಿ ನಡೆಸಲಾಗುವುದು ಎಂದು ತಿಳಿಸಲಾಗಿತ್ತು. ಆದರೆ, ಈಗ ಮೂರು ಟಿ20 ಪಂದ್ಯಗಳ ಸರಣಿ ಮೊದಲು ನಡೆಯಲಿದೆ.

ಇದೇ 25ರಂದು ಲಖನೌನಲ್ಲಿ, 26 ಮತ್ತು 27ರಂದು ಧರ್ಮಶಾಲಾದಲ್ಲಿ ಪಂದ್ಯಗಳು ನಡೆಯಲಿವೆ.

ಮಾರ್ಚ್ ನಾಲ್ಕರಿಂದ ಮೊದಲ ಟೆಸ್ಟ್ ಮತ್ತು 12 ರಿಂದ ಎರಡನೇ ಟೆಸ್ಟ್ ಪಂದ್ಯ ನಡೆಯುವುದು. ಇದರಲ್ಲಿ ಯಾವ ಟೆಸ್ಟ್ ಪಂದ್ಯವು ಹೊನಲು ಬೆಳಕಿನಲ್ಲಿ ನಡೆಯಲಿದೆ ಎಂಬುದು ಸ್ಪಷ್ಟವಾಗಿಲ್ಲ.

ಈಚೆಗೆ ದಕ್ಷಿಣ ಆಫ್ರಿಕಾ ಎದುರಿನ ಸರಣಿಯ ನಂತರ ವಿರಾಟ್ ನಾಯಕತ್ವಕ್ಕೆ ದಿಢೀರ್ ರಾಜೀನಾಮೆ ನೀಡಿದ್ದರು. ಭಾರತ ತಂಡದ ಅತ್ಯಂತ ಯಶಸ್ವಿ ನಾಯಕ ಅವರಾಗಿದ್ದಾರೆ. ಅವರ ನಾಯಕತ್ವದಲ್ಲಿ ತಂಡವು 40 ಜಯ, 11 ಡ್ರಾ ಮತ್ತು 17 ಸೋಲುಗಳನ್ನು ಕಂಡಿದೆ.

ಬ್ಯಾಡ್ಮಿಂಟನ್: ಕೊರಿಯಾಗೆ ಮಣಿದ ಭಾರತ

ಷಾ ಆಲಂ, ಮಲೇಷ್ಯಾ (ಪಿಟಿಐ): ಲಕ್ಷ್ಯ ಸೇನ್ ಅವರನ್ನೊಳಗೊಂಡ ಭಾರತ ಪುರುಷರ ಯುವ ತಂಡವು ಏಷ್ಯನ್ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮೊದಲ ಪಂದ್ಯದಲ್ಲಿ ಕೊರಿಯಾ ಎದುರು ನಿರಾಸೆ ಅನುಭವಿಸಿತು.

ಮಂಗಳವಾರ ನಡೆದ ‘ಎ’ ಗುಂಪಿನ ಹಣಾಹಣಿಯಲ್ಲಿ ಭಾರತ 0–5ರಿಂದ ಎದುರಾಳಿಗೆ ಸೋತಿತು.

ಮೊದಲ ಹಣಾಹಣಿಯಲ್ಲಿ, ಲಕ್ಷ್ಯ ಸೇನ್ ಅವರು 11-21, 19-21ರಿಂದ ಜಿಯೊನ್ ಹಿವೊಕ್ ಎದುರು ಎಡವಿದರು. ಡಬಲ್ಸ್‌ನಲ್ಲಿ ರವಿಕೃಷ್ಣ ಪಿ.ಎಸ್. ಮತ್ತು ಶಂಕರ ಪ್ರಸಾದ್ ಉದಯಕುಮಾರ್ ಜೋಡಿಯು 8-21, 10-21ರಿಂದ ಹಿ ತೆ ಕಿಮ್ ಅವರಿಗೆ ಸೋತರು. ಸಿಂಗಲ್ಸ್ ವಿಭಾಗದಲ್ಲಿ ಕಿರಣ್ ಜಾರ್ಜ್ ಕೂಡ 18-21, 14-21ರಿಂದ ಜೊ ವಾನ್ ಕಿಮ್ ಎದುರು ಮುಗ್ಗರಿಸಿದರು. ಜಿದ್ದಾಜಿದ್ದಿ ಹೋರಾಟ ನಡೆಸಿದರೂ ಮಿಥುನ್ ಮಂಜುನಾಥ್ 16-21, 27-25, 14-21ರಿಂದ ಮಿನ್ ಸನ್ ಜಿಯೊಂಗ್ ಅವರಿಗೆ ಸೋತರು. ಡಬಲ್ಸ್ ವಿಭಾಗದ ಮತ್ತೊಂದು ಪಂದ್ಯದಲ್ಲಿ ಮಂಜಿತ್ ಸಿಂಗ್ ಖ್ವೈರಕ್ಪಮ್ –ಡಿಂಕು ಸಿಂಗ್ ಕೊಂತೌಜಮ್ 7-21, 15-21ರಿಂದ ಯಾಂಗ್ ಜಿನ್ ಮತ್ತು ನಾ ಸಂಗ್ ಸೆಯುಂಗ್ ಅವರಿಗೆ ಮಣಿದರು.

ಮಾಡರ್ನ್ ಗರ್ಲ್ಸ್ ತಂಡಕ್ಕೆ ಗೆಲುವು

ಬೆಂಗಳೂರು: ಮಾಡರ್ನ್ ಗರ್ಲ್ಸ್ ಎಫ್‌ಸಿ ತಂಡವು ಕೆಎಸ್‌ಎಫ್‌ಎ ‘ಎ’ ಡಿವಿಷನ್ ಮಹಿಳಾ ಫುಟ್‌ಬಾಲ್ ಲೀಗ್‌ನಲ್ಲಿ ಜಯ ಗಳಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ 2–0ಯಿಂದ ಬೆಂಗಳೂರು ಎಫ್‌ಸಿ ತಂಡವನ್ನು ಸೋಲಿಸಿತು. ಪ್ರಿಯದರ್ಶಿನಿ 12ನೇ ನಿಮಿಷ ಮತ್ತು ಸಿಮ್ರಾನ್ 14ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು.

ಬೆಂಗಳೂರು ಓಪನ್ ಎರಡನೇ ಲೆಗ್ ಎಟಿಪಿ ಚಾಲೆಂಜರ್ ಟೂರ್ನಿ

ಪ್ರೀಕ್ವಾರ್ಟರ್‌ಗೆ ಮುನ್ನಡೆದ ಸಿದ್ಧಾರ್ಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ ಸಿದ್ಧಾರ್ಥ್ ರಾವತ್ ಅವರು ಮುಕುಂದ್ ಶಶಿಕುಮಾರ್ ಸವಾಲು ಮೀರಿ ಬೆಂಗಳೂರು ಓಪನ್ ಎರಡನೇ ಲೆಗ್‌ನ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು. ಆದರೆ ಅನುಭವಿ ಆಟಗಾರ ರಾಮ್‌ಕುಮಾರ್ ರಾಮನಾಥನ್ ಅವರ ಸವಾಲು ಅಂತ್ಯವಾಯಿತು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಭಾರತದ ಸಿದ್ಧಾರ್ಥ್ 6–4, 6–4ರಿಂದ ಭಾರತದವರೇ ಆದ ಮುಕುಂದ್ ಅವರನ್ನು ಮಣಿಸಿದರು.

ಟೂರ್ನಿ ಗೆಲ್ಲುವ ಭರವಸೆಯ ಆಟಗಾರನಾಗಿದ್ದ ರಾಮ್‌ಕುಮಾರ್ ಅವರು 6-4, 3-6, 2-6ರಿಂದ ಫ್ರಾನ್ಸ್‌ನ ಮಥಾಯಿಸ್ ಬೋರ್ಗ್ ಎದುರು ಎಡವಿದರು. ಮೊದಲ ಸೆಟ್ ಗೆದ್ದು ಆತ್ಮವಿಶ್ವಾಸದಿಂದ ಮುನ್ನುಗ್ಗಿದ್ದ ಭಾರತದ ಅಗ್ರಕ್ರಮಾಂಕದ ಆಟಗಾರ ಎರಡು ಮತ್ತು ಮೂರನೇ ಸೆಟ್‌ಗಳಲ್ಲಿ ಎಡವಿದರು.

ಚುನ್ ಸಿನ್ ಪರಾಭವ: ಬೆಂಗಳೂರು ಓಪನ್ ಮೊದಲ ಲೆಗ್‌ನಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದ್ದ ಚುನ್ ಸಿನ್ ಸೆಂಗ್ ಇಲ್ಲಿ ಮೊದಲ ಸುತ್ತಿನಲ್ಲೇ ಮುಗ್ಗರಿಸಿದರು. ಉತ್ತಮ ಲಯದಲ್ಲಿದ್ದ ಚುನ್ 2-6, 2-6ರಿಂದ ಕ್ವಾಲಿಫೈಯರ್‌ನಿಂದ ಗೆದ್ದು ಬಂದ ಆಟಗಾರ ಗ್ರೀಸ್‌ನ ಮಾರ್ಕೊಸ್ ಕ್ಯಾಲೊವೆಲೊನಿಸ್ ಎದುರು ಸೋತರು.

ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಫಲಿತಾಂಶಗಳು: ರಷ್ಯಾದ ಆ್ಯಂಡ್ರೆ ಕುಜ್ನೆತ್ಸೊವ್‌ಗೆ 6-2, 1-6, 6-3ರಿಂದ ಜೆಕ್ ಗಣರಾಜ್ಯದ ವಿಟ್ ಕೊಪ್ರಿವಾ ಎದುರು ಜಯ; ಫ್ರಾನ್ಸ್‌ನ ಮಥಾಯಿಸ್ ಅವರಿಗೆ 4-6, 6-3, 6-2ರಿಂದ ಭಾರತದ ರಾಮ್‌ಕುಮಾರ್ ರಾಮನಾಥನ್ ವಿರುದ್ಧ ಜಯ; ಕ್ರೊವೇಷ್ಯಾದ ಬೋರ್ನಾ ಗೋಜೊ ಅವರಿಗೆ 4-6, 6-3, 6-4ರಿಂದ ರಷ್ಯಾದ ಡಾಮಿನಿಕ್ ಪಲಾನ್ ಎದುರು ಗೆಲುವು; ಸ್ವಿಟ್ಜರ್ಲೆಂಡ್‌ನ ಜೊಹಾನ್ ನಿಕಲ್ಸ್ ಅವರಿಗೆ 6-7 (1), 6-1, 7-5ರಿಂದ ಇಟಲಿಯ ರೌಲ್ ಬ್ರಾಂಕಾಶಿಯೊ ಎದುರು ಗೆಲುವು; ಫ್ರಾನ್ಸ್‌ನ ಎಂಜೊ ಕೌಸಾಡ್ ಅವರಿಗೆ 6-1, 6-1ರಿಂದ ಭಾರತದ ನಿತಿನ್ ಕುಮಾರ್ ಸಿನ್ಹಾ ಎದುರು ಜಯ; ಭಾರತದ ಸಿದ್ಧಾರ್ಥ್ ರಾವತ್ ಅವರಿಗೆ 6-4, 6-4ರಿಂದ ಮುಕುಂದ್ ಶಶಿಕುಮಾರ್ ವಿರುದ್ಧ ಜಯ, ಗ್ರೀಸ್‌ನ ಮಾರ್ಕಸ್ ಕ್ಯಾಲೊವೆಲೊನಿಸ್ ಅವರಿಗೆ 6-2, 6-2ರಿಂದ ಚೀನಾ ತೈಪೆಯ ಚುನ್ ಸಿಂಗ್ ಎದುರು ಗೆಲುವು.

ಡಬಲ್ಸ್ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಫಲಿತಾಂಶಗಳು: ಭಾರತದ ಎನ್. ಶ್ರೀರಾಮ್ ಬಾಲಾಜಿ– ವಿಷ್ಣು ವಿನೋದ್ ಜೋಡಿಗೆ 6-4, 6-2ರಿಂದ ಭಾರತದ ಸೂರಜ್ ಪ್ರಬೋಧ್–ರಿಷಿ ರೆಡ್ಡಿ ವಿರುದ್ಧ ಗೆಲುವು; ಉಕ್ರೇನ್‌ನ ವ್ಲಾಡಿಸ್ಲಾವ್ ಒರ್ಲೊವ್ – ಗ್ರೀಸ್‌ನ ಕಾಯ್ ವೆನೆಲ್ಟ್ ಅವರಿಗೆ 7-5, 6-4ರಿಂದ ವಿಟ್ ಕೊಪ್ರಿವಾ– ಜೊರೊಸ್ಲಾವ್ ಪಾಸ್ಪಿಸಿಲ್ ಎದುರು ಗೆಲುವು; ಭಾರತದ ಜೀವನ್ ನೆಡುಂಚೆರಿಯನ್ –ಪೂರವ್ ರಾಜಾ ಅವರಿಗೆ 6-3, 7-5ರಿಂದ ಆಸ್ಟ್ರೇಲಿಯಾದ ಥಾಮಸ್ ಫ್ಯಾನ್‌ಕಟ್–ಜೇಸನ್ ಕುಬ್ಲೆರ್ ಎದುರು ಜಯ.

ಭಾರತದ ಸಿದ್ಧಾರ್ಥ್ ರಾವತ್ ಚೆಂಡು ಹಿಂದಿರುಗಿಸಿದ ಪರಿ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

17ರಿಂದ ಸೈಕಲ್ ಪೋಲೊ

ಮೈಸೂರು: ರಾಷ್ಟ್ರಮಟ್ಟದ ಸೈಕಲ್ ಪೋಲೊ ಸ್ಪರ್ಧೆಯು ಫೆ.17ರಿಂದ 4 ದಿನ ಮೈಸೂರು ವಿಶ್ವವಿದ್ಯಾಲಯದ ವಿಲೇಜ್ ಹಾಸ್ಟೆಲ್ ಕ್ರೀಡಾಂಗಣದಲ್ಲಿ ನಡೆಯಲಿದೆ.

'ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಸೈಕಲ್ ಪೋಲೊ ಫೆಡರೇಷನ್ ಆಫ್ ಇಂಡಿಯಾ ಸಹಯೋಗದಲ್ಲಿ ಕರ್ನಾಟಕ ಸೈಕಲ್ ಪೋಲೊ ಸಂಸ್ಥೆ ಆಯೋಜಿಸಿರುವ ಸ್ಪರ್ಧೆಯಲ್ಲಿ ದೇಶದ ವಿವಿಧ ರಾಜ್ಯಗಳ 25ಕ್ಕೂ ಹೆಚ್ಚು ತಂಡಗಳು ಭಾಗವಹಿಸಲಿವೆ' ಎಂದು ಸಂಸ್ಥೆ ಅಧ್ಯಕ್ಷ ಎನ್.ಆರ್.ಮಂಜುನಾಥ್ ಇಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 'ಭಾರತೀಯ ಭೂಸೇನೆ, ವಾಯುಸೇನೆ, ನೌಕಾದಳದ ತಂಡಗಳೂ ಭಾಗವಹಿಸಲಿವೆ. ಇದೇ ಮೊದಲ ಬಾರಿ ಮೈಸೂರಿನಲ್ಲಿ ಸ್ಪರ್ಧೆ ನಡೆಯಲಿದೆ' ಎಂದು ಹೇಳಿದರು.

'17ರಂದು ಬೆಳಿಗ್ಗೆ 10 ಗಂಟೆಗೆ ಸೈಕಲ್ ಪೋಲೊ ರಾಷ್ಟ್ರೀಯ ಪದಕ ವಿಜೇತೆ ಆರ್.ಎಸ್.ವೈಷ್ಣವಿ ಉದ್ಘಾಟಿಸಲಿದ್ದಾರೆ. ಸ್ಪರ್ಧೆಯನ್ನು ಸಾರ್ವಜನಿಕರು ಉಚಿತವಾಗಿ ವೀಕ್ಷಿಸಬಹುದು. ಫೆ.20ರಂದು ಸಂಜೆ 4 ಗಂಟೆಗೆ ಕ್ರೀಡಾ ಸಚಿವ ನಾರಾಯಣಗೌಡ ಬಹುಮಾನ ವಿತರಿಸುವರು' ಎಂದರು.

ಎಟಿಕೆಎಂಬಿಗೆ ಜಯ

ಬ್ಯಾಂಬೊಲಿಮ್ (ಪಿಟಿಐ): ಮನ್ವೀರ್ ಸಿಂಗ್ ಗಳಿಸಿದ ಎರಡು ಗೋಲುಗಳ ಬಲದಿಂದ ಎಟಿಕೆ ಮೋಹನ್ ಬಾಗನ್ ತಂಡವು ಇಂಡಿಯನ್ ಸೂಪರ್ ಲೀಗ್ ಟೂರ್ನಿಯಲ್ಲಿ 2–0ಯಿಂದ ಎಫ್‌ಸಿ ಗೋವಾ ಎದುರು ಜಯ ಸಾಧಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಮನ್ವೀರ್ ಮೂರು ಮತ್ತು 46ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

ಚೆನ್ನೈ–ಒಡಿಶಾ ಮುಖಾಮುಖಿ: ಪ್ಲೇ ಆಫ್ ಪ್ರವೇಶದ ಆಸೆ ಜೀವಂತವಾಗಿರಿಸಿಕೊಳ್ಳಲು ಚೆನ್ನೈಯಿನ್ ಎಫ್‌ಸಿ ಮತ್ತು ಒಡಿಶಾ ಎಫ್‌ಸಿ ತಂಡಗಳು ಬುಧವಾರ ವಾಸ್ಕೊದಲ್ಲಿ ಮುಖಾಮುಖಿಯಾಗಲಿವೆ. 16 ಪಂದ್ಯ ಆಡಿರುವ ಒಡಿಶಾ 21 ಪಾಯಿಂಟ್ಸ್ ಗಳಿಸಿದ್ದು, ಪಟ್ಟಿಯಲ್ಲಿ ಸದ್ಯ ಏಳನೇ ಸ್ಥಾನದಲ್ಲಿದೆ. ಇಷ್ಟೇ ಪಂದ್ಯಗಳ ಮೂಲಕ ಚೆನ್ನೈಯಿನ್ 8ನೇ ಸ್ಥಾನದಲ್ಲಿದೆ.

ಚಳಿಗಾಲದ ಒಲಿಂಪಿಕ್ಸ್: ಚಿನ್ನ ಗೆದ್ದ ಆನ್ನಾ ಗ್ಯಾಸೆರ್

ಬೀಜಿಂಗ್ (ರಾಯಿಟರ್ಸ್): ಅನುಭವಿ ಸ್ನೋ ಬೋರ್ಡಿಂಗ್ ಸ್ಪರ್ಧಿ ಆಸ್ಟ್ರೇಲಿಯಾದ ಆನ್ನಾ ಗ್ಯಾಸೆರ್ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟರು. ಯುವ ಅಥ್ಲೀಟ್‌ಗಳೇ ಹೆಚ್ಚಾಗಿ ಕಾಣಿಸಿಕೊಳ್ಳುವ ಈ ಕ್ರೀಡೆಯಲ್ಲಿ ಆನ್ನಾ 12 ವರ್ಷಗಳಿಂದ ಸ್ಪರ್ಧಿಸುತ್ತಿದ್ದಾರೆ.

ಮಹಿಳೆಯರ ಸ್ನೋ ಬೋರ್ಡಿಂಗ್‌ನ ‘ಬಿಗ್ ಏರ್’ ವಿಭಾಗದಲ್ಲಿ ಆನ್ನಾ ಅವರಿಗೆ ಚಿನ್ನ ಒಲಿಯಿತು. ನಾಲ್ಕು ವರ್ಷಗಳ ಹಿಂದೆ ಪಿಯೊಂಗ್‌ಚಾಂಗ್ ಕ್ರೀಡಾಕೂಟದಲ್ಲಿ ಈ ವಿಭಾಗವನ್ನು ಮೊದಲ ಬಾರಿಗೆ ಸೇರಿಸಲಾಗಿತ್ತು. ಆಗ ಕೂಡ ಆನ್ನಾ ಅವರು ಚಾಂಪಿಯನ್ ಆಗಿದ್ದರು.

ಮಂಗಳವಾರ ನಡೆದ ಸ್ಪರ್ಧೆಯ ಫೈನಲ್‌ನಲ್ಲಿ ಆನ್ನಾ 185.5 ಸ್ಕೋರ್ ದಾಖಲಿಸಿದರೆ, ನ್ಯೂಜಿಲೆಂಡ್‌ನ 17 ವರ್ಷದ ಜೊಯಿ ಸ್ಯಾಡೊವಸ್ಕಿ ಸಿನಾಟ್ (177) ಬೆಳ್ಳಿ ಪದಕ ಗೆದ್ದರು. ಜಪಾನ್‌ನ ಮುರಾಸೆ ಕೊಕೊಮೊ (171.50) ಕಂಚು ಜಯಿಸಿದರು.

ಆನ್ನಾ ಗ್ಯಾಸೆರ್

ಅಪಘಾತದಲ್ಲಿ ಗಾಯಗೊಂಡಿದ್ದ ಸೋಫಿಯಾ ಬೆಳ್ಳಿ ನಗು: ಮೂರು ವಾರಗಳ ಹಿಂದೆ ಅಪಘಾತದಲ್ಲಿ ಗಂಭೀರ ಗಾಯಗೊಂಡು ಒಲಿಂಪಿಕ್ಸ್ ಸ್ಪರ್ಧೆಯ ಅವಕಾಶವನ್ನು ಕಳೆದುಕೊಳ್ಳುವ ಹಂತದಲ್ಲಿದ್ದ ಇಟಲಿಯ ಸೋಫಿಯಾ ಗೊಗಿಯಾ ಅವರಿಗೆ ಬೆಳ್ಳಿ ಪದಕ ಒಲಿದಿದೆ.

ಮಹಿಳೆಯರ ಸ್ಕೀಯಿಂಗ್‌ನ ಡೌನ್‌ಹಿಲ್ ವಿಭಾಗದಲ್ಲಿ ಮಂಗಳವಾರ ಅವರು ಎರಡನೇ ಸ್ಥಾನ ಗಳಿಸಿದರು. 2018ರಲ್ಲಿ ಸೋಫಿಯಾ ಚಾಂಪಿಯನ್ ಆಗಿದ್ದರು. ಜನವರಿಯ ಅಂತ್ಯದಲ್ಲಿ ತವರಿನಲ್ಲಿ ನಡೆದ ವಿಶ್ವಕಪ್ ರೇಸ್‌ನಲ್ಲಿ ಅಪಘಾತಕ್ಕೀಡಾಗಿ ಮೊಣಕಾಲು ಗಂಭೀರ ಗಾಯಗೊಂಡು ಊರುಗೋಲು ಹಿಡಿಯುವಂತಾಗಿತ್ತು.

ಪ್ರಶಸ್ತಿ ವಿಜೇತ ಜಯಾ ಸ್ಪೋರ್ಟ್ಸ್ ಕ್ಲಬ್ ತಂಡ: (ಎಡದಿಂದ) ಭಾವನಾ ಸಾವಂತ್, ಯಶಸ್ವಿನಿ, ಪವಿತ್ರಾ, ಕೋಚ್ ಎನ್‌.ಪಿ.ಶಿವಕುಮಾರ್, ಪಲ್ಲವಿ, ಮೇಘನಾ, ಸಹನಾ ಮತ್ತು ಲಿಖಿತಾ

ಬಾಲ್ ಬ್ಯಾಡ್ಮಿಂಟನ್: ಜಯಾ ಸ್ಪೋರ್ಟ್ಸ್ ಕ್ಲಬ್‌ಗೆ ಪ್ರಶಸ್ತಿ

ಬೆಂಗಳೂರು: ಉತ್ತಮ ಆಟವಾಡಿದ ಜಯಾ ಸ್ಪೋರ್ಟ್ಸ್ ಕ್ಲಬ್ ತಂಡದವರು ರಾಜ್ಯಮಟ್ಟದ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಸಹ್ಯಾದ್ರಿ ಸ್ಪೋರ್ಟ್ಸ್ ಕ್ಲಬ್ ಕತ್ರಿಗುಪ್ಪೆಯ ರಾಮರಾವ್ ಬಡಾವಣೆ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಟೂರ್ನಿಯ ಫೈನಲ್‌ನಲ್ಲಿ ಜಯಾ ಸ್ಪೋರ್ಟ್ಸ್ 36–34, 36–18ರಿಂದ ಕಾಮಧೇನು ಕ್ಲಬ್‌ಅನ್ನು ಮಣಿಸಿತು.

ರಿಚರ್ಡ್ಸನ್ ಮಿಂಚು; ಆಸ್ಟ್ರೇಲಿಯಾ ಮುನ್ನಡೆ

ಕ್ಯಾನ್‌ಬೆರಾ (ಎಎಫ್‌ಪಿ): ಕೇನ್ ರಿಚರ್ಡ್ಸನ್ ಅಮೋಘ ಬೌಲಿಂಗ್ ಬಲದಿಂದ ಆತಿಥೇಯ ಆಸ್ಟ್ರೇಲಿಯಾ ತಂಡವು ಮಂಗಳವಾರ ಶ್ರೀಲಂಕಾ ವಿರುದ್ಧ ನಡೆದ ಮೂರನೇ ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಜಯಿಸಿತು.

ಆಸ್ಟ್ರೇಲಿಯಾವು ಐದು ಪಂದ್ಯಗಳ ಸರಣಿಯನ್ನು 3–0ಯಿಂದ ಕೈವಶ ಮಾಡಿಕೊಂಡಿತು. ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಆಸ್ಟ್ರೇಲಿಯಾ ತಂಡವು ಕೇನ್ (21ಕ್ಕೆ3) ಬೌಲಿಂಗ್ ಬಲದಿಂದ ಲಂಕಾ ತಂಡವನ್ನು 121 ರನ್‌ಗಳಿಗೆ ಕಟ್ಟಿಹಾಕಿತು.

ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ನಾಯಕ ಆ್ಯರನ್ ಫಿಂಚ್ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ತಂಡವು ಇನಿಂಗ್ಸ್‌ನಲ್ಲಿ ಇನ್ನೂ 19 ಎಸೆತಗಳು ಬಾಕಿ ಇರುವಾಗಲೇ ಜಯಭೇರಿ ಬಾರಿಸಿತು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 121 (ಚಾಂಡಿಮಲ್ 25, ದಸನ್ ಶನಾಕಾ ಔಟಾಗದೆ 39, ರಿಚರ್ಡ್ಸನ್ 21ಕ್ಕೆ3), ಆಸ್ಟ್ರೇಲಿಯಾ: 16.5 ಓವರ್‌ಗಳಲ್ಲಿ 4ಕ್ಕೆ 124 (ಆ್ಯರನ್ ಫಿಂಚ್ 35, ಗ್ಲೆನ್ ಮ್ಯಾಕ್ಸ್‌ವೆಲ್ 39, ತೀಕ್ಷಣ 24ಕ್ಕೆ3) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 6 ವಿಕೆಟ್‌ಗಳ ಜಯ. 5 ಪಂದ್ಯಗಳ ಸರಣಿಯಲ್ಲಿ 3–0 ಮುನ್ನಡೆ, ಪಂದ್ಯಶ್ರೇಷ್ಠ: ಕೇನ್ ರಿಚರ್ಡ್ಸನ್.

ಪ್ರೊ ಕಬಡ್ಡಿ ಲೀಗ್ ಟೂರ್ನಿ: ಪಟ್ನಾ ಪೈರೇಟ್ಸ್‌ಗೆ ರೋಚಕ ಜಯ

ಬುಲ್ಸ್ ವೀರೋಚಿತ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಚಿತ ಹೋರಾಟ ಮಾಡಿದ ಬೆಂಗಳೂರು ಬುಲ್ಸ್ ತಂಡವು ಮಂಗಳವಾರ ಇಲ್ಲಿ ನಡೆದ ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ಎದುರು ಅಲ್ಪ ಅಂತರದಿಂದ ಸೋತಿತು.

ವೈಟ್‌ಫೀಲ್ಡ್‌ನ ಗ್ರ್ಯಾಂಡ್ ಶೆರಟನ್ ಹೋಟೆಲ್‌ನಲ್ಲಿ ನಡೆದ ಪಂದ್ಯದಲ್ಲಿ ಪಟ್ನಾ ತಂಡವು 36–34ರಿಂದ ರೋಚಕ ಜಯ ಸಾಧಿಸಿತು.

ಮೊದಲಾರ್ಧದ ವಿರಾಮದ ವೇಳೆಗೆ ಪಟ್ನಾ ತಂಡವು 19–14ರಿಂದ ಉತ್ತಮ ಮುನ್ನಡೆಯಲ್ಲಿತ್ತು. ನಂತರದ ಅವಧಿಯಲ್ಲಿ ತಿರುಗೇಟು ನೀಡಿದ ಬುಲ್ಸ್ ತಂಡವು ಕೊನೆಯ ನಿಮಿಷದವರೆಗೂ ಸಮಬಲದ ಪೈಪೋಟಿಯೊಡ್ಡಿತು. ವಿರಾಮದ ನಂತರ ಬುಲ್ಸ್ 20 ಅಂಕಗಳನ್ನುಮತ್ತು ಪಟ್ನಾ 17 ಅಂಕಗಳನ್ನು ಗಳಿಸಿದವು. ಬುಲ್ಸ್ ತಂಡದ ನಾಯಕ ಪವನ್ ಶೆರಾವತ್ 7, ಚಂದ್ರನ್ ರಂಜಿತ್ 8 ಪಾಯಿಂಟ್ಸ್ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ; ರೇಡಿಂಗ್‌ನಲ್ಲಿ ಮಿಂಚಿದ ಅರ್ಜುನ್ ದೇಶ್ವಾಲ್ ಆಟದ ಬಲದಿಂದ ಜೈಪುರ್ ಪಿಂಕ್ ಪ್ಯಾಂಥರ್ಸ್ ತಂಡವು ಯು ಮುಂಬಾ ಎದುರು ಭಾರಿ ಅಂತರದಿಂದ ಜಯಿಸಿತು.

ಅರ್ಜುನ್ (17) ಮತ್ತು ಆಲ್‌ರೌಂಡರ್ ಬ್ರಿಜೇಂದ್ರ ಸಿಂಗ್ (8) ಅವರ ಅಮೋಘ ಆಟ ರಂಗೇರಿತು. ಮೊದಲಾರ್ಧದ ವಿರಾಮದ ವೇಳೆಗೆ ಪಿಂಕ್ ಪ್ಯಾಂಥರ್ಸ್ ತಂಡವು 17–14ರಿಂದ ಅಲ್ಪ ಮುನ್ನಡೆ ಗಳಿಸಿತ್ತು. ಆದರೆ ನಂತರದ ಆಟದಲ್ಲಿ ಮುಂಬಾ ತಂಡದ ಆಟಗಾರರು ಬಸವಳಿದರು. ವೇಗವಾಗಿ ಪಾಯಿಂಟ್ಸ್ ಗಳಿಸಿದ ಜೈಪುರ್ ಜಯಭೇರಿ ಬಾರಿಸಿತು.

ಪಟ್ನಾ ತಂಡದ ಮೋನು ಗೋಯತ್ (9), ಡಿಫೆಂಡರ್ ಸುನಿಲ್ (6) ಮತ್ತು ಸಚಿನ್ (5) ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ದಿನದ ಮೂರನೇ ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡವು 43–31ರಿಂದ ತಮಿಳ್ ತಲೈವಾಸ್ ತಂಡವನ್ನು ಸೋಲಿಸಿತು.

ಪುಣೇರಿ ಪರ ಮೋಹಿತ್ ಗೋಯತ್ ‘ಸೂಪರ್ ಟೆನ್’ ಸಾಧಿಸಿದರು. ತಲೈವಾಸ್ ಪರ ಹಿಮಾಂಶು 8 ಪಾಯಿಂಟ್ಸ್ ಗಳಿಸಿದರು.

ಬುಧವಾರ ನಡೆಯುವ ಮೊದಲ ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್– ತಮಿಳ್ ತಲೈವಾಸ್ ಸೆಣಸಲಿವೆ. ಇನ್ನೊಂದು ಪಂದ್ಯದಲ್ಲಿ ತೆಲುಗು ಟೈಟನ್ಸ್ ಮತ್ತಯ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡಗಳು ಸೆಣಸಲಿವೆ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೇಟ್ಸ್	20	15	4	1	80
ದಬಂಗ್ ಡೆಲ್ಲಿ	20	10	6	4	65
ಯು ಪಿ ಯೋಧಾ	21	9	9	3	63
ಹರಿಯಾಣ ಸ್ಟೀಲರ್ಸ್	20	10	7	3	63
ಬೆಂಗಳೂರು ಬುಲ್ಸ್	21	10	9	2	61
ಪುಣೇರಿ ಪಲ್ಟನ್	20	11	8	1	60
ಜೈಪುರ ಪಿಂಕ್ ಪ್ಯಾಂಥರ್ಸ್	20	9	9	2	57
ಗುಜರಾತ್ ಜೈಂಟ್ಸ್	20	8	8	4	57
ಯು ಮುಂಬಾ	20	7	8	5	53
ತಮಿಳ್ ತಲೈವಾಸ್	20	5	9	6	47
ಬೆಂಗಾಲ್ ವಾರಿಯರ್ಸ್	20	7	10	3	47
ತೆಲುಗು ಟೈಟನ್ಸ್	20	1	15	4	27

(ಮಂಗಳವಾರದ ಪಂದ್ಯಗಳ ಅಂತ್ಯಕ್ಕೆ)

ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದ ಅರ್ಜುನ್ ದೇಸ್ವಾಲ್ ರೇಡಿಂಗ್ ವೈಖರಿ

ಉಕ್ರೇನ್: ರಷ್ಯಾಕ್ಕೆ ಮತ್ತೊಮ್ಮೆ ಎಚ್ಚರಿಕೆ ನೀಡಿದ ಅಮೆರಿಕ

ವಾಷಿಂಗ್ಟನ್ (ಪಿಟಿಐ): ‘ಉಕ್ರೇನ್ ಮೇಲೆ ಆಕ್ರಮಣ ಮಾಡಿದರೆ ತೀವ್ರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ’ ಎಂದು ಅಮೆರಿಕವು ರಷ್ಯಾಕ್ಕೆ ಮತ್ತೊಮ್ಮೆ ಎಚ್ಚರಿಕೆ ನೀಡಿದೆ.

ಉಕ್ರೇನ್‌ನೊಂದಿಗಿನ ಬಿಕ್ಕಟ್ಟನ್ನು ಪರಿಹರಿಸಲು ರಚನಾತ್ಮಕವಾಗಿ ತೊಡಗಲು ರಷ್ಯಾ ಇಚ್ಛಿಸಿದಲ್ಲಿ, ಈಗಲೂ ರಾಜತಾಂತ್ರಿಕ ಮಾರ್ಗ ಮುಕ್ತವಾಗಿದೆ ಎಂದು ಶ್ವೇತಭವನದ ಉಪಪ್ರಧಾನ ಪತ್ರಿಕಾ ಕಾರ್ಯದರ್ಶಿ ಕರೀನ್ ಜೀನ್ ಪಿಯರ್ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

‘ಅಧ್ಯಕ್ಷ ಜೋ ಬೈಡನ್ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಕಳೆದ ವಾರಾಂತ್ಯ ಮಾತನಾಡಿದ್ದಾರೆ. ಈ ವಿಷಯವಾಗಿ ನಮ್ಮ ಮಿತ್ರರಾಷ್ಟ್ರಗಳೊಂದಿಗೂ ಸಮನ್ವಯ ಸಾಧಿಸಲಾಗುತ್ತಿದೆ’ ಎಂದರು.

‘ಫೆ.16 ಉಕ್ರೇನ್ ಮೇಲೆ ದಾಳಿ ನಡೆಯುವ ದಿನ’: ಝೆಲೆನ್‌ಸ್ಕಿ

ಕೈವ್, (ಎಪಿ): ‘ಫೆಬ್ರುವರಿ 16, ಉಕ್ರೇನ್ ಮೇಲೆ ರಷ್ಯಾದಿಂದ ದಾಳಿ ನಡೆಯುವ ದಿನ’ ಎಂದು ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಝೆಲೆನ್‌ಸ್ಕಿ ತಮ್ಮ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಉಕ್ರೇನ್ ಮಿತ್ರ ರಾಷ್ಟ್ರ ಅಮೆರಿಕ, ‘ಆಕ್ರಮಣದ ನಿರ್ಧಾರವನ್ನು ರಷ್ಯಾ ಅಧ್ಯಕ್ಷ ಪುಟಿನ್ ಕೈಗೊಂಡಿದ್ದಾರೆ ಎಂದು ನಾವು ಈಗಲೂ ನಂಬುವುದಿಲ್ಲ. ಆದರೆ ಅವರು ಯಾವುದೇ ಮುನ್ಸೂಚನೆ ಇಲ್ಲದೇ ದಾಳಿ ನಡೆಸಲೂಬಹುದು’ ಎಂದಿದೆ.

ಸಿಂಗಪುರ ಏರ್ ಷೋನಲ್ಲಿ ಗಮನ ಸೆಳೆದ ಭಾರತದ ಲಘು ಯುದ್ಧ ವಿಮಾನ ‘ತೇಜಸ್’ –ಪಿಟಿಐ ಚಿತ್ರ

ಏರ್ ಷೋಗೆ ಚಾಲನೆ

ಸಿಂಗಪುರ (ಎಪಿ): ‘ಸಿಂಗಪುರ ಏರ್ ಷೋ’ಗೆ ಮಂಗಳವಾರ ಸರಳವಾಗಿ ಚಾಲನೆ ನೀಡಲಾಯಿತು. ಈ ವೈಮಾನಿಕ ಪ್ರದರ್ಶನ ಮೂರು ದಿನಗಳ ಕಾಲ ನಡೆಯಲಿದೆ.

ಭಾರತದ ಲಘು ಯುದ್ಧ ವಿಮಾನ (ಎಲ್‌ಸಿಎ) ‘ತೇಜಸ್’ ಈ ಪ್ರದರ್ಶನದಲ್ಲಿ ಗಮನ ಸೆಳೆಯಿತು. ಕೋವಿಡ್–19 ಪಿಡುಗಿನ ಕಾರಣದಿಂದಾಗಿ ಕಳೆದ ಎರಡು ವರ್ಷಗಳಿಂದ ಈ ವೈಮಾನಿಕ ಪ್ರದರ್ಶನ ನಡೆದಿರಲಿಲ್ಲ. ಕೋವಿಡ್‌ಗೆ ಸಂಬಂಧಿಸಿದ ನಿರ್ಬಂಧಗಳನ್ನು ಸಂಪೂರ್ಣವಾಗಿ ಸಡಿಲಗೊಳಿಸದ ಕಾರಣ, ಇಂದು ಆರಂಭಗೊಂಡ ಷೋಗೆ ಸಾರ್ವಜನಿಕರಿಗೆ ಪ್ರವೇಶ ನೀಡಲಾಗಿಲ್ಲ.

600 ಉದ್ದಿಮೆಗಳು ತಮ್ಮ ಉತ್ಪನ್ನಗಳು ಹಾಗೂ ಸೇವೆಗಳನ್ನು ಕಾರ್ಯಕ್ರಮದಲ್ಲಿ ಪ್ರದರ್ಶನ ಮಾಡಲಿವೆ. ಬೋಯಿಂಗ್, ಏರ್‌ಬಸ್, ಲಾಕ್‌ಹೀಡ್ ಮಾರ್ಟಿನ್ ಪಾಲ್ಗೊಂಡಿರುವ ಪ್ರಮುಖ ಕಂಪನಿ ಗಳಾಗಿವೆ. 2020ರಲ್ಲಿ ನಡೆದ ಏರ್ ಷೋನಲ್ಲಿ 930 ಕಂಪನಿಗಳು ಭಾಗವಹಿಸಿದ್ದವು. ಕೋವಿಡ್‌ಗೆ ಸಂಬಂಧಿಸಿ ತನ್ನ ನೀತಿಗಳ ಕಾರಣದಿಂದಾಗಿ ಚೀನಾ ಕಂಪನಿಗಳು ಈ ಪ್ರದರ್ಶನದಿಂದ ದೂರ ಉಳಿದಿವೆ.

ಹಾಂಗ್‌ಕಾಂಗ್‌ನಲ್ಲಿ ಕೋವಿಡ್ ಹೆಚ್ಚಳ: ಕ್ಯಾರಿ ಲ್ಯಾಮ್

ಹಾಂಗ್‌ಕಾಂಗ್ (ಎಪಿ): ಹಾಂಗ್‌ಕಾಂಗ್‌ನಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿವೆ ಎಂದು ಮುಖ್ಯ ಕಾರ್ಯನಿರ್ವಾಹಕಿ ಕ್ಯಾರಿ ಲ್ಯಾಮ್ ಹೇಳಿದ್ದಾರೆ ಮಂಗಳವಾರ ಹೇಳಿದ್ದಾರೆ.

‘ಕೋವಿಡ್ ಎದುರಿಸಲು ಮಾಡಿಕೊಂಡಿದ್ದ ಸಿದ್ಧತೆಗಳು ಸಾಕಾಗದು ಎನಿಸುವಷ್ಟರ ಮಟ್ಟಿಗೆ ಕೋವಿಡ್–19 ಪ್ರಕರಣಗಳಲ್ಲಿ ಹೆಚ್ಚಳ ಕಂಡುಬರುತ್ತಿದೆ’ ಎಂದಿರುವ ಅವರು, ಕೋವಿಡ್ ಪ್ರಸರಣ ತಡೆಗಾಗಿ ಕಠಿಣ ನಿರ್ಬಂಧಗಳನ್ನು ಜಾರಿಗೊಳಿಸಿರುವುದನ್ನು ಸಮರ್ಥಿಸಿಕೊಂಡಿದ್ದಾರೆ.

‘ನಗರದಲ್ಲಿ ಕೋವಿಡ್‌ನ ಐದನೇ ಅಲೆ ತೀವ್ರತೆ ಹೆಚ್ಚುತ್ತಿದ್ದು, ಸೋಂಕು ಪ್ರಸರಣ ತಡೆಗಾಗಿ ಮಾಡಿಕೊಂಡಿರುವ ಸಿದ್ಧತೆ-ಕ್ರಮಗಳಿಗೆ ಎಟುಕದ ರೀತಿಯಲ್ಲಿ ಪ್ರಕರಣಗಳು ಹೆಚ್ಚುತ್ತಿವೆ’ ಎಂದು ಅವರು ಹೇಳಿದ್ದಾರೆ.

ನಗರದಲ್ಲಿ ಮಾರ್ಚ್ 6ರ ವರೆಗೆ ಶಾಲೆಗಳನ್ನು ಬಂದ್ ಮಾಡಲಾಗಿದೆ. ಸಂಜೆ 6ರ ನಂತರ ಸಾರ್ವಜನಿಕ ಕಾರ್ಯಕ್ರಮಗಳನ್ನು ನಿಷೇಧಿಸಲಾಗಿದೆ.

ಮಂಗಳವಾರ 4,500 ಪ್ರಕರಣಗಳು ವರದಿಯಾಗಿವೆ. ಸೋಮವಾರ 2,071 ಪ್ರಕರಣಗಳು ವರದಿಯಾಗಿದ್ದವು.

‘ಲಸಿಕೆಗೆ ಒತ್ತಾಯಿಸಿದರೆ ಗ್ರ್ಯಾನ್‌ಸ್ಲಾಮ್ ತ್ಯಾಗ’

ಕೋವಿಡ್ ಲಸಿಕೆಯ ವಿರೋಧಿಯಲ್ಲ: ನೊವಾಕ್ ಸ್ಪಷ್ಟನೆ

ಲಂಡನ್ (ಎಎಫ್‌ಪಿ): ನಾನು ಕೋವಿಡ್ ಲಸಿಕೆಯ ವಿರೋಧಿಯಲ್ಲ; ಆದರೆ ವಿಂಬಲ್ಡನ್ ಮತ್ತು ಫ್ರೆಂಚ್ ಓಪನ್ ಟೂರ್ನಿಗಳಲ್ಲಿ ಲಸಿಕೆ ತೆಗೆದುಕೊಳ್ಳುವುದಕ್ಕೆ ಒತ್ತಾಯ ಬಂದರೆ ಆ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಆಡದೇ ಇರಲೂ ಸಿದ್ಧ ಎಂದು ವಿಶ್ವದ ಅಗ್ರ ಕ್ರಮಾಂಕದ ಟೆನಿಸ್ ಆಟಗಾರ ನೊವಾಕ್ ಜೊಕೊವಿಚ್ ಅವರು ಹೇಳಿದ್ದಾರೆ.

ಕಳೆದ ತಿಂಗಳು ನಡೆದ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಕೋವಿಡ್ ಲಸಿಕೆ ತೆಗೆದುಕೊಳ್ಳದ ಹಿನ್ನೆಲೆಯಲ್ಲಿ ಜೊಕೊವಿಚ್ ಅವರಿಗೆ ಆಡಲು ಅನುಮತಿ ನಿರಾಕರಿಸಲಾಗಿತ್ತು. ಇದರಿಂದಾಗಿ ಸ್ಪೇನ್‌ನ ರಫೆಲ್ ನಡಾಲ್ ಅವರು ಪ್ರಶಸ್ತಿ ಜಯಿಸಿ ಜೊಕೊವಿಚ್ ಮತ್ತು ರೋಜರ್ ಫೆಡರರ್ ಅವರನ್ನು ಹಿಂದಿಕ್ಕಿ ಅತಿ ಹೆಚ್ಚು ಗ್ರ್ಯಾನ್‌ಸ್ಲಾಮ್ (21) ಗೆದ್ದ ಆಟಗಾರ ಎನಿಸಿಕೊಂಡಿದ್ದರು.

ಜೊಕೊವಿಚ್

ಮಂಗಳವಾರ ಪ್ರಕಟವಾಗಿರುವ ಬಿಬಿಸಿ ಸಂದರ್ಶನದಲ್ಲಿ ಈ ಕುರಿತು ಜೊಕೊವಿಚ್ ಮಾತನಾಡಿದ್ದಾರೆ. ಒಂದು ವೇಳೆ ಅವರು ಲಸಿಕೆಯ ಕುರಿತು ತಮ್ಮ ನಿಲುವಿಗೆ ಅಂಟಿ ವಿಂಬಲ್ಡನ್ ಮತ್ತು ಫ್ರೆಂಚ್ ಓಪನ್ ಟೂರ್ನಿಗಳಲ್ಲಿ ಭಾಗವಹಿಸದೇ ಇದ್ದರೆ ಇತಿಹಾಸ ನಿರ್ಮಿಸುವ ಅವಕಾಶವನ್ನು ಕಳೆದುಕೊಳ್ಳಲಿದ್ದಾರೆ.

‘ಹೌದು, ನಾನು ಬೆಲೆ ತೆರಲು ಸಿದ್ಧ. ಜಾಗತಿಕ ಕ್ರೀಡೆಯ ಭಾಗವಾಗಿರುವ ನಾನು ಪ್ರತಿವಾರ ಬೇರೆ ತಾಣಗಳಿಗೆ ಆಡಲು ತೆರಳಬೇಕಾಗುತ್ತದೆ. ನನ್ನ ನಿರ್ಧಾರದ ಪರಿಣಾಮಗಳನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಆಸ್ಟ್ರೇಲಿಯಾಕ್ಕೆ ಹೋಗದಿರಲು ನಾನು ಸಿದ್ಧನಾಗಿದ್ದೆ. ಈಗಲೂ ನಾನು ಲಸಿಕೆ ಹಾಕಿಸಿಕೊಂಡಿಲ್ಲ. ಹೀಗಾಗಿ ಹೆಚ್ಚು ಟೂರ್ನಿಗಳಲ್ಲಿ ಆಡಲು ಸಾಧ್ಯವಾಗುತ್ತಿಲ್ಲ‘ ಎಂದು ಜೊಕೊವಿಚ್ ಹೇಳಿದ್ದಾರೆ.

ಆದಾಗ್ಯೂ, ಜೊಕೊವಿಚ್ ಅವರು ವಿಂಬಲ್ಡನ್ ಟೂರ್ನಿಯಲ್ಲಿ ಆಡುವುದಕ್ಕೆ ಹಸಿರು ನಿಶಾನೆ ಸಿಗುವ ಸಾಧ್ಯತೆಯಿದೆ. ಏಕೆಂದರೆ ಲಸಿಕೆ ಹಾಕಿಸಿಕೊಳ್ಳದವರಿಗೆ ಇನ್ನು ಮುಂದೆ ಬ್ರಿಟನ್‌ನಲ್ಲಿ ಕ್ವಾರಂಟೈನ್ ಅಗತ್ಯವಿಲ್ಲ ಎಂದು ಕೆಲವು ದಿನಗಳ ಹಿಂದೆ ಹೇಳಲಾಗಿದೆ. ಅವರು ಕೋವಿಡ್ ಪರೀಕ್ಷೆಯನ್ನು ಮಾತ್ರ ಮಾಡಿಸಿಕೊಳ್ಳಬೇಕಾಗುತ್ತದೆ. ಕೊರೊನಾದ ಮತ್ತೊಂದು ಅಲೆ ಬಾರದಿದ್ದರೆ ಕ್ರೀಡಾಂಗಣಕ್ಕೆ ಬರುವವರಿಗೆ ಲಸಿಕೆಯ ಪಾಸ್‌ಪೋರ್ಟ್ ಅಗತ್ಯವಿಲ್ಲ ಎಂದು ಫ್ರಾನ್ಸ್ ಆರೋಗ್ಯ ಸಚಿವ ಒಲಿವಿಯರ್ ವೆರಾನ್ ಹೇಳಿರುವುದರಿಂದ ಫ್ರೆಂಚ್ ಓಪನ್ ಟೂರ್ನಿಯಲ್ಲೂ ಜೊಕೊವಿಚ್ ಕಣಕ್ಕಿಳಿಯಬಹುದಾಗಿದೆ.

ಮೈಸೂರು ರೇಸ್

‘ರೀಕಾಲ್ ಆಫ್ ಯು’ ಗೆಲ್ಲುವ ನಿರೀಕ್ಷೆ

ಒನ್ ಲೈಫ್ ಟು ಒವ್ ಪ್ಲೇಟ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ‘ರೀಕಾಲ್ ಆಫ್ ಯು’ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಟಾರ್ ಜ್ಯೂಯೆಲ್ 9, ಸ್ಮಾರ್ಟ್ ಕ್ಯಾಡಿಲಾಕ್ 4, ಸೂಪ್ ಅಂಡ್ ಸ್ಯಾಂಡ್‌ವಿಚ್ 8
2ನೇ ರೇಸ್: ಎಲ್ ಟೈಕೂನ್ 3, ರಾಯಲ್ ಕಮಾಂಡ್ 5, ಸೋ ಫಾರ್ 9
3ನೇ ರೇಸ್: ಥಿಯಾಸ್ ಗ್ಲೋರಿ 7, ಶೀಈಸ್ ಎ ಟೈಗರ್ 5, ಡೇರಿಂಗ್ ಪ್ರಿನ್ಸ್ 1
4ನೇ ರೇಸ್: ಐರಾನಿಕ್ ಹ್ಯೂಮರ್ 8, ಗ್ರೇಟ್ ಚೆವಾಲಿಯರ್ 7, ಹೈಲ್ಯಾಂಡ್ ಪಾರ್ಕ್ 11,
5ನೇ ರೇಸ್: ರಷ್ಯನ್ ಸ್ಪೈ 9, ವಿಂಡ್ ಸ್ಟ್ರೈಕರ್ 5, ಎಂಗಲ್‌ಬರ್ಗ್ 12
6ನೇ ರೇಸ್: ರೀಕಾಲ್ ಆಫ್ ಯು 7, ಮಾರ್ಚ್ ಟು ವಿಕ್ಟರಿ 4, ಟ್ರೆಮಂಡಸ್ 3
7ನೇ ರೇಸ್: ಕೋಸ್ಟಲ್ ಕ್ರೂಝ್ 5, ಟ್ರೇಸರ್ ಬುಲ್ಲೇಟ್ 8, ಡಿ ನಕ್ಷತ್ರ 7

ಉತ್ತಮ ಬೆಟ್: ಕೋಸ್ಟಲ್ ಕ್ರೂಝ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಪರಸ್ಪರ ಅಂತರ ಕಾಯ್ದುಕೊಳ್ಳಿ

ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್: ಬಹುಮಾನ ಮೊತ್ತ ದ್ವಿಗುಣ

ದುಬೈ (ಪಿಟಿಐ): ನ್ಯೂಜಿಲೆಂಡ್‌ನಲ್ಲಿ ನಡೆಯಲಿರುವ 2022ರ ಮಹಿಳಾ ಏಕದಿನ ವಿಶ್ವಕಪ್ ವಿಜೇತ ತಂಡದ ಬಹುಮಾನ ಮೊತ್ತವನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು (ಐಸಿಸಿ) ₹ 9.9 ಕೋಟಿ ನಿಗದಿಪಡಿಸಿದೆ. ಇದು ಹಿಂದಿನ 2017ರ ಆವೃತ್ತಿಗಿಂತ ದ್ವಿಗುಣವಾಗಿದೆ.

ನ್ಯೂಜಿಲೆಂಡ್ ಆರು ತಾಣಗಳಲ್ಲಿ ನಡೆಯಲಿರುವ ಟೂರ್ನಿಯ ಒಟ್ಟಾರೆ ಬಹುಮಾನ ಮೊತ್ತವನ್ನು ಕೂಡ ಶೇ. 75ರಷ್ಟನ್ನು ಹೆಚ್ಚಿಸಿದೆ.

ಐಸಿಸಿ ಪ್ರಕಾರ ಎಂಟು ತಂಡಗಳು ಸುಮಾರು ₹ 24 ಕೋಟಿ ಮೊತ್ತವನ್ನು ಹಂಚಿಕೊಳ್ಳಲಿವೆ.

2017ರ ರನ್ನರ್ ಅಪ್ ಭಾರತ ತಂಡ ಸುಮಾರು ₹ 2 ಕೋಟಿ ಪಡೆದುಕೊಂಡಿತ್ತು. ಆದರೆ, ಬಾರಿ ರನ್ನರ್ ಅಪ್ ತಂಡ ಸುಮಾರು 4.5 ಕೋಟಿ ರೂಪಾಯಿ ಪಡೆದುಕೊಳ್ಳಲಿದೆ.

ಸೆಮಿಫೈನಲ್ ಸೋಲುವ ಎರಡೂ ತಂಡಗಳು ತಲಾ ₹ 2.25 ಕೋಟಿ ತಮ್ಮದಾಗಿಸಿಕೊಳ್ಳಲಿವೆ.

ನ್ಯೂಜಿಲೆಂಡ್ ತಂಡಕ್ಕೆ ಮಣಿದ ಭಾರತ ಮಹಿಳೆಯರು: ಕ್ವೀನ್ಸ್‌ಟೌನ್‌ನಲ್ಲಿ ಭಾರತ ಮಹಿಳಾ ತಂಡವು ನ್ಯೂಜಿಲೆಂಡ್ ಎದುರಿನ ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಮೂರು ವಿಕೆಟ್‌ಗಳಿಂದ ಸೋತಿತು.

ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ ನಾಯಕಿ ಮಿಥಾಲಿ ರಾಜ್ (ಔಟಾಗದೆ 66) ಹಾಗೂ ರಿಚಾ ಘೋಷ್ (65) ಅವರ ಅರ್ಧಶತಕಗಳ ಬಲದಿಂದ ಆರು ವಿಕೆಟ್ ಕಳೆದುಕೊಂಡು 270 ರನ್ ಗಳಿಸಿತು.

ನ್ಯೂಜಿಲೆಂಡ್ ತಂಡವು ಅಮೇಲಿಯಾ ಕೆರ್ (119) ಅವರ ಶತಕದ ಬಲದಿಂದ ಒಂದು ಓವರ್ ಬಾಕಿ ಇರುವಂತೆಯೇ ಏಳು ವಿಕೆಟ್ ಕಳೆದುಕೊಂಡು ಜಯದ ಗುರಿ ತಲುಪಿತು.



WT.5001.2022KAN